ಶನಿವಾರ, 14 ಸೆಪ್ಟೆಂಬರ್ 2024
ಪ್ರಜಾವಾಣಿ
ಪ್ರಜಾ ಪ್ಲಸ್+
ಮನರಂಜನೆ | ಜಾಹೀರಾತು ಪ್ರೋತ್ಸಾಹ | ಉದ್ಯಮ ಅಭಿವೃದ್ಧಿ

15ಕ್ಕೆ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ



‘ದಿ ಫಸ್ಟ್ ಲೈಟ್ ಕನ್ಸರ್ಟ್’ ಸಂಗೀತ ಸರಣಿ ಕಾರ್ಯಕ್ರಮದಡಿ ಸೆಪ್ಟೆಂಬರ್ 15ರಂದು ಶಾಸ್ತ್ರೀಯ ಸಂಗೀತ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಯುವ ಸಂಗೀತಗಾರರು ನೀಡುವ ಸರಣಿ ಕಾರ್ಯಕ್ರಮ ಇದಾಗಿದ್ದು, ಈ ಬಾರಿ ಗಾಯನದಲ್ಲಿ ನಂದಿತಾ ಕಣ್ಣನ್, ವಯಲಿನ್: ಸಂದೀಪ್ ರಾಮಚಂದ್ರನ್, ಮೃದಂಗ: ಕೌಶಿಕ್ ಶ್ರೀಧರ್, ಖಂಜಿರಾ: ಆರ್.ಕಾರ್ತಿಕ್ ಇರಲಿದ್ದಾರೆ.

ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ, 4ನೇ ಮುಖ್ಯರಸ್ತೆ, ದೊಮ್ಮಲೂರು 2ನೇ ಹಂತ. ಬೆಳಿಗ್ಗೆ 11ರಿಂದ ❖

ಯಕ್ಷಸಂಕ್ರಾಂತಿ ಇದೇ 21ಕ್ಕೆ



ಈ ಸಲದ ‘ಯಕ್ಷಸಂಕ್ರಾಂತಿ’ಯಲ್ಲಿ ಸುಮಾರು 9 ಮೇಳಗಳ ಕಲಾವಿದರಿದ್ದಾರೆ. ಅವರಲ್ಲದೆ ಅತಿಥಿ ದಿಗ್ಗಜರೂ ಇದ್ದಾರೆ. ಒಂದು ರಾತ್ರಿಯ ಮಿತಿಯೊಳಗೆ ಆಡಬಹುದಾದ ನಾಲ್ಕು ಪ್ರಸಂಗಗಳನ್ನು ಆಯ್ಕೆ ಮಾಡಲಾಗಿದೆ.

ಒಟ್ಟು ನಾಲ್ಕು ಪ್ರಸಂಗಗಳು ಸೆಪ್ಟೆಂಬರ್ 21ರಂದು ಶನಿವಾರ ರಾತ್ರಿ 10ಕ್ಕೆ ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರದರ್ಶನಗೊಳ್ಳಲಿವೆ. ಶ್ರೀಕೃಷ್ಣ ಸಂಧಾನ, ಸುಧನ್ವ, ಧರ್ಮಾಂಗಧ, ತಾಮ್ರಧ್ವಜ ಪ್ರದರ್ಶನಗಳು ನಡೆಯಲಿವೆ.

ಕೌರವ: ಕೃಷ್ಣಯಾಜಿ ಬಳ್ಕೂರು, ಕೃಷ್ಣ: ರಾಮಚಂದ್ರ ಹೆಗಡೆ ಕೊಂಡದಕುಳಿ. ಅರ್ಜುನ: ವಿದ್ಯಾಧರ್ ಜಲವಳ್ಳಿ. ಸುಧನ್ವ: ವಿಶ್ವನಾಥ ಹೆನ್ನಾಬೈಲ್, ಕೃಷ್ಣ: ರವಿ ಶೆಟ್ಟಿ ವಾಟರ್. ಭರತ: ಗಣಪತಿ ಹೆಗಡೆ ತೋಟಿಮನೆ, ಬಲಿ: ನವೀಶ್ ಶೆಟ್ಟಿ ಐರಬೈಲ್, ಧರ್ಮಾಂಗಧ : ಉದಯ ಹೆಗಡೆ ಕಡಬಾಳ್, ದೂತ: ದ್ವಿತೇಶ್ ಕಾಮತ್. ತಾಮ್ರಧ್ವಜ: ಆಜ್ರಿ ಗೋಪಾಲ ಗಾಣಿಗ, ಬ್ರಾಹ್ಮಣ: ರಮೇಶ್ ಭಂಡಾರಿ ಮತ್ತು ದ್ವಿತೇಶ್. ಅರ್ಜುನ: ಐರಬೈಲ್ ಆನಂದ ಶೆಟ್ಟಿ. ಮಯೂರಧ್ವಜ: ಸುನಿಲ್ ಹೊಲಾಡು. ❖

ಕೆವಿಎನ್‌ನಿಂದ ವಿಜಯ್ ಸಿನಿಮಾ ನಿರ್ಮಾಣ



ಕೆ.ವೆಂಕಟ್ ನಾರಾಯಣ

ಇತ್ತೀಚೆಗಷ್ಟೇ ರಾಜಕೀಯ ಅಖಾಡಕ್ಕೆ ಇಳಿದ ತಮಿಳುನಾಡಿನ ಖ್ಯಾತ ನಟ ದಳಪತಿ ವಿಜಯ್ ಅವರ ಕೊನೆಯ ಸಿನಿಮಾವನ್ನು ಕೆವಿಎನ್ ಪ್ರೊಡಕ್ಷನ್ಸ್ ನಿರ್ಮಾಣ ಮಾಡಲಿದೆ. ಇದು ವಿಜಯ್ ಅವರ 69ನೇ ಸಿನಿಮಾ.

ಕನ್ನಡದಲ್ಲಿ ‘ಸಖತ್’ ಸಿನಿಮಾ ಮೂಲಕ ಚಿತ್ರ ನಿರ್ಮಾಣಕ್ಕೆ ಇಳಿದಿದ್ದ ಕೆವಿಎನ್ ಪ್ರೊಡಕ್ಷನ್ಸ್ ಇದೀಗ ಈ ಸಿನಿಮಾ ಮೂಲಕ ತಮಿಳು ಚಿತ್ರರಂಗಕ್ಕೂ ಕಾಲಿಡಲಿದೆ.



ಈ ಚಿತ್ರವನ್ನು ಕೆವಿಎನ್‌ನ ಕೆ.ವೆಂಕಟ್ ನಾರಾಯಣ ಅವರು ₹500ಕೋಟಿಗೂ ಅಧಿಕ ಬಜೆಟ್‌ನಲ್ಲಿ ನಿರ್ಮಾಣ ಮಾಡಲಿದ್ದಾರೆ ಎಂದಿದೆ ಚಿತ್ರತಂಡ. ವಾರದ ಹಿಂದೆ ವಿಜಯ್ ನಟನೆಯ ‘ಗೋಟ್–ಗ್ರೇಟೆಸ್ಟ್ ಆಫ್ ಆಲ್ ಟೈಂ’ ಸಿನಿಮಾ ಬಿಡುಗಡೆಯಾಗಿತ್ತು. ವೆಂಕಟ್ ಪ್ರಭು ನಿರ್ದೇಶನದ ಈ ಸಿನಿಮಾ ಬಾಕ್ಸ್ ಆಫೀಸ್‌ನಲ್ಲಿ ಸದ್ದು ಮಾಡಿತ್ತು. ವಿಜಯ್ ಅವರ ಕೊನೆ ಸಿನಿಮಾ ಇದಾಗಿರಲಿದೆ ಎನ್ನುವ ಸುದ್ದಿಯೂ ಚಿತ್ರಮಂದಿರಕ್ಕೆ ಜನರ ಹರಿವನ್ನು ಹೆಚ್ಚಿಸಿತ್ತು. ಆದರೆ ‘ಗೋಟ್’ ವಿಜಯ್ ಕೊನೆಯ ಸಿನಿಮಾವಲ್ಲ, ಮತ್ತೊಂದು ಸಿನಿಮಾವನ್ನು ವಿಜಯ್ ಮಾಡಲಿದ್ದಾರೆ ಎಂದು ವೆಂಕಟ್ ಪ್ರಭು ಕೆಲ ದಿನಗಳ ಹಿಂದಷ್ಟೇ ಹೇಳಿದ್ದರು.

ಕೆವಿಎನ್ ನಿರ್ಮಾಣ ಮಾಡಲಿರುವ ಈ ಸಿನಿಮಾ ವಿಜಯ್ ಸಿನಿಪಯಣದ ಕೊನೆಯ ಸಿನಿಮಾ ಆಗಿರಲಿದೆ. ‘ತಮಿಳಗ ವೆಟ್ರಿ ಕಳಗಂ’ ಎನ್ನುವ ಪಕ್ಷ ಸ್ಥಾಪಿಸಿರುವ ವಿಜಯ್ ಈ ಸಿನಿಮಾ ಬಳಿಕ ಪೂರ್ಣ ಪ್ರಮಾಣದಲ್ಲಿ ರಾಜಕೀಯದಲ್ಲಿ ತೊಡಗಿಸಿಕೊಳ್ಳಲಿದ್ದಾರೆ. ಅವರ ಕೊನೆಯ ಸಿನಿಮಾ ವಿಜಯ್ ರಾಜಕೀಯ ಜೀವನಕ್ಕೆ ಹತ್ತಿರವಿರುವ ಕಥೆ ಎಂದು ಹೇಳಲಾಗುತ್ತಿದೆ. ವಿಜಯ್ ರಾಜಕೀಯ ಭವಿಷ್ಯಕ್ಕೆ ಈ ಚಿತ್ರ ಭವ್ಯ ಮೆಟ್ಟಿಲಾಗಲಿದೆ ಎಂದು ಚಿತ್ರತಂಡ ತಿಳಿಸಿದೆ. ಈ ಸಿನಿಮಾವನ್ನು ತಮಿಳಿನ ಖ್ಯಾತ ನಿರ್ದೇಶಕ ಎಚ್.ವಿನೋದ್ ನಿರ್ದೇಶಿಸಲಿದ್ದು, ಕೆವಿಎನ್ ಸಂಸ್ಥೆ ನಿರ್ಮಾಣ ಮಾಡುತ್ತಿರುವ ಐದನೇ ಚಿತ್ರ ಇದಾಗಿರಲಿದೆ.

ಸದ್ಯ ಕನ್ನಡದ ಎರಡು ಪ್ರಮುಖ ಚಿತ್ರಗಳಿಗೆ ಕೆವಿಎನ್ ಬಂಡವಾಳ ಹೂಡಿದೆ. ಪ್ರೇಮ್ ನಿರ್ದೇಶನದ ‘ಕೆಡಿ’ ಸಿನಿಮಾ ಬಿಡುಗಡೆಗೆ ಸಜ್ಜಾಗುತ್ತಿದ್ದರೆ, ‘ಟಾಕ್ಸಿಕ್’ ಸಿನಿಮಾವನ್ನು ಕೆವಿಎನ್ ಪ್ರೊಡಕ್ಷನ್ಸ್ ಹಾಗೂ ಯಶ್ ಅವರ ಮಾನ್‌ಸ್ಟರ್ ಮೈಂಡ್ ಕ್ರಿಯೇಷನ್ಸ್ ಜಂಟಿಯಾಗಿ ನಿರ್ಮಾಣ ಮಾಡುತ್ತಿದೆ. ❖

ತಿಂಗಳ ನಾಟಕ ಸಂಭ್ರಮ 21ಕ್ಕೆ



ಕರ್ನಾಟಕ ನಾಟಕ ಅಕಾಡೆಮಿಯು ಸೆಪ್ಟೆಂಬರ್ 21ರಂದು ಸಂಜೆ 6.30ಕ್ಕೆ ತಿಂಗಳ ನಾಟಕ ಸಂಭ್ರಮವನ್ನು ಹಮ್ಮಿಕೊಂಡಿದೆ.

ತಿಂಗಳ ಅತಿಥಿಯಾಗಿ ವೃತ್ತಿ ರಂಗಭೂಮಿ ಕಲಾವಿದೆ ಮಾಲತಿ ಮೈಸೂರು ಭಾಗವಹಿಸಲಿದ್ದಾರೆ. ನಂತರ ಮಂಚಿಕೇರಿಯ ರಂಗಸಮೂಹದ ತಂಡ ‘ಕಾಲಚಕ್ರ’ ನಾಟಕವನ್ನು ಪ್ರದರ್ಶಿಸಲಿದೆ. ಮೂಲ ಮರಾಠಿ: ಜಯವಂತ ದಳ್ವಿ. ಕನ್ನಡಕ್ಕೆ: ಎಚ್.ಕೆ.ಕರ್ಕೇರಾ. ವಿನ್ಯಾಸ ಮತ್ತು ನಿರ್ದೇಶನ: ಹುಲುಗಪ್ಪ ಕಟ್ಟಿಮನಿ.

ಸ್ಥಳ: ಸಮುಚ್ಛಯ ಭವನ, ಕಲಾಗ್ರಾಮ, ಮಲ್ಲತ್ತಹಳ್ಳಿ. ❖

ರಾಜಸ್ಥಾನ ಚಲನಚಿತ್ರೋತ್ಸವ: ಕನ್ನಡದ ‘ಬ್ಲಿಂಕ್’ ನಾಮನಿರ್ದೇಶನ

ಬೆಂಗಳೂರು ಕನ್ನಡದ ‘ಬ್ಲಿಂಕ್’ ಸಿನಿಮಾ ರಾಜಸ್ಥಾನ ಚಲನಚಿತ್ರೋತ್ಸವದಲ್ಲಿ ಒಟ್ಟು ಎಂಟು ವಿಭಾಗಗಳಲ್ಲಿ ನಾಮನಿರ್ದೇಶನಗೊಂಡಿದೆ.

ಈ ಬಗ್ಗೆ ‘ಎಕ್ಸ್’ನಲ್ಲಿ ಮಾಹಿತಿ ಹಂಚಿಕೊಂಡಿರುವ ಸಿನಿಮಾದ ನಿರ್ದೇಶಕ ಶ್ರೀನಿಧಿ ಬೆಂಗಳೂರು, ‘ಬ್ಲಿಂಕ್ ಸಿನಿಮಾ ರಾಜಸ್ಥಾನ ಚಲನಚಿತ್ರೋತ್ಸವದಲ್ಲಿ ಎಂಟು ವಿಭಾಗಗಳಲ್ಲಿ ನಾಮಿನೇಟ್ ಆಗಿದೆ. ನಿಮ್ಮ ಪ್ರೀತಿ ಹಾರೈಕೆಗೆ ಸಾವಿರ ಶರಣು’ ಎಂದು ಬರೆದುಕೊಂಡಿದ್ದಾರೆ.

‘ಉತ್ತಮ ಬರವಣಿಗೆ, ಉತ್ತಮ ಛಾಯಾಗ್ರಾಹಕ, ಉತ್ತಮ ನಟ, ಉತ್ತಮ ಖಳನಾಯಕ(ಕಿ), ಉತ್ತಮ ಪೋಷಕ ಪಾತ್ರ, ಉತ್ತಮ ಸಿನೆಮಾ, ಉತ್ತಮ ಹಿನ್ನೆಲೆ ಗಾಯಕ ಮತ್ತು ಗಾಯಕಿ ವಿಭಾಗಗಳಲ್ಲಿ ನಾಮನಿರ್ದೇಶನಗೊಂಡಿದೆ’ ಎಂದು ಅವರು ತಿಳಿಸಿದ್ದಾರೆ.

ಮಾರ್ಚ್‌ನಲ್ಲಿ ತೆರೆಕಂಡ 'ಬ್ಲಿಂಕ್', ನಿರ್ದೇಶಕ ಶ್ರೀನಿಧಿ ಬೆಂಗಳೂರು ಅವರ ಚೊಚ್ಚಲ ಚಿತ್ರ. ವೈಜ್ಞಾನಿಕ, ಟೈಂ ಟ್ರಾವೆಲರ್‌ನ ಕಥಾಹಂದರವಿರುವ ಈ ಸಿನಿಮಾ ಪ್ರೇಕ್ಷಕರಿಂದ ಹಾಗೂ ವಿಮರ್ಶಕರಿಂದ ಮೆಚ್ಚುಗೆ ಪಡೆದಿತ್ತು.




ಒಟಿಟಿಯಲ್ಲಿಯೂ ಭಾರಿ ಸದ್ದು ಮಾಡಿತ್ತು.

ಚಿತ್ರದಲ್ಲಿ ನಟ ದೀಕ್ಷಿತ್ ಶೆಟ್ಟಿ, ವಜ್ರದೀರ್ ಜೈನ್, ಚೈತ್ರಾ ಜೆ.ಆಚಾರ್, ಮಂದಾರ, ಗೋಪಾಲ ಕೃಷ್ಣ ದೇಶಪಾಂಡೆ, ಯಶಸ್ವಿನಿ ರಾವ್, ಕಿರಣ್ ನಾಯ್ಕ್, ಸುರೇಶ್ ಅನಗಳ್ಳಿ ಮುಖ್ಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದರು.

ಇದೇ ತಿಂಗಳು 28ರಂದು ಜೈಪುರದ ದೀಪ್ ಸ್ಮೃತಿ ಆಡಿಟೋರಿಯಂನಲ್ಲಿ ರಾಜಸ್ಥಾನ ಚಲಚಿತ್ರೋತ್ಸವದ 12ನೇ ಆವೃತ್ತಿಯ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ. ❖

ಶಾರುಕ್ ಖಾನ್ ಜವಾನ್ ಚಿತ್ರ ನ.29ಕ್ಕೆ ಜಪಾನ್‌ನಲ್ಲಿ ಬಿಡುಗಡೆ



ನವದೆಹಲಿ: ಬಾಲಿವುಡ್ ಸೂಪರ್‌ಸ್ಟಾರ್ ಶಾರುಕ್ ಖಾನ್ ನಟನೆಯ ‘ಜವಾನ್’ ಚಿತ್ರ ನ.29ರಂದು ಜಪಾನ್‌ನ ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗುತ್ತಿದೆ.

ಅಟ್ಲಿ ನಿರ್ದೇಶನದ ಈ ಸಿನಿಮಾ 2023ರ ಸೆಪ್ಟೆಂಬರ್‌ನಲ್ಲಿ ಭಾರತದಲ್ಲಿ ಬಿಡುಗಡೆಗೊಂಡಿತ್ತು. ಅಲ್ಲದೆ ಬಾಕ್ಸ್ ಆಫೀಸ್‌ನಲ್ಲಿ ₹1,100 ಕೋಟಿ ಗಳಿಕೆ ಮಾಡಿತ್ತು.

ಇದೀಗ ಜಪಾನ್‌ನಲ್ಲಿ ಸಿನಿಮಾ ಬಿಡುಗಡೆಯಾಗುತ್ತಿರುವ ಬಗ್ಗೆ ವರದಿ ಮಾಡಿರುವ ಜಪಾನೀಸ್ ಪೋಸ್ಟ್ ಅನ್ನು ಶಾರುಕ್ ಖಾನ್ ಹಂಚಿಕೊಂಡಿದ್ದಾರೆ.

ಜವಾನ್ ಚಿತ್ರದಲ್ಲಿ ಶಾರುಕ್ ದ್ವಿಪಾತ್ರದಲ್ಲಿ ಕಾಣಿಸಿಕೊಂಡಿದ್ದು ವಿಕ್ರಮ ರಾಥೋಡ್ ಮತ್ತು ಆತನ ಮಗ ಆಜಾದ್ ಹೆಸರಿನ ಪಾತ್ರದಲ್ಲಿ ನಟಿಸಿದ್ದಾರೆ.

ಜವಾನ್ ಚಿತ್ರದಲ್ಲಿ ನಯನತಾರಾ, ವಿಜಯ್ ಸೇತುಪತಿ, ದೀಪಿಕಾ ಪಡುಕೋಣೆ ಮತ್ತು ಸಂಜಯ್ ದತ್ ವಿಶೇಷ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ.

ಗೌರಿ ಖಾನ್ ಚಿತ್ರವನ್ನು ನಿರ್ಮಾಣ ಮಾಡಿದ್ದು, ಗೌರವ್ ವರ್ಮಾ ಸಹ ನಿರ್ಮಾಪಕರಾಗಿದ್ದಾರೆ. ❖

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

REAL ESTATE SELLING

Sites

Banashankari

BANASHANKARI 6TH-STAGE WANTED/ AVAILABLE BDA RESIDENTIAL AND COMMERCIAL SITES IMMEDIATE SETTLEMENT CONTACT: 8050908920/ 9986866661

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES, BRINDAVAN ASSOCIATES- 9980863245/ 9945333993

SALE SITE JHCS Layout Subramanyapura Near Prestige Lake Ridge 20x30 West Facing 80Lakhs Negotiable Prakash: 7892035229

SALE BDA Site No. 1367 30X40 BSK 6th Phase 7th Block west facing near Rashtrotthana school 40 feet road No broker owner 9449630333

Bannerghatta Road

SALE 20,000 Sq.Ft. East Facing Vacant Plot, BBMP A Khatha,Clear titles suitable for Apartment, 43Ft Wide Road, 500Mtrs from HulimavuMetro Station Bannerghatta Main Road @ Rs.5000/- Per Sq.Ft. Call Verna Developers, Barton Centre, MG Road, Bangalore. 9916310226/ 9620253180

Indiranagar

INDIRANAGAR 30X40 40X60 3400 50X80 FOR SALE RESIDENTIAL AND COMMERCIAL ONLY GENUINE BUYERS CALL RAO: 8660189539

Jakkur

20X30 BDA ARKAVATHI LAYOUT, Adjacent NPS Jakkur school.1km to Airport road and Manyatha tech park.Owner: 9620721143

Kengeri

KENGERI UPANAGAR BDA Site 25x42, E/F, BANASHANKARI 6th Stage, 7th Block 20x30,W/F :9632822225/ 9110467577

Kempegowda Layout

NADAPRABHU KEMPEGOWDA LAYOUT 7th Block 'F' Sector 50x80 west Facing behind 100-feet Road on 50feet-road near Nayara Petrol bunk. Contact:9686469799

KEMPEGOWDA LAYOUT, COMMERCIAL BDA SITE FOR SALE 20x30, 30x40, 40x60, 50x80, Contact Kumar: 9945119449

Mysore Road

SALE RESIDENTIAL Site 60*40 SLN CITY No.168, Ajjanahalli, Tavarekere Hobli, Bengaluru South Taluk. Near Big Banayan Tree. Price Rs. 1400 Sft. Negotiable. Contact: Nagaraj 9353418026; 8296620408

Nagarabhavi

SALE: SITE 30x60 Nagarabhavi 2nd Stage 'A' Khata. Bank loan Available. Immediate Registration. Genuine Buyers. 6361819741.

Padmanabha Nagar

40X60 NORTH Facing Fully Developed, Clear Documents, Agent Excuse, Direct Buyers Contact owner. 9449611876, 9481028358

Sanjaynagar

RMV BHOOPASANDRA BDA Site 29'x57'=1650Sqft East, 40' Road, off Kalpana Chawla Road, 3.15Crore Owner: 9980555558

Vijayanagar

35X50 NORTH East Corner BDA Site Available for sale 9th Main, Vijayanagar Contact : 9513355569

Vidyaranyapura

30X40 NORTH Facing 50K Rental Earning 1.50 Cr Negotiable Contact: 9632321155

Yeshwanthpur

SALE TUMKUR Road, BDA 55x125 Commercial Site, West facing 200ft road, Near Orion mall, Metro cash&carry. 9448151537.

J P Nagar

SALE J.P.NAGAR Dollars Colony 50x80 West, Panduranganagar 50x85, Jayanagar 4th Block 40x60 Contact: 9845069739, 9380613718

Nelamangala

SITE FOR Sale. E.Krishnappa Layout, Opp.Nelamangala RTO Office, 30x40 East Facing,'good location, developed area. Contact: 9880812364.

'30X50 SOUTH Facing Site Sale @ Nelamangala Rashi Developers close to 'D'Mart, Tumkur Highway. 9845268611'

House

Jakkur

MCECHS LAYOUT beautiful new luxurious house on 30x40, east'facing G+3 4BHK with lift, semi-furnished, Ready to move for sale 3.35cr. Call 9535479091

Kumaraswamy Layout

DUPLEX HOUSE For Sale Kumaraswamy Layout 3.3 Cr East Facing BDA Property No Brokers: 9620245557

Nagarbhavi

NAGARBHAVI MALLATHALLI ITI Employees Layout Luxury Triplex house with fully furnished for sale 30/40south face site Face door Direct owner: 9880311959

Nandini Layout

BDA 30X40 North Facing, 2BHK independent House in Railway Layout at Nandini Layout for sale. Call 9844039482

Vijayanagar

CORNER DUPLEX 4 BHK with Car-Parking and 10k Liter Sump with pent`house at`Agrahara Dasarahalli. 95 Lakhs. Slightly Negotiable. Genuine Buyers Contact 9844460007 9844470007

Srirampura

HOUSE FOR SALE, in Sriramapuram, Land measuring 1500sqft. Building 4000+. Ground +2. Covered parking for 2 Cars. Contact: 9171918295, 9442514001.

Commercial Building

Chamarajpet

SALE: CHAMARAJPET



Commercial Building
18,000 Sft
Rental Income 8.5 Lacs
Sale Price 14.50 Crores
Contact:
96322-37557 / 96069-07557

Commercial Street

COMMERCIAL STREET Near WESTSIDE 40x90 North Facing 35000/- Sft Clear Title 'PRAKASH ENTERPRISES' 98456-09477

Agricultural Land Converted

Hoskote

HOSKOTE LAND For`Sale`4acres Sidlaghatta Road Near`Suguna Feeds`Factory Suitable`Layout Apartment Residential`Zone Land`Price 5crore Per Acre Call:9740803686 9243438374

Commercial Land

Devanahalli

SALE/LEASE 25 Guntas Commercial Land, at 'H' Cross, Near Devanahalli 12L/ Guntas. Genuine Buyers Only. 9886418169, 9480608188

Mysore

COMMERCIAL 11GUNTAS land for sale 100X115 at Srirampura 5km From ring road Mysore Contact: 9342288281

Flat

General

2 & 3 BHK Flats for Sale in Shubh Enclave, Haralur. Contact 9611153404

Sadashiva Nagar

FLAT FOR Sale 4 BHKServant Room 3370sft, BagamaneTriumph,13SadashivaNagarSankey Road coveredparking for Two cars.Contact: 6281741101

Villas/Bunglows

Koramangala

4BHK BUNGALOW with swimming pool, furnished, high`end imported finishes`and fittings 8000sft BUA for sale in koramangala at 13cr.serious buyers contact 9845440436

REAL ESTATE BUYING

Sites

Anjanapura

WANTED BDA & BBMP SITES, Anjanapura, JP.Nagar,Banashankari 6th Stage, Vishweshwaraiah Layout. Any Measurements Immediate Settlement Genuine Sellers Contact: 9972223222, 9606632777

WANTED BDA Site Anjanapura, Banashankari 6th Stage, Vishweshwaraiah layout & any BDA Katha & Mysore MUDA Sites, immediate settlement, genuine Sellers Contact:9902038118, 9449060605

WANTED BDA SITES. Anjanapura, Banashankari 6th Stage, BCC, BCMC Layout, JP.Nagar 8th & 9th Phase, Any Measurement. Contact: 9845298419

Banashankari

BDA SITES WANTED ARKAVATHY ANJANAPURA BANASHANKRI 6TH STAGE VISHWESHWARAIA KEMPEGOWDA ANY BDA LAYOUT. CONTACT: 9845062822, 8660751654

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

Kanakapura Road

WANTED BDA SITE Anjanapura, Banashankari 6`Stage, JP.Nagar 9th, BCCHS, BCMC, Gubblala Doddakallasandra. Agent Excuse. Call: 9008259222.

Vishwashwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

WANTED BDA SITE 30x40, 40x60, 50x80 Visweshwarayya Layout, Nagarabhavi RHCS Layout, NGF, Banashankari 6th Stage. 8105688602.

BUILDERS ESSENTIAL

Roofing Materials

***WE-FIX* LEAKING** ROOF, TANK, SUMP, BATHROOM, SKYLIGHT, HOUSE PAINTING, TILING, CARPENTRY, EPOXY, CIVIL WORKS. 9448572697

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Commercial

Commercial Property for RENT
Jayanagar 4th Block
Rs.1.5 Lakh/MG-2: 400 sq ft 3rd floor: 150 sqft. Retails & Office only. Opp Jain Temple, **Call: 9741733221**

COMMERCIAL PROPERTY Suitable for Banks, Storage Spaces, Office Spaces, Garements, PG Accomodation etc. Ground Floor and First Floor. Available Each Floor 1300sqft MEI Road Yeshwantpura. Contact No : 9743610556

LAND FOR RENT, DC-Converted 1Acre Land, Adjacent-to Bengaluru Doddaballapur Highway, suitable for Office Establishments, Godowns, Banks, Software Companies, Educational Institutions, Contact- 9845368222

House

VIJAYANAGAR BHK Ground Floor close to Metro Station for Rent. Contact: 9448492281

BUSINESS

Business to Business

Business

WANTED RUNNING EDUCATION INSTITUTION with Good`Students Strength`(State /CBSC/ICSC`) OR 1-5`Acre Land`with Clear`Title`in & Around Bangalore OR any Dist.Head Quarters in Karnataka. (100% Cheque`Payment) Contact: 7899992107 (Brokers`Excuse

JOB OPPORTUNITIES

General

SUPERVISORS WITH 5+ years experience & basic computer skills required for a Manufacturing firm at Peenya. Suitable candidates contact : 080- 26603729. Email: anvesh@mahendraperfumery.com

PERSONAL

Change of Name

I, MALLIKARJUNA, residing at Bengaluru-64, have changed my name as MALLIKARJUNA C.D., vide affidavit dated 13/09/2024 before Notary K.S. Bammappanavar, Bengaluru

I RAYAPPA S/o Late S CHINNASWAMY JACOB Residing at No 608 Ground Floor 6th Cross 7th Main HAL 3rd Stage New Thippasandra Bangalore 560075 Declared that I have Change My Name From RAYAPPA To RAJESH S CHINNASWAMY JACOB Vide Affidevit Dated 11.09.2024 Sworn Before Notary SIVAKUMARA MN Bangalore 560032

I, S. Vijalakshmi @ S Vijayamma R/o #49/25 B.Narayanapura, Dooravaninagar, Bengaluru-560016 declare that both names S. Vijayalakshmi and S. Vijayamma are one and the same only, affidavit dated 29.07.2024, Notary R. Basavaraja, Bangalore. Henceforth I shall be called S. VIJAYAMMA only.

CHANGE OF NAME
I, **Joann Joseph,** aged 29 years, residing at No.97, Mosque Road, Frazer Town, Bengaluru North, Bengaluru - 560005, have changed my name to **JOANN MATHEW JOSEPH,** vide affidavit dated 13/09/2024 before Notary A Gerard, Bengaluru. Henceforth I shall be called as **JOANN MATHEW JOSEPH** only

I, BHAGYAREKHA THIMMARAYAGOWDA residing at Bengaluru-96 have changed my name as BHAGYAREKHA H.P vide affidavit dated 13/09/2024 before Notary K.S. Bammappanavar, Bengaluru

I, USHA PRAKASH KUMAR R/a #10, New Post Office Road, Jayanagar West 7th Block, Bengaluru -560070 Have Changed My Name to USHA PRAKASH Vide Affidavit Dated 13/09/2024 before Notary Mohammed Hussain. K

I, NAGARJA.S resident of Begur, B.K.Halli Post, Jala Hobli, Bangalore-562149 have changed my name to S.NAGARAJU vide affidavit dated 23/08/2024 sworn before notary D.Sarala Kumari, Bangalore

CONNECT

READY TO MOVE IN
₹ **45** Lakhs **2 BHK FLAT**
Fully Furnished including AC & Wardrobe
RENTAL POTENTIAL ₹ 30,000 PM FOR THIS APARTMENT
TENANT READILY AVAILABLE FOR THESE FLATS!
Chandapura, Near Narayana Hrudayalaya Metro Station on Hosur Road
NISARGA BUILDERS Call For Site Visit **6366 864 500**

ಶ್ರೀ ಕಾಂಚಿಪುರಂ ರೇಷ್ಮೆ ಸೆಂಟರ್



10 Days only
SPOT CASH
ಹಳೆಯ (ಹರಿದ) ರೇಷ್ಮೆ ಸೀರೆಗಳು, ರೇಷ್ಮೆ ಪಂಚೆಗಳು, ಬೆಳ್ಳಿ ಜರಿ,
ಟಿಷ್ಯೂ ಸೀರೆಗಳು, ಬನಾರಸ್, ಮೈಸೂರು ಸಿಲ್ಕ್ ಯಾವುದೇ ರೀತಿಯಲ್ಲಿದ್ದರು ಸ್ಥಳದಲ್ಲೇ ಹಣ ಕೊಟ್ಟು ಖರೀದಿಸುತ್ತೇವೆ
ತಕ್ಷಣ ಹಣ **14-09-2024 - 25-09-2024**
ಶ್ರೀ ಕಾಂಚಿಪುರಂ ರೇಷ್ಮೆ ಸೆಂಟರ್, ನಂ.58, ಕೃಷ್ಣ ಬಿಲ್ಡಿಂಗ್, ಸಂಪಿಗೆ ರಸ್ತೆ, 5ನೇ ಅಡ್ಡ ರಸ್ತೆ, ಮಲ್ಲೇಶ್ವರಂ ಬ್ರಿಡ್ಜ್ ಹತ್ತಿರ, ಬೆಂಗಳೂರು
Call: 9632781499

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager The Printers (Mysore) Pvt. Ltd. Bengaluru

ಶನಿವಾರ, ಸೆಪ್ಟೆಂಬರ್ 14, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 256 | ಪುಟ 26

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ವಿಚ್ಛೇದನ ಪ್ರಕರಣಗಳಲ್ಲಿ ನ್ಯಾಯಸಮ್ಮತ ಜೀವನಾಂಶವೆಷ್ಟು?



ದೀರ್ಘಾವಧಿ ಠೇವಣಿ: ಏಡಿಓಗಳ ಎತ್ತಂಗಡಿ 8

ಪ್ರಧಾನಿ ಮಧ್ಯಪ್ರವೇಶಕ್ಕೆ ಮನವಿ 10

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
82,890	25,356	₹75,350 (ಬೆಂಗಳೂರು)	₹88,500 (ಬೆಂಗಳೂರು)	83.92

ಸಿಬಿಐಗೆ ಕುಟುಕಿದ 'ಸುಪ್ರೀಂ'

ಪಂಜರದ ಗಿಳಿಗಳಲ್ಲ ಎನ್ನುವುದನ್ನು ನಿರೂಪಿಸಿ: ಕೇಂದ್ರೀಯ ತನಿಖಾ ಸಂಸ್ಥೆ ಅಧಿಕಾರಿಗಳಿಗೆ ತಾಕೀತು

ಪ್ರಜಾವಾಣಿ ವಾರ್ತೆ

ನವದೆಹಲಿ: ಅಬಕಾರಿ ನೀತಿ ಹಗರಣದಲ್ಲಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಬಂಧನದ 'ಅಗತ್ಯ' ಹಾಗೂ ಬಂಧನದ 'ಸಮಯ'ದ ಕುರಿತು ಕೇಂದ್ರೀಯ ತನಿಖಾ ಸಂಸ್ಥೆಗೆ (ಸಿಬಿಐ) ಛೀಮಾರಿ ಹಾಕಿರುವ ಸುಪ್ರೀಂ ಕೋರ್ಟ್, 'ತನಿಖಾ ಸಂಸ್ಥೆಯು ಪಂಜರದ ಗಿಳಿಯಾಗಬಾರದು' ಎಂದು ಕಟುವಾಗಿ ಹೇಳಿದೆ.

ಕೇಜ್ರಿವಾಲ್ ಸಲ್ಲಿಸಿರುವ ಜಾಮೀನು ಅರ್ಜಿ ಮತ್ತು ಸಿಬಿಐ ತಮ್ಮನ್ನು ಬಂಧಿಸಿರುವ ಕ್ರಮ ಪ್ರಶ್ನಿಸಿ ಅವರು ಸಲ್ಲಿಸಿದ ಇನ್ನೊಂದು ಅರ್ಜಿಯ ಸಂಬಂಧ ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಹಾಗೂ ಉಜ್ಜಲ್ ಭುಯಾಂ ಅವರಿದ್ದ ಪೀಠ ಶುಕ್ರವಾರ ತೀರ್ಪು ಪ್ರಕಟಿಸಿತು.

'ಈ ತನಿಖಾ ಸಂಸ್ಥೆಯು ಪಂಜರದ ಗಿಳಿಯಂತೆ ಕಾರ್ಯನಿರ್ವಹಿಸುತ್ತಿದೆ ಎಂಬ ಭಾವನೆ ಜನರಲ್ಲಿದೆ. ಈ ಭಾವನೆಯನ್ನು ಹೋಗಲಾಡಿಸಬೇಕು' ಎಂದು ನ್ಯಾಯಮೂರ್ತಿ ಭುಯಾಂ ಹೇಳಿದರು. ಸೀಸರ್ ಪತ್ನಿಯ ಉಪಮೆಯನ್ನು ಉಲ್ಲೇಖಿಸಿದ ಅವರು, 'ಸಂಸ್ಥೆಯು ಸಂಶಯಾತೀತ ಆಗಿರಬೇಕು' ಎಂದು ಕಿವಿಮಾತು ಹೇಳಿದರು.

ಈ ಬಂಧನ ಕಾನೂನುಬದ್ಧವಾಗಿದೆ ಹಾಗೂ ಕಾರ್ಯವಿಧಾನದಲ್ಲಿ ಲೋಪ ಕಂಡುಬಂದಿಲ್ಲ ಎಂದು ನ್ಯಾಯಮೂರ್ತಿ ಸೂರ್ಯಕಾಂತ್ ಅಭಿಪ್ರಾಯಪಟ್ಟರು.

9ನೇ ಪುಟ ನೋಡಿ



ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ತಿಹಾರ್ ಜೈಲಿನಿಂದ ಶುಕ್ರವಾರ ಸಂಜೆ ಹೊರಬಂದ ನಂತರ ಬೆಂಬಲಿಗರ ಕೈಕುಲುಕಿದರು —ಪಿಟಿಐ ಚಿತ್ರ

ಜೈಲಿನಿಂದ ಹೊರಬಂದ ಕೇಜ್ರಿವಾಲ್

ಅರವಿಂದ ಕೇಜ್ರಿವಾಲ್ ಅವರಿಗೆ ನ್ಯಾಯಪೀಠವು ಷರತ್ತುಬದ್ಧ ಜಾಮೀನು ನೀಡಿತು. ಸರಿಸುಮಾರು ಆರು ತಿಂಗಳ ಸೆರೆವಾಸದ ಬಳಿಕ ಕೇಜ್ರಿವಾಲ್ ಅವರು ಶುಕ್ರವಾರ ಸಂಜೆ ಜೈಲಿನಿಂದ ಹೊರಬಂದರು.

ಕೇಜ್ರಿವಾಲ್ ಬಂಧನವನ್ನು ದೆಹಲಿ ಹೈಕೋರ್ಟ್ ಆ.5ರಂದು ಎತ್ತಿ ಹಿಡಿದಿತ್ತು. ಇದರ ವಿರುದ್ಧ ಕೇಜ್ರಿವಾಲ್ ಸಲ್ಲಿಸಿದ್ದ ಮೇಲ್ಮನವಿಯನ್ನು ನ್ಯಾಯಪೀಠ ಅಂಗೀಕರಿಸಿತು. ಬಂಧನದ ವಿರುದ್ಧ ಕೇಜ್ರಿವಾಲ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ವಜಾಗೊಳಿಸಿದ ಹೈಕೋರ್ಟ್ ಆದೇಶವನ್ನೂ ನ್ಯಾಯಪೀಠ ಎತ್ತಿ ಹಿಡಿಯಿತು. ಪ್ರಕರಣದ ವಿಚಾರಣೆಯು ಶೀಘ್ರದಲ್ಲಿ ಪೂರ್ಣಗೊಳ್ಳುವ ಸಾಧ್ಯತೆ ಇಲ್ಲ ಎಂಬುದನ್ನು ಗಮನಿಸಿದ ಪೀಠವು ಈ ಆದೇಶ ನೀಡಿತು.

ಈ ವಿಷಯದ ಬಗ್ಗೆ ಯಾವುದೇ ಸಾರ್ವಜನಿಕ ಹೇಳಿಕೆಗಳನ್ನು ನೀಡದಂತೆ ಕೇಜ್ರಿವಾಲ್ ಅವರಿಗೆ ಪೀಠ ಸೂಚನೆ ನೀಡಿತು. 'ಸಾರ್ವಜನಿಕ ವೇದಿಕೆಗಳಲ್ಲಿ ಸ್ವಯಂ ನಿರೂಪಣೆಗಳನ್ನು ಸೃಷ್ಟಿಸುವ ಇತ್ತೀಚಿನ ಪ್ರವೃತ್ತಿಗೆ ಕಡಿವಾಣ ಹಾಕಲು ಈ ಷರತ್ತು ಅಗತ್ಯ' ಎಂದು ಪೀಠ ಹೇಳಿತು. ₹10 ಲಕ್ಷ ಜಾಮೀನು ಬಾಂಡ್ ಹಾಗೂ ಇಬ್ಬರ ಶ್ಯೂರಿಟಿ ನೀಡುವಂತೆಯೂ ಪೀಠ ಆದೇಶ ನೀಡಿತು.

ಜೈಲಿನಿಂದ ಹೊರಬಂದ ಬಳಿಕ ಕೇಜ್ರಿವಾಲ್, 'ನನ್ನ ಸ್ಥೈರ್ಯವನ್ನು ಕುಗ್ಗಿಸಲು ಅವರು ನನ್ನನ್ನು ಜೈಲಿಗೆ ಹಾಕಿದರು. ಆದರೆ, ನನ್ನ ನೈತಿಕತೆ ಹಿಂದಿ ಗಿಂತಲೂ ಹೆಚ್ಚಾಗಿದೆ. ಜೈಲುಗಳು ನನ್ನನ್ನು ದುರ್ಬಲಗೊಳಿಸಲು ಸಾಧ್ಯವಿಲ್ಲ. ನಮ್ಮ ದೇಶವನ್ನು ದುರ್ಬಲಗೊಳಿಸಲು ಕೆಲಸ ಮಾಡುತ್ತಿರುವ ದೇಶವಿರೋಧಿ ಶಕ್ತಿಗಳ ವಿರುದ್ಧ ಹೋರಾಟ ಮುಂದುವರಿಸುತ್ತೇನೆ' ಎಂದು ಪ್ರಕಟಿಸಿದರು.

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಶೋಧದ ನೆಪದಲ್ಲಿ ಬೆಂಗಳೂರು ಉದ್ಯಮಿ ಅಪಹರಣ, ಸುಲಿಗೆ ಪ್ರಕರಣ

ಜಿಎಸ್‌ಟಿ ಅಧಿಕಾರಿಗಳ ಅಮಾನತು

ನವದೆಹಲಿ (ಪಿಟಿಐ): ಶೋಧದ ನೆಪದಲ್ಲಿ ಬೆಂಗಳೂರಿನ ಉದ್ಯಮಿಯೊಬ್ಬರ ಕಂಪನಿ ಮೇಲೆ ದಾಳಿ ನಡೆಸಿ ಅವರಿಂದ ಹಣ ಸುಲಿಗೆ ಮಾಡಿರುವ ಆರೋಪದಡಿ ಬಂಧನಕ್ಕೆ ಒಳಗಾಗಿರುವ ಕೇಂದ್ರ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಇಲಾಖೆಯ ನಾಲ್ವರು ಅಧಿಕಾರಿಗಳನ್ನು ಕೆಲಸದಿಂದ ಅಮಾನತುಗೊಳಿಸಲಾಗಿದೆ.

ಜಿಎಸ್‌ಟಿ ಗುಪ್ತಚರ ವಿಭಾಗದ ಮಹಾ ನಿರ್ದೇಶನಾಲಯದ ಬೆಂಗಳೂರು ಪ್ರಾದೇಶಿಕ ಕಚೇರಿ ವ್ಯಾಪ್ತಿಯ ದಕ್ಷಿಣ ವಲಯದ ಅಧೀಕ್ಷಕ ಅಭಿಷೇಕ್, ಹಿರಿಯ ಗುಪ್ತಚರ ಅಧಿಕಾರಿಗಳಾದ ಮನೋಜ್ ಸೈನಿ, ನಾಗೇಶ್ ಬಾಬು ಹಾಗೂ ಗುಪ್ತಚರ ಅಧಿಕಾರಿ ಸೋನಾಲಿ ಸಹಾಯ್ ಅವರನ್ನು ಅಮಾನತುಗೊಳಿಸಲಾಗಿದೆ ಎಂದು ಕೇಂದ್ರ ಪರೋಕ್ಷ ತೆರಿಗೆಗಳು ಮತ್ತು ಕಸ್ಟಮ್ಸ್ ಮಂಡಳಿ (ಸಿಬಿಐಸಿ) ಶುಕ್ರವಾರ ತಿಳಿಸಿದೆ.

ಬೆಂಗಳೂರಿನ ಜಿ.ಎಂ. ಪಾಳ್ಯದಲ್ಲಿ ನೆಲೆಸಿರುವ ಉದ್ಯಮಿ ಕೇಶವ್ ತಕ್ ಅವರಿಂದ ₹1.5 ಕೋಟಿ ಸುಲಿಗೆ ಮಾಡಿದ ಆರೋಪ ಈ ಅಧಿಕಾರಿಗಳ ಮೇಲಿದೆ. ಉದ್ಯಮಿ ನೀಡಿದ ದೂರಿನ ಮೇರೆಗೆ ಸೆಪ್ಟೆಂಬರ್ 11ರಂದು ಬೆಂಗಳೂರು ಸಿಸಿಬಿ ಹಾಗೂ ಪೂರ್ವ ವಿಭಾಗದ ಪೊಲೀಸರ ತಂಡ ಜಂಟಿ ಕಾರ್ಯಾಚರಣೆ ನಡೆಸಿ ಈ ಅಧಿಕಾರಿಗಳನ್ನು ಬಂಧಿಸಿತ್ತು.

'ಉದ್ಯಮಿಯನ್ನು ಅಪಹರಿಸಿ ಕಾನೂನು ಉಲ್ಲಂಘನೆ ಮಾಡಿರುವ ಬಗ್ಗೆ ಮಾಧ್ಯಮಗಳಲ್ಲಿ ವರದಿಯಾಗಿದೆ. ಇದರ ಆಧಾರದ ಮೇಲೆ ಅಧಿಕಾರಿಗಳ ವಿರುದ್ಧ ಕ್ರಮಕೈಗೊಳ್ಳಲಾಗಿದೆ' ಎಂದು ಸಿಬಿಐಸಿ 'ಎಕ್ಸ್'ನಲ್ಲಿ ತಿಳಿಸಿದೆ.

'ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರೊಂದಿಗೆ ನಿರಂತರ ಸಂಪರ್ಕದಲ್ಲಿದ್ದೇವೆ. ಪೊಲೀಸರ ತನಿಖೆಯ ಫಲಿತಾಂಶ ಆಧರಿಸಿ ಅಧಿಕಾರಿಗಳ ವಿರುದ್ಧ ಮುಂದಿನ ಹಂತದ ಕ್ರಮಕೈಗೊಳ್ಳಲಾಗುವುದು' ಎಂದು ತಿಳಿಸಿದೆ.

ಪಾರದರ್ಶಕ ಹಾಗೂ ವ್ಯಾಪಾರ ಸ್ನೇಹಿ ತೆರಿಗೆ ಆಡಳಿತಕ್ಕೆ ಮಂಡಳಿಯು ಒತ್ತು ನೀಡಲಿದೆ. ಹಾಗಾಗಿ, ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಜರುಗಿಸಲು ಬದ್ಧ ಎಂದು ಹೇಳಿದೆ.

ಇ.ಡಿಯಿಂದ ಪ್ರತ್ಯೇಕ ಪ್ರಕರಣ ದಾಖಲು: ನಾಲ್ವರು ಅಧಿಕಾರಿಗಳ ವಿರುದ್ಧ ಜಾರಿ ನಿರ್ದೇಶನಾಲಯವು (ಇ.ಡಿ) ಪ್ರತ್ಯೇಕವಾಗಿ ಪ್ರಕರಣ ದಾಖಲಿಸಿದೆ. ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯ ವಿವಿಧ ಸೆಕ್ಷನ್‌ನಡಿ (ಪಿಎಂಎಲ್‌ಎ) ಸಿಸಿಬಿ ಪೊಲೀಸರು, ಅಧಿಕಾರಿಗಳ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ಅಪಘಾತ: ರಾಜ್ಯದ 8 ಮಂದಿ ಸಾವು

ಹೈದರಾಬಾದ್: ಆಂಧ್ರ ಪ್ರದೇಶದ ಚಿತ್ತೂರಿನಲ್ಲಿ ಶುಕ್ರವಾರ ಸಂಜೆ ಬಸ್ಸು ಹಾಗೂ ಟ್ರಕ್ ಡಿಕ್ಕಿಯಾಗಿ ಎಂಟು ಮಂದಿ ಮೃತಪಟ್ಟಿದ್ದಾರೆ. ಈ ಭೀಕರ ಅಪಘಾತದಲ್ಲಿ 30ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದಾರೆ.

ಬೆಂಗಳೂರು– ಚಿತ್ತೂರು ಹೆದ್ದಾರಿಯಲ್ಲಿ ಮೊಗಲಿ ಘಾಟ್‌ನಲ್ಲಿ ಅಪಘಾತ ಸಂಭವಿಸಿದೆ. ಮೃತಪಟ್ಟವರಲ್ಲಿ ಬಹುತೇಕ ಮಂದಿ ಬೆಂಗಳೂರಿನವರು ಎನ್ನಲಾಗಿದೆ. ಅವರು ತಿರುಪತಿ ದೇವಸ್ಥಾನಕ್ಕೆ ಭೇಟಿ ನೀಡಿ ವಾಪಸಾಗುತ್ತಿದ್ದರು.

436 ಕಿ.ಮೀ ರಸ್ತೆಗೆ ಮರುಡಾಂಬರೀಕರಣ

ಬೆಂಗಳೂರು: ಮಹದೇವಪುರ ವಲಯ ವ್ಯಾಪ್ತಿಯಲ್ಲಿ 436.2 ಕಿ.ಮೀ ಉದ್ದ 4,348 ರಸ್ತೆಗಳ ಮೇಲ್ಮೈ ಪದರ ಹಾಳಾಗಿದ್ದು, ಮರು ಡಾಂಬರೀಕರಣ ಕಾರ್ಯ ಆರಂಭಿಸಲಾಗಿದೆ ಎಂದು ವಲಯ ಮುಖ್ಯ ಎಂಜಿನಿಯರ್ ಲೋಕೇಶ್ ತಿಳಿಸಿದರು.

ರಸ್ತೆ ಗುಂಡಿಗಳನ್ನು ಮುಚ್ಚುವ ಕಾಮಗಾರಿಗಳನ್ನು ಶುಕ್ರವಾರ ಪರಿಶೀಲಿಸಿದ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

ಮಹದೇವಪುರ ವಲಯ ವ್ಯಾಪ್ತಿಯಲ್ಲಿ 2,136.91 ಕಿ.ಮೀ ರಸ್ತೆ ಇದೆ. ಅದರಲ್ಲಿ 436 ಕಿ.ಮೀ ರಸ್ತೆಗೆ ಡಾಂಬರೀಕರಣ ಮಾಡಿ, ವಾಹನಗಳ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಾಗುತ್ತದೆ ಎಂದು ಮಾಹಿತಿ ನೀಡಿದರು.

ಸೆ.17ರ ವೇಳೆಗೆ ರಸ್ತೆಗಳ ಗುಂಡಿ ದುರಸ್ತಿ

ವಾರದಲ್ಲಿ ಎರಡನೇ ಬಾರಿಗೆ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ನಗರದಲ್ಲಿ ರಾತ್ರಿ ಸಂಚಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಸ್ತೆಗಳನ್ನು ಗುಂಡಿ-ಮುಕ್ತಗೊಳಿಸಬೇಕು' ಎಂಬ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಸೂಚನೆಯನ್ನು ಪಾಲಿಸಲು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಈ ವಾರದಲ್ಲಿ ಎರಡನೇ ಬಾರಿಗೆ 'ರಾತ್ರಿ ಸಂಚಾರ' ನಡೆಸಿದರು.

ಶುಕ್ರವಾರ ರಾತ್ರಿ ನಗರದ ಹಲವು ರಸ್ತೆಗಳಲ್ಲಿ ಸಂಚರಿಸಿ, ರಸ್ತೆ ಗುಂಡಿಗಳು ಹಾಗೂ ವಿವಿಧ ಅಭಿವೃದ್ಧಿ ಕಾಮಗಾರಿಗಳ ಪರಿಶೀಲಿಸಿದರು.

ಬಿಬಿಎಂಪಿಯ ಎಂಟು ವಲಯದಲ್ಲಿ ಸುಮಾರು ಎರಡು ಸಾವಿರ ಗುಂಡಿಗಳಿದ್ದು, ಅವುಗಳನ್ನು ಸೆ.17ರ ವೇಳೆಗೆ ಎಲ್ಲವನ್ನೂ ಮುಚ್ಚಲಾಗುವುದು ಎಂದು ತಿಳಿಸಿದರು.

ಎಲ್ಲ ವಲಯಗಳಲ್ಲೂ ರಸ್ತೆಗಳ ಗುಂಡಿ ಮುಚ್ಚುವ ಕಾರ್ಯ ಪ್ರಗತಿಯ-ಲ್ಲಿದ್ದು, ಅತಿ ಶೀಘ್ರದಲ್ಲಿ ಕಾಮಗಾರಿ ಮುಗಿಯಲಿದೆ ಎಂದರು.

ರಸ್ತೆ ಮೂಲಸೌಕರ್ಯ ವಿಭಾಗ ಹಾಗೂ ಪ್ರಮುಖ ರಸ್ತೆಗಳ ವಿಭಾಗದಿಂದ ನಿರ್ವಹಣೆ ಮಾಡುತ್ತಿರುವ ರಸ್ತೆಗಳಲ್ಲೇ ಹೆಚ್ಚು ಗುಂಡಿಗಳಿವೆ. ಆ ವಿಭಾಗದ ಎಂಜಿನಿಯರ್ ಗಳಿಗೆ ಶೀಘ್ರ ದುರಸ್ತಿ ಕಾರ್ಯ ಕೈಗೊಳ್ಳಲು ಸೂಚಿಸಲಾಗಿದೆ ಎಂದು ತುಷಾರ್ ಗಿರಿನಾಥ್ ಹೇಳಿದರು.



ಸಿದ್ದಾಪುರ ಜಂಕ್ಷನ್ ನಲ್ಲಿ ರಸ್ತೆ ಡಾಂಬರೀಕರಣವನ್ನು ಶುಕ್ರವಾರ ರಾತ್ರಿ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಪರಿಶೀಲಿಸಿದರು

ದಕ್ಷಿಣ ವಲಯದ ಲಾಲ್ ಬಾಗ್ ಮುಖ್ಯ ರಸ್ತೆ ಸಿದ್ದಾಪುರ ಜಂಕ್ಷನ್ ನಲ್ಲಿ ರಸ್ತೆ ಮೇಲ್ಮೈ ಪದರ ಹಾಳಾಗಿದ್ದು, ಅದಕ್ಕೆ ಡಾಂಬರೀಕರಣ ಮಾಡುವುದನ್ನು ಪರಿಶೀಲಿಸಿದರು. ಗುಣಮಟ್ಟ ಕಾಪಾಡಲು ಎಂಜಿನಿಯರ್ ಹಾಗೂ ಗುತ್ತಿಗೆದಾರರಿಗೆ ಸೂಚಿಸಿದರು .

ಮಡಿವಾಳ ಜಂಕ್ಷನ್‌ನಲ್ಲಿ ಮೆಟ್ರೊ ಕೆಲಸ ನಡೆಯುತ್ತಿದ್ದು, ಈ ಪ್ರದೇಶದಲ್ಲಿ ರಸ್ತೆಯನ್ನು ಸುಸ್ಥಿತಿಗೆ ತರುವ ಕಾಮಗಾರಿಯನ್ನು ಬಿಎಂಆರ್‌ಸಿಎಲ್‌ನವರು ಮಾಡಲು ಒಪ್ಪಿದ್ದಾರೆ. ಮಳೆ ಬಂದಾಗ ಬೇಗೂರು ಭಾಗದಿಂದ ಹೆಚ್ಚು ನೀರು ಬರುತ್ತದೆ. ಆಗ ಇಲ್ಲಿ ಹೆಚ್ಚಿನ ಸಮಸ್ಯೆ ಆಗುತ್ತಿದ್ದು, ಮತ್ತೊಂದು ಚರಂಡಿ ಮಾಡಲೂ ನಿರ್ಧರಿಸಲಾಗಿದೆ ಎಂದು ತುಷಾರ್ ಗಿರಿನಾಥ್ ತಿಳಿಸಿದರು.

ದಕ್ಷಿಣ ವಲಯ ಆಯುಕ್ತೆ ವಿನೋತ್ ಪ್ರಿಯಾ, ಜಂಟಿ ಆಯುಕ್ತ ಶಿವಕುಮಾರ್ ಉಪಸ್ಥಿತರಿದ್ದರು.

ಈಜಿಪುರ: ಗುತ್ತಿಗೆದಾರರಿಗೆ ₹25 ಲಕ್ಷ ದಂಡ

ಈಜಿಪುರ ಮೇಲ್ಸೇತುವೆ ಕಾಮಗಾರಿಯನ್ನು ನಿಧಾನವಾಗಿರುವುದಕ್ಕೆ ಗುತ್ತಿ-ಗೆದಾರರಿಗೆ ₹25 ಲಕ್ಷ ದಂಡ ವಿಧಿಸಲಾಗಿದೆ ಎಂದು ತುಷಾರ್ ಗಿರಿನಾಥ್ ತಿಳಿಸಿದರು.

ಶುಕ್ರವಾರ ರಾತ್ರಿ ಮೇಲ್ಸೇತುವೆ ಕಾಮಗಾರಿಯನ್ನು ಪರಿಶೀಲಿಸಿ, ಅವಧಿಯೊಳಗೆ ಪೂರ್ಣಗೊಳಿಸಲು ಗುತ್ತಿಗೆದಾರರಿಗೆ ಸೂಚನೆ ನೀಡಿದರು.

ಈಜಿಪುರ ಮೇಲ್ಸೇತುವೆಯ ಕಾಮಗಾರಿಯಲ್ಲಿ 27 ಪೈಲಿಂಗ್‌ಗಳು, 3 ಪ್ರೀಕಾಸ್ಟ್ ಸೆಗ್ಮೆಂಟ್ ನಿರ್ಮಾಣ, 9 ಪ್ರೀಕಾಸ್ಟ್ ಸೆಗ್ಮೆಂಟ್ ಲಾಂಚಿಂಗ್, ರ‍್ಯಾಂಪ್ ನಿರ್ಮಾಣ, ಮೇಲ್ಸೇತುವೆಯ ಕೆಳಗಿನ ರಸ್ತೆ, ಪಾದಚಾರಿ ಮಾರ್ಗ ಮತ್ತು ಮಳೆ ನೀರು ಚರಂಡಿ ನಿರ್ಮಾಣ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ ಎಂದು ಯೋಜನೆ ವಿಭಾಗದ ಮುಖ್ಯ ಎಂಜಿನಿಯರ್ ಲೋಕೇಶ್ ಮಾಹಿತಿ ನೀಡಿದರು.

ರಕ್ಷಣಾ ಇಲಾಖೆಗೆ ಸಂಬಂಧಿಸಿದ ಜಾಗವನ್ನು ಹಸ್ತಾಂತರಿಸಿಕೊಂಡು ಕಾಮಗಾರಿಯನ್ನು ನಿರ್ವಹಿಸಲಾಗುತ್ತಿದೆ. ಸೇಂಟ್ ಜಾನ್ಸ್ ಸಂಸ್ಥೆಯವರೊಂ-ದಿಗೆ ಸಭೆ ನಡೆಸಿ ಯೋಜನೆಗೆ ಪ್ರಮುಖವಾಗಿ ಅಗತ್ಯವಿರುವ ಜಾಗವನ್ನು ಹಸ್ತಾಂತರಿಸಲು ಮನವಿ ಮಾಡಲಾಗಿದೆ. ಗುತ್ತಿಗೆದಾರರಿಗೆ ಕರಾರಿನಂತೆ ಮುಂಗಡ ಹಣ ಪಾವತಿಯಾಗಿದ್ದು, ಬಾಕಿ ಇದ್ದ ಬಿಲ್ಲನ್ನು ಸಹ ಪಾವತಿ ಮಾಡಲಾಗಿದೆ ಎಂದು ಹೇಳಿದರು.

'ಆಟೊ ಕೊಡಿಸುವುದಾಗಿ ₹20 ಲಕ್ಷ ವಂಚನೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಾಸಕ ಮುನಿರತ್ನ ಅವರು ಘನತ್ಯಾಜ್ಯ ಸಂಗ್ರಹಿಸುವ 10 ಆಟೊ ರಿಕ್ಷಾಗಳನ್ನು ಕೊಡಿಸುವುದಾಗಿ ಭರವಸೆ ನೀಡಿ ₹20 ಲಕ್ಷ ಪಡೆದು ವಂಚಿಸಿದ್ದಾರೆ' ಎಂದು ಬಿಬಿಎಂಪಿ ಗುತ್ತಿಗೆದಾರ ಚೆಲುವರಾಜು ಆರೋಪಿಸಿದರು.

'2021ರ ಸೆಪ್ಟೆಂಬರ್‌ನಲ್ಲಿ ಮುನಿರತ್ನ ಅವರ ಅಂಗರಕ್ಷಕ ವಿಜಯ್‌ಕುಮಾರ್ ಕರೆ ಮಾಡಿ ಶಾಸಕರನ್ನು ಭೇಟಿಯಾಗುವಂತೆ ಸೂಚಿಸಿದ್ದರು. ಅದರಂತೆ ಭೇಟಿಯಾದಾಗ ಅವರು ₹20 ಲಕ್ಷ ನೀಡುವಂತೆ ತಿಳಿಸಿದ್ದರು. ಸ್ನೇಹಿತರ ಬಳಿ ಸಾಲ ಮಾಡಿ ₹20 ಲಕ್ಷವನ್ನು ಶಾಸಕರಿಗೆ ನೀಡಲು ಹೋಗಿದ್ದೆ. ಅದನ್ನು ಅವರ ಸೂಚನೆ ಮೇರೆಗೆ ವಿಜಯ್‌ಕುಮಾರ್‌ಗೆ ನೀಡಿದ್ದೆ' ಎಂದು ವಿವರಿಸಿದರು.

'ಆಟೊಗಳ ಬಗ್ಗೆ ಮುನಿರತ್ನ ಅವರಲ್ಲಿ ವಿಚಾರಿಸಿದಾಗ 10 ಆಟೊಗಳನ್ನು ನೀಡುವಂತೆ ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಪತ್ರ ಬರೆದಿದ್ದೇನೆ ಎಂದು ಹೇಳಿ, ಪತ್ರದ ಒಂದು ಪ್ರತಿಯನ್ನು ನನಗೆ ನೀಡಿದ್ದರು. ಆದರೆ, ನನಗೆ ನೀಡಿದ್ದು ಶಿಫಾರಸ್ಸು ಪತ್ರ ಮಾತ್ರ. ಇದುವರೆಗೂ ಆಟೊಗಳನ್ನು ಕೊಡಿಸಿಲ್ಲ' ಎಂದು ದೂರಿದರು.

ಜೀವ ಬೆದರಿಕೆ:'ಮೂರು ದಿನಗಳ ಹಿಂದೆ ಮುನಿರತ್ನ ಅವರ ಆಪ್ತ ವಸಂತ್ ಕುಮಾರ್ ಎಂಬವರು ಪೆಟ್ರೋಲ್ ಬಂಕ್‌ವೊಂದರಲ್ಲಿ ಭೇಟಿಯಾಗಿ, ನೀನು ಶಾಸಕರಿಗೆ ಹಣ ಕೊಟ್ಟಿಲ್ಲ ಅಂದರೆ ರೇಣುಕಸ್ವಾಮಿಗೆ ಆದ ಗತಿಯೇ ನಿನಗೂ ಬರಲಿದೆ. ರೇಣುಕಸ್ವಾಮಿಯನ್ನು ಕೊಲೆ ಮಾಡಿದ್ದು ಶಾಸಕರ ತಂಗಿಯ ಮಗ ಎಂದು ನನಗೆ ಜೀವ ಬೆದರಿಕೆ ಹಾಕಿದ್ದರು' ಎಂದು ಆರೋಪಿಸಿದರು.

ರಿಯಾಯಿತಿ ರದ್ದು: ಬಾಡಿಗೆದಾರರ ಆಕ್ಷೇಪ

ಬೆಂಗಳೂರು: ಬಿಎಂಟಿಸಿಯ ವಾಣಿಜ್ಯ ಮಳಿಗೆದಾರರಿಗೆ ಕೋವಿಡ್ ಕಾರಣಕ್ಕಾಗಿ 2021ರ ಏಪ್ರಿಲ್‌ನಿಂದ ಜೂನ್‌ವರೆಗೆ ನೀಡಿದ್ದ ರಿಯಾಯಿತಿಯನ್ನು ಈಗ ರದ್ದುಪಡಿಸಿದ್ದಲ್ಲದೇ ಏಳು ದಿನಗಳ ಒಳಗೆ ಆ ಹಣವನ್ನು ಪಾವತಿ ಮಾಡುವಂತೆ ನೋಟಿಸ್ ನೀಡಲಾಗಿದೆ.

'ಆಡಳಿತಾತ್ಮಕ ಕಾರಣಗಳಿಗಾಗಿ ರಿಯಾಯಿತಿ ಹಿಂಪಡೆಯಲಾಗಿದೆ. ಮೂರು ತಿಂಗಳ ಬಾಡಿಗೆಯನ್ನು ಏಳು ದಿನಗಳ ಒಳಗೆ ಕಟ್ಟದೇ ಇದ್ದರೆ ಭದ್ರತಾ ಠೇವಣಿಯಲ್ಲಿ ಹೊಂದಾಣಿಕೆ ಮಾಡಿ-ಕೊಳ್ಳಲಾಗುವುದು' ಎಂದು ಬಿಎಂಟಿಸಿ ಮುಖ್ಯ ಸಂಚಾರ ವ್ಯವಸ್ಥಾಪಕರು ಡಿಮಾಂಡ್ ನೋಟೀಸ್ ಕಳುಹಿಸಿದ್ದಾರೆ.

'ಆಡಳಿತಾತ್ಮಕ ಕಾರಣ ಏನು? ಅದಕ್ಕೂ ಬಾಡಿಗೆದಾರರಿಗೂ ಯಾವ ಸಂಬಂಧ ಎಂಬುದನ್ನು ಸ್ಪಷ್ಟಪಡಿಸದೇ, ಬಾಡಿಗೆದಾರರ ಅಭಿಪ್ರಾಯ ಪಡೆಯದೇ ನೋಟಿಸ್ ನೀಡಲಾಗಿದೆ. ಒಮ್ಮೆಲೇ ₹ 39 ಸಾವಿರ ಕಟ್ಟಲು ಸಾಧ್ಯವಿಲ್ಲ ಎಂದು ಬಾಡಿಗೆದಾರ ಪಿ.ಸಿ. ಅಜಿತ್ ಗೌಡ ಈ ನೋಟಿಸ್‌ಗೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಪ್ರಶಸ್ತಿ ಪ್ರಕಟ

ಕುಮಾರದಾಸ್, ಅಂಬಯ್ಯ ನುಲಿಗೆ 'ಕರ್ನಾಟಕ ಕಲಾಶ್ರೀ' ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯು 2023–24ನೇ ಸಾಲಿನ 'ಕರ್ನಾಟಕ ಕಲಾಶ್ರೀ' ಪ್ರಶಸ್ತಿಗಳನ್ನು ಪ್ರಕಟಿಸಿದ್ದು, 'ಗೌರವ ಪ್ರಶಸ್ತಿ'ಗೆ ಗಾಯಕರಾದ ಡಿ. ಕುಮಾರದಾಸ್ (ಬಳ್ಳಾರಿ) ಹಾಗೂ ಅಂಬಯ್ಯ ನುಲಿ (ರಾಯಚೂರು) ಅವರನ್ನು ಆಯ್ಕೆ ಮಾಡಲಾಗಿದೆ.

ಅಕಾಡೆಮಿ ಅಧ್ಯಕ್ಷೆ ಶುಭಾ ಧನಂಜಯ್ ಅವರು ಪ್ರಶಸ್ತಿ ಪುರಸ್ಕೃತರ ಪಟ್ಟಿಯನ್ನು ಶುಕ್ರವಾರ ಬಿಡುಗಡೆ ಮಾಡಿದ್ದಾರೆ. ಕರ್ನಾಟಕ ಸಂಗೀತ, ಹಿಂದೂಸ್ತಾನಿ ಸಂಗೀತ, ನೃತ್ಯ ಸೇರಿದಂತೆ ವಿವಿಧ ವಿಭಾಗಗಳಿಂದ 15 ಕಲಾವಿದರು ವಾರ್ಷಿಕ ಪ್ರಶಸ್ತಿಗೆ ಆಯ್ಕೆಯಾಗಿ-ದ್ದಾರೆ. ಗೌರವ ಪ್ರಶಸ್ತಿಯು ತಲಾ ₹50 ಸಾವಿರ ಹಾಗೂ ವಾರ್ಷಿಕ ಪ್ರಶಸ್ತಿ ತಲಾ ₹25 ಸಾವಿರ ನಗದು ಬಹುಮಾನ ಹೊಂದಿದೆ.



ಡಿ. ಕುಮಾರದಾಸ್



ಅಂಬಯ್ಯ ನುಲಿ

ಪ್ರಶಸ್ತಿ ಪ್ರದಾನ ಸಮಾರಂಭವನ್ನು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರ-ದಲ್ಲಿ ನವೆಂಬರ್ ಅಥವಾ ಡಿಸೆಂಬರ್ ತಿಂಗಳಲ್ಲಿ ಹಮ್ಮಿಕೊಳ್ಳಲಾಗುವು-ದು ಎಂದು ಶುಭಾ ಧನಂಜಯ್ ತಿಳಿಸಿದ್ದಾರೆ.

ಯಾರಿಗೆಲ್ಲ 'ಕರ್ನಾಟಕ ಕಲಾಶ್ರೀ' ಪ್ರಶಸ್ತಿ

ಕರ್ನಾಟಕ ಸಂಗೀತ	
1. ಪದ್ಮಾ ಗುರುದತ್	ಬೆಂಗಳೂರು (ಗಾಯನ)
2. ರೇವತಿ ಕಾಮತ್	ಮೈಸೂರು (ವೀಣೆ)
3. ವಿ.ರಮೇಶ್	ಕೋಲಾರ (ನಾದಸ್ವರ)
4. ಕದ್ರಿ ರಮೇಶನಾಥ್	ಮಂಗಳೂರು (ಸ್ಯಾಕ್ಸೋಫೋನ್)
ಹಿಂದೂಸ್ತಾನಿ ಸಂಗೀತ	
1. ವಿರೂಪಾಕ್ಷ ರೆಡ್ಡಿ ಓಣಿಮನಿ	ಕೊಪ್ಪಳ (ಗಾಯನ)
2. ಶಫೀಖಾನ್	ಧಾರವಾಡ (ಸಿತಾರ್)
3. ಸತೀಶ್ ಹಂಪಿಹೊಳಿ	ಹುಬ್ಬಳ್ಳಿ (ತಬಲಾ)
ನೃತ್ಯ	
1. ಸವಿತಾ ಅರುಣ	ಬೆಂಗಳೂರು
2. ಮಾಲಾ ಶಶಿಕಾಂತ್	ಬೆಂಗಳೂರು
3. ಶರ್ಮಿಳಾ ಮುಖರ್ಜಿ	ಬೆಂಗಳೂರು
4. ಸೈಯದ್ ಸಲ್ಲಾವುದ್ದೀನ್ ಪಾಶಾ	ಆನೇಕಲ್
ಸುಗಮ ಸಂಗೀತ	
ಆನಂದ ಮಾದಲಗೆರೆ	ಬೆಂಗಳೂರು
ಕಥಾಕೀರ್ತನ	
ಎಸ್.ಎಂ.ನಾಗರಾಜಾಚಾರ್	ಮಂಡ್ಯ
ಗಮಕ	
ಜಿ.ಎಸ್.ನಾರಾಯಣ	ಬೆಂಗಳೂರು
ಹೊರದೇಶ ಕನ್ನಡ ಕಲಾವಿದರು	
ಕೆ.ಆರ್.ಎಸ್. ಪ್ರಸನ್ನ	ಅಮೆರಿಕ
ಸಂಘ–ಸಂಸ್ಥೆ	
ಶ್ರೀವಾಣಿ ಸ್ಕೂಲ್ ಎಜುಕೇಶನ್ ಟ್ರಸ್ಟ್	ಬೆಂಗಳೂರು

'ಹಿಂದಿ ಬದಲು ಕನ್ನಡದಲ್ಲಿ ವ್ಯವಹರಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪತ್ರ ವ್ಯವಹಾರ, ನಾಮಫಲಕ ಸೇರಿ ವಿವಿಧೆಡೆ ಹಿಂದಿ ಬದಲು ಕನ್ನಡ ಅಳವಡಿಸಿಕೊಳ್ಳಬೇಕು. ಕನ್ನಡ ಭಾಷೆ ತಿಳಿದವರು ಇಲ್ಲಿ ಕೆಲಸ ಮಾಡಬೇಕು' ಎಂದು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಪ್ರಾದೇಶಿಕ ಕಚೇರಿಯ ಮುಖ್ಯ ಪ್ರಧಾನ ವ್ಯವಸ್ಥಾಪಕರಿಗೆ ಹಿಂದಿ ಹೇರಿಕೆ ವಿರೋಧಿ ಕರ್ನಾಟಕ ಸಂಘಟನೆ ಆಗ್ರಹಿಸಿದೆ.

ಸಂಘಟನೆಯ ಸದಸ್ಯರು ಮೈಸೂರು ಬ್ಯಾಂಕ್ ವೃತ್ತದಲ್ಲಿರುವ ಬ್ಯಾಂಕ್ ಕಚೇರಿ ಮುಂದೆ ಶುಕ್ರವಾರ ಪ್ರತಿಭಟಿಸಿ, ಬ್ಯಾಂಕ್‌ನ ಮುಖ್ಯ ಪ್ರಧಾನ ವ್ಯವಸ್ಥಾಪಕ-ರಿಗೆ ಮನವಿ ಸಲ್ಲಿಸಿದರು.

'ಇಲ್ಲಿ ವ್ಯವಹಾರ ನಡೆಸುವಾಗ ಕನ್ನಡ ಭಾಷೆ ಬಳಕೆಗೆ ಮೊದಲ ಆದ್ಯತೆ ನೀಡಬೇಕು. ಆದರೆ, ಹಿಂದಿ ಭಾಷೆಯನ್ನು ಒತ್ತಾಯಪೂರ್ವಕವಾಗಿ ಕನ್ನಡಿಗರ ಮೇಲೆ ಹೇರಲಾಗುತ್ತಿದೆ. ಈ ಮೂಲಕ ಕನ್ನಡಿಗರ ಮೂಲಭೂತ ಹಕ್ಕುಗಳಿಗೆ ಧಕ್ಕೆ ತರಲಾಗುತ್ತಿದೆ. ಹಿಂದಿ ಹೇರಿಕೆಯನ್ನು ಕೂಡಲೇ ನಿಲ್ಲಿಸಿ ಕನ್ನಡಕ್ಕೆ ಆದ್ಯತೆ ನೀಡಬೇಕು' ಎಂದು ಸಂಘಟನೆ ಸಂಚಾಲಕ ಪಾರ್ವತೀಶ ಬಿಳಿದಾಳೆ, ಕನ್ನಡ ಪರ ಹೋರಾಟಗಾರರಾದ ಸಾ.ರಾ. ಗೋವಿಂದು, ವ.ಚ. ಚನ್ನೇಗೌಡ, ರೈತ ಮುಖಂಡ ಕೋಡಿಹಳ್ಳಿ ಚಂದ್ರಶೇಖರ್ ಒತ್ತಾಯಿಸಿದರು.



ಹಿಂದಿ ಹೇರಿಕೆ ವಿರೋಧಿಸಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಪ್ರಾದೇಶಿಕ ಕಚೇರಿಯ ಮುಂಭಾಗ ಕನ್ನಡ ಪರ ಹೋರಾಟಗಾರರು ಪ್ರತಿಭಟನೆ ನಡೆಸಿದರು

ಕುಟುಂಬದ ವ್ಯಾಖ್ಯಾನದಲ್ಲಿ ಸೊಸೆ ಇಲ್ಲ: ಹೈಕೋರ್ಟ್

ಬೆಂಗಳೂರು: 'ಕುಟುಂಬದ ವ್ಯಾಖ್ಯಾನ-ದಲ್ಲಿ ನಿರ್ದಿಷ್ಟ ಸಂಬಂಧಿಗಳನ್ನು ಮಾತ್ರ ಸೇರ್ಪಡೆ ಮಾಡಲಾಗಿದೆ, ಆದರೆ, ಸೊಸೆಯನ್ನು ಉಲ್ಲೇಖಿಸಿಲ್ಲ. ಹಾಗಾಗಿ, ಸೊಸೆಗೆ ಅನುಕಂಪದ ಆಧಾರದ ಮೇಲೆ ಹುದ್ದೆ ನೀಡಿ ಎಂದು ನಿರ್ದೇಶಿಸಲು ಆಗದು' ಎಂದು ಹೈಕೋರ್ಟ್ ಆದೇಶಿಸಿದೆ.

ಅನುಕಂಪದ ಆಧಾರದ ಮೇಲೆ ಗ್ರಾಮೀಣ ಕುಡಿಯುವ ನೀರು ನೈರ್ಮಲ್ಯ ಇಲಾಖೆಯಲ್ಲಿ ಹುದ್ದೆ ಕೋರಿ ಬಾಗಲಕೋಟೆಯ ಗುಳೇದಗುಡ್ಡದ ಪ್ರಿಯಾಂಕ ಹುಲಮನಿ ಸಲ್ಲಿಸಿದ್ದ ಅರ್ಜಿ ವಜಾಗೊಳಿಸಿರುವ ಧಾರವಾಡ ಪೀಠದಲ್ಲಿನ ನ್ಯಾಯಮೂರ್ತಿಗಳಾದ ಕೃಷ್ಣ ಎಸ್.ದೀಕ್ಷಿತ್ ಹಾಗೂ ವಿಜಯ ಕುಮಾರ್ ಎ. ಪಾಟೀಲ ಅವರ ವಿಭಾಗೀಯ ಪೀಠ ಈ ಕುರಿತು ಆದೇಶಿಸಿದೆ. ಅರ್ಜಿದಾರರ ವಾದವನ್ನು ತಳ್ಳಿಹಾಕಿರುವ ನ್ಯಾಯಾಲಯ, 'ಸೊಸೆಗೆ ಅನುಕುಂಪದ ಹುದ್ದೆ ನೀಡುವ ಸಲುವಾಗಿ ಕುಟುಂಬದ ವ್ಯಾಖ್ಯಾನವನ್ನು ವಿಸ್ತರಿಸಿ ಎಂಬ ಮನವಿಯನ್ನು ಒಪ್ಪಲು ಆಗದು' ಎಂದು ಹೇಳಿದೆ.

'ಕಾನೂನು ನಿರೂಪಕರು ಶಾಸನವನ್ನು ರೂಪಿಸುವಾಗ ಕುಟುಂಬದ ವ್ಯಾಖ್ಯಾನದಲ್ಲಿ ಉದ್ಯೋಗಿಯ ನಿರ್ದಿಷ್ಟ ಸಂಬಂಧಿಗಳನ್ನು ಅದರ ವ್ಯಾಪ್ತಿಗೆ ಸೇರ್ಪಡೆ ಮಾಡಿದ್ದಾರೆ. ಆದರೆ ಅವರಲ್ಲಿ ಸೊಸೆಯ ಉಲ್ಲೇಖವಿಲ್ಲ. ಹಾಗಾಗಿ, ಶಾಸನದ ಅರ್ಥವನ್ನು ವಿಸ್ತರಣೆ ಮಾಡುವುದು ನ್ಯಾಯಾಂಗದ ಕಾರ್ಯವಲ್ಲ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ನಗರದಲ್ಲಿ ಇಂದು

ಸಂಗೀತ–ಸನ್ಮಾನ–ಆರೋಗ್ಯ ಸಲಹೆ: ದಾಸವಾಣಿ: ನರಸಿಂಹ ಭಟ್, ಹಾರ್ಮೋನಿಯಂ: ಸುರೇಶ್ ಎಸ್., ತಬಲಾ: ನಂದಮೋಹನ್, ಕೊಳಲು: ಶ್ರೀಹರಿ ಭಟ್, ಸನ್ಮಾನಿತರು: ಸತ್ಯಬೋಧ, ಉಪಸ್ಥಿತಿ: ಚಿಂತಾಮಣಿ ಕೊಡ್ಲೆಕೆರೆ, ಆಯೋಜನೆ ಮತ್ತು ಸ್ಥಳ: ಕ.ವಿ.ಪ್ರ.ನಿ.ನಿ., ಲೆಕ್ಕಾಧಿಕಾರಿಗಳ ಸಂಘ, ಆನಂದರಾವ್ ವೃತ್ತ, ಬೆಳಿಗ್ಗೆ 10

39ನೇ ವರ್ಷದ ಮಿಲ್ಕ್ ಕಾಲೊನಿ ಗಣೇಶ ಹಬ್ಬ: ಬೆಳಿಗ್ಗೆ 10.45ಕ್ಕೆ ಮೃತ್ಯುಂಜಯ ಹೋಮ, ಸಂಜೆ 7.30ಕ್ಕೆ ಸಂಗೀತ ಕಾರ್ಯಕ್ರಮ: ಅಂಕಿತಾ ಭಟ್ಟಾಚಾರ್ಯ, ಆಯೋಜನೆ ಹಾಗೂ ಸ್ಥಳ: ಸ್ವಸ್ತಿಕ್ ಯುವಕರ ಸಂಘ, ಐದನೇ ಮುಖ್ಯ ರಸ್ತೆ, ಮಿಲ್ಕ್ ಕಾಲೊನಿ, ರಾಜಾಜಿನಗರ 2ನೇ ಹಂತ

ಬಿ.ಡಿ. ಜತ್ತಿಯವರ 112ನೇ ಜನ್ಮದಿನೋತ್ಸವ, ಬಸವ ಸಮಿತಿ ವಜ್ರಮಹೋತ್ಸವ ಉದ್ಘಾಟನೆ: ಸಾನ್ನಿಧ್ಯ: ಶಿವರುದ್ರ ಸ್ವಾಮೀಜಿ, ಉದ್ಘಾಟನೆ: ಬಸವರಾಜ ಹೊರಟ್ಟಿ, ಅತಿಥಿ: ಯು.ಟಿ. ಖಾದರ್, ಅಧ್ಯಕ್ಷತೆ: ಅರವಿಂದ ಜತ್ತಿ, ಆಯೋಜನೆ: ಬಸವ ಸಮಿತಿ, ಸ್ಥಳ: ಅನುಭವ ಮಂಟಪ ಸಭಾಂಗಣ, ಬಸವ ಸಮಿತಿ, ಬೆಳಿಗ್ಗೆ 10.30

ಅ.ನ. ಯಲ್ಲಪ್ಪ ರೆಡ್ಡಿ ಅವರ **'ಮೇದಿನಿ ಜೊತೆ ನನ್ನ ಕಥೆ' ಪುಸ್ತಕ ಬಿಡುಗಡೆ:** ಅತಿಥಿಗಳು: ಎಚ್. ಎನ್. ನಾಗಮೋಹನ್‌ದಾಸ್, ನಾಗೇಶ ಹೆಗಡೆ, ವೆಂಕಟಶಿವಾ ರೆಡ್ಡಿ, ರಂಗನಾಥ ಭಾರದ್ವಾಜ್, ಚಂದನ್ ಗೌಡ, ರವೀಂದ್ರ ಟಿ.ಸಿ. ಆಯೋಜನೆ: ಬೆಂಗಳೂರು ವಿಜ್ಞಾನ ವೇದಿಕೆ ಮತ್ತು ಕೃಷಿ ಭಾರತ್ ಫೌಂಡೇಷನ್, ಸ್ಥಳ: ಎಚ್. ಎನ್. ಮಲ್ಟಿಮೀಡಿಯಾ ಸಭಾಂಗಣ, ನ್ಯಾಷನಲ್ ಕಾಲೇಜು, ಬಸವನಗುಡಿ, ಬೆಳಿಗ್ಗೆ 10.30

ಸಂಘದ ಉದ್ಘಾಟನಾ ಸಮಾರಂಭ, ಸಾಂಸ್ಕೃತಿಕ ಸಂಭ್ರಮ: ಉದ್ಘಾಟನೆ: ಮಹಾಂತೇಶ ಬೀಳಗಿ, ಅತಿಥಿ: ಗೋನಾಳ್ ಭೀಮಪ್ಪ, ಆಯೋಜನೆ: ಬೆಂಗಳೂರು ದಕ್ಷಿಣ, ಉತ್ತರ ಕರ್ನಾಟಕ ನಾಗರಿಕರ ಅಭಿವೃದ್ಧಿ ಸಂಘ, ಸ್ಥಳ: ಯುವಪಥ ಸಭಾಂಗಣ, ಜಯನಗರ ನಾಲ್ಕನೇ ಟಿ ಬ್ಲಾಕ್, ಬೆಳಿಗ್ಗೆ 10.30

ರಿವರ್ಸ್ ಆ್ಯಂಡ್ ಪೀಪಲ್: 'ಎ ಡಿಸ್‌ಕನೆಕ್ಟ್ ಇನ್ ಟೈಮ್ಸ್ ಆಫ್ ಸ್ಕೇರ್ಸಿಟಿ': ಭಾಷಣಕಾರರು: ನಿಧಿ ಪಲಿವಾಲ್, ಮಾಧುರಿ ಮಾಂಡವ್, ನಿರ್ಮಲಾ ಗೌಡ, ಖುಷ್ಬು ಕೆ. ಬಿರಾವತ್, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ಬೆಳಿಗ್ಗೆ 11

ರಾಜ್ಯಗಳ ಅಸ್ಮಿತೆ, ಹಕ್ಕು ಮತ್ತು ಪಾಲಿನ ರಕ್ಷಣೆಗಾಗಿ ರಾಷ್ಟ್ರೀಯ ಅಭಿಯಾನದ ಚಾಲನಾ ಸಭೆ: ಅಧ್ಯಕ್ಷತೆ: ವಿ. ಗೋಪಾಲಗೌಡ, ಆಯೋಜನೆ: ಒಕ್ಕೂಟ ಉಳಿಸಿ ಆಂದೋಲನ, ಸ್ಥಳ: ಯುವಿಸಿಇ ಅಲುಮ್ನಿ ಹಾಲ್, ಕೆ.ಆರ್. ವೃತ್ತ, ಬೆಳಿಗ್ಗೆ 11

ರಾಜ್ಯ ಸಮಾವೇಶ ಮತ್ತು ರಾಜ್ಯಮಟ್ಟದ ಶಿಕ್ಷಕರ ಪ್ರಶಸ್ತಿ ಪ್ರದಾನ: ಉದ್ಘಾಟನೆ: ಬಸವರಾಜ ಹೊರಟ್ಟಿ, ಪ್ರಶಸ್ತಿ ಪ್ರದಾನ: ಮಧು ಬಂಗಾರಪ್ಪ, ರಾಮಲಿಂಗಾರೆಡ್ಡಿ, ಅಧ್ಯಕ್ಷತೆ: ದಿನೇಶ್ ಗುಂಡೂರಾವ್, ಪುಟ್ಟಣ್ಣ, ಎಸ್.ಎಲ್. ಭೋಜೇಗೌಡ, ಆಯೋಜನೆ: ಕರ್ನಾಟಕ ರಾಜ್ಯ ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ, ಸ್ಥಳ: ಶಿಕ್ಷಕರ ಸದನ, ಕೆಂಪೇಗೌಡ ರಸ್ತೆ, ಬೆಳಿಗ್ಗೆ 11

ಪದವಿ ಪ್ರದಾನ ಸಮಾರಂಭ: ಅತಿಥಿಗಳು: ಜಮೀರ್ ಅಹಮದ್ ಖಾನ್, ಸಾರಾ ಫಾತಿಮಾ, ವೈ. ರಮೇಶ್, ಅಧ್ಯಕ್ಷತೆ: ಫಾರೂಕ್ ಮಹಮ್ಮದ್, ಆಯೋಜನೆ ಮತ್ತು ಸ್ಥಳ: ಅಬ್ಬಾಸ್‌ಖಾನ್ ಕಾಲೇಜ್ ಫಾರ್ ವುಮೆನ್, ಕಬ್ಬನ್‌ಪೇಟೆ, ಬೆಳಿಗ್ಗೆ 11.30

'ಗಾನ ಸೌರಭ' ಸಂಗೀತ ಕಾರ್ಯಕ್ರಮ: ಅನಂತ್ ಹರಿತ್ಸ ಅವರ 'ಆನೆ ಬಂದಳು ಮತ್ತು ಇತರ ಕಥೆಗಳು' ಪುಸ್ತಕ ಬಿಡುಗಡೆ: ಬಿ.ಆರ್. ಲಕ್ಷ್ಮಣರಾವ್, ಅಧ್ಯಕ್ಷತೆ: ಟಿ.ಎಸ್. ನಾಗಾಭರಣ, ಅತಿಥಿಗಳು: ವೈ.ಕೆ. ಮುದ್ದುಕೃಷ್ಣ, ಜೋಗಿ, ಗಣೇಶ್ ಕಾಸರಗೋಡು, ಸ್ಥಳ: ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5

ಗುರುಪ್ರಸಾದ ಕಂಟಲಗೆರೆ ಅವರ 'ಅಟ್ರಾಸಿಟಿ' ಪುಸ್ತಕದ ಕುರಿತು ಸಂವಾದ: ಚಾಲನೆ: ದು. ಸರಸ್ವತಿ, ಅಧ್ಯಕ್ಷತೆ: ಅಗ್ರಹಾರ ಕೃಷ್ಣಮೂರ್ತಿ, ಅತಿಥಿ: ಸಿ.ಜಿ. ಲಕ್ಷ್ಮೀಪತಿ, ಪುಸ್ತಕದ ಕುರಿತು: ಗೀತಾ ವಸಂತ, ಎಚ್. ಡಿ. ಉಮಾಶಂಕರ್, ವಿ.ಎಲ್. ನರಸಿಂಹಮೂರ್ತಿ, ಆಯೋಜನೆ ಮತ್ತು ಸ್ಥಳ: ಬೀಟಲ್ ಬುಕ್ ಶಾಪ್, ವಿಜಯನಗರ ಮೆಟ್ರೊ ನಿಲ್ದಾಣದ ಹತ್ತಿರ, ಸಂಜೆ 5

ಜಾನಪದ ಸಂಭ್ರಮ ಎಸ್ಸೆಸ್ಸೆಲ್ಸಿ–ಪಿಯುಸಿ ವಿದ್ಯಾರ್ಥಿಗಳಿಗೆ ಹಾಗೂ ಸಾಧಕರಿಗೆ ಅಭಿನಂದನಾ ಸಮಾರಂಭ: ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ದೇಶಿಕೇಂದ್ರ ಶಿವಯೋಗೀಶ್ವರ ಸ್ವಾಮೀಜಿ, ಉದ್ಘಾಟನೆ: ಡಿ.ವಿ. ಸದಾನಂದಗೌಡ, ಅಧ್ಯಕ್ಷತೆ: ಎಂ. ಕೃಷ್ಣಪ್ಪ, ಸನ್ಮಾನಿಸುವವರು: ಡಾ.ಸಿ.ಎನ್. ಅಶ್ವತ್ಥನಾರಾಯಣ, ಸನ್ಮಾನಿತರು: ಪುಟ್ಟಣ್ಣ, ಆರ್. ಹನುಮಂತರಾಯಪ್ಪ, ಆರ್. ಶ್ರೀಧರ್, ಕೆ. ಪುಟ್ಟಣ್ಣಸ್ವಾಮಿಗೌಡ, ಆಯೋಜನೆ: ರಾಜ್ಯ ಒಕ್ಕಲಿಗರ ಒಕ್ಕೂಟ ಟ್ರಸ್ಟ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 10.45



ನಿರ್ಮಲಾನಂದನಾಥ ಸ್ವಾಮೀಜಿ

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಜಾಮೀನು ಕೋರಿ ನಾಗೇಂದ್ರ ಅರ್ಜಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಬ್ಯಾಂಕ್ ಖಾತೆಯಿಂದ ಅಕ್ರಮವಾಗಿ ₹ 94 ಕೋಟಿ ಮೊತ್ತವನ್ನು ಅಕ್ರಮವಾಗಿ ವರ್ಗಾವಣೆ ಮಾಡಿದ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ಮಾಜಿ ಸಚಿವ ಬಿ.ನಾಗೇಂದ್ರ ಜಾಮೀನು ಕೋರಿ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದಾರೆ.

ಈ ಸಂಬಂಧ ನಾಗೇಂದ್ರ ಸಲ್ಲಿಸಿರುವ ಜಾಮೀನು ಅರ್ಜಿಯನ್ನು, 'ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ್ ಗಜಾನನ ಭಟ್ ಶುಕ್ರವಾರ ವಿಚಾರಣೆ ನಡೆಸಿದರು. ವಿಚಾರಣೆ ವೇಳೆ ನಾಗೇಂದ್ರ ಪರ ವಕೀಲರು, 'ಮೆರಿಟ್ ಮೇಲೆ ವಾದಿಸಲು ಕಾಲಾವಕಾಶ ನೀಡಬೇಕು' ಎಂದು ಕೋರಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಾಧೀಶರು, 'ಜಾಮೀನು ಅರ್ಜಿಗಳನ್ನು ತುರ್ತಾಗಿ ವಿಲೇವಾರಿ ಮಾಡಬೇಕು ಎಂದು ಸುಪ್ರೀಂ ಕೋರ್ಟ್ ಮಾರ್ಗಸೂಚಿ ರೂಪಿಸಿದೆ. ನ್ಯಾಯದಾನದ ದೃಷ್ಟಿಯಿಂದ ನಿಮಗೆ ಕೊನೆಯ ಬಾರಿಗೆ ಅವಕಾಶ ನೀಡಲಾಗುತ್ತಿದೆ' ಎಂದು ತಿಳಿಸಿ ವಿಚಾರಣೆಯನ್ನು ಇದೇ 20ಕ್ಕೆ ಮುಂದೂಡಿದರು.

ಗ್ರಾ.ಪಂ ಇ–ಖಾತಾ ಹೊಂದಿದ್ದವರಿಗೆ ಬಿಬಿಎಂಪಿ ಇ–ಖಾತಾ

ಬೆಂಗಳೂರು: ಬಿಬಿಎಂಪಿ ರಾಜರಾಜೇಶ್ವರಿನಗರ ವಲಯ ವ್ಯಾಪ್ತಿಯ ಹೆಮ್ಮಿಗೆಪುರ ವಾರ್ಡ್ ವ್ಯಾಪ್ತಿಯಲ್ಲಿ ಈ ಹಿಂದೆ ಗ್ರಾಮ ಪಂಚಾಯಿತಿಯ ಇ–ಖಾತಾ ಹೊಂದಿದವರು ಬಿಬಿಎಂಪಿಯಿಂದ ಇ–ಖಾತಾವನ್ನು ಪಡೆಯಬಹುದು.

'ಹೆಮ್ಮಿಗೆಪುರ ವಾರ್ಡ್ ವ್ಯಾಪ್ತಿಯ ಇ-ಸ್ವತ್ತು ತಂತ್ರಾಂಶದಿಂದ ಹಳೆಯ ಗ್ರಾಮ ಪಂಚಾಯಿತಿಯ ಇ-ಖಾತಾ ಹೊಂದಿದ್ದ ಆಸ್ತಿಗಳಿಗೆ ಸ್ವಯಂಚಾಲಿತವಾಗಿ ಬಿಬಿಎಂಪಿಯಿಂದ ಇ–ಖಾತಾ ಸೃಷ್ಟಿಯಾಗಿದೆ' ಎಂದು ಬಿಬಿಎಂಪಿ ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ತಿಳಿಸಿದರು.

ಗ್ರಾಮ ಪಂಚಾಯಿತಿಯನ್ನು ಬಿಬಿಎಂಪಿಯಲ್ಲಿ ವಿಲೀನಗೊಳಿಸುವ ಮೊದಲು ಪಂಚಾಯಿತಿಯಿಂದ ಇ-ಖಾತಾ ಹೊಂದಿದ್ದ ಮಲ್ಲಸಂದ್ರ ಮತ್ತು ಕಾವಲ್ ಗ್ರಾಮಗಳಲ್ಲಿನ ಸುಮಾರು 2,500 ಸ್ವತ್ತುಗಳಿಗೆ ಸ್ವಯಂಘೋಷಿತ ಆಸ್ತಿ ತೆರಿಗೆ ಅರ್ಜಿ ಸಂಖ್ಯೆಗಳು ಮತ್ತು ಬಿಬಿಎಂಪಿ ಇ-ಖಾತಾಗಳನ್ನು ರಚಿಸಲಾಗಿದೆ. ಈ ಆಸ್ತಿಗಳ ಮಾಲೀಕರು, ಪಂಚಾಯಿತಿಯಿಂದ ನೀಡಿರುವ ಇ-ಸ್ವತ್ತು (ಇ-ಖಾತಾ) ಸಂಖ್ಯೆ ಹಾಗೂ ಸ್ವಯಂಘೋಷಿತ ಆಸ್ತಿ ತೆರಿಗೆಯ ಅರ್ಜಿ ಸಂಖ್ಯೆ ಬಳಸಿಕೊಂಡು ಆಸ್ತಿ ತೆರಿಗೆ ಪಾವತಿಸಬಹುದು ಎಂದು ಮಾಹಿತಿ ನೀಡಿದರು. ಆಸ್ತಿ ತೆರಿಗೆ ಪಾವತಿಸಿದ ನಂತರ ಬಿಬಿಎಂಪಿಯಿಂದ ಇ-ಖಾತಾ ಪಡೆಯಬಹುದಾಗಿರುತ್ತದೆ. ಒಂದು ಬಾರಿ ಪರಿಹಾರ ಯೋಜನೆ (ಒಟಿಎಸ್) ಅಡಿಯಲ್ಲಿ ಸಂಪೂರ್ಣ ಬಡ್ಡಿ ಮನ್ನಾ ಆಗಲಿದೆ. ಬಿಬಿಎಂಪಿ ಪಟ್ಟಿಯಲ್ಲಿ ಸ್ವತ್ತುಗಳು ಇಲ್ಲದಿದ್ದರೆ ಅವರು ಇ-ಖಾತಾಗೆ ಅರ್ಜಿ ಸಲ್ಲಿಸಬೇಕು. ಈ ಅರ್ಜಿಗಳನ್ನು ತ್ವರಿತವಾಗಿ ವಿಲೇವಾರಿ ಮಾಡಿ ಇ-ಖಾತಾ ನೀಡಲಾಗುವುದು ಎಂದರು

'371-ಜೆಯಿಂದ ಅನ್ಯಾಯ: ಆರೋಪ'

ಬೆಂಗಳೂರು: '371–ಜೆ ಮೀಸಲಾತಿಯನ್ನು ರಾಜ್ಯದ ಎಲ್ಲ ಭಾಗಗಳ ಹುದ್ದೆಗಳ ಭರ್ತಿಗೆ ಅನ್ವಯಿಸುವುದರಿಂದ ಕರ್ನಾಟಕದ ಇತರೆ ಪ್ರದೇಶಗಳಿಗೆ ಅನ್ಯಾಯ ಮಾಡಲಾಗುತ್ತಿದೆ' ಎಂದು ಹಸಿರು ಪ್ರತಿಷ್ಠಾನ ಆರೋಪಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪ್ರತಿಷ್ಠಾನದ ಅಧ್ಯಕ್ಷ ಕೆ.ಜಿ. ಕುಮಾರ್, 'ಕಲ್ಯಾಣ ಕರ್ನಾಟಕಕ್ಕೆ ಸಂಬಂಧಿಸಿದ ಖಾಲಿ ಹುದ್ದೆಗಳನ್ನು ತುಂಬಲು ಆದ್ಯತೆ ನೀಡಿದಂತೆ ರಾಜ್ಯದ ಇತರ ಜಿಲ್ಲೆಗಳಲ್ಲಿಯೂ ಖಾಲಿ ಹುದ್ದೆ ತುಂಬಲು ಕ್ರಮ ಕೈಗೊಳ್ಳುತ್ತಿಲ್ಲ. ಇದರಿಂದ ಎಲ್ಲ ಕಡೆ ಕಲ್ಯಾಣ ಕರ್ನಾಟಕದ ನೌಕರರೇ ಹೆಚ್ಚಾಗುತ್ತಿದ್ದಾರೆ. ಬಡ್ತಿ ನೀಡುವಾಗ ಜ್ಯೇಷ್ಠತಾ ಪಟ್ಟಿಯನ್ನು ಪ್ರತ್ಯೇಕವಾಗಿ ರಚಿಸುವ ಬದಲು ಒಂದೇ ಪಟ್ಟಿ ಮಾಡುತ್ತಿರುವುದರಿಂದ ರಾಜ್ಯದ ಇತರ ಪ್ರದೇಶಗಳ ನೌಕರರಿಗೆ ಅನ್ಯಾಯವಾಗುತ್ತಿದೆ' ಎಂದರು.









ನ್ಯಾಯಸಮ್ಮತ ಜೀವನಾಂಶವೆಷ್ಟು?

ಅಂಜಲಿ ರಾಮಣ್ಣ

> ಪ್ರತಿ ವಿಚ್ಛೇದನ ಪ್ರಕರಣದಲ್ಲೂ ಪತಿಯೊಬ್ಬ ಇಂತಿಷ್ಟೇ ಪರಿಹಾರಧನ ನೀಡಬೇಕು ಎನ್ನುವ ನಿರ್ಧಾರಿತ ಫಾರ್ಮುಲ ಇಲ್ಲದಿದ್ದರೂ, ಬೇರೆಯಾದ ನಂತರ ಹೆಂಡತಿ ಮತ್ತು ಮಕ್ಕಳು ಕಾಲಕ್ಕೆ ತಕ್ಕ ಘನತೆಯುಕ್ತ ಬಾಳ್ವೆ ಮಾಡಲು ಇರುವ ಅವಶ್ಯಕತೆ ಏನು ಎಂಬುದನ್ನು ಅರಿತು, ಅದರ ಆಧಾರದ ಮೇಲೆ ಪರಿಹಾರಧನ ನಿಗದಿಗೊಳ್ಳುತ್ತದೆ.

'ನೀವು ಎಷ್ಟನೆಯ ಗಂಡ' ಎಂದು ನ್ಯಾಯಾಧೀಶರು ಕೇಳುತ್ತಿದ್ದಾರೆ, ಆತನ ಪರ ವಕೀಲರು ಸಂಕೋಚದಿಂದಲೇ ಹೇಳುತ್ತಾರೆ 'ಏಳನೆಯವನು' ಎಂದು. ನ್ಯಾಯಾಧೀಶರದ್ದು ಆಶ್ಚರ್ಯವನ್ನೂ ಮೀರಿದ ಉದ್ಗಾರ. ಹೌದು, ರಾಜ್ಯ ಉಚ್ಚನ್ಯಾಯಾಲವನ್ನೇ ಬವಳಿ ಬೀಳಿಸಿದ ಈ ಪ್ರಕರಣದಲ್ಲಿ ಮಹಿಳೆಯೊಬ್ಬರು ಸತತವಾಗಿ ಆರು ಮದುವೆಗಳನ್ನು ಮಾಡಿಕೊಂಡು ಪ್ರತೀ ಬಾರಿಯೂ ವರದಕ್ಷಿಣೆ ಕಿರುಕುಳದ ಕೇಸ್ ಹಾಕಿ ಗಂಡನಿಂದ ಲಕ್ಷಾಂತರ ರೂಪಾಯಿಯ ಪರಿಹಾರ ಪಡೆದು ವಿಚ್ಛೇದನ ನೀಡುವುದನ್ನು ಕಾಯಕ ಮಾಡಿಕೊಂಡು ಈಗ ಏಳನೆಯ ಗಂಡನ ಮೇಲೆ ಪ್ರಕರಣ ಹೂಡಿದ್ದರು. ನ್ಯಾಯಾಧೀಶರು ಇದೊಂದು ದುರುದ್ದೇಶಪೂರಿತ ಪ್ರಕರಣ ಎಂದು ದಾಖಲಿಸಿ ಆಕೆಯ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳಲು ಆದೇಶ ನೀಡಿದರು.

ಮತ್ತೊಬ್ಬಾಕೆ ತನ್ನ ಇಬ್ಬರು ಮಕ್ಕಳ ಶಾಲೆ, ಆಹಾರ, ಮನೆ ಬಾಡಿಗೆ ಇನ್ನಿತರೆ ಖರ್ಚನ್ನು ಬಿಟ್ಟು ತನ್ನ ಸ್ವಂತಕ್ಕೆ ಪ್ರತಿ ತಿಂಗಳೂ ₹ 6 ಲಕ್ಷದ 16 ಸಾವಿರ ಜೀವನಾಂಶ ಕೋರಿ ಅರ್ಜಿ ಹಾಕಿದ್ದರು. ಯಾವುದೇ ಉತ್ಪ್ರೇಕ್ಷಿತ ಕಥೆ ಕಾದಂಬರಿಗಳಲ್ಲೂ ಸಿಗದ ಇಂತಹ ಪ್ರಕರಣಗಳು ನಿಜ ಜೀವನದಲ್ಲಿ ಒಮ್ಮೊಮ್ಮೆ ಘಟಿಸಿ ಎಲ್ಲರ ಉಸಿರು ತಡೆಹಿಡಿಯುವ ತಾತ್ಕಾಲಿಕ ಕೆಲಸ ಆಗುತ್ತಿರುತ್ತದೆ.

ಬಹುಶಃ ಸೆಲೆಬ್ರಿಟಿಗಳ ವಿಚ್ಛೇದನ ಪ್ರಕರಣಗಳಲ್ಲಿ ಕೋಟ್ಯಂತರ ಪರಿಹಾರಕ್ಕೆ ಅವರು ಸೆಟಲ್ ಮಾಡಿಕೊಳ್ಳುವುದನ್ನು ಮಾಧ್ಯಮಗಳ ಮೂಲಕ ತಿಳಿದುಕೊಳ್ಳುವ ನಮ್ಮ ಮಹಿಳೆಯರು ತಾವೂ ಕೂಡ ವಾಸ್ತವತೆಯ ಜೊತೆ ಬದುಕಲಾರದೆ ಕಲ್ಪಿತ ನಾಳೆಗಳನ್ನು ಸುಂದರವಾಗಿಸಿಕೊಳ್ಳಲು ಹೀಗೆ ಅಸಹಜತೆಯತ್ತ ಮುಖಮಾಡಿ ನ್ಯಾಯಾಲಯದ ಮೆಟ್ಟಿಲೇರುತ್ತಿದ್ದಾರೇನೋ? ವಿಚ್ಛೇದನದ ಸಂದರ್ಭದಲ್ಲಿ ಗಂಡಸು ಪರಿಹಾರ ಧನ ನೀಡಬೇಕು ಎನ್ನುವ ಕಾನೂನು ಮಾಡಿದ್ದು ಸಂವಿಧಾನದಲ್ಲಿ ಮಹಿಳೆಯರಿಗೆ ಮತ್ತು ಮಕ್ಕಳಿಗೆ ನೀಡಿರುವ ಮೂಲಭೂತ ಹಕ್ಕನ್ನು ಎತ್ತಿ ಹಿಡಿಯಲು. ಅವರುಗಳು ನಿರ್ಗತಿಕರಾಗುವುದನ್ನು ತಪ್ಪಿಸುವುದಕ್ಕಾಗಿ ಜೀವನಾಂಶ ಎನ್ನುವ ಸಹಾಯ ಹುಟ್ಟಿಕೊಂಡಿರುವುದು. ಆದರೆ ಬದುಕಿನೆಡೆಗೆ ಭ್ರಮೆಗೆ ಒಳಾಗಿರುವ ಕೆಲವು ಮಹಿಳೆಯರಿಂದ ಇದರ ಮೂಲ ಉದ್ದೇಶವೇ ತಲೆ ಕೆಳಕಾಗಿ ನಿಜಾರ್ಥದಲ್ಲಿ ನೋಯುತ್ತಿರುವ ಮಹಿಳೆಯರಿಗೆ ದಾರಿ ಮತ್ತಷ್ಟು ದುರ್ಗಮವಾಗುತ್ತಿದೆ.

ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ (ಈ ಮೊದಲು ಕ್ರಿಮಿನಲ್ ಪ್ರೊಸೀಜರ್ ಕೋಡ್), ವಿಶೇಷ ಮದುವೆಗಳ ಕಾಯ್ದೆ, ಕೌಟುಂಬಿಕ ದೌರ್ಜನ್ಯ ತಡೆಗಟ್ಟುವಿಕೆ ಕಾನೂನು, ಹಿಂದೂ ವಿವಾಹ ಅಧಿನಿಯಮ ಮತ್ತು ಹಿಂದೂ ದತ್ತಕ ಮತ್ತು ವಾರಸುದಾರ ಕಾಯ್ದೆಯ ಅಡಿಯಲ್ಲಿ ಮಹಿಳೆಯು ತನ್ನ ಗಂಡನಿಂದ ಜೀವನಾಂಶ ಕೋರಿ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಬಹುದು. ಆದರೆ ಯಾವ ಯಾವ ಕಾನೂನಿನ ಅಡಿಯಲ್ಲಿ ಯಾವ ಅಂಶಗಳನ್ನು ಪರಿಗಣಿಸಿ ಎಷ್ಟು ಪರಿಹಾರ ನೀಡಬೇಕು ಮತ್ತು ಯಾವ ಹಂತದಲ್ಲಿ ಜೀವನಾಂಶದ ತೀರ್ಪು ನೀಡಬೇಕು ಹಾಗೆಯೇ ಅದು ಯಾವ ದಿನದಿಂದ ಜಾರಿಗೆ ಬರಬೇಕು ಎನ್ನುವ ಗೊಂದಲ ನ್ಯಾಯಾಲಯಗಳಲ್ಲಿಯೇ ಇದ್ದು ಬಹಳಷ್ಟು ಹೆಂಗಸರು ಇಂದಿಗೂ ಒಂದು ರೂಪಾಯಿಯ ಸಹಾಯವಿಲ್ಲದೆ ಬವಣೆ ಪಡುತ್ತಿದ್ದಾರೆ.

ಇದನ್ನು ಪರಿಗಣಿಸಿ ಸರ್ವೋಚ್ಚ ನ್ಯಾಯಾಲಯವು ಕ್ರಿಮಿನಲ್ ಅಪೀಲ್ ಸಂಖ್ಯೆ:730/2020 ರಜನೀಶ್ Vs ನೇಹ ಮತ್ತು ಇತರೆ ಈ ಪ್ರಕರಣದಲ್ಲಿ ಸುದೀರ್ಘವಾದ ಅಧ್ಯಯನವನ್ನು ನಡೆಸಿ ನಮ್ಮ ದೇಶದ ಎಲ್ಲಾ ಉಚ್ಚ ನ್ಯಾಯಾಲಯಗಳು ಅವರೆಗೂ ನೀಡಿರುವ ತೀರ್ಪುಗಳನ್ನು ವಿಶ್ಲೇಷಿಸಿ ಕೌಟುಂಬಿಕ ನ್ಯಾಯಾಲಯಗಳು ಯಾವೆಲ್ಲಾ ಅಂಶಗಳ ಆಧಾರದ ಮೇಲೆ ಜೀವನಾಂಶದ ಮೊತ್ತವನ್ನು ತೀರ್ಮಾನಿಸಿಅಬೇಕು ಎನ್ನುವ ಮಾರ್ಗದರ್ಶನ ನೀಡಿದೆ.

ಸಾಮಾಜಿಕ ನ್ಯಾಯ ಎಲ್ಲರಿಗೂ ಸಮ ಬಾಳು- ಎಲ್ಲರಿಗೂ ಸಮಪಾಲು ಎನ್ನುವ ತತ್ವದ ಮೇಲೆ ರಚನೆಯಾಗಿರುವ ಜೀವನಾಂಶ ಕಾನೂನಿನ ಅಡಿಯಲ್ಲಿ ಗಂಡ ತಾನು ಆರ್ಥಿಕವಾಗಿ ಅಸಮರ್ಥ ಎನ್ನುವ ಕಾರಣಕ್ಕಾಗಿ ಹೆಂಡತಿ ಮತ್ತು ಮಕ್ಕಳನ್ನು ಸಾಕುವ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವ ಹಾಗಿಲ್ಲ. ಹೆಂಡತಿಯ ದುಡಿಮೆ ಇದ್ದರೂ ತನ್ನ ಹೊಣೆಗಾರಿಕೆಯಿಂದ ಜಾರಿಕೊಳ್ಳಲು ಅವಕಾಶ ಇಲ್ಲ. ಹಾಗೆಂದ ಮಾತ್ರಕ್ಕೆ ತನ್ನದೆಲ್ಲವನ್ನೂ ಹೆಂಡತಿ ಮಕ್ಕಳಿಗೆ ಕೊಟ್ಟೂ ಅವನು ಬರಿದಾಗಿ ಹೋಗಬೇಕು ಎನ್ನುವುದು ವ್ಯವಸ್ಥೆಯ ಉದ್ದೇಶವಲ್ಲ.

ಪ್ರತಿ ಪ್ರಕರಣದಲ್ಲೂ ಪತಿಯೊಬ್ಬ ಇಂತಿಷ್ಟೇ ಪರಿಹಾರಧನವನ್ನು ನೀಡಬೇಕು ಎನ್ನುವ ನಿರ್ಧಾರಿತ ಫಾರ್ಮುಲ ಇಲ್ಲದಿದ್ದರೂ, ಮದುವೆಯ ನಂತರ ಗಂಡ ಹೆಂಡತಿ ಯಾವ ಮಟ್ಟದ ಜೀವನ ಶೈಲಿಯಲ್ಲಿ ಬದುಕಿರುತ್ತಾರೆ, ಬೇರೆಯಾದ ನಂತರ ಹೆಂಡತಿ ಮತ್ತು ಮಕ್ಕಳು ಕಾಲಕ್ಕೆ ತಕ್ಕ ಘನತೆಯುಕ್ತ ಬಾಳ್ವೆ ಮಾಡಲು ಇರುವ ಅವಶ್ಯಕತೆ ಏನು, ಎಷ್ಟು ವರ್ಷದ ದಾಂಪತ್ಯ, ಬೇರೆಯಾಗುತ್ತಿರುವ ಹೆಂಡತಿ ಮತ್ತು ಮಕ್ಕಳ ವಯಸ್ಸು ಎಷ್ಟು, ಇಬ್ಬರಿಗೂ ಇರುವ ಸಂಪಾದನೆ ಎಷ್ಟು ಎನ್ನುವ ಮುಖ್ಯ ಅಂಶಗಳನ್ನು ಗಮನದಲ್ಲಿ ಇಟ್ಟೂಕೊಂಡು ನ್ಯಾಯಾಲಯ ಜೀವನಾಂಶದ ಮೊತ್ತವನ್ನು ನಿರ್ಧಾರ ಮಾಡುತ್ತದೆ. ಗಂಡನು ತಾನು ಇಷ್ಟೇ ಕೊಡಬಲ್ಲೆ ಎಂದು ಹೇಳಿದ್ದರೂ ಹೆಂಡತಿಯು ಅಗಾಧ ಮೊತ್ತದ ಬೇಡಿಕೆ ಇಟ್ಟಿದ್ದರೂ ಸಹ ನ್ಯಾಯಾಲಯವು ವಿವೇಚನಾಯುಕ್ತವಾಗಿ ಎರಡೂ ಕಡೆಯವರಿಗೂ ಅನ್ಯಾಯವಾಗದಂತೆ ತೀರ್ಪು ನೀಡುತ್ತದೆ. ಹೀಗಿದ್ದರೂ ಗಂಡಸರು ತಮ್ಮ ಆದಾಯದ ಮೂಲವನ್ನು ಸುಳ್ಳಾಗಿಯೇ ನೀಡುವುದು ಮತ್ತು ಹೆಂಗಸರು ಅವಾಸ್ತವಿಕ ನಿರೀಕ್ಷೆಗಳಿಂದ ಹೊರಬರಲು ಬಿಡದ ಸುತ್ತಲಿನ ಸಾಮಾಜಿಕ ಪರಿಸ್ಥಿತಿಯ ಪರಿಣಾಮದಿಂದ ನೊಂದ ಮಹಿಳೆಯರು ನ್ಯಾಯಾಲಯದ ಹೊಸಿಲುಗಳಲ್ಲಿ ನಿಂತೂ ಇನ್ನೂ ಕಣ್ಣೀರು ಹಾಕುತ್ತಿರುವುದು ಖೇದಕರ.

❖



ಸಾಯಬೇಕೆನಿಸುತ್ತಿದೆಯೇ ಮಾತಾಡಿ.. ಮಾತಾಡಿಸಿ

ಡಾ. ಆಲೋಕ ವಿನೋದ ಕುಲಕರ್ಣಿ

ನೀವು ಯಾವತ್ತಾದರೂ ಬದುಕು ಕೊನೆಗೊಳಿಸುವ ಬಗ್ಗೆ ಯೋಚಿಸಿದ್ದೀರಾ? ಇಂತಹ ವಿಚಾರ ಮಾಡುವವರ ಪೈಕಿ ವಿಶ್ವದಲ್ಲಿ ನೀವು ಒಬ್ಬರೇ ಅಲ್ಲ, ಅನೇಕರು ಒಂದು ಗಳಿಗೆಯಾದರೂ ಇಂತಹ ಹತಾಶೆಯನ್ನು ಅನುಭವಿಸಿರುತ್ತೇವೆ.

'ನನಗೆ ಈ ತರಹದ ವಿಚಾರಗಳನ್ನು ತಡೆದುಕೊಳ್ಳಲು, ಹತ್ತಿಕ್ಕಲು ಆಗುತ್ತಿಲ್ಲ', 'ನಾನು ಸಾಯುವುದು ಬೇಡಾ, ಆದರೆ ಈ ಜಂಜಾಟತದ ಜೀವನದಿಂದ ರೋಸಿ ಹೋಗಿದ್ದೇನೆ' ಎಂದೆಲ್ಲ ಅನಿಸುತ್ತದೆ. ಆದರೆ ಇದು ಒಳಗಿನ ಮನೋವ್ಯಾಪಾರವಾದರೂ ಬಾಹ್ಯದಲ್ಲಿ ಹಲವು ಲಕ್ಷಣಗಳನ್ನು ಗುರುತಿಸಬಹುದಾಗಿದೆ. ಕುಟುಂಬದವರು, ಸಂಗಾತಿ, ತಾಯಿ, ಸಹೋದರಿ ಮತ್ತಿತರ ಎಲ್ಲ ಸದಸ್ಯರೂ ಈ ಲಕ್ಷಣಗಳನ್ನು ಗುರುತಿಸಿ, ಮಾತನಾಡಲು ಪ್ರೇರೇಪಿಸಿದರೆ ಒತ್ತಾಯದ ವಿದಾಯವೊಂದನ್ನು ದೂರ ಸರಿಸಬಹುದಾಗಿದೆ.

ಈ ಮಾತುಗಳು ಮನೆಯಲ್ಲಿ ಕೇಳಿಬರುತ್ತಿವೆಯೇ? ನನ್ನಿಂದೇನೂ ಉಪಯೋಗವಿಲ್ಲ, ನಾನು ಸತ್ತರೆ ನಿಮಗೆ ಖುಷಿ, ನಾನಿದ್ದಿದ್ದಕ್ಕೆ ಸಮಸ್ಯೆ ತಾನೆ.. ನಾನೇ ಸತ್ತು ಹೋದರೆ ಎಲ್ಲಕ್ಕೂ ಪರಿಹಾರ ಎಂದು ಆಗಾಗ ಮಾತಿನಲ್ಲಿ ಬಳಸುವುದು, ಸುಮ್ಮನೆ ಕಣ್ಣೀರು ಹಾಕುವುದು, ತಡೆಯಲಾಗದ ನೋವಿದೆ ಎಂದು ಹೇಳುವುದು, ಇವೆಲ್ಲವೂ ಎಚ್ಚರಿಕೆಯ ಗಂಟೆಯೆಂದು ಭಾವಿಸಿ. ಸಹಾನುಭೂತಿಯಿಂದ ವರ್ತಿಸಿ. ಅವರ ದಿನಚರಿಯನ್ನು ಗಮನಿಸಿ.

ತಡರಾತ್ರಿ ಮಲಗುವುದು, ಬೆಳಗಿನ ಜಾವ ಎದ್ದೇಳುವುದು, ಹಸಿವಿಲ್ಲ ಎನ್ನುವುದು ಅಥವಾ ಅತಿಯಾಗಿ ತಿನ್ನುವುದು, ತೂಕದಲ್ಲಿ ಏರಿಳಿತಗಳು, ತಮ್ಮ ಬಗ್ಗೆ ನಿಷ್ಕಾಳಜಿ, ಒಂಟಿಯಾಗಿರುವುದು, ಸಾಮಾಜಿಕ ಜೀವನದಿಂದ ದೂರ ಇರುವುದು, ಅಕಾಲಿಕವಾಗಿ ಉಯಿಲು ಪತ್ರ ಬರೆಯುವುದು ಇಂಥ ಚಟುವಟಿಕೆಗಳು ಕಂಡು ಬಂದರೆ ಅವರೊಂದಿಗೆ ಹೆಚ್ಚು ಹೆಚ್ಚು ಮಾತಾಡಿ. ಅವರ ಮಾತುಗಳನ್ನು ಅಲ್ಲಗಳೆಯದೇ ಕೇಳಲು ಆರಂಭಿಸಿ.

ಮಾತಾಡಲು ತಹತಹಿಸುವುದು, ಒತ್ತಡದಲ್ಲಿದ್ದಂತೆ ಕಾಣುವುದು, ಖಿನ್ನರಾಗಿರುವುದು ಈ ಲಕ್ಷಣಗಳು ಕಂಡರೆ ಎಚ್ಚರವಹಿಸಿ.

ಕೌಟುಂಬಿಕ ದೌರ್ಜನ್ಯ, ಲೈಂಗಿಕ ಕಿರುಕುಳ, ಪತ್ತೆಯಾಗದ ಮನೋರೋಗ, ಮಾನಸಿಕ ಅನಾರೋಗ್ಯ, ಸ್ನೇಹಿತರ ಅತ್ಯಾಪ್ತರ ಸಾವು, ಸಂಬಂಧಗಳಲ್ಲಿ ಬಿರುಕು ಮತ್ತು ಬೇರ್ಪಡುವುದು, ಕ್ಯಾನ್ಸರ್, ಏಯ್ಡ್ಸ್‌ನಂಥ ಕಾಯಿಲೆಗಳಿಗೆ, ಸೋಂಕುಗಳಿಗೆ ಒಳಪಟ್ಟಿದ್ದರೆ, ವಿದೇಶ ಅಥವಾ ಅಪರಿಚಿತ ಸ್ಥಳಗಳಲ್ಲಿ ಹೊಂದಿಕೊಳ್ಳದೇ ಇರುವುದು, ಆರ್ಥಿಕ ಪರಿಸ್ಥಿತಿ, ಒಂಟಿತನ, ಪ್ರೇಮವೈಫಲ್ಯ, ತಮ್ಮ ಲೈಂಗಿಕತೆಯ ಬಗ್ಗೆ ಸ್ಪಷ್ಟ ಅರಿವಿನ ಕೊರತೆ, ಪರೀಕ್ಷೆಗಳಲ್ಲಿ ಫೇಲಾಗುವ ಭಯ, ವೈಫಲ್ಯ ಸ್ವೀಕರಿಸದ ಮನಸ್ಥಿತಿ ಇವೆಲ್ಲವೂ ತಮ್ಮ ಜೀವನವನ್ನು ಕೊನೆಗೊಳಿಸುವ ನಿರ್ಧಾರ ಕೈಗೊಳ್ಳುವಂತೆ ಪ್ರಚೋದಿಸುವ ಕಾರಣಗಳಾಗಿವೆ.

ಚಿಕಿತ್ಸೆ ಏನು?

ಮನೋರೋಗ ತಜ್ಞರು ಆತ್ಮಹತ್ಯೆ ವಿಚಾರಗಳಿಗೆ, ತಮ್ಮ ಮಾತುಗಳಿಂದ, ಚಿಕಿತ್ಸೆಯಿಂದ ಸಂಪೂರ್ಣ ವಿರಾಮ ನೀಡಬಲ್ಲರು. ಇಂಥ ವಿಫಲ ಯತ್ನಗಳು ನಡೆದಾಗ ಪೋಷಕರು, ಸಂಬಂಧಿಕರು ಅವರನ್ನು ಕೂಡಲೇ ಮನೋವೈದ್ಯರ ಬಳಿ ಕರೆದುಕೊಂಡು ಹೋಗಬೇಕು. ಆಪ್ತ ಸಮಾಲೋಚನೆ, ಔಷಧಿ ಚಿಕಿತ್ಸೆ, ಯೋಗ್ಯ ಮಾರ್ಗದರ್ಶನ, ಕೌನ್ಸಲಿಂಗ್, ಟಾಕ್ ಥೆರಪಿ, ಕಾಗ್ನಿಟಿವ್ ಬಿಹೇವಿಯರ್ ಥೆರಪಿಗಳಿಂದ ವ್ಯಕ್ತಿಯು ಸಂಪೂರ್ಣ ಗುಣ ಹೊಂದುವನು. ಈಗ ಮಾರುಕಟ್ಟೆಯಲ್ಲಿ ಅನೇಕ 'ಖಿನ್ನತೆ ನಿವಾರಣೆ' ಔಷಧಿಗಳು ಲಭ್ಯ. ಆದರೆ ನೀವೇ ಅಂತರ್ಜಾಲ ಅಥವಾ ಗೂಗಲ್‌ನಲ್ಲಿ ತಡಕಾಡಿ ಚಿಕಿತ್ಸೆಯನ್ನು ಆರಂಭಿಸುವದು ಅತ್ಯಂತ ಅಪಾಯಕಾರಿ. ಚಿಕಿತ್ಸೆಗೆ ನಿಮ್ಮ ಮನೋ ವೈದ್ಯರನ್ನೇ ಅವಲಂಬಿಸಿ.

ಕೆಟಮಿನ್ ಚಿಕಿತ್ಸೆ

ಇತ್ತೀಚಿನ ದಿನಗಳಲ್ಲಿ, ಅತ್ಯಂತ ತೀವ್ರವಾಗಿ ಆತ್ಮಹತ್ಯೆ ವಿಚಾರಗಳನ್ನು ತಡೆಗಟ್ಟಬಲ್ಲ ಒಂದು ಸಂಜೀವಿನಿ ಅಥವಾ ರಾಮಬಾಣದ ಚಿಕಿತ್ಸೆ ಎಂದರೆ 'ಕೆಟಮಿನ್ ಚಿಕಿತ್ಸೆ'. ಅಮೇರಿಕ ಹಾಗೂ ಅನೇಕ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಈಗ 'ಕೆಟಮಿನ್ ಕ್ಲಿನಿಕ್'ಗಳು ಈಗ ಅಣಬೆಯಂತೆ ತಲೆ ಎತ್ತುತ್ತಲಿವೆ.

ಕೆಟಮಿನ್ ಎಂಬ ದ್ರವವನ್ನು, ವ್ಯಕ್ತಿಯ ರಕ್ತನಾಳದಲ್ಲಿ, ಸಲೈನ್ ಬಾಟಲಿ ಮುಖಾಂತರ ಸುಮಾರು 40 ನಿಮಿಷಗಳವರೆಗೆ ಮನೋ ವೈದ್ಯರು ನೀಡಿ, ಅದೇ ಸಮಯದಲ್ಲಿ ನಿಖರವಾಗಿ 'ಕೌನ್ಸಲಿಂಗ್' ಮಾಡುವರು. ಇಂತಹ ಚಿಕಿತ್ಸೆಯನ್ನು ಸುಮಾರು 6-8 ಬಾರಿ, ದಿನ ಬಿಟ್ಟು ದಿನ ಮಾಡುವರು. ಇದು ಅತ್ಯಂತ ಪರಿಣಾಮಕಾರಿ ಚಿಕಿತ್ಸೆಯಾಗಿದೆ.

ಸಹಾಯವಾಣಿಗಳು ಲಭ್ಯವೇ?

ಅನೇಕ ಮಾನಸಿಕ ಆಸ್ಪತ್ರೆಗಳಲ್ಲಿ, ಎನ್.ಜಿ.ಒ. ಗಳಲ್ಲಿ, ಮನೋ ವೈದ್ಯರ ಬಳಿ ಆತ್ಮಹತ್ಯೆ ತಡೆಗಟ್ಟಬಲ್ಲ ಸಹಾಯವಾಣಿ ಲಭ್ಯ ಇವೆ.

ಇಂತಹ ವಿಚಾರಗಳು ತಲೆ ದೋರಿದಾಗ, "ಮಾತನಾಡಿ"- ನಿಮ್ಮ ಸಂಬಂಧಿಗಳ ಜೊತೆಗೆ, ಸ್ನೇಹಿತರ ಜೊತೆಗೆ, ನಿಮ್ಮ ಹತ್ತಿರದವರೊಟ್ಟಿಗೆ, ನಿಮ್ಮ ಕುಟುಂಬ ವೈದ್ಯರ ಜೊತೆಗೆ ಮತ್ತು ಅತ್ಯಂತ ತ್ವರಿತವಾಗಿ ಪರಿಹಾರ ನೀಡಬಲ್ಲ ನಿಮ್ಮ ಮನೋ ವೈದ್ಯರ ಬಳಿ!.

ಸಾಯಬೇಕೆನ್ನುವ ವಿಚಾರ ನಿಮ್ಮನ್ನು ಸೆಳೆಯುವಾಗ ಸಹಾಯ ಕೇಳಿ, 'ಸಂಭಾಷಣೆ'ಯಲ್ಲಿ ತೊಡಗಿಸಿಕೊಳ್ಳಿ, 'ಮಾತನಾಡಿ'. ಈ ದಿಶೆಯಲ್ಲಿ ಮೌನ ಬಂಗಾರವಲ್ಲ, ಮಾತೇ ಬಂಗಾರ!.

❖

ಪಕೋಡಾ ರೆಸಿಪಿ

ಸಂಜೆ ಸಮಯಕ್ಕೆ ಚಹಾದ ಜೊತೆ ಬಾಯಿ ಚಪ್ಪರಿಸಿಕೊಂಡು ತಿನ್ನಲು ಕುರುಕಲು ತಿಂಡಿ ಬೇಕೆನಿಸುವುದು ಸುಳ್ಳಲ್ಲ. ಆ ಚಹಾದ ಜೊತೆ ಸವಿಯಲು ಬಗೆಬಗೆಯ ಪಕೋಡಾ ಮಾಡಿಕೊಂಡು ತಿಂದರೆ ಮತ್ತೇಮತ್ತೇ ಬೇಕೆನಿಸುತ್ತದೆ. ವಿವಿಧ ಬಗೆಯ ಪಕೋಡಾ ಮಾಡಿಕೊಟ್ಟರೆ ಮಕ್ಕಳು ಇಷ್ಟ ಪಟ್ಟು ತಿನ್ನುತ್ತಾರೆ. ಅವುಗಳ ರೆಸಿಪಿಯನ್ನು ನೀಡಿದ್ದಾರೆ ಪೂರ್ಣಿಮಾ ಗೊಂದೆನಾಯ್ಕರ



ಈರುಳ್ಳಿ-ಆಲೂಗಡ್ಡೆ ಇಳಿಸಂಜೆಗಿರಲಿ

ಬೇಕಾಗುವ ಸಾಮಗ್ರಿಗಳು: ಈರುಳ್ಳಿ, ಹಸಿಮೆಣಸಿನಕಾಯಿ, ಬೆಳ್ಳುಳ್ಳಿ, ಜೀರಿಗೆ, ಕೊತ್ತಂಬರಿ ಕಾಳು, ಶುಂಠಿ, ಅಚ್ಚಖಾರದ ಪುಡಿ, ಉಪ್ಪು, ಕಡಲೆಬೇಳೆ ಹಿಟ್ಟು, ಆಲೂಗಡ್ಡೆ, ಅಡುಗೆ ಎಣ್ಣೆ.

ಮಾಡುವ ವಿಧಾನ: ಮೊದಲು ಮೂರು ಈರುಳ್ಳಿಯನ್ನು ಉದ್ದಗೆ ಸಣ್ಣದಾಗಿ ಹೆಚ್ಚಿಕೊಳ್ಳಬೇಕು. ಒಂದು ಆಲೂಗಡ್ಡೆ ತುರಿದಿಟ್ಟುಕೊಳ್ಳಬೇಕು. ಹೆಚ್ಚಿಟ್ಟುಕೊಂಡ ಈರುಳ್ಳಿಗೆ ಹೆಚ್ಚಿದ ಹಸಿಮೆಣಸಿನಕಾಯಿ (ನಿಮಗೆ ಬೇಕಾದ ಪ್ರಮಾಣದಲ್ಲಿ), ನುಣ್ಣಗೆ ಮಾಡಿಟ್ಟುಕೊಂಡ ಹಸಿಶುಂಠಿ, ಬೆಳ್ಳುಳ್ಳಿ ಪೇಸ್ಟ್, ಜೀರಿಗೆ, ಎರಡು ಭಾಗವಾಗುವಷ್ಟು ಪುಡಿ ಮಾಡಿಟ್ಟುಕೊಂಡ ಕೊತ್ತಂಬರಿಕಾಳು ಪೌಡರ್, ರುಚಿಗೆ ತಕ್ಕಷ್ಟು ಉಪ್ಪು ಮತ್ತು ಒಂದು ಚಮಚ ಅಚ್ಚಖಾರದ ಪುಡಿ ಈರುಳ್ಳಿಗೆ ಹಾಕಿ ಮಿಶ್ರಣ ಮಾಡಬೇಕು. ನಂತರ ಎರಡು ಕಪ್ಪಿನಷ್ಟು ಕಡಲೆಹಿಟ್ಟಿನ ಪೌಡರ್ ಹಾಕಬೇಕು. ಎಲ್ಲ ಮಿಶ್ರಣ ಆದನಂತರ ತುರಿದಿಟ್ಟುಕೊಂಡ ಆಲೂಗಡ್ಡೆಯನ್ನು ಹಾಕಿ ಮಿಶ್ರಣ ಮಾಡಬೇಕು. ಬಾಣಲೆಗೆ ಹಾಕಿದ ಎಣ್ಣೆ ಕಾಯ್ದ ನಂತರ ಮಿಶ್ರಣ ಮಾಡಿದ ಹಿಟ್ಟನ್ನು ಎಣ್ಣೆಯಲ್ಲಿ ಹಾಕಿ ಕೆಂಪು ವರ್ಣಕ್ಕೆ ಬರುವ ಹಾಗೆ ಕರಿದುಕೊಳ್ಳಬೇಕು. ಇದನ್ನು ಟೊಮೆಟೊ ಸಾಸ್‌ನೊಂದಿಗೆ ತಿನ್ನಬಹುದು.



ಕರೆಯುತಿದೆ ಗರಿಗರಿ ಸೊಪ್ಪು

ಬೇಕಾಗುವ ಸಾಮಗ್ರಿಗಳು: ಮೆಂತ್ಯೆಸೊಪ್ಪು (ಒಂದು ಕಪ್), ಪಾಲಕ್ (ಎರಡು ಕಪ್), ಸಬ್ಬಸಗಿ (ಒಂದು ಕಪ್), ಕೊತ್ತಂಬರಿ ಸೊಪ್ಪು (ಅರ್ಧ ಕಪ್ಪ), ಈರುಳ್ಳಿ ಸೊಪ್ಪು (ಅರ್ಧ ಕಪ್), ಹಸಿಮೆಣಸಿನಕಾಯಿ, ಈರುಳ್ಳಿ, ಜೀರಿಗೆ, ಕೊತ್ತಂಬರಿ ಕಾಳು ಪುಡಿ, ಅಚ್ಚ ಖಾರದ ಪುಡಿ, ಚಾಟ್ ಮಸಾಲೆ, ಉಪ್ಪು, ಗೋಡಂಬಿ, ಅಡುಗೆ ಎಣ್ಣೆ, ಕಡಲೆ ಹಿಟ್ಟು.

ಮಾಡುವ ವಿಧಾನ: ಒಂದು ಬಾಣಲೆಗೆ ಸಣ್ಣಗೆ ಹೆಚ್ಚಿಟ್ಟುಕೊಂಡ ಎರಡು ಕಪ್ಪ ಪಾಲಕ್, ಒಂದು ಕಪ್ ಮೆಂತ್ಯೆಸೊಪ್ಪು, ಒಂದು ಕಪ್ ಸಬ್ಬಸಗಿ, ಅರ್ಧ ಕಪ್ ಕೊತ್ತಂಬರಿ ಸೊಪ್ಪು, ಹೆಚ್ಚಿಟ್ಟುಕೊಂಡ ಎರಡು ಹಸಿಮೆಣಸಿನಕಾಯಿ, ಹೆಚ್ಚಿದ ಒಂದು ಈರುಳ್ಳಿ, ಅರ್ಧ ಚಮಚ ಕೊತ್ತಂಬರಿ ಕಾಳು ಪೌಡರ್, ಒಂದು ಚಮಚ ಅಚ್ಚ ಖಾರದ ಪೌಡರ್, ಅರ್ಧ ಚಮಚ ಚಾಟ್ ಮಸಾಲೆ, ರುಚಿಗೆ ತಕ್ಕಟ್ಟು ಉಪ್ಪು, ನಾಲ್ಕು ಗೋಡಂಬಿ ಎಲ್ಲ ಸಾಮಗ್ರಿಗಳನ್ನು ಹಾಕಿ ಚೆನ್ನಾಗಿ ಮಿಶ್ರಣ ಮಾಡಬೇಕು. ನಂತರ ಮೂರು ಚಮಚ ಕಡಲೆ ಹಿಟ್ಟು ಹಾಕಿ ನೀರು ಹಾಕಿ ಬಜ್ಜಿ ಹದಕ್ಕೆ ಬರುವಂತೆ ಮಿಶ್ರಣ ಮಾಡಬೇಕು. ಬಾಣಲೆಯಲ್ಲಿ ಕಾದ ಎಣ್ಣೆಗೆ ಮಾಡಿಟ್ಟುಕೊಂಡ ಮಿಶ್ರಣವನ್ನು ಹಾಕಿ ಕರಿದುಕೊಳ್ಳಬೇಕು.



ಶುಂಠಿ ಟೀ

ಬೇಕಾಗುವ ಸಾಮಗ್ರಿಗಳು: ಹಸಿಶುಂಠಿ, ಚಕ್ಕೆ, ಎಲಕ್ಕಿ, ಬೆಲ್ಲ, ಹಾಲು, ಟೀ ಪೌಡರ್.

ಮಾಡುವ ವಿಧಾನ: ಮೊದಲು ಒಂದು ಬಾಣಲೆಯಲ್ಲಿ ಎರಡು ಗ್ಲಾಸ್ ನೀರು ಹಾಕಿ ಕಾಯಲು ಇಡಬೇಕು. ಅದಕ್ಕೆ ಸಣ್ಣಗೆ ಪೇಸ್ಟ್ ಮಾಡಿಟ್ಟುಕೊಂಡ ಶುಂಠಿ, ಎರಡು ತುಂಡು ಚಕ್ಕೆ, ಎರಡು ಏಲಕ್ಕಿ ಪುಡಿ ಹಾಕಿ ಚೆನ್ನಾಗಿ ಕುದಿಸಬೇಕು. ಟೀ ಪೌಡರ್ ಹಾಕಿ ಎರಡು ನಿಮಿಷ ಕುದಿಸಬೇಕು. ನಂತರ ಇದಕ್ಕೆ ಒಂದು ಗ್ಲಾಸ್‌ನಷ್ಟು ಹಾಲು ಹಾಕಿ, ನಂತರ ರುಚಿಗೆ ತಕ್ಕಷ್ಟು ಬೆಲ್ಲ ಹಾಕಿ ಮಿಶ್ರಣ ಮಾಡಬೇಕು. ನಂತರ ಒಂದು ಕುದಿ ಕುದಿಸಬೇಕು.

ಬ್ರೆಡ್ ಪಕೋಡಾ

ಬೇಕಾಗುವ ಸಾಮಗ್ರಿಗಳು: ಬ್ರೆಡ್ (ನಿಮಗೆ ಬೇಕಾದಷ್ಟು), ಆಲೂಗಡ್ಡೆ, ಜೀರಿಗೆ, ಸಾಸಿವೆ, ಕರಿಬೇವು, ಕೊತ್ತಂಬರಿ, ಈರುಳ್ಳಿ, ಹಸಿಮೆಣಸಿನಕಾಯಿ, ಅಡುಗೆ ಎಣ್ಣೆ, ಉಪ್ಪು, ಚಾಟ್ ಮಸಾಲೆ, ಕಡಲೆಬೇಳೆ ಹಿಟ್ಟು, ಬೆಳ್ಳುಳ್ಳಿ, ಹಸಿಶುಂಠಿ.

ಮಾಡುವ ವಿಧಾನ: ಮೊದಲು ನಮಗೆ ಬೇಕಾಗುವಷ್ಟು ಆಲೂಗಡ್ಡೆಯನ್ನು ಕುಕ್ಕರ್‌ನಲ್ಲಿ ಮೂರು ವಿಜಲ್‌ನಲ್ಲಿ ಬೇಯಿಸಿ ಇಟ್ಟುಕೊಳ್ಳಬೇಕು. ಆಲೂಗಡ್ಡೆ ಪಲ್ಯ ಮಾಡುವ ವಿಧಾನದಲ್ಲಿಯೇ, ಕಾದ ಎಣ್ಣೆಗೆ ಜೀರಿಗೆ, ಸಾಸಿವೆ ಹಾಕಿ ಬೇಯಿಸಬೇಕು. ನಂತರ ಬೆಳ್ಳುಳ್ಳಿ, ಹಸಿಶುಂಠಿ ಪೇಸ್ಟ್, ಹೆಚ್ಚಿಟ್ಟುಕೊಂಡ ಈರುಳ್ಳಿ, ಟೊಮೆಟೊ, ಕರಿಬೇವು ಹಾಕಿ ಮಿಶ್ರಣ ಮಾಡಬೇಕು. ರುಚಿಗೆ ತಕ್ಕಷ್ಟು ಉಪ್ಪು ಮತ್ತು ಚಾಟ್ ಮಸಾಲೆ ಹಾಕಿ ಪಲ್ಯ ಮಾಡಿಟ್ಟುಕೊಳ್ಳಬೇಕು.

ಮಾಡಿಟ್ಟುಕೊಂಡ ಪಲ್ಯವನ್ನು ಒಂದು ಬ್ರೆಡ್‌ನಲ್ಲಿ ಎರಡು ಭಾಗ ಮಾಡಿಕೊಂಡು ನೀರಿನಿಂದ ಮೃದು ಮಾಡಿಕೊಂಡು ಆಲೂಗಡ್ಡೆ ಪಲ್ಯ ಹಾಕಿ ಉಂಡೆ ಆಕಾರದಲ್ಲಿ ಮಾಡಿಟ್ಟುಕೊಳ್ಳಬೇಕು. ನೀರಿನಲ್ಲಿ ತೆಳುವಾಗಿ ಮಿಶ್ರಣಮಾಡಿಟ್ಟು ಕೊಂಡ ಕಡಲೆಹಿಟ್ಟಿನಲ್ಲಿ ಅದ್ದಿ ತೆಗೆದು ಅಡುಗೆ ಎಣ್ಣೆಯಲ್ಲಿ ಹಾಕಿ ಕರಿಯಬೇಕು



ಗರ್ಭಿಣಿಯರಲ್ಲಿ ದಂತ ಆರೋಗ್ಯಕ್ಕಿರಲಿ ಆದ್ಯತೆ



ಸ್ಪಂದನ



ಡಾ. ವೀಣಾ ಎಸ್. ಭಟ್

• ಮೊದಲನೆ ಬಾರಿಗೆ ಗರ್ಭ ಧರಿಸಿದ್ದೇನೆ. ಆರನೇ ತಿಂಗಳು ನಡೆಯುತ್ತಿದ್ದು, ಹಲ್ಲುಜ್ಜಿದಾಗ ರಕ್ತ ಬರುತ್ತದೆ. ಕೆಲವೊಮ್ಮೆ ತಿನ್ನುವಾಗ, ಕುಡಿಯುವಾಗ ಹಲ್ಲುಗಳಲ್ಲಿ ಜುಮ್ಮು ಎನಿಸಿದಂತೆ ಆಗುತ್ತದೆ. ತಜ್ಞವೈದ್ಯರ ಬಳಿ ತೋರಿಸಿದ್ದೇನೆ. ಮೃದುಬ್ರಷ್ ಬಳಸಲು ಹೇಳಿದ್ದಾರೆ. ಇದರಿಂದ ಏನಾದರೂ ತೊಂದರೆ ಇದೆಯೇ?

ಗರ್ಭಧಾರಣೆಯಲ್ಲಿ ಹಾರ್ಮೋನುಗಳ ಬದಲಾವಣೆಯಿಂದ ರಕ್ತ ಸರಬರಾಜು ಹೆಚ್ಚುತ್ತದೆ. ಜತೆಗೆ ವಸಡಿನ ಉರಿಯೂತ/ಸುತ್ತಲಿನ ಹಲ್ಲಿನ ಮೂಳೆಯ ಉರಿಯೂತವೂ ಉಂಟಾಗಬಹುದು. ಸೋಂಕು ಉಂಟಾಗಬಹುದು. ಇದರಿಂದಾಗಿ ಬ್ರಷ್ ಮಾಡಿದಾಗ ರಕ್ತಸ್ರಾವ ಆಗುತ್ತಿರಬಹುದು. ಗಾಬರಿಗೊಳ್ಳಬೇಡಿ.

ಗರ್ಭಿಣಿಯರಲ್ಲಿ ಆಹಾರಸೇವನೆಯ ವಿಧಾನ ಬದಲಾಗುತ್ತದೆ. ಪದೇಪದೇ ಸ್ವಲ್ಪ ಸ್ವಲ್ಪ ಆಹಾರ ಸೇವಿಸಬೇಕಾಗಿ ಬರಬಹುದು. ಮತ್ತು ಹೆಚ್ಚಿನವರು ಆಹಾರ ಸೇವನೆಯ ನಂತರ ಬಾಯಿಮುಕ್ಕಳಿಸಲು ನಿರ್ಲಕ್ಷಿಸುತ್ತಾರೆ. ಕೆಲವು ಗರ್ಭಿಣಿಯರು ಬ್ರಷ್ ಮಾಡಿದರೆ ವಾಂತಿಯಾಗುತ್ತದೆ ಎಂದು ಬ್ರಷ್ ಮಾಡದೇ ಇರಬಹುದು. ಇದರಿಂದ ದಂತಕುಳಿ, ಪಾಚಿಗಟ್ಟುವಿಕೆ, ವಸಡಿನ ಸೋಂಕು ಇವೆಲ್ಲಾ ಆಗಬಹುದು. ಈ ಮೊದಲೇ ಇಂಥ ಸಮಸ್ಯೆಗಳು ಇದ್ದವರಲ್ಲಿ ಇನ್ನಷ್ಟು ಹೆಚ್ಚಬಹುದು. ಹಾಗಾಗಿ ಗರ್ಭಧರಿಸುವ ಮೊದಲೇ ಇವುಗಳ ಬಗ್ಗೆ ದಂತವೈದ್ಯರಿಗೆ ತೋರಿಸುವುದು ಉತ್ತಮ.

ಜ್ಞಾನದ ಹಲ್ಲಿನ (ವಿಸ್ಡಂಟೀತ್) ಸಮಸ್ಯೆಯೂ ಕೆಲವೊಮ್ಮೆ ಭಾಧಿಸಬಹುದು. ಗರ್ಭಧಾರಣೆಯಲ್ಲಿ ಹೆಚ್ಚುವ ರಕ್ತಸರಬರಾಜಿನಿಂದ ಹಲ್ಲು ಸೂಕ್ಷ್ಮಗೊಂಡು ಬಿಸಿ ಅಥವಾ ತಂಪು ಆಹಾರ ಸೇವಿಸಿದಾಗ ಜುಮ್ಮೆನಿಸಿದ ಹಾಗಾಗುತ್ತದೆ. ಬಹುಶಃ ನಿಮಗೆ ಹೀಗೇ ಆಗುತ್ತಿದೆ ಎಂದು ಅನಿಸುತ್ತಿದೆ. ಗರ್ಭಿಣಿಯರಲ್ಲಿ ಬಾಯಿಒಣಗಿದ ಅನುಭವ ಆಗಬಹುದು. ಇದರಿಂದ ದಂತ ಸವಕಳಿ ಹೆಚ್ಚುತ್ತದೆ. ಕೆಲವು ಗರ್ಭಿಣಿಯರಲ್ಲಾಗುವ ಬೆಳಗಿನ ಸುಸ್ತು, ಅತಿಯಾದ ವಾಂತಿಯಿಂದ, ಜಠರಾಮ್ಲ ಹಿಮ್ಮುಖವಾಗಿ ಬಾಯಿಗೆ ಚಲಿಸಿದಾಗ ಹಲ್ಲಿನ ಸವಕಳಿಯೂ ಹೆಚ್ಚುವ ಸಾಧ್ಯತೆಯೂ ಇರುತ್ತದೆ.

ಹಲವು ಸಂಶೋಧನೆಗಳಿಂದ ವಸಡು/ಹಲ್ಲಿನ ಸೋಂಕಿನಿಂದ ಪ್ರೋಸ್ಟಗ್ಲಾಂಡಿನ್ ಎಂಬ ನೋವುಕಾರಕ ಹಾರ್ಮೋನುಗಳು ಹೆಚ್ಚು ಬಿಡುಗಡೆಯಾಗಿ ಅದು ಅಕಾಲಿಕ ಇಲ್ಲವೇ ಅವಧಿಪೂರ್ವ ಹೆರಿಗೆಗೂ ಕಾರಣವಾಗುತ್ತದೆ. ಜತೆಗೆ ಶಿಶುಮರಣಕ್ಕೂ ಕಾರಣವಾಗಬಹುದೆಂಬ ವಾದಕ್ಕೆ ಸಾಕಷ್ಟು ಪುಷ್ಟಿ ದೊರಕಿದೆ. ಹಾಗಾಗಿ ಗರ್ಭಿಣಿಯರೂ ಉತ್ತಮ ದಂತ ಆರೋಗ್ಯ ಕಾಪಾಡಿಕೊಳ್ಳುವುದು ಬಹಳ ಮುಖ್ಯ.

ಬಾಯಿಒಣಗದ ಹಾಗೇ ಕನಿಷ್ಠ 3ರಿಂದ 3.6 ಲೀಟರ್‌ಅನ್ನು ಪ್ರತಿದಿನ ಕುಡಿಯಿರಿ. ನಿಯಮಿತವಾಗಿ ಬೆಳಿಗ್ಗೆ ಹಾಗೂ ರಾತ್ರಿ ಮಲಗುವ ಮುನ್ನ ಮತ್ತು ಸಾಧ್ಯವಾದರೆ ಮಧ್ಯದಲ್ಲೊಮ್ಮೆ ಮೃದುವಾದ, ಉತ್ತಮ ದರ್ಜೆಯ ಬ್ರಷ್‌ನಿಂದ ಸರಿಯಾದ ಕ್ರಮದಲ್ಲಿ ಹಲ್ಲುಜ್ಜುವುದು ಮುಖ್ಯ. ಅದಕ್ಕೂ ಮುಖ್ಯವಾಗಿ ದಂತಮಜ್ಜನವಾದ ಮೇಲೆ ವಸಡನ್ನು ನಿಯಮಿತವಾಗಿ ಬೆರಳಿಂದ ಮಸಾಜ್ ಮಾಡಿ. ಇದರಿಂದ ವಸಡಿನ ಉರಿಯೂತ ಆಗುವ ಸಂಭವ ಕಡಿಮೆಯಾಗುತ್ತದೆ. ಎಲ್ಲಕ್ಕೂ ಮೊದಲು ಪ್ರತಿ ಬಾರಿ ಆಹಾರ ಸೇವಿಸಿದಾಗ ದ್ರವಆಹಾರ ತೆಗೆದುಕೊಂಡಾಗಲು ನೀರಿನಿಂದ ಚೆನ್ನಾಗಿ ಬಾಯಿಮುಕ್ಕಳಿಸುವುದು ಮುಖ್ಯ. ಸಾಧ್ಯವಾದಷ್ಟು ಸಿಹಿತಿನಿಸು, ಜಂಕ್‌ಫುಡ್, ಕೃತಕಪಾನೀಯಗಳಿಂದ ದೂರವಿರಿ.

ಹಣ್ಣು, ಸೊಪ್ಪು, ತರಕಾರಿಗಳನ್ನು ಜಗಿದು ತಿನ್ನಿ, ಗರ್ಭ ಧರಿಸುವ ಮೊದಲೇ ಮತ್ತು ಗರ್ಭಧರಿಸಿದ ನಂತರವೂ ಯಾವುದೇ ದಂತಾರೋಗ್ಯ ಸಮಸ್ಯೆಗಳಿದ್ದರೂ ದಂತವೈದ್ಯರನ್ನ ಕಾಣಲು ಹಿಂದೇಟು ಹಾಕಬೇಡಿ.

❖

ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳ ಬಗ್ಗೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗತಜ್ಞೆ ಡಾ.ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು



ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಧಾರ್ಮಿಕ ದತ್ತಿ ಇಲಾಖೆ



ಶ್ರೀ ಡಿ. ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

ಕರ್ನಾಟಕ - ಭಾರತ್ ಗೌರವ್
ದ್ವಾರಕಾ ಯಾತ್ರಾ

ದ್ವಾರಕಾ - ನಾಗೇಶ್ವರ - ಸೋಮನಾಥ್ - ತ್ರಯಂಬಕೇಶ್ವರ

ಅತ್ಯಂತ ಕಡಿಮೆ ವೆಚ್ಚದಲ್ಲಿ ದ್ವಾರಕಾ, ನಾಗೇಶ್ವರ, ಸೋಮನಾಥ್ ಹಾಗೂ ಶ್ರೀ ತ್ರಯಂಬಕೇಶ್ವರ ದೇವಾಲಯ ಯಾತ್ರಾ ಸ್ಥಳಗಳ ಭೇಟಿಗೆ ಅವಕಾಶ

ಈ ಪ್ಯಾಕೇಜ್‌ಗೆ ಒಟ್ಟು **ರೂ.30,000/-** ಗಳು ತಗುಲಲಿದ್ದು, ಈ ಪೈಕಿ ಕರ್ನಾಟಕ ಸರ್ಕಾರದ ವತಿಯಿಂದ ಅಂದಾಜು **ರೂ.15,000/-**ಗಳನ್ನು ಭರಿಸಲಾಗುತ್ತದೆ. ಇದರಲ್ಲಿ Fixed haulage Charges, R.U Charges, Stabling Charges, ವೈದ್ಯಕೀಯ ವೆಚ್ಚ, ಇತರೆ ವೆಚ್ಚ ಹಾಗೂ **ಸಹಾಯಧನ ರೂ.5,000/-** ಗಳು ಒಳಗೊಂಡಿರುತ್ತದೆ. ಯಾತ್ರಾರ್ಥಿಗಳು ಬುಕ್ಕಿಂಗ್ ಮೊತ್ತವಾಗಿ **ರೂ.15,000/-** ಗಳನ್ನು ಮಾತ್ರ ಪಾವತಿಸಬೇಕಾಗುತ್ತದೆ.

ಪ್ರವರ್ಗ 'ಸಿ' ಅಧಿಸೂಚಿತ ದೇವಾಲಯಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅರ್ಚಕರು / ನೌಕರರು ಭಾರತ್ ಗೌರವ್ ದ್ವಾರಕಾ ಯಾತ್ರೆ ತೆರಳಲು ಇಚ್ಛಿಸಿದಲ್ಲಿ ದಾಖಲೆಗಳೊಂದಿಗೆ ಆಯುಕ್ತರ ಕಚೇರಿಗೆ ನೇರವಾಗಿ ದಿನಾಂಕ 20.09.2024 ರೊಳಗೆ ಮನವಿ ಸಲ್ಲಿಸಬಹುದಾಗಿದೆ.



ಮಾನ್ಯ ಉಪ ಮುಖ್ಯಮಂತ್ರಿಗಳಾದ **ಶ್ರೀ ಡಿ.ಕೆ. ಶಿವಕುಮಾರ್** ಅವರೊಂದಿಗೆ ಮಾನ್ಯ ಸಾರಿಗೆ ಹಾಗೂ ಮುಜರಾಯಿ ಸಚಿವರಾದ **ಶ್ರೀ ರಾಮಲಿಂಗಾರೆಡ್ಡಿರವರು** ಸಭೆ ನಡೆಸುತ್ತಿರುವ ದೃಶ್ಯ

ಪ್ಯಾಕೇಜ್‌ನಲ್ಲಿ 3 ಟೈರ್ ಎ.ಸಿ. ರೈಲಿನಲ್ಲಿ ಪ್ರಯಾಣ, ಊಟ, ವಸತಿ, ಸ್ಥಳೀಯ ಸಾರಿಗೆ ಮತ್ತು ದರ್ಶನದ ವ್ಯವಸ್ಥೆ ಇರುತ್ತದೆ.

ಪ್ರಯಾಣಿಸುವಾಗ ಆಧುನಿಕ ಪ್ಯಾಂಟ್ರಿ ಕಾರಿನಲ್ಲಿ ತಯಾರಿಸಿದ ತಾಜಾ ಸ್ಥಳೀಯ ಆಹಾರವನ್ನು ನೀಡಲಾಗುತ್ತದೆ.

ಯಾತ್ರಾರ್ಥಿಗಳ ಆರೋಗ್ಯದ ದೃಷ್ಟಿಯಿಂದ ವೈದ್ಯಕೀಯ ಸಹಾಯ ವ್ಯವಸ್ಥೆ ಇರುತ್ತದೆ.

ರೈಲು ಹತ್ತುವ ಹಾಗೂ ಇಳಿಯುವ ಸ್ಥಳಗಳು

ಬೆಂಗಳೂರು (SMVT) । ತುಮಕೂರು । ಅರಸಿಕೆರೆ
ಬೀರೂರು । ದಾವಣಗೆರೆ । ಹಾವೇರಿ । ಬೆಳಗಾವಿ

ವಿಶೇಷ ರೈಲು ಹೊರಡಲಿರುವ ದಿನಾಂಕಗಳು

ನಿರ್ಗಮನ 28.09.2024
ಆಗಮನ 05.10.2024



Book your tickets online at
https://www.irctctourism.com
For booking please contact: +91 9003140710, 8595931292, 8595931294, 9731641611, 8595931293, 8595931458

ಬುಕ್ಕಿಂಗ್‌ಗಾಗಿ ಸ್ಕ್ಯಾನ್ ಮಾಡಿ



ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿಯಮಿತ

(ಷೆಡ್ಯೂಲ್ಡ್ ಬ್ಯಾಂಕ್)

"ಉತ್ತುಂಗ", ನಂ. 1, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು–560 018. ದೂರವಾಣಿ: 080–26983700/22976600/22976622, ಫ್ಯಾಕ್ಸ್: 080–26628521,
ಇ–ಮೇಲ್: admin@karnatakaapex.com, ವೆಬ್‌ಸೈಟ್: www.karnatakaapex.com

ಸಭಾಧ್ಯಕ್ಷರ ಭಾಷಣ



99ನೇ ವಾರ್ಷಿಕ ಮಹಾಸಭೆ
ಶುಕ್ರವಾರ, 13.09.2024

ಆತ್ಮೀಯ ಸಹಕಾರಿ ಬಂಧುಗಳೇ,

ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ., ಬೆಂಗಳೂರು ಇದರ 99ನೇ ವಾರ್ಷಿಕ ಮಹಾಸಭೆಗೆ ಬ್ಯಾಂಕಿನ ಆಡಳಿತ ಮಂಡಳಿ ಪರವಾಗಿ ಮತ್ತು ವೈಯಕ್ತಿಕವಾಗಿ ತಮ್ಮೆಲ್ಲರಿಗೂ ಹೃತ್ಪೂರ್ವಕ ಸ್ವಾಗತವನ್ನು ಕೋರುತ್ತೇನೆ.

- ಬ್ಯಾಂಕು ಸಹಕಾರ ತತ್ವ ಮತ್ತು ಮೌಲ್ಯಗಳನ್ನೊಳಗೊಂಡ 109 ವರ್ಷಗಳ ಯಶಸ್ವಿ ಸೇವೆಯನ್ನು ಪೂರೈಸಿ, ಸಹಕಾರಿ ರಂಗದ ಹಾಗೂ ದೇಶದ ರಾಜ್ಯ ಸಹಕಾರಿ ಬ್ಯಾಂಕುಗಳ ಪೈಕಿ ಅತ್ಯುತ್ತಮ ಬ್ಯಾಂಕೆಂಬ ಪ್ರಶಂಸೆಗೆ ಪಾತ್ರವಾಗಿದೆ ಎಂಬುದನ್ನು ಸಂತೋಷದಿಂದ ಹೇಳಬಯಸುತ್ತೇನೆ.
- ಬ್ಯಾಂಕು 2023–24 ನೇ ಸಾಲಿನಲ್ಲಿ ಎಲ್ಲಾ ರೀತಿಯ ಆರ್ಥಿಕ ಚಟುವಟಿಕೆಗಳಲ್ಲಿ ಉತ್ತಮ ಸಾಧನೆಯನ್ನು ಮಾಡಿದ್ದು, ದಿನಾಂಕ 31.03.2024 ರ ಅಂತ್ಯಕ್ಕೆ ರೂ.13347.90 ಕೋಟಿಗಳ ಠೇವಣಿಯನ್ನು ಸಂಗ್ರಹಿಸಿದ್ದು, ದುಡಿಯುವ ಬಂಡವಾಳವು ರೂ.33167.20 ಕೋಟಿಗಳಿಗೆ ಏರಿಕೆಯಾಗಿದ್ದು, ವರದಿ ಸಾಲಿನಲ್ಲಿ ರೂ.376.38 ಕೋಟಿಗಳಷ್ಟು ಒಟ್ಟಾರೆ ಲಾಭವನ್ನು ಗಳಿಸಿರುತ್ತದೆ. ಅದರಲ್ಲಿ ಶಾಸನಬದ್ಧ ಅವಕಾಶಗಳನ್ನು ಕಲ್ಪಿಸಿ ಹಾಗೂ ಆದಾಯ ತೆರಿಗೆಯನ್ನು ಪಾವತಿಸಿದ ನಂತರ ರೂ.65.00 ಕೋಟಿಗಳ ನಿವ್ವಳ ಲಾಭವನ್ನು ಗಳಿಸಿರುತ್ತದೆ. ಬ್ಯಾಂಕಿನ ನಿವ್ವಳ ಅನುತ್ಪಾದಕ ಆಸ್ತಿ ಪ್ರಮಾಣವು ದಿನಾಂಕ 31.03.2024 ರ ಅಂತ್ಯಕ್ಕೆ ಶೇ.4.59 ರಷ್ಟಿರುತ್ತದೆಂದು ತಿಳಿಸಲಿಚ್ಛಿಸುತ್ತೇನೆ.
- ಬ್ಯಾಂಕು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಹಾಗೂ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸಲು ಬ್ಯಾಂಕಿನ ವತಿಯಿಂದ ಪ್ರೋತ್ಸಾಹಧನ ನೀಡಲಾಗುತ್ತಿದೆ. ಅಲ್ಲದೇ ಬ್ಯಾಂಕು ನಬಾರ್ಡ್‌ನಿಂದ ಸಾಲ ಪಡೆದು ಜಿಲ್ಲಾ ಬ್ಯಾಂಕುಗಳಿಗೆ ವಿತರಿಸುತ್ತಿರುವ ಸಾಲಗಳ ಮೇಲಿನ ಬಡ್ಡಿ ದರದ ಮಾರ್ಜಿನ್‌ಅನ್ನು ಯಥಾವತ್ತಾಗಿ ಮುಂದುವರೆಸಲಾಗಿದೆ.
- ಕೇಂದ್ರ ಸರ್ಕಾರವು ಗ್ರಾಮಾಂತರ ಮಟ್ಟದಲ್ಲಿ ಸಹಕಾರ ಸಂಘಗಳನ್ನು ಬಹುಸೇವಾ ಕೇಂದ್ರಗಳನ್ನಾಗಿ ಪರಿವರ್ತಿಸಲು ಪ್ರಾರಂಭಿಸಿರುವ PACS – as – MSC ಯೋಜನೆಯನ್ನು ಬ್ಯಾಂಕಿನಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗಿದೆ.
- ಬ್ಯಾಂಕಿನಲ್ಲಿ ತಂತ್ರಜ್ಞಾನದ ಭಾಗವಾಗಿ ಸಿ.ಬಿ.ಎಸ್. ಜೊತೆಗೆ ಡಿ.ಸಿ/ಡಿ.ಆರ್. ಗಳನ್ನು ಅಳವಡಿಸಿಕೊಂಡು UPI, IMPS, BBPS, AUA/KUA, NFS (Rupay-ATM), E-com, Pos-Issuer, RTGS, NEFT, CCIL-NDS-Call, CTS, NACH, ABPS, DBT ಸೌಲಭ್ಯಗಳಿಗೆ ಭಾರತೀಯ ರಿಸರ್ವ್ ಬ್ಯಾಂಕಿನಿಂದ ನೇರ ಸದಸ್ಯತ್ವವನ್ನು ಪಡೆದು, ಗ್ರಾಹಕರಿಗೆ QR Code, UPI (BHIM/Phonepay/Paytm/Googlepay/AmazonPay), IMPS, Mobile Banking, SMS Banking, BBPS, ATM, E-com, Pos, RTGS, NEFT, PFMS, CTR, STR, NTR, C-KYC, AML, CTS with DEM, 12 ATM's, 52 Micro ATM's ಗಳ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.
- ರಾಜ್ಯದ 16 ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಿಗೆ ನಮ್ಮ ಬ್ಯಾಂಕು ಪ್ರಾಯೋಜಿತ ಬ್ಯಾಂಕಾಗಿ RTGS, NEFT, APBS, NACH ಸೌಲಭ್ಯಗಳನ್ನು ಒದಗಿಸುತ್ತಿದೆ, ಇನ್ನುಳಿದ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಿಗೂ ಸಹ ಸದರಿ ಸೌಲಭ್ಯವನ್ನು ಒದಗಿಸುವ ಕಾರ್ಯವು ಪ್ರಗತಿಯಲ್ಲಿರುತ್ತದೆ, ಅಲ್ಲದೇ, 15 ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಿಗೆ ATM, POS, E-com ಸೌಲಭ್ಯಗಳನ್ನು ಸಹ ಒದಗಿಸಲಾಗುತ್ತಿದೆ.
- ಸಾಮಾಜಿಕ ಕಲ್ಯಾಣ ಯೋಜನೆಯಡಿಯಲ್ಲಿ ಕೇಂದ್ರ ಸರ್ಕಾರವು ಅನುಷ್ಠಾನಗೊಳಿಸಿರುವ ಪ್ರಧಾನ ಮಂತ್ರಿ ಜೀವನ ಜ್ಯೋತಿ ಬಿಮಾ ಯೋಜನೆ ಹಾಗೂ ಪ್ರಧಾನಮಂತ್ರಿ ಸುರಕ್ಷಾ ಬಿಮಾ ಯೋಜನೆಗಳ ಯಶಸ್ವಿ ನಿರ್ವಹಣೆ ಹಾಗೂ ತ್ವರಿತಗತಿಯಲ್ಲಿ ಸಂತ್ರಸ್ಥರಿಗೆ ವಿಮಾ ಮೊತ್ತಗಳನ್ನು ಇತ್ಯರ್ಥಗೊಳಿಸುವಲ್ಲಿ ಬ್ಯಾಂಕು ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಾ ಬಂದಿದೆ.
- 2024–25 ನೇ ಸಾಲಿನಲ್ಲಿ ಬ್ಯಾಂಕಿನ ಸ್ವಂತ ನಿಧಿಯನ್ನು ರೂ.2675.00 ಕೋಟಿಗಳಿಗೆ ತಲುಪಲು, ಠೇವಣಾತಿಗಳನ್ನು ರೂ.15500.00 ಕೋಟಿಗಳಿಗೆ ಹೆಚ್ಚಿಸಲು, ದುಡಿಯುವ ಬಂಡವಾಳವನ್ನು ರೂ.34160.00 ಕೋಟಿಗಳಿಗೆ ಹೆಚ್ಚಳಗೊಳಿಸಲು ಹಾಗೂ ರೂ.75.00 ಕೋಟಿಗಳಷ್ಟು ನಿವ್ವಳ ಲಾಭಾಂಶವನ್ನು ಹೊಂದಲು ಯೋಜನೆಯನ್ನು ಹಮ್ಮಿಕೊಂಡಿದ್ದು, ಈ ನಿಟ್ಟಿನಲ್ಲಿ ಕಾರ್ಯಯೋಜನೆಯನ್ನು ರೂಪಿಸಲಾಗಿದೆ.
- 2023–24 ನೇ ಸಾಲಿನಲ್ಲಿ ವಿತರಿಸಲಾದ ರೂ.22,077.02 ಕೋಟಿ ಕೆ.ಸಿ.ಸಿ ಅಲ್ಪಾವಧಿ ಕೃಷಿ ಸಾಲಗಳ ಪೈಕಿ, ನಬಾರ್ಡ್ ಪುನರ್ಧನ ರೂ.9,812.00 ಕೋಟಿಗಳ ಜೊತೆಗೆ ಅಪೆಕ್ಸ್ ಬ್ಯಾಂಕು ತನ್ನ ಸ್ವಂತ ಬಂಡವಾಳದಿಂದ ರೂ.2,443.65 ಕೋಟಿಗಳನ್ನು 28,60,442 ರೈತರಿಗೆ ಬಿಡುಗಡೆ ಮಾಡಲಾಗಿದೆ.
- 2024–25 ನೇ ಸಾಲಿನಲ್ಲಿ ಅಂದಾಜು 35,10,000 ರೈತರಿಗೆ ಒಟ್ಟು ರೂ.25,000.00 ಕೋಟಿಗಳಷ್ಟು ಅಲ್ಪಾವಧಿ ಕೃಷಿ ಸಾಲ ಹಾಗೂ 70,000 ರೈತರಿಗೆ ಒಟ್ಟು ರೂ.1,600.00 ಕೋಟಿಗಳ ಮಧ್ಯಮಾವಧಿ ಕೃಷಿ ಸಾಲವನ್ನು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಮೂಲಕ ಹಾಗೂ ಅಪೆಕ್ಸ್ ಬ್ಯಾಂಕಿನ ಶಾಖೆಗಳ ಮುಖಾಂತರ ರೂ.1,950.00 ಕೋಟಿಗಳಷ್ಟು ಕೃಷಿಯೇತರ ಸಾಲ ನೀಡುವ ಗುರಿ ಹೊಂದಲಾಗಿದೆ.
- ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಸಹಕಾರದೊಂದಿಗೆ ಅಪೆಕ್ಸ್ ಬ್ಯಾಂಕು ಮತ್ತು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳ ಸಹಯೋಗದೊಂದಿಗೆ ರಾಜ್ಯದ ಎಲ್ಲಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಗಣಕೀಕರಣಗೊಳಿಸುವ ಕಾರ್ಯವು ಪ್ರಗತಿಯಲ್ಲಿದೆ.
- ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗೆ ಮತ್ತು ಗ್ರಾಮೀಣ ರೈತರು ಹಾಗೂ ದುರ್ಬಲ ವರ್ಗದವರ ಸಾಮಾಜಿಕ ಮತ್ತು ಆರ್ಥಿಕ ಏಳಿಗೆಗಾಗಿ ಹಲವಾರು ನೂತನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿರುವ ರಾಜ್ಯದ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ. ಸಿದ್ದರಾಮಯ್ಯರವರಿಗೆ, ಕೇಂದ್ರ ಸರ್ಕಾರದ ಗೃಹ ಹಾಗೂ ಸಹಕಾರ ಇಲಾಖೆಯ ಸಚಿವರಾದ ಸನ್ಮಾನ್ಯ ಶ್ರೀ ಅಮಿತ್ ಶಾ ರವರಿಗೆ, ರಾಜ್ಯದ ಉಪಮುಖ್ಯಮಂತ್ರಿಗಳಾದ ಮಾನ್ಯ ಶ್ರೀ ಡಿ.ಕೆ.ಶಿವಕುಮಾರ್‌ರವರಿಗೆ, ಸಹಕಾರ ಸಚಿವರಾದ ಮಾನ್ಯ ಶ್ರೀ ಕೆ.ಎನ್.ರಾಜಣ್ಣರವರಿಗೆ ಹಾಗೂ ರಾಜ್ಯ ಸಚಿವ ಸಂಪುಟದ ಎಲ್ಲಾ ಸಚಿವರುಗಳಿಗೆ ವಂದನೆಗಳನ್ನು ಸಲ್ಲಿಸುತ್ತೇನೆ. ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ಡಾ. ಎಂ.ಎನ್. ಅಜಯ್ ನಾಗಭೂಷಣ್, ಭಾ.ಆ.ಸೇ. ರವರಿಗೆ, ಸಹಕಾರ ಸಂಘಗಳ ನಿಬಂಧಕರಾದ ಶ್ರೀ ಟಿ.ಹೆಚ್.ಎಂ.ಕುಮಾರ್, ಭಾ.ಆ.ಸೇ. ರವರಿಗೆ,



ನಬಾರ್ಡ್‌ನ ಮುಖ್ಯ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಕೆ.ವಿ.ಎಸ್. ಎಸ್.ಎಲ್.ವಿ. ಪ್ರಸಾದ್ ರಾವ್ ರವರಿಗೆ, ಭಾರತೀಯ ರಿಸರ್ವ್ ಬ್ಯಾಂಕಿಗೆ, ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕಿಗೆ, ರಾಜ್ಯ ಸಹಕಾರಿ ಬ್ಯಾಂಕುಗಳ ರಾಷ್ಟ್ರೀಯ ಒಕ್ಕೂಟಕ್ಕೆ, ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಿಗೆ ಹಾಗೂ ವಿವಿಧ ಸಹಕಾರ ಸಂಸ್ಥೆಗಳ ಆಡಳಿತ ಮಂಡಳಿಗಳಿಗೆ, ರಾಜ್ಯದ ರೈತ ಸಮುದಾಯಕ್ಕೆ, ಬ್ಯಾಂಕಿನ ಸಮಸ್ತ ಗ್ರಾಹಕರುಗಳಿಗೆ ಅವರುಗಳು ನೀಡುತ್ತಿರುವ ಬೆಂಬಲ, ಮಾರ್ಗದರ್ಶನ ಹಾಗೂ ಬ್ಯಾಂಕಿನ ಬಗ್ಗೆ ತೋರುತ್ತಿರುವ ಸದ್ಭಾವನೆಗಳಿಗೆ ನಾನು ಅಭಾರಿಯಾಗಿದ್ದೇನೆ.

- ಬ್ಯಾಂಕಿಂಗ್ ವ್ಯವಹಾರಗಳಲ್ಲಿ ಸಂಪೂರ್ಣ ಸಹಕಾರ ಮತ್ತು ಬೆಂಬಲವನ್ನು ನೀಡಿದ ಬ್ಯಾಂಕಿನ ಉಪಾಧ್ಯಕ್ಷರು ಹಾಗೂ ಆಡಳಿತ ಮಂಡಳಿಯ ಎಲ್ಲಾ ನಿರ್ದೇಶಕರುಗಳಿಗೆ, ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರಿಗೆ, ಬ್ಯಾಂಕಿನ ಎಲ್ಲಾ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರಿಗೆ ಹಾಗೂ ಬ್ಯಾಂಕಿನ 2023–24 ನೇ ಸಾಲಿನ ಲೆಕ್ಕಪರಿಶೋಧನಾ ಕಾರ್ಯ ನಿರ್ವಹಿಸಿದ ಮೆ॥ ರಾಮರಾಜ್ ಅಂಡ್ ಕಂಪೆನಿಯವರಿಗೆ ಈ ಸಂದರ್ಭದಲ್ಲಿ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

ಜೈ ಹಿಂದ್ – ಜೈ ಕರ್ನಾಟಕ – ಜೈ ಸಹಕಾರ

ಶ್ರೀ ಬೆಳ್ಳಿಪ್ರಕಾಶ್, ಅಧ್ಯಕ್ಷರು
ಕ.ರಾ.ಸ ಅಪೆಕ್ಸ್ ಬ್ಯಾಂಕ್ ಲಿಮಿಟೆಡ್

ಬ್ಯಾಂಕು 109 ವರ್ಷಗಳ ಸುದೀರ್ಘ ಸೇವೆಯನ್ನು ಪೂರೈಸಿ, ರಾಜ್ಯದ ರೈತರ ಅಭಿವೃದ್ಧಿಗಾಗಿ ವಿವಿಧ ಕೃಷಿ ಸಾಲಗಳನ್ನು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಮೂಲಕ ವಿತರಿಸುತ್ತಿದೆ.

ಸಿಸಿಬಿ ಪೊಲೀಸ್ ಠಾಣೆಯಲ್ಲಿ ನಾಲ್ವರ ವಿರುದ್ಧ ಪ್ರಕರಣ ದಾಖಲು; ಆರೋಪಿಗಳ ಪತ್ತೆಗೆ ಶೋಧ

ಅದೃಷ್ಟದ ಚೊಂಬಿನ ಕಥೆ ಹೆಣೆದು ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದ್ಯಮಿಯೊಬ್ಬರ ಕೋಟ್ಯಂತರ ಮೌಲ್ಯದ ಸ್ಥಿರಾಸ್ತಿಗಳನ್ನು ತಮ್ಮ ಹೆಸರಿಗೆ ಬರೆಸಿಕೊಂಡು ವಂಚಿಸಿದ್ದ ಆರೋಪದ ಅಡಿ ಮಹಿಳೆ ಸೇರಿದಂತೆ ನಾಲ್ವರ ವಿರುದ್ಧ ಸಿಸಿಬಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಆರೋಪಿಗಳ ಪತ್ತೆಗೆ ಪೊಲೀಸರು ಶೋಧ ಆರಂಭಿಸಿದ್ದಾರೆ.

ವಂಚನೆಗೆ ಒಳಗಾದ ಹೆಣ್ಣೂರು ಪ್ರಕೃತಿ ಲೇಔಟ್‌ನ ನಿವಾಸಿ ಕಾಂತರಾಜ್ ಅವರು ನೀಡಿದ ದೂರು ಆಧರಿಸಿ ಹಾಸನ ಜಿಲ್ಲೆ ಚನ್ನರಾಯಪಟ್ಟಣದ ನಾಗರತ್ನಾ, ಹೊಳೆನರಸೀಪುರದ ರಾಮಚಂದ್ರ, ಬೆಂಗಳೂರಿನ ಸುಕುಮಾರನ್, ನಟೇಶ್ ಅಲಿಯಾಸ್ ವೆಂಕಟರಾಮನ್ ವಿರುದ್ಧ ನಂಬಿಕೆ ದ್ರೋಹ, ಅಪರಾಧಿಕ ಒಳಸಂಚು ಆರೋಪದ ಅಡಿ ಪ್ರಕರಣ ದಾಖಲಾಗಿದೆ.

ಕಚ್ಚಾ ತೈಲ ಹಾಗೂ ರಿಫೈನರಿ ಘಟಕ ತೆರೆಯಲು ಕೇಂದ್ರ ಸರ್ಕಾರದಿಂದ ಅನುಮತಿ ಕೊಡಿಸುವುದಾಗಿ ನಂಬಿಸಿ ಬಳಿಕ 'ರೈಸ್ ಪುಲ್ಲಿಂಗ್' ಚೊಂಬು ವ್ಯವಹಾರದ ಕಥೆ ಹೆಣೆದು ಉದ್ಯಮಿಗೆ ವಂಚಿಸಲಾಗಿತ್ತು ಎಂದು ಸಿಸಿಬಿ ಪೊಲೀಸರು ಹೇಳಿದರು.

'ಕಾಂತರಾಜು ಅವರು ಕಚ್ಚಾ ತೈಲ ಹಾಗೂ ರಿಫೈನರಿ ಘಟಕ ತೆರೆಯಲು ಸಂಬಂಧಿಸಿದ ಇಲಾಖೆಗೆ ಪತ್ರ ಬರೆದಿದ್ದರು. ಆದರೂ ಅನುಮತಿ ಸಿಕ್ಕಿರಲಿಲ್ಲ. ಬೇರೊಂದು ಮಾರ್ಗದ ಮೂಲಕ ಅನುಮತಿ ಪಡೆಯಲು ಪ್ರಯತ್ನಿಸುತ್ತಿದ್ದರು. ಆಗ ಕನಕಪುರದ ಮನು ಹಾಗೂ ರಾಜಣ್ಣ ಅವರ ಪರಿಚಯವಾಗಿತ್ತು. ಅವರು ನಾಗರತ್ನಾ ಹಾಗೂ ರಾಮಚಂದ್ರ ಅವರನ್ನು ಪರಿಚಯಿಸಿದ್ದರು. ಈ ವೇಳೆ ನಾಗರತ್ನಾ ಅವರು ಚನ್ನರಾಯಪಟ್ಟಣದಲ್ಲಿ ನನ್ನದು ಪೆಟ್ರೋಲ್ ಬಂಕ್ ಇದ್ದು, ನನಗೆ ರಾಜಕಾರಣಿಗಳ ಪರಿಚಯ ಇದೆ. ಘಟಕ ತೆರೆಯಲು ಸರ್ಕಾರದಿಂದ ಅನುಮತಿ ಕೊಡಿಸುತ್ತೇನೆ ಎಂದು ಆಸೆ ಹುಟ್ಟಿಸಿದ್ದರು. ಅಲ್ಲದೇ ಅನುಮತಿಗೆ ದೊಡ್ಡ ಮೊತ್ತದ ಹಣದ ಅಗತ್ಯವಿದೆ. ನಿಮ್ಮ ಬಳಿ ಅಷ್ಟು ಹಣ ಹೊಂದಿಸುವುದು ಅಸಾಧ್ಯ. ನಮ್ಮ ಬಳಿ ಐದು 'ರೈಸ್ ಪುಲ್ಲಿಂಗ್' ಚೊಂಬುಗಳಿದ್ದು, ಅವುಗಳ ಮಾರಾಟದಿಂದ ದೊಡ್ಡ ಮೊತ್ತದ ಹಣ ಸಿಗುತ್ತದೆ ಎಂಬುದಾಗಿ ನಂಬಿಸಿದ್ದರು' ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

'ಹೋಟೆಲ್‌ವೊಂದಕ್ಕೆ ಕಾಂತರಾಜ್ ಅವರನ್ನು ನಟೇಶ್ ಹಾಗೂ ಸುಕುಮಾರ್ ಕರೆಸಿಕೊಂಡು ತಾವು ರೇಡಿಯಸ್ ಕಂಪನಿ ಸಿಇಒಗಳೆಂದು ಪರಿಚಯಿಸಿಕೊಂಡಿದ್ದರು. ಅಲ್ಲದೇ ರೈಸ್ ಪುಲ್ಲಿಂಗ್ ಚೊಂಬು ತೋರಿಸಿದ್ದರು. ರೈಸ್ ಪುಲ್ಲಿಂಗ್ ಚೊಂಬನ್ನು ನಾವೇ ಮಾರಾಟ ಮಾಡಿ ಹಣ ಕೊಡುತ್ತೇವೆ ಎಂದು ನಂಬಿಸಿದ್ದರು. ಅದುವರೆಗೂ ಸ್ಥಿರಾಸ್ತಿ ಬರೆದುಕೊಡುವಂತೆ ಹೇಳಿ ನಂಬಿಸಿದ್ದರು. ಕಾಂತರಾಜು ಅವರು ಆರೋಪಿಗಳ ಮಾತು ನಂಬಿ, ಕನಕಪುರ ತಾಲ್ಲೂಕಿನ ಅತ್ತಿಗುಪ್ಪೆ ಗ್ರಾಮದಲ್ಲಿ ತಮ್ಮ ಹೆಸರಿನಲ್ಲಿದ್ದ 4 ಎಕರೆ 18 ಗುಂಟೆ ಜಮೀನನ್ನು 2021ರ ಆಗಸ್ಟ್ 16ರಂದು ಸುಕುಮಾರ್ ಪತ್ನಿ ಸವಿತಾ ಹೆಸರಿಗೆ ವರ್ಗಾವಣೆ ಮಾಡಿದ್ದರು. ಆರೋಪಿಗಳು ಮೂರು ಚೆಕ್ ಮೂಲಕ ₹60 ಲಕ್ಷ ಕಾಂತರಾಜ್ ಅವರ ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡಿದ್ದರು. ನಂತರ, ಆಸ್ತಿ ವಾಪಸ್ ಬರೆದುಕೊಡುವುದಾಗಿ ಹೇಳಿ ಆ ಹಣವನ್ನು ವಾಪಸ್ ಪಡೆದಿದ್ದರು. ಅಲ್ಲದೇ ಮನೆಯನ್ನೂ ತಮ್ಮ ಹೆಸರಿಗೆ ಬರೆಸಿಕೊಂಡಿದ್ದರು' ಎಂದು ದೂರಿನಲ್ಲಿ ವಿವರಿಸಲಾಗಿದೆ.

ರೈಸ್ ಪುಲ್ಲಿಂಗ್ ಚೊಂಬು ಖರೀದಿಸಿರುವ ಕಂಪನಿಯಿಂದ ನಿಮ್ಮ ಮನೆಗೆ ₹100 ಕೋಟಿ ಹಾಗೂ ಬ್ಯಾಂಕ್ ಖಾತೆಗೆ ₹500 ಕೋಟಿ ಬರುತ್ತದೆ ಎಂದು ಹಂತ ಹಂತವಾಗಿ ರೈಸ್ ಪುಲ್ಲಿಂಗ್ ಹೆಸರಿನಲ್ಲಿ ವಂಚನೆ ನಡೆಸಿದ್ದಾರೆ ಎಂದು ಪೊಲೀಸರು ಹೇಳಿದರು.

ವಜ್ರ, ಚಿನ್ನದ ಆಭರಣ ಕದ್ದಿದ್ದ ಮನೆ ಕೆಲಸದಾಕೆಯ ಬಂಧನ

ಬೆಂಗಳೂರು: ಕೆಲಸ ಮಾಡುತ್ತಿದ್ದ ಮನೆಯಲ್ಲಿ ವಜ್ರ ಹಾಗೂ ಚಿನ್ನದ ಆಭರಣ ಕಳ್ಳತನ ಮಾಡಿದ್ದ ಮನೆ ಕೆಲಸದಾಕೆಯನ್ನು ವೈಟ್‌ಫೀಲ್ಡ್ ಠಾಣೆಯ ಪೊಲೀಸರು ಬಂಧಿಸಿದ್ದಾರೆ.


ಪಿಂಕಿ ದಾಸ್

ಬಿಹಾರದ ಪಿಂಕಿ ದಾಸ್ ಬಂಧಿತ ಆರೋಪಿ.

ಆರೋಪಿಯಿಂದ ₹53.50 ಲಕ್ಷ ಮೌಲ್ಯದ 13 ಗ್ರಾಂ ವಜ್ರ ಹಾಗೂ 570 ಗ್ರಾಂ ಚಿನ್ನದ ಆಭರಣ, 470 ಗ್ರಾಂ ಬೆಳ್ಳಿಯ ಸಾಮಗ್ರಿಗಳನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

'ಠಾಣಾ ವ್ಯಾಪ್ತಿಯ ವಿಲ್ಲಾವೊಂದರಲ್ಲಿ ಆರೋಪಿ ಮಹಿಳೆ ಕೆಲಸಕ್ಕಿದ್ದರು. ಆರು ತಿಂಗಳ ಹಿಂದೆ ಮನೆಯಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದರು. ಮನೆಯಲ್ಲಿದ್ದ ಕಪಾಟುವಿನಲ್ಲಿ ಚಿನ್ನ ಹಾಗೂ ವಜ್ರದ ಆಭರಣಗಳನ್ನು ಮಾಲೀಕರು ಇಟ್ಟಿದ್ದರು. ಅದನ್ನು ಗಮನಿಸಿದ್ದ ಆರೋಪಿ ಕಳ್ಳತನ ಮಾಡಿದ್ದಾನೆ' ಎಂದು ಪೊಲೀಸರು ಹೇಳಿದರು.

'ವಿಲ್ಲಾ ಮಾಲೀಕರು ಮನೆಯ ಕೆಲಸದಾಕೆಯ ಮೇಲೆ ಅನುಮಾನ ವ್ಯಕ್ತಪಡಿಸಿ, ದೂರು ನೀಡಿದ್ದರು. ದೂರು ಆಧರಿಸಿ ಗಾಂಧಿಪುರದ ಓಂಶಕ್ತಿ ದೇವಸ್ಥಾನ ಬಳಿಯ ಮನೆಯಲ್ಲಿದ್ದ ಪಿಂಕಿ ದಾಸ್ ಅವರನ್ನು ವಶಕ್ಕೆ ಪಡೆದು ಬಂಧಿಸಲಾಯಿತು. ಆಕೆ ಕಳ್ಳತನ ಮಾಡಿರುವುದಾಗಿ ತಪ್ಪೊಪ್ಪಿಕೊಂಡಿದ್ದಾರೆ. ಚಿನ್ನದ ಆಭರಣಗಳನ್ನು ಬಿಹಾರಕ್ಕೆ ಸಾಗಣೆ ಮಾಡಲು ಆರೋಪಿ ಯೋಜನೆ ರೂಪಿಸಿದ್ದರು. ಅಷ್ಟರಲ್ಲಿ ಬಂಧಿಸಲಾಯಿತು' ಎಂದು ಪೊಲೀಸರು ಹೇಳಿದರು.

ಚಿನ್ನಾಭರಣ ಕಳ್ಳತನ: ರಾತ್ರಿ ವೇಳೆ ಮನೆಗಳ ಬೀಗ ಮುರಿದು ಚಿನ್ನಾಭರಣ ಕಳ್ಳತನ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಹನುಮಂತನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಮಂಡ್ಯದ ರವಿ (27) ಹಾಗೂ ಮೈಸೂರಿನ ಅರುಣ್ (19) ಬಂಧಿತರು.

ಬಂಧಿತರಿಂದ ₹31.10 ಲಕ್ಷ ಮೌಲ್ಯದ 478 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ. ಅಲ್ಲದೇ ಆರೋಪಿಗಳ ಬಳಿ 200 ಗ್ರಾಂ ನಕಲಿ ಚಿನ್ನಾಭರಣ ಇತ್ತು. ಅದನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

'ಠಾಣಾ ವ್ಯಾಪ್ತಿಯ ಶ್ರೀನಗರದ ಮನೆಯೊಂದರಲ್ಲಿ ಇಬ್ಬರು ಆರೋಪಿಗಳು ಕಳ್ಳತನ ಮಾಡಿದ್ದರು. ಬೆಳಿಗ್ಗೆ ಮನೆ ಬಾಗಿಲು ಸ್ವಚ್ಛಗೊಳಿಸಿದ ಬಳಿಕ ಚಿಲಕವನ್ನು ಹಾಕಿರಲಿಲ್ಲ. ಚಿನ್ನದ ಸರವನ್ನು ಹಾಸಿಗೆ ಮೇಲೆ ಇಟ್ಟು ಮಾಲೀಕರು ಸ್ನಾನಕ್ಕೆ ತೆರಳಿದ್ದರು. ಅದೇ ಸಂದರ್ಭದಲ್ಲಿ ಮನೆಗೆ ನುಗ್ಗಿದ ಕಳ್ಳರು ಚಿನ್ನದ ಸರ ಕಳವು ಮಾಡಿಕೊಂಡು ಪರಾರಿಯಾಗಿದ್ದರು' ಎಂದು ಪೊಲೀಸರು ಹೇಳಿದರು.

'ಮೈಸೂರು ನಗರದ ವಿವಿಧ ಚಿನ್ನದ ಮಾರಾಟ ಅಂಗಡಿ ಹಾಗೂ ಹಣಕಾಸು ಸಂಸ್ಥೆಗಳಲ್ಲಿ ಅಡವಿಟ್ಟಿದ್ದ 236.27 ಗ್ರಾಂ ಚಿನ್ನಾಭರಣ ಹಾಗೂ ಮಂಡ್ಯದ ಚಿನ್ನ ಮಾರಾಟ ಅಂಗಡಿಗಳಲ್ಲಿ ಅಡವಿಟ್ಟಿದ್ದ 144 ಗ್ರಾಂ ಚಿನ್ನಾಭರಣ ಹಾಗೂ ಎರಡು ಕೈಗಡಿಯಾರಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ತಿಳಿಸಿದರು.

ಪ್ರೀತಿಗೆ ಅಡ್ಡಿ–ತಾಯಿ ಕೊಲೆ: ಪುತ್ರಿ, ಪ್ರಿಯಕರನ ಸೆರೆ

ಬೆಂಗಳೂರು: ಪ್ರೀತಿಗೆ ಅಡ್ಡಿ ಪಡಿಸಿದ ಕಾರಣಕ್ಕೆ ತಾಯಿಯನ್ನು ಕೊಲೆ ಮಾಡಿದ ಆರೋಪದಡಿ ಅವರ ಮಗಳು ಹಾಗೂ ಆಕೆಯ ಪ್ರಿಯಕರನನ್ನು ಬೊಮ್ಮನಹಳ್ಳಿ ಠಾಣೆ ಪೊಲೀಸರು ಶುಕ್ರವಾರ ರಾತ್ರಿ ಬಂಧಿಸಿದ್ದಾರೆ.

ಜಯಲಕ್ಷ್ಮಿ(47) ಕೊಲೆಯಾದವರು. ಬೊಮ್ಮನಹಳ್ಳಿ ಪೊಲೀಸ್ ಠಾಣೆಯಲ್ಲಿ ಈ ಸಂಬಂಧ ಪ್ರಕರಣ ದಾಖಲಾಗಿದೆ.

ಕೊಲೆ ಮಾಡಿದ ಆರೋಪದಡಿ ಹೊಂಗಸಂದ್ರದ ನಿವಾಸಿ, ವಿಜಯಲಕ್ಷ್ಮಿ ಅವರ ಮಗಳು ಪವಿತ್ರಾ(27) ಹಾಗೂ ಆಕೆಯ ಪ್ರಿಯಕರ ಲನೀಶ್(20) ಅವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

'ಜಯಲಕ್ಷ್ಮಿ ಅವರು ಹೊಂಗಸಂದ್ರದಲ್ಲಿ ನೆಲೆಸಿದ್ದರು. ದಿನಸಿ ಅಂಗಡಿ ನಡೆಸುತ್ತಿದ್ದರು. ಅವರ ತಮ್ಮ ಸುರೇಶ್ ಅವರಿಗೇ ಮಗಳನ್ನು ಕೊಟ್ಟು ಎರಡು ವರ್ಷಗಳ ಹಿಂದೆ ಮದುವೆ ಮಾಡಿದ್ದರು. ಸುರೇಶ್ ಅವರು ಅಂಗಡಿಗೆ ದಿನಸಿ ತಂದುಕೊಡುವ ಮೂಲಕ ಅತ್ತೆಗೆ ನೆರವಾಗುತ್ತಿದ್ದರು. ಕಳೆದ ಕೆಲವು ತಿಂಗಳಿಂದ ಪವಿತ್ರಾ ಅವರು ಲನೀಶ್ ಅವರನ್ನು ಪ್ರೀತಿಸುತ್ತಿದ್ದರು ಎನ್ನಲಾಗಿದೆ. ಇದೇ ವಿಷಯಕ್ಕೆ ದಂಪತಿ ಮಧ್ಯೆ ಭಿನ್ನಾಭಿಪ್ರಾಯ ಉಂಟಾಗಿತ್ತು. ತಾಯಿ ಸಹ ವಿರೋಧ ವ್ಯಕ್ತಪಡಿಸಿ ಪುತ್ರಿಗೆ ಬುದ್ಧಿಮಾತು ಹೇಳಿದ್ದರು. ಇದರಿಂದ ಪವಿತ್ರಾ ಕುಪಿತಗೊಂಡಿದ್ದರು' ಎಂದು ಪೊಲೀಸರು ಹೇಳಿದರು.

'ಪ್ರೀತಿಗೆ ಅಡ್ಡಿಪಡಿಸುತ್ತಿದ್ದಾರೆ ಎಂಬ ಕಾರಣಕ್ಕೆ ಪ್ರಿಯಕರನ ಜೊತೆಗೂಡಿ ತಾಯಿಯ ಕೊಲೆಗೆ ಸಂಚು ರೂಪಿಸಿದ್ದರು. ಹೊಂಗಸಂದ್ರದ ಮನೆಗೆ ಲನೀಶ್ ಅವರನ್ನು ಶುಕ್ರವಾರ ಮಧ್ಯಾಹ್ನ ಕರೆಸಿಕೊಂಡು ಕತ್ತು ಹಿಸುಕಿ ಕೊಲೆ ಮಾಡಿದ್ದಾರೆ ಎಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ. ಇಬ್ಬರನ್ನೂ ಬಂಧಿಸಿ, ವಿಚಾರಣೆ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

ಸುದ್ದಿ 2 ನಿಮಿಷ

ಪೋಕ್ಸೊ: ಶರಣರ ಅರ್ಜಿ ವಜಾ

ಬೆಂಗಳೂರು: 'ಇಬ್ಬರು ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಸಂತ್ರಸ್ತೆಯ ಹೇಳಿಕೆಯ ಭಾಗವನ್ನು ತೆಗೆದುಹಾಕಲು ನಿರ್ದೇಶಿಸಬೇಕು' ಎಂದು ಕೋರಿದ್ದ ಪ್ರಕರಣದ ಆರೋಪಿಯೂ ಆದ ಚಿತ್ರದುರ್ಗ ಮುರುಘಾಮಠದ ಪೀಠಾಧಿಪತಿ ಶಿವಮೂರ್ತಿ ಶರಣರ ಮನವಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಈ ಕುರಿತಂತೆ ಶಿವಮೂರ್ತಿ ಶರಣರು ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ತೀರ್ಪನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ಪ್ರಕಟಿಸಿತು. ತೀರ್ಪಿನ ವಿಸ್ತೃತ ಪ್ರತಿ ಇನ್ನಷ್ಟೇ ಲಭ್ಯವಾಗಬೇಕಿದೆ.

ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪಕ್ಕೆ ಸಂಬಂಧಿಸಿದಂತೆ ಸದ್ಯ ಚಿತ್ರದುರ್ಗ ಜೈಲಿನಲ್ಲಿ ನ್ಯಾಯಾಂಗ ಬಂಧನದಲ್ಲಿರುವ ಶಿವಮೂರ್ತಿ ಶರಣರ ವಿರುದ್ಧ ಭಾರತೀಯ ದಂಡ ಸಂಹಿತೆ–1860ರ ಕಲಂ 376 (2) (ಎನ್), 376 (3), 504 ಮತ್ತು ಪೋಕ್ಸೊ ಕಾಯ್ದೆ–2012ರ ಕಲಂ 5 (ಎಲ್) ಮತ್ತು 6ರ ಅಡಿಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿದ್ದು, ಈ ಕುರಿತಂತೆ ಚಿತ್ರದುರ್ಗ ಜಿಲ್ಲಾ ಎರಡನೇ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯದಲ್ಲಿ ಪ್ರಕರಣ ವಿಚಾರಣೆ ಹಂತದಲ್ಲಿದೆ.

40ಕ್ಕೂ ಹೆಚ್ಚು ಪ್ರತಿಭಟನಕಾರರ ಬಂಧನ



ಬೆಂಗಳೂರು: ನಾಗಮಂಗಲದಲ್ಲಿ ಗಣೇಶ ಮೂರ್ತಿ ವಿಸರ್ಜನಾ ಮೆರವಣಿಗೆ ವೇಳೆ ನಡೆದ ಗಲಭೆ ಖಂಡಿಸಿ ನಗರದ ಪುರಭವನದ ಎದುರು ಪ್ರತಿಭಟನೆ ನಡೆಸಲು ಯತ್ನಿಸಿದ ಬೆಂಗಳೂರು ಮಹಾನಗರ ಗಣೇಶ ಉತ್ಸವ ಸಮಿತಿ ಸದಸ್ಯರೂ ಸೇರಿದಂತೆ ವಿವಿಧ ಸಂಘಟನೆಗಳ 40ಕ್ಕೂ ಹೆಚ್ಚು ಪ್ರತಿಭಟನಕಾರರನ್ನು ಪೊಲೀಸರು ಬಂಧಿಸಿ, ಬಿಡುಗಡೆ ಮಾಡಿದರು.

'ನಾಗಮಂಗಲದಲ್ಲಿ ಬುಧವಾರ ಅಂಗಡಿ, ವಾಹನಗಳ ಮೇಲೆ ದಾಳಿ ನಡೆಸಿ ಕಲ್ಲು ತೂರಾಟ ನಡೆಸಿದ್ದವರ ವಿರುದ್ಧ ಕ್ರಮ ಕೈಗೊಳ್ಳಬೇಕು. ಆದರೆ, ಸರ್ಕಾರ ಅಮಾಯಕರನ್ನು ಬಂಧಿಸಿದೆ' ಎಂದು ಪ್ರತಿಭಟನಕಾರರು ಗಣೇಶ ಮೂರ್ತಿಯನ್ನು ಹಿಡಿದು ಆಕ್ರೋಶ ವ್ಯಕ್ತಪಡಿಸಿದರು.

'ಪ್ರತಿಭಟನೆಗೆ ಅವಕಾಶ ನೀಡಿರಲಿಲ್ಲ. ಪ್ರತಿಭಟನಕಾರರು ಪುರಭವನದ ಎದುರು ಬರುವುದಕ್ಕೂ ಮೊದಲೇ ವಶಕ್ಕೆ ಪಡೆದುಕೊಳ್ಳಲಾಯಿತು. ಡಿಸಿಪಿ ಶೇಖರ್ ನೇತೃತ್ವದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಘಟಿಕೋತ್ಸವಕ್ಕೆ ರಾಜ್ಯಪಾಲರ ಗೈರು

ಮಂಡ್ಯ: ನಗರದಲ್ಲಿ ಶುಕ್ರವಾರ ನಡೆದ ಮಂಡ್ಯ ವಿಶ್ವವಿದ್ಯಾಲಯದ ಘಟಿಕೋತ್ಸವಕ್ಕೆ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಗೈರಾಗಿರುವುದು ಜಿಲ್ಲೆಯಲ್ಲಿ ಚರ್ಚೆಗೆ ಗ್ರಾಸವಾಗಿದೆ.

ಜೂಜಿಗಾಗಿ ಅಣ್ಣನ ಮದುವೆಗಿಟ್ಟಿದ್ದ ಚಿನ್ನ ಕಳವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆನ್‌ಲೈನ್ ಬೆಟ್ಟಿಂಗ್‌ಗೆ ಹಣ ಹೊಂದಿಸಲು ಅಣ್ಣನ ಮದುವೆಗೆ ತಂದಿಟ್ಟಿದ್ದ ಚಿನ್ನಾಭರಣ, ನಗದು ಕದ್ದ ತಮ್ಮನನ್ನು ಬೊಮ್ಮನಹಳ್ಳಿ ಠಾಣೆ ಪೊಲೀಸರು ಬಂಧಿಸಿ, ₹ 7 ಲಕ್ಷ ಮೌಲ್ಯದ ಚಿನ್ನಾಭರಣ ವಶಪಡಿಸಿಕೊಂಡಿದ್ದಾರೆ

ಕ್ಯಾಬ್ ಚಾಲಕ ಆದಿತ್ಯ ರೆಡ್ಡಿ (22) ಬಂಧಿತ ಆರೋಪಿ. ಈತನಿಂದ 107 ಗ್ರಾಂ. ಚಿನ್ನಾಭರಣ, 100 ಗ್ರಾಂ. ತೂಕದ ದೇವಿಯ ಬೆಳ್ಳಿಯ ಮುಖವಾಡ ವಶಕ್ಕೆ ಪಡೆಯಲಾಗಿದೆ.

ಆದಿತ್ಯ ರೆಡ್ಡಿ ಆನ್‌ಲೈನ್ ರಮ್ಮಿ ಆಟದ ಚಟಕ್ಕೆ ಬಿದ್ದು ಬೃಹತ್ ಮೊತ್ತದ ಸಾಲ ಮಾಡಿಕೊಂಡಿದ್ದ. ಹಣ ಹೊಂದಿಸಲು ಸಾಧ್ಯವಾಗದಿದ್ದಾಗ ಕಳ್ಳತನಕ್ಕೆ ಸಂಚು ರೂಪಿಸಿದ್ದ. ಆರೋಪಿಯ ಅಣ್ಣನ ಮದುವೆ ನಿಶ್ಚಯವಾಗಿದ್ದರಿಂದ ಪೋಷಕರು ಮನೆಯಲ್ಲಿ ಚಿನ್ನಾಭರಣ, ನಗದು ಒಗ್ಗೂಡಿಸಿಟ್ಟಿದ್ದರು.

ಆಗಸ್ಟ್ 28ರಂದು ಆರೋಪಿಯ ಪೋಷಕರು ಲಗ್ನಪತ್ರಿಕೆಗಳನ್ನು ನೀಡಲು ಕೋಲಾರಕ್ಕೆ ತೆರಳಿದ್ದರು. ಅಣ್ಣ ಸಹ ಹೊರಗೆ ಹೋಗಿದ್ದರು. ಆಗ ಮನೆಯ ಲಾಕರ್ ಒಡೆದಿದ್ದ ಆರೋಪಿ, ಚಿನ್ನಾಭರಣ ಹಾಗೂ ₹45 ಸಾವಿರ ನಗದು ದೋಚಿಕೊಂಡು ಪರಾರಿಯಾಗಿದ್ದ. ಮನೆಗೆ ಬಂದ ಬಳಿಕ ಕಳ್ಳತನವಾಗಿರುವುದನ್ನು ಗಮನಿಸಿ, ಕಿರಿಯ ಮಗನ ಬಗ್ಗೆ ಪೋಷಕರು ಅನುಮಾನ ವ್ಯಕ್ತಪಡಿಸಿ ದೂರು ನೀಡಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

'ಕದ್ದ ಚಿನ್ನಾಭರಣವನ್ನು ಮಾರಾಟ ಮಾಡಲು ಆಂಧ್ರಪ್ರದೇಶಕ್ಕೆ ಹೊರಟಿದ್ದ ಆರೋಪಿಯನ್ನು ಯಲಹಂಕ ರೈಲು ನಿಲ್ದಾಣದ ಬಳಿ ಬಂಧಿಸಲಾಯಿತು. ಸಾಲ ತೀರಿಸಲು ಹಣದ ಅಗತ್ಯವಿತ್ತು. ಹಾಗಾಗಿ ಮನೆಯಲ್ಲಿಯೇ ಕಳ್ಳತನ ಮಾಡಿದೆ ಎಂದು ವಿಚಾರಣೆ ವೇಳೆ ತಪ್ಪೊಪ್ಪಿಕೊಂಡಿದ್ದು, ಆತನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ಮೊಬೈಲ್ ಸುಲಿಗೆಕೋರರಿಬ್ಬರ ಬಂಧನ

ಬೆಂಗಳೂರು: ಪಾದಚಾರಿಗಳು ಹಾಗೂ ದ್ವಿಚಕ್ರ ವಾಹನಗಳಲ್ಲಿ ತೆರಳುತ್ತಿದ್ದವರನ್ನು ರಸ್ತೆಯಲ್ಲಿ ಅಡ್ಡಗಟ್ಟಿ ಮೊಬೈಲ್ ಸುಲಿಗೆ ಮಾಡಿ ಪರಾರಿ ಆಗುತ್ತಿದ್ದ ಇಬ್ಬರು ಆರೋಪಿಗಳನ್ನು ಕಾಮಾಕ್ಷಿಪಾಳ್ಯ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಹಾರೋಹಳ್ಳಿಯ ಬನ್ನಿಕೊಪ್ಪ ಕೈಗಾರಿಕಾ ಪ್ರದೇಶದ ನಿವಾಸಿ ಚೇತನ್ ಅಲಿಯಾಸ್ ಚಿಟ್ಟೆ(23), ಸುಂಕದಕಟ್ಟೆ ಶ್ರೀನಿವಾಸನಗರದ ಪೈಪ್‌ಲೈನ್ ರಸ್ತೆಯ ನಿವಾಸಿ ನವೀನ್‌ಕುಮಾರ್ ಅಲಿಯಾಸ್ ಅಪ್ಪು(20) ಬಂಧಿತರು.

'ಬಂಧಿತರಿಂದ ₹1.70 ಲಕ್ಷ ಮೌಲ್ಯದ ವಿವಿಧ ಕಂಪನಿಯ 17 ಮೊಬೈಲ್ ಫೋನ್ ಹಾಗೂ ಕೃತ್ಯಕ್ಕೆ ಬಳಸಿದ ಒಂದು ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ರಾಜಾಜಿನಗರದ ಗಜಾನನ ಪಿ.ಜಿ. ಸರ್ವೀಸ್ ರಸ್ತೆಯ ನಿವಾಸಿ ವಿಷ್ಣುವರ್ಧನ್ ಅವರು ಕೆಲಸ ಮುಗಿಸಿಕೊಂಡು ಪಿ.ಜಿಗೆ ತೆರಳುತ್ತಿದ್ದರು. ಸುಂಕದಕಟ್ಟೆಯ ವೈಲ್ಡ್‌ಕ್ರಾಫ್ಟ್ ಕಂಪನಿ ಮಳಿಗೆ ಎದುರು ಮೊಬೈಲ್‌ನಲ್ಲಿ ಮಾತನಾಡುತ್ತಾ ನಡೆದು ತೆರಳುತ್ತಿದ್ದರು. ಅದೇ ವೇಳೆ ಬೈಕ್‌ನಲ್ಲಿ ಬಂದ ಇಬ್ಬರು ಆರೋಪಿಗಳು, ಮೊಬೈಲ್ ಕಸಿದುಕೊಂಡು ಪರಾರಿ ಆಗಿದ್ದರು. ಅವರು ನೀಡಿದ ದೂರು ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಆರೋಪಿಗಳು ಮೊಬೈಲ್ ಸುಲಿಗೆ ಮಾಡುವುದನ್ನೇ ದಂಧೆ ಮಾಡಿಕೊಂಡಿದ್ದರು. ಇಬ್ಬರ ಬಂಧನದಿಂದ ಕಾಮಾಕ್ಷಿಪಾಳ್ಯದಲ್ಲಿ ಎರಡು ಹಾಗೂ ಗೋವಿಂದರಾಜನಗರದಲ್ಲಿ ಒಂದು ಮೊಬೈಲ್ ಕಳ್ಳತನ ಪ್ರಕರಣ ಪತ್ತೆಯಾಗಿದೆ' ಎಂದು ಪೊಲೀಸರು ಹೇಳಿದರು.

ಇ–ಸಿಗರೇಟ್ ಮಾರಾಟ: ನಾಲ್ವರ ಸೆರೆ

ಅಪರಾಧ ಸುದ್ದಿ

ಬೆಂಗಳೂರು: ನಿಷೇಧಿತ ಇ–ಸಿಗರೇಟ್ ಮಾರಾಟ ಮಾಡುತ್ತಿದ್ದ ನಾಲ್ವರು ಆರೋಪಿಗಳನ್ನು ಜೆ.ಜೆ. ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಅಂಗಡಿ ಮಾಲೀಕ ಮೊಹಮ್ಮದ್ ಮಜರ್(38), ಮೈಸೂರು ರಸ್ತೆಯ ಶಾಮಣ್ಣ ಗಾರ್ಡನ್‌ನ ಮೂರನೇ ಕ್ರಾಸ್ ನಿವಾಸಿ ಮುಜೀಬ್‌-ಉರ್ ರೆಹಮಾನ್(21), ಶಾಮಣ್ಣ ಗಾರ್ಡನ್‌ನ ಒಂಬತ್ತನೇ ಮುಖ್ಯರಸ್ತೆಯ ನಿವಾಸಿ ಉಮೇಜ್ ಖಾನ್(20) ಹಾಗೂ ವಿಲ್ಸನ್ ಗಾರ್ಡನ್ ಒಂಬತ್ತನೇ ಕ್ರಾಸ್ ನಿವಾಸಿ ಮೊಹಮ್ಮದ್ ಜವಾದ್ ಉಲ್ಲಾ(53) ಬಂಧಿತರು.

'ಪಾದರಾಯನಪುರದ 11ನೇ ಕ್ರಾಸ್‌ನ ಅರ್ಬನ್ ಕ್ಲಾತಿಂಗ್ ಕಟ್ಟಡದ ಪಕ್ಕದ ಮಳಿಗೆಯಲ್ಲಿ ಮೊಹಮ್ಮದ್ ಮಜರ್ ಸೇರಿದಂತೆ ನಾಲ್ವರು ಆರೋಪಿಗಳು, ಕೇಂದ್ರ ಸರ್ಕಾರ ನಿಷೇಧಿಸಿರುವ ಇ–ಸಿಗರೇಟ್ ಮಾರಾಟ ಮಾಡುತ್ತಿದ್ದಾರೆ ಎಂಬ ಖಚಿತ ಮಾಹಿತಿ ಲಭಿಸಿತ್ತು. ಮಾಹಿತಿ ಆಧರಿಸಿ ಕಾರ್ಯಾಚರಣೆ ನಡೆಸಿ, ₹1.50 ಲಕ್ಷ ಮೌಲ್ಯದ 106 ಇ–ಸಿಗರೇಟ್, ಎರಡು ಚಾರ್ಜರ್ ಹಾಗೂ 12 ಪುನರ್ ತುಂಬುವ ಸಾಧನಗಳನ್ನು (ರಿಫಿಲ್ಸ್) ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಇ–ಸಿಗರೇಟ್ ಆರೋಗ್ಯಕ್ಕೆ ಮಾರಕ ಎಂದು ಕೇಂದ್ರ ಸರ್ಕಾರವು ಹಿಂದೆಯೇ ನಿಷೇಧ ಮಾಡಿತ್ತು. ಆದರೂ, ಆರೋಪಿಗಳು ಹೊರ ರಾಜ್ಯದಿಂದ ಇ–ಸಿಗರೇಟ್ ತಂದು ಮಾರಾಟ ಮಾಡುತ್ತಿದ್ದರು. ಕಾಲೇಜು ವಿದ್ಯಾರ್ಥಿಗಳು, ಪಿ.ಜಿ ನಿವಾಸಿಗಳು ಹಾಗೂ ಪಾರ್ಟಿ ನಡೆಯುತ್ತಿದ್ದ ಸ್ಥಳಕ್ಕೆ ಇ–ಸಿಗರೇಟ್ ಪೂರೈಸಿ ಅಕ್ರಮವಾಗಿ ಹಣ ಸಂಪಾದನೆ ಮಾಡುತ್ತಿದ್ದರು' ಎಂದು ಪೊಲೀಸರು ತಿಳಿಸಿದರು.



ದೀಪಾಲಂಕಾರ

ಭಾನುವಾರ ನಡೆಯಲಿರುವ ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನದ ಅಂಗವಾಗಿ ಶುಕ್ರವಾರ ರಾತ್ರಿ ವಿದ್ಯುತ್ ದೀಪಗಳಿಂದ ಅಲಂಕೃತಗೊಂಡು ಕಂಗೊಳಿಸಿದ ವಿಧಾನಸೌಧ
ಪ್ರಜಾವಾಣಿ ಚಿತ್ರ:ಎಸ್.ಕೆ. ದಿನೇಶ್

ಆರ್‌ಎಂವಿ ಬಡಾವಣೆ ವ್ಯಾಪ್ತಿಯಲ್ಲಿ ಇಂದು ವಿದ್ಯುತ್ ವ್ಯತ್ಯಯ

ಪ್ರಜಾವಾಣಿ ವಾರ್ತೆ



ಬೆಂಗಳೂರು: ನಗರದ ಆರ್‌ಎಂವಿ ಬಡಾವಣೆಯ ವಿದ್ಯುತ್ ಉಪ ಕೇಂದ್ರದಲ್ಲಿ ಅರ್ಧ ವಾರ್ಷಿಕ ನಿರ್ವಹಣಾ ಕಾಮಗಾರಿ ನಡೆಯುತ್ತಿರುವ ಕಾರಣದಿಂದ ಶನಿವಾರ ಬೆಳಿಗ್ಗೆ 10 ರಿಂದ ಸಂಜೆ 5 ಗಂಟೆವರೆಗೆ ಉಪ ಕೇಂದ್ರದ ವ್ಯಾಪ್ತಿಯ ಪ್ರದೇಶಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ತಿಳಿಸಿದೆ.

ವಿದ್ಯುತ್ ವ್ಯತ್ಯಯವಾಗುವ ಸ್ಥಳಗಳು: ರಾಮಯ್ಯ ಆಸ್ಪತ್ರೆ, ಪೈಪ್ ಲೈನ್ ರಸ್ತೆ, ಎ.ಜಿ.ಎಸ್. ಲೇಔಟ್, ಸದಾಶಿವ ನಗರ ಪೊಲೀಸ್ ಠಾಣೆ, ಎಲ್.ಜಿ.ಹಳ್ಳಿ, ಆರ್.ಎಂ.ವಿ ಎರಡನೇ ಹಂತ, ಬಿ.ಇ.ಎಲ್ ರಸ್ತೆ, ಎಂ.ಎಸ್.ಆರ್ ನಗರ, ಜಲದರ್ಶಿನಿ ಲೇಔಟ್, ರಾಮಯ್ಯ ಬಾಯ್ಸ್ ಹಾಸ್ಟೆಲ್, ಎ.ಕೆ.ಕಾಲೊನಿ, ಕಾಫಿ ಡೇ, ಪಿಜ್ಜಾ ಹಟ್, ಸೀನಪ್ಪ ಲೇಔಟ್, ಇಸ್ರೊ, ಡಾಲರ್ಸ್ ಕಾಲೊನಿ, ಚಿಕ್ಕಮಾರನಹಳ್ಳಿ, ಗೌರಿ ಅಪಾರ್ಟ್‌ಮೆಂಟ್, ಎನ್.ಎಸ್.ಹಳ್ಳಿ, ಯಜಮಾನಪ್ಪ ಲೇಔಟ್, ಯು.ಎ.ಎಸ್ ಲೇಔಟ್, ಎನ್‌ಟಿಐ ಲೇಔಟ್, ವಿನಾಯಕ ಲೇಔಟ್, ಟೀಚರ್ಸ್ ಕಾಲೊನಿ, ವಿಎಸ್‌ಎನ್‌ಎಲ್, ಪೋಸ್ಟಲ್ ಲೇಔಟ್, ಜಡ್ಜಸ್ ಲೇಔಟ್, ಎನ್‌ಜಿಇಎಫ್ ಲೇಔಟ್, ಅಮರಜ್ಯೋತಿ ಲೇಔಟ್, ಹನುಮಯ್ಯ ಲೇಔಟ್, ಕೊಲ್ಲೆಪಾಟೀಲ್ ದೊಡ್ಮನೆ, ಬಸವಲ್ಲಾಸ್ ಮುಖ್ಯರಸ್ತೆ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

ನಿಧನ ವಾರ್ತೆ

ಎಚ್.ಎಸ್. ರಾಮಾನುಜ



ಬೆಂಗಳೂರು: ರಾಜಾಜಿನಗರ ಮೂರನೇ ಬ್ಲಾಕ್ ನಿವಾಸಿ ಎಚ್.ಎಸ್. ರಾಮಾನುಜ (64) ಹೃದಯಾಘಾತದಿಂದ ಶುಕ್ರವಾರ ನಿಧನರಾದರು.

ಅವರಿಗೆ ಪತ್ನಿ, ಇಬ್ಬರು ಪುತ್ರರು ಇದ್ದಾರೆ. ಮೃತರ ಅಂತ್ಯಕ್ರಿಯೆ ಶನಿವಾರ ಬೆಳಿಗ್ಗೆ 9.30ಕ್ಕೆ ಶ್ರೀರಾಮಪುರದ ಹರಿಶ್ಚಂದ್ರ ಘಾಟ್ ಚಿತಾಗಾರದಲ್ಲಿ ನಡೆಯಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ರಾಮಾನುಜ ಅವರು ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್ ಉದ್ಯೋಗಿಯಾಗಿ, ನಿವೃತ್ತರಾಗಿದ್ದರು.

'ಜ್ಯಾಕ್ ಫ್ರೂಟ್ 24' ಸಮ್ಮೇಳನ 20ರಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭೂಮಿಜಾ' ವತಿಯಿಂದ ಇಂಡಿಯನ್ ಮ್ಯೂಸಿಕ್ ಎಕ್ಸ್‌ಪೀರಿಯನ್ಸ್ ಮ್ಯೂಸಿಯಂ ಸಹಯೋಗದಲ್ಲಿ 'ಜ್ಯಾಕ್ ಫ್ರೂಟ್ 24' ಮಕ್ಕಳ ಸಂಗೀತ ಮೇಳದ ಆರನೇ ಆವೃತ್ತಿಗೆ ಜೆ.ಪಿ.ನಗರದ ಎಂಎಲ್‌ಆರ್ ಕನ್ವೆನ್ಷನ್ ಸೆಂಟರ್ ಮತ್ತು ಭಾರತೀಯ ಸಂಗೀತ ಅನುಭವ ವಸ್ತುಸಂಗ್ರಹಾಲಯ ತಯಾರಾಗಿದೆ. ಸೆಪ್ಟೆಂಬರ್ 20, 21 ಮತ್ತು 22ರಂದು ಈ ಸಂಗೀತ ಉತ್ಸವ ನಡೆಯಲಿದೆ.

ಗಾಯಕಿ ಶುಭಾ ಮುದ್ಗಲ್ ಸಂಗೀತ ಉತ್ಸವದ ನಿರ್ದೇಶಕರಾಗಿದ್ದಾರೆ. ದಾನಿ ಅರುಂಧತಿ ಮೂರ್ತಿ ಉತ್ಸವಕ್ಕೆ ಪ್ರೋತ್ಸಾಹಕರಾಗಿದ್ದಾರೆ.

ಉದ್ಘಾಟನಾ ಕಾರ್ಯಕ್ರಮದ ವಿಶೇಷವಾಗಿ ಸೆ.20ರಂದು ಸಂಜೆ 6ಕ್ಕೆ ಸೃಷ್ಟಿ ವಿಶೇಷ ಅಕಾಡೆಮಿಯ ಅಂಗವಿಕಲ ಮಕ್ಕಳು 'ಸನ್ನಿ ಸಿಂಫನಿ' ಎಂಬ ಸಂಗೀತ ಕಛೇರಿ ನಡೆಸಿಕೊಡಲಿದ್ದಾರೆ. ಗಾಯಕಿ ಎಂ.ಡಿ. ಪಲ್ಲವಿ ಅವರೊಂದಿಗೆ ಮಕ್ಕಳು ಜನಪ್ರಿಯ ಕನ್ನಡ ಹಾಡುಗಳನ್ನು ಪ್ರಸ್ತುತಪಡಿಸಲಿದ್ದಾರೆ. ಉದ್ಘಾಟನಾ ಗೋಷ್ಠಿಯ ನಿರ್ದೇಶಕಿ ಮತ್ತು ಸಂಚಾಲಕಿಯೂ ಆಗಿರುವ ಎಂ.ಡಿ. ಪಲ್ಲವಿ ಅವರು ಅನುಭವ ಹಂಚಿಕೊಳ್ಳಲಿದ್ದಾರೆ ಎಂದು ಸಂಘಟಕರು ತಿಳಿಸಿದ್ದಾರೆ.

ಆಟೊ, 4 ದ್ವಿಚಕ್ರ ವಾಹನ ಭಸ್ಮ

ಪ್ರಜಾವಾಣಿ ವಾರ್ತೆ


ಬೆಂಗಳೂರು: ಎಲ್‌ಪಿಜಿ ಸಿಲಿಂಡರ್‌ಗೆ ಆಕಸ್ಮಿಕವಾಗಿ ಬೆಂಕಿ ಹೊತ್ತಿಕೊಂಡ ಪರಿಣಾಮ ಒಂದು ಆಟೊ ಹಾಗೂ ನಾಲ್ಕು ದ್ವಿಚಕ್ರ ವಾಹನಗಳು ಸುಟ್ಟು ಹೋಗಿರುವ ಘಟನೆ ಗುರುವಾರ ರಾತ್ರಿ ಈಜಿಪುರದಲ್ಲಿ ನಡೆದಿದೆ.

ರಸ್ತೆ ಪಕ್ಕದಲ್ಲಿದ್ದ ಕಟ್ಟಡದಲ್ಲಿನ ಬಿರಿಯಾನಿ ಹೋಟೆಲ್‌ನಲ್ಲಿ ಕಬಾಬ್ ತಯಾರಿಸುವ ವೇಳೆ ಸಿಲಿಂಡರ್ ಖಾಲಿ ಆಗಿದೆ. ಆಗ ಮಾಲೀಕ ಸಿಲಿಂಡರ್ ಬದಲಿಸುವ ವೇಳೆ ಆಕಸ್ಮಿಕವಾಗಿ ಬೆಂಕಿ ತಗುಲಿದೆ. ಗಾಬರಿಗೊಂಡು ಸಿಲಿಂಡರ್ ಅನ್ನು ರಸ್ತೆಗೆ ಬಿಸಾಡಿದ್ದಾರೆ. ಅದು ಅಲ್ಲಿಯೇ ನಿಂತಿದ್ದ ಆಟೊ ಒಳಗೆ ಬಿದ್ದಿದ್ದರಿಂದ ಬೆಂಕಿ ಹೊತ್ತಿಕೊಂಡಿತು. ಅಗ್ನಿಯ ಜ್ವಾಲೆ ಹೆಚ್ಚಾಗುತ್ತಲೇ ಅಕ್ಕಪಕ್ಕದ ನಾಲ್ಕು ದ್ವಿಚಕ್ರ ವಾಹನಗಳಿಗೂ ಬೆಂಕಿ ತಗುಲಿದೆ. ಐದು ವಾಹನಗಳು ಸಂಪೂರ್ಣ ಸುಟ್ಟು ಹೋಗಿವೆ.

ಪಕ್ಕದಲ್ಲಿಯೇ ಇದ್ದ ವಿದ್ಯುತ್ ಕಂಬಕ್ಕೆ ಬೆಂಕಿ ತಗುಲಿದ ಕಾರಣ ತಂತಿಗಳು ಸುಟ್ಟು ಹೋಗಿವೆ. ಘಟನೆಯಿಂದಾಗಿ ಸುಮಾರು ₹ 2.5 ಲಕ್ಷ ನಷ್ಟವಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸ್ಥಳೀಯರು ಹಾಗೂ ಅಂಗಡಿ ಸಿಬ್ಬಂದಿ ನೀರು ಸುರಿದು ಬೆಂಕಿ ನಂದಿಸಲು ಪ್ರಯತ್ನಿಸಿದರು. ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಬಂದು ಸುಮಾರು ಒಂದು ತಾಸು ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದರು.

ವಿವೇಕನಗರ ಪೊಲೀಸರು ಕಟ್ಟಡದ ಮಾಲೀಕ ಹಾಗೂ ಬಿರಿಯಾನಿ ಹೋಟೆಲ್ ನಡೆಸುತ್ತಿದ್ದ ಮಾಲೀಕನ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.



ಎಸ್‌ಜೆ.ಬಿ ಸಂಸ್ಥೆಯ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

620 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

ಪ್ರಜಾವಾಣಿ ವಾರ್ತೆ

ಕೆಂಗೇರಿ: ಎಸ್.ಜೆ.ಬಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ 500 ವಿದ್ಯಾರ್ಥಿಗಳು ಹಾಗೂ ಎಸ್.ಜೆ.ಬಿ. ಸ್ಕೂಲ್ ಆಫ್ ಆರ್ಕಿಟೆಕ್ಚರ್ ಸಂಸ್ಥೆಯ 120 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ಸಂಸ್ಥೆಯ ಆಡಿಟೋರಿಯಂನಲ್ಲಿ ಶುಕ್ರವಾರ ನಡೆದ ಎರಡೂ ಶಿಕ್ಷಣ ಸಂಸ್ಥೆಗಳ 7 ನೇ ಘಟಿಕೋತ್ಸವದಲ್ಲಿ ಪದವಿ ಪ್ರದಾನ ಮಾಡಿ ಮಾತನಾಡಿದ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ(ಎಐಸಿಟಿಇ) ಚೇರ್ಮನ್ ಡಾ.ಟಿ.ಜಿ. ಸೀತಾರಾಮ್, 'ಕೌಶಲ ಎಂಬುದು ಉದ್ಯೋಗಾವಕಾಶ ಒದಗಿಸುವ ಕೀಲಿ ಕೈ. ತಂತ್ರಜ್ಞಾನದೊಂದಿಗೆ ಕೌಶಲವನ್ನು ಬೆಳೆಸಿಕೊಂಡರೆ ಅವಕಾಶಗಳು ತೆರೆದುಕೊಳ್ಳುತ್ತವೆ' ಎಂದು ಅಭಿಪ್ರಾಯಪಟ್ಟರು.

ಆದಿ ಚುಂಚುನಗಿರಿ ಮಠದ ಪೀಠಾಧಿಪತಿ ನಿರ್ಮಲಾನಂದ ಸ್ವಾಮೀಜಿ ಮಾತನಾಡಿ, 'ಮೂರ್ನಾಲ್ಕು ದಶಕಗಳ ಹಿಂದೆ ಭಾರತದಲ್ಲಿ ಎಂಜಿನಿಯರ್‌ಗಳ ಕೊರತೆ ಇತ್ತು. ಬದಲಾದ ಕಾಲಮಾನದಲ್ಲಿ ಭಾರತವು ಪ್ರಪಂಚಕ್ಕೆ ಹೆಚ್ಚು ಎಂಜಿನಿಯರ್‌ಗಳನ್ನು ನೀಡಿದ ಹೆಗ್ಗಳಿಕೆಗೆ ಪಾತ್ರವಾಗಿದೆ' ಎಂದರು.

ಬಿಜಿಎಸ್ ಮತ್ತು ಎಸ್.ಜೆ.ಬಿ ಸಮೂಹ ಸಂಸ್ಥೆಗಳ ವ್ಯವಸ್ಥಾಪಕ ನಿರ್ದೇಶಕ ಪ್ರಕಾಶನಾಥ ಸ್ವಾಮೀಜಿ ಮಾತನಾಡಿದರು.

ಇಸಿಇ ವಿಭಾಗದ ಜಿ.ರೇಷ್ಮಾ, ಮೆಕಾನಿಕಲ್ ಎಂಜಿನಿಯರ್ ವಿಭಾಗದ ಎಲ್. ಮೋಹನ್ ಕುಮಾರ್ ತಲಾ ಏಳು ಚಿನ್ನದ ಪದಕಗಳು ಮತ್ತು ನಗದು ಬಹುಮಾನ ಪಡೆದುಕೊಂಡರು.

ವರ್ಷದಲ್ಲಿ 'ಮನೆಗೊಂದು ಉದ್ಯೋಗ' ನೀಡಲು ಬದ್ಧ: ಸಚಿವ ಕೆ.ಎಚ್.ಮುನಿಯಪ್ಪ

ಉದ್ಯೋಗ ಮೇಳ: 1,097 ಮಂದಿ ನೇರ ನೇಮಕ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಇಲ್ಲಿನ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ಶುಕ್ರವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಕೌಶಲ ಮಿಷನ್, ಜಿಲ್ಲಾ ಕೈಗಾರಿಕೆ ಕೇಂದ್ರ ಸಹಯೋಗದಲ್ಲಿ ನಡೆದ ಜಿಲ್ಲಾಮಟ್ಟದ ಉದ್ಯೋಗ ಮೇಳದಲ್ಲಿ 1,097 ಅಭ್ಯರ್ಥಿಗಳಿಗೆ ನೇರ ನೇಮಕಾತಿ ಪತ್ರ ವಿತರಣೆ ಮಾಡಲಾಯಿತು.

ಮೇಳದಲ್ಲಿ 163 ಕಂಪನಿಗಳು ಹಾಗೂ 12,000 ಆಕಾಂಕ್ಷಿಗಳು ಭಾಗ ವಹಿಸಿದ್ದರು. ಇದರಲ್ಲಿ 1,097 ಅಭ್ಯರ್ಥಿಗಳು ನೇರ ನೇಮಕಾತಿಗೊಂಡರು. 3,500 ಅಭ್ಯರ್ಥಿಗಳನ್ನು ಮುಂದಿನ ಸಂದರ್ಶನಕ್ಕೆ ಆಯ್ಕೆ ಮಾಡಲಾಗಿದೆ ಎಂದು ಜಿಲ್ಲಾಧಿಕಾರಿ ಎನ್.ಶಿವಶಂಕರ ಮಾಹಿತಿ ನೀಡಿದರು.

ಉದ್ಯೋಗ ಮೇಳ ಉದ್ಘಾಟಿಸಿದ ಸಚಿವ ಕೆ.ಎಚ್.ಮುನಿಯಪ್ಪ, 'ಕೌಶಲಭರಿತ ಯುವ ಸಮೂಹವನ್ನು ಸೃಜಿಸಿ, ಎಲ್ಲರಿಗೂ ಉದ್ಯೋಗ ನೀಡಲು ಮಹತ್ವಾಕಾಂಕ್ಷೆ ಹೆಜ್ಜೆ ಇಡಲಾಗಿದೆ. ಮುಂದಿನ ಒಂದು ವರ್ಷದಲ್ಲಿ 'ಮನೆಗೊಂದು ಉದ್ಯೋಗ' ನೀಡಲಾಗುವುದು ಎಂದು ಭರವಸೆ ನೀಡಿದರು.

ಸಿಎಸ್‌ಆರ್ ನಿಧಿ ಮೂಲಕ ಸರ್ಕಾರಿ ಶಾಲೆ, ಕಾಲೇಜು ಉನ್ನತೀಕರಣಗೊಳಿಸಿ ಗುಣಮಟ್ಟದ ಶಿಕ್ಷಣ ನೀಡುವ ಕಾರ್ಯಕ್ರಮ ಜಿಲ್ಲೆಯಲ್ಲಿ ಯಶಸ್ವಿ ಆಗಿದೆ. ಈಗ ಇದನ್ನು ಇಡೀ ರಾಜ್ಯದಲ್ಲಿ ಅನುಕರಿಸಲಾಗುತ್ತಿದೆ. ನಿರುದ್ಯೋಗ ಸಮಸ್ಯೆಗೆ ಸಮರೋಪಾದಿಯಲ್ಲಿ ಪರಿಹಾರ ಒದಗಿಸಲು ಮುಂದಾಗಿದ್ದೇವೆ ಎಂದರು.

ಉದ್ಯೋಗ ಆಕಾಂಕ್ಷಿಗಳಿಗೆ ತರಬೇತಿ: ಉದ್ಯೋಗ ಮೇಳದಲ್ಲಿ ಸಾವಿರಾರು ಜನರು ಭಾಗಿಯಾಗಿದ್ದು, ಬಹುತೇಕ ತಾಂತ್ರಿಕ ಹುದ್ದೆಗಳಿಗೆ ಹೆಚ್ಚು ಅವಕಾಶವಿದೆ. ಸಾಂಪ್ರದಾಯಿಕ ಪದವಿ ಪಡೆದ ಅಭ್ಯರ್ಥಿಗಳಿಗೆ ಯಾವ ರೀತಿ ತರಬೇತಿ, ಕೌಶಲ ತುಂಬ ಬೇಕು ಎಂದು ಮಾರ್ಗದರ್ಶನ ನೀಡಲಾಗುವುದು. ಅದರಂತೆಯೇ ಅವರನ್ನು ಸಜ್ಜು ಮಾಡಲಾಗುವುದು. ಕಂಪನಿಗಳು ಬೇಕಿರುವ ಕೌಶಲ ಬಗ್ಗೆ ತಿಳಿಸಿದರೆ ಉದ್ಯೋಗ ಆಕಾಂಕ್ಷಿಗಳಿಗೆ ವಿಶೇಷ ತರಬೇತಿ ಆಯೋಜಿಸಿ ಕೆಲಸಕ್ಕೆ ಅಣಿ ಮಾಡಿಸಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಚ್.ಮುನಿಯಪ್ಪ ತಿಳಿಸಿದರು.


ಉದ್ಯೋಗ ಮೇಳದಲ್ಲಿ ಭಾಗಿಯಾಗಿದ್ದ ಅಭ್ಯರ್ಥಿಗಳೊಂದಿಗೆ ಸಚಿವ ಕೆ.ಎಚ್ ಮುನಿಯಪ್ಪ ಸಮಾಲೋಚನೆ ನಡೆಸಿದರು

ಗ್ಯಾರಂಟಿ ಹಣ ಶಾಶ್ವತವಲ್ಲ: ಸುಧಾಕರ್

ಮನುಷ್ಯನಿಗೆ ಬೇಕಿರುವುದು ನೀರು, ಆಹಾರ, ಮನೆ ನಂತರ ಉದ್ಯೋಗ. ರಾಜ್ಯ ಸರ್ಕಾರ ಗ್ಯಾರಂಟಿ ಮೂಲಕ ನೀಡುವ ₹2 ಸಾವಿರ ಹಣ ಅವರ ಜೇಬಿನಲ್ಲಿ ಇರುವುದಿಲ್ಲ. ಜನತೆಗೆ ಬೇಕಿರುವುದು ಉದ್ಯೋಗದ ಗ್ಯಾರಂಟಿ ಎಂದು ಸಂಸದ ಡಾ.ಕೆ. ಸುಧಾಕರ್ ಹೇಳಿದರು.

ತಾಂತ್ರಿಕ ಕೌಶಲ ಅಭಿವೃದ್ಧಿಗೆ ನೂರು ವರ್ಷಗಳ ಹಿಂದೆಯೇ ಸರ್.ಎಂ. ವಿಶ್ವೇಶ್ವರಯ್ಯ ತಿಳಿಸಿದ್ದರು. ಈ ಮಾರ್ಗದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ₹50 ಲಕ್ಷ ಕೋಟಿಯನ್ನು ಮೂಲ ಸೌಕರ್ಯಕ್ಕೆ ನೀಡಿದ್ದು, ಇದರಿಂದ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಉದ್ಯೋಗ ಸೃಷ್ಟಿ ಆಗಲಿದೆ ಎಂದರು.

ಆಸ್ಪತ್ರೆಗಳಲ್ಲಿ ಸಿಸಿಟಿವಿ ಕ್ಯಾಮೆರಾ ಕಣ್ಗಾವಲು ಹೆಚ್ಚಳ ● ಸಹಾಯವಾಣಿ ಆರಂಭಿಸಲು ಪ್ರಸ್ತಾವ ● ಸಮಿತಿ ರಚನೆ

‘ಮಹಿಳಾ ವೈದ್ಯಕೀಯ ಸಿಬ್ಬಂದಿ ಭದ್ರತೆಗೆ ಎಐ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕಾರ್ಯ ನಿರ್ವಹಿಸುವ ಎಲ್ಲ ಮಹಿಳಾ ವೈದ್ಯಕೀಯ ಸಿಬ್ಬಂದಿಗೆ ಅತ್ಯಾಧುನಿಕ ಮತ್ತು ಕೃತಕ ಬುದ್ಧಿಮತ್ತೆ (ಎಐ) ಆಧಾರಿತ ಭದ್ರತಾ ವ್ಯವಸ್ಥೆಯನ್ನು ಜಾರಿಗೆ ತರಲಾಗುವುದು ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣ ಪ್ರಕಾಶ ಪಾಟೀಲ ಹೇಳಿದರು.

ಪಶ್ಚಿಮ ಬಂಗಾಳದಲ್ಲಿ ವೈದ್ಯ ವಿದ್ಯಾರ್ಥಿನಿಯ ಮೇಲಿನ ಅತ್ಯಾಚಾರ ಮತ್ತು ಕೊಲೆ ಪ್ರಕರಣ, ಬಿಹಾರದಲ್ಲಿ ಶುಶ್ರೂಶಕಿ ಮೇಲಿನ ಅತ್ಯಾಚಾರ ಯತ್ನ ಪ್ರಕರಣಗಳ ಕಾರಣ ಮಹಿಳಾ ವೈದ್ಯಕೀಯ ಸಿಬ್ಬಂದಿಯ ಭದ್ರತೆ ಬಗ್ಗೆ ದೇಶದಾದ್ಯಂತ ಚರ್ಚೆ ನಡೆಯುತ್ತಿದೆ. ಈ ಸಂಬಂಧ ಸುಪ್ರೀಂ ಕೋರ್ಟ್ ಸಹ ಕೆಲವು ಕ್ರಮಗಳನ್ನು ಸೂಚಿಸಿದೆ.

ಸುಪ್ರೀಂ ಕೋರ್ಟ್ ಸೂಚನೆಯ ಭಾಗವಾಗಿ ಕ್ರಮಕ್ಕೆ ಮುಂದಾಗಿರುವ ವೈದ್ಯಕೀಯ ಶಿಕ್ಷಣ ಇಲಾಖೆಯು, ಸಚಿವರ ನೇತೃತ್ವದಲ್ಲಿ ಈ ಹಿಂದೆ ಸಭೆ ನಡೆಸಿತ್ತು. ಶುಕ್ರವಾರ ವಿಕಾಸಸೌಧದಲ್ಲಿ ನಡೆದ ಎರಡನೇ ಸಭೆಯಲ್ಲಿ, ಸುರಕ್ಷತೆಗೆ ಸರ್ಕಾರ ತೆಗೆದುಕೊಳ್ಳಬಹುದಾದ ವಿವಿಧ ಕ್ರಮಗಳನ್ನು ಅಧಿಕಾರಿಗಳು ವಿವರಿಸಿದರು.

ಎಲ್ಲ ಆಸ್ಪತ್ರೆಗಳಲ್ಲಿ ಸಿಸಿಟಿವಿ ಕ್ಯಾಮೆರಾ ಕಣ್ಗಾವಲನ್ನು ಹೆಚ್ಚಿಸುವುದು, ಸಹಾಯವಾಣಿ ಆರಂಭ, ಮಹಿಳಾ ಸಿಬ್ಬಂದಿ ಮತ್ತು ಪುರುಷ ಸಿಬ್ಬಂದಿಗೆ ಪ್ರತ್ಯೇಕ ವಿಶ್ರಾಂತಿ ಕೊಠಡಿ, ಮಹಿಳಾ ಸಿಬ್ಬಂದಿಗೆ ವೈಯಕ್ತಿಕ ತುರ್ತು ಅಲಾರಂ, ಸಿಸಿಟಿವಿ ಕಣ್ಗಾವಲು ಮತ್ತು ತುರ್ತು ಅಲಾರಂ ಮೇಲ್ವಿಚಾರಣೆಗೆ ನಿವೃತ್ತ ಸೈನಿಕರನ್ನು ಒಳಗೊಂಡ ನಿಯಂತ್ರಣ ಕೊಠಡಿ ಸ್ಥಾಪನೆಯ ಪ್ರಸ್ತಾವಗಳನ್ನು ಅಧಿಕಾರಿಗಳು ಸಭೆಯ ಮುಂದೆ ಇರಿಸಿದರು.

ಅವುಗಳನ್ನು ಪರಿಶೀಲಿಸಿದ ಸಚಿವರು, ‘ಭದ್ರತಾ ಕ್ರಮಗಳನ್ನು ಅನುಷ್ಠಾನಕ್ಕೆ ತರಲು ಸಮಿತಿ ರಚಿಸಲಾಗುವುದು’ ಎಂದು ಹೇಳಿದರು.



ಸಚಿವ ಶರಣ ಪ್ರಕಾಶ ಪಾಟೀಲ ಅವರು ವೈದ್ಯಕೀಯ ಮಹಿಳಾ ಸಿಬ್ಬಂದಿ ಭದ್ರತೆಗೆ ಸಂಬಂಧಿಸಿದಂತೆ ಅಧಿಕಾರಿಗಳ ಜತೆ ಸಭೆ ನಡೆಸಿದರು

ಸೂಚನೆಗಳು

- ಭದ್ರತಾ ವ್ಯವಸ್ಥೆ ಮತ್ತು ಆಗಬೇಕಾದ ಬದಲಾವಣೆಗಳ ಬಗ್ಗೆ ಮಹಿಳಾ ಸಿಬ್ಬಂದಿಯಿಂದ ಲಿಖಿತ ಪ್ರತಿಕ್ರಿಯೆ ಪಡೆದುಕೊಳ್ಳಬೇಕು
- ಎಲ್ಲ ವೈದ್ಯಕೀಯ ಸಂಸ್ಥೆಗಳಲ್ಲೂ ಭದ್ರತಾ ಪರಿಶೋಧನೆ ಸಮಿತಿ ರಚಿಸಬೇಕು. ಈ ಸಮಿತಿಯು ತಿಂಗಳಿಗೊಮ್ಮೆ ಸಭೆ ನಡೆಸಬೇಕು
- ಭದ್ರತೆಗೆ ನೇಮಿಸಿಕೊಳ್ಳುವ ಎಲ್ಲ ಸಿಬ್ಬಂದಿಯ ಹಿನ್ನೆಲೆಯನ್ನು ಕೂಲಂಕಷವಾಗಿ ಪರಿಶೀಲಿಸಬೇಕು
- ವೈದ್ಯಕೀಯ ಸಂಸ್ಥೆಗಳ ಕ್ಯಾಂಪಸ್‌ನಲ್ಲಿ 24 ಗಂಟೆಯೂ ತೆರೆದಿರುವ ಜನರಲ್ ಕ್ಯಾಂಟೀನ್‌ಗಳನ್ನು ಸ್ಥಾಪಿಸಬೇಕು. ಅಗತ್ಯ ವಸ್ತುಗಳ ಖರೀದಿಗಾಗಿ ಮಹಿಳಾ ಸಿಬ್ಬಂದಿ ಕ್ಯಾಂಪಸ್‌ನಿಂದ ಹೊರಹೋಗಬೇಕಾದ ಅನಿವಾರ್ಯ ಇರಬಾರದು

ವೈದ್ಯಕೀಯ ಸಂಸ್ಥೆಗಳಲ್ಲಿ ಮಹಿಳಾ ಸಿಬ್ಬಂದಿಯ ಭದ್ರತೆಯಲ್ಲಿ ಲೋಪವಾದರೆ, ಸಂಸ್ಥೆಯ ನಿರ್ದೇಶಕರನ್ನೇ ಅದಕ್ಕೆ ಹೊಣೆ ಮಾಡಲಾಗುತ್ತದೆ

ಡಾ.ಶರಣ ಪ್ರಕಾಶ ಪಾಟೀಲ
ವೈದ್ಯಕೀಯ ಶಿಕ್ಷಣ ಸಚಿವ

ರಾಷ್ಟ್ರೋತ್ಥಾನ ವಿದ್ಯಾಕೇಂದ್ರಕ್ಕೆ ಸಮಗ್ರ ಪ್ರಶಸ್ತಿ

ದಾವಣಗೆರೆ: ಬೆಂಗಳೂರಿನ ರಾಷ್ಟ್ರೋತ್ಥಾನ ವಿದ್ಯಾಕೇಂದ್ರವು ಸಿಬಿಎಸ್‌ಇ ದಕ್ಷಿಣ ವಲಯ-2 ಈಜು ಚಾಂಪಿಯನ್‌ಷಿಪ್‌ನಲ್ಲಿ ಸಮಗ್ರ ಪ್ರಶಸ್ತಿ ಜಯಿಸಿದೆ.

ತೋಳಹುಣಸೆಯ ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಆಂಗ್ಲ ಮಾಧ್ಯಮ ವಸತಿ ಶಾಲೆಯ ಈಜುಕೊಳದಲ್ಲಿ ಸೆ.10 ರಿಂದ 12ರವರೆಗೆ ನಡೆದ ಚಾಂಪಿಯನ್‌ಷಿಪ್‌ನಲ್ಲಿ ರಾಷ್ಟ್ರೋತ್ಥಾನ ವಿದ್ಯಾಕೇಂದ್ರ ಒಟ್ಟು 278 ಅಂಕಗಳನ್ನು ಗಳಿಸಿ ಈ ಸಾಧನೆ ಮಾಡಿತು.

ಎರ್ನಾಕುಲಂನ ವಿಶ್ವಜ್ಯೋತಿ ಪಬ್ಲಿಕ್ ಶಾಲೆ (265) ಮತ್ತು ಬೆಂಗಳೂರಿನ ಕೋಣನಕುಂಟೆ ಕ್ರಾಸ್ ನಲ್ಲಿರುವ ಡೆಲ್ಲಿ ಪಬ್ಲಿಕ್ ಶಾಲೆ (191) ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಗಳಿಸಿದವು.

ವಕೀಲ ಸಮುದಾಯಕ್ಕೆ ಸುಂದರಸ್ವಾಮಿ ಪ್ರಭಾವ ಅಪಾರ: ಎ.ಎಸ್‌.ಬೋಪಣ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕರ್ನಾಟಕದ ವಕೀಲ ಸಮುದಾಯದ ಮೇಲೆ ದಿವಂಗತ ಎಸ್.ಜಿ.ಸುಂದರಸ್ವಾಮಿ ಅವರ ಪ್ರಭಾವ ಅಪಾರವಾದುದು’ ಎಂದು ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎ.ಎಸ್.ಬೋಪಣ್ಣ ಬಣ್ಣಿಸಿದರು.

ಕರ್ನಾಟಕದ ಮಾಜಿ ಅಡ್ವೊಕೇಟ್ ಜನರಲ್ ಹಾಗೂ ಹೈಕೋರ್ಟ್‌ನ ಹಿರಿಯ ವಕೀಲರಾಗಿದ್ದ ದಿವಂಗತ ಎಸ್.ಜಿ. ಸುಂದರಸ್ವಾಮಿ ಅವರ ಜನ್ಮ ಶತಮಾನೋತ್ಸವದ ಸ್ಮರಣಾರ್ಥ, ‘ಕರ್ನಾಟಕ ಜ್ಯೂರಿಸ್ಟ್ಸ್ ಟ್ರಸ್ಟ್’ ಹಾಗೂ ‘ಕರ್ನಾಟಕ (ಇಂಡಿಯಾ) ಸೆಕ್ಷನ್ ಆಫ್ ಇಂಟರ್ ನ್ಯಾಷನಲ್ ಕಮಿಷನ್ ಆಫ್ ಜ್ಯೂರಿಸ್ಟ್ಸ್’ ವತಿಯಿಂದ ಹೈಕೋರ್ಟ್‌ನಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ಗೌರವಾನ್ವಿತ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

‘ಕಿರಿಯ ವಕೀಲರಿಗೆ ಮಾದರಿಯಾಗಿ ಬಾಳಿದ ಸುಂದರಸ್ವಾಮಿ ಸಂವೇದನಾ ಶೀಲ ಮತ್ತು ಅಗಾಧ ಜ್ಞಾನವಂತ ರಾಗಿದ್ದರು. ಅಂಥವರ ನಡೆನುಡಿಯ ಸಂಪ್ರದಾಯ ನ್ಯಾಯಾಂಗಕ್ಕೆ ಮಾರ್ಗದರ್ಶಿ’ ಎಂದು ಬಣ್ಣಿಸಿದರು.

‘ಡಿಜಿಟಲ್ ಜಗತ್ತಿನಲ್ಲಿ ಮಾನವ ಹಕ್ಕುಗಳ ರಕ್ಷಣೆಯ ಸವಾಲುಗಳು’ ಎಂಬ ವಿಷಯದ ಕುರಿತು ಸುದೀರ್ಘ ಉಪನ್ಯಾಸ ನೀಡಿದ ‘ಲಾ ಏಷ್ಯಾ’ ಸಂಸ್ಥೆಯ ಅಧ್ಯಕ್ಷರೂ ಆದ ಸುಪ್ರೀಂ ಕೋರ್ಟ್‌ನ ಹಿರಿಯ ವಕೀಲ ಶ್ಯಾಮ್ ದಿವಾನ್, ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಮಾನವ ಹಕ್ಕುಗಳ ರಕ್ಷಣೆಯಲ್ಲಿ ಡಿಜಿಟಲ್ ಮಾಧ್ಯಮ ವಹಿಸಿರುವ ಪಾತ್ರ ಮತ್ತು ಅದಕ್ಕೆ ಸಂಬಂಧಿಸಿದ ಕಾನೂನು ವ್ಯಾಪ್ತಿಗಳನ್ನು ಕೂಲಂಕಷವಾಗಿ ವಿವರಿಸಿದರು.

ಸುಂದರಸ್ವಾಮಿ ಅವರ ಪುತ್ರ ಹಾಗೂ ಹಿರಿಯ ವಕೀಲ ಎಸ್.ಎಸ್. ನಾಗಾನಂದ ಅವರು ಪ್ರಾಸ್ತಾವಿಕ ನುಡಿಗಳನ್ನಾಡಿದರು.



ಎಸ್‌.ಜಿ. ಸುಂದರಸ್ವಾಮಿ ಅವರ ಜನ್ಮ ಶತಮಾನೋತ್ಸವದ ಸ್ಮರಣಾರ್ಥ ನಡೆದ ಉಪನ್ಯಾಸ ಕಾರ್ಯಕ್ರಮದಲ್ಲಿ ಹಿರಿಯ ವಕೀಲ ಬಿ.ವಿ. ಆಚಾರ್ಯ, ನ್ಯಾಯಮೂರ್ತಿ ಅನು ಶಿವರಾಮನ್, ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎ.ಎಸ್‌ ಬೋಪಣ್ಣ, ಸುಪ್ರೀಂಕೋರ್ಟ್‌ನ ಹಿರಿಯ ವಕೀಲ ಶ್ಯಾಮ್ ದಿವಾನ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಗುಂಡಿನ ಚಕಮಕಿ: ಇಬ್ಬರು ಯೋಧರು ಹುತಾತ್ಮ

ಪ್ರಜಾವಾಣಿ ವಾರ್ತೆ

ಶ್ರೀನಗರ: ಜಮ್ಮು–ಕಾಶ್ಮೀರದ ಕಿಸ್ತವಾರ್ ಜಿಲ್ಲೆ ಚಾತ್ರೂ ಪ್ರದೇಶದಲ್ಲಿ ಉಗ್ರರೊಂದಿಗೆ ಶುಕ್ರವಾರ ನಡೆದ ಗುಂಡಿನ ಚಕಮಕಿಯಲ್ಲಿ ಜೂನಿಯರ್ ಕಮಿಷನ್ಡ್ ಅಧಿಕಾರಿ (ಜೆಸಿಒ) ಸೇರಿ ಸೇನೆಯ ಇಬ್ಬರು ಸಿಬ್ಬಂದಿ ಹುತಾತ್ಮ ರಾಗಿದ್ದು, ಇತರ ಇಬ್ಬರು ಗಾಯಗೊಂಡಿದ್ದಾರೆ.

ಜೆಸಿಒ ನಾಯಬ್ ಸುಬೇದಾರ್ ವಿಪನ್ ಕುಮಾರ್ ಹಾಗೂ ಸಿಪಾಯಿ ಅರವಿಂದ ಸಿಂಗ್ ಹುತಾತ್ಮರಾದವರು.

‘ಗುಪ್ತಚರ ಮಾಹಿತಿ ಮೇರೆಗೆ, ಜಮ್ಮು–ಕಾಶ್ಮೀರ ಪೊಲೀಸರೊಂದಿಗೆ ಜಂಟಿ ಕಾರ್ಯಾಚರಣೆ ಆರಂಭಿಸ ಲಾಯಿತು. ಈ ವೇಳೆ, ಉಗ್ರರೊಂದಿಗೆ ನಡೆದ ಗುಂಡಿನ ಚಕಮಕಿಯಲ್ಲಿ ಗಾಯಗೊಂಡ ನಾಲ್ವರು ಯೋಧರನ್ನು ಸಮೀಪದ ಕಮಾಂಡ್ ಆಸ್ಪತ್ರೆಗೆ ದಾಖಲಿಸಲಾಯಿತು. ಗಾಯಗಳಿಂದಾಗಿ ಇಬ್ಬರು ಮೃತಪಟ್ಟರು’ ಎಂದು ಸೇನೆಯ ಅಧಿಕಾರಿಗಳು ತಿಳಿಸಿದ್ದಾರೆ.

ನದಿಯಲ್ಲಿ ಮುಳುಗಿ 8 ಜನ ಸಾವು

ಅಹಮದಾಬಾದ್(ಪಿಟಿಐ): ಗಾಂಧಿ ನಗರ ಜಿಲ್ಲೆಯಲ್ಲಿ ಮೋಶ್ವಾ ನದಿಯಲ್ಲಿ ಮುಳುಗಿ 8 ಜನರು ಶುಕ್ರವಾರ ಮೃತಪಟ್ಟಿದ್ದಾರೆ.

ಮೃತರು ದೆಹ್ಗಾಮ್ ತಾಲ್ಲೂಕಿನ ವಾಸ್ನಾ ಸೋಗ್ತಿ ಗ್ರಾಮದವರು ಎಂದು ಉಪವಿಭಾಗಾಧಿಕಾರಿ ಬಿ.ಬಿ. ಮೋದಿಯಾ ತಿಳಿಸಿದ್ದಾರೆ.

ಗಣೇಶ ಮೂರ್ತಿ ವಿಸರ್ಜನೆಗಾಗಿ ನದಿಗೆ ತೆರಳಿದ್ದ ಸ್ಥಳೀಯರು ಈ ಕುರಿತು ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ. ಬಳಿಕ, ಪೊಲೀಸರು ಮತ್ತು ಅಗ್ನಿಶಾಮಕ ದಳ ಸಿಬ್ಬಂದಿ ಸ್ಥಳಕ್ಕೆ ತೆರಳಿ, 8 ಮೃತದೇಹ ಗಳನ್ನು ಹೊರಗೆ ತೆಗೆದಿದ್ದಾರೆ.

ಪುಣೆ ರೇಸ್

ರಾಯಲ್ ಮೈಸೂರ್ ಗೆಲ್ಲುವ ನಿರೀಕ್ಷೆ

ಪುಣೆ ಸಿಟಿ ಗೋಲ್ಡ್ ಕಪ್ ಶನಿವಾರದ ಪುಣೆ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ರಾಯಲ್ ಮೈಸೂರ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ.

1ನೇ ರೇಸ್: ಎಟಾಯ್ಲ್ 4, ಕನ್ಯಾ ರಾಶಿ 2, ದಿ ಜನರಲ್ 3
2ನೇ ರೇಸ್: ಯೂಲ್‌ಟೈಡ್ 2, ಊಜಿ 5, ಲಿಯೋ ದಿ ಲಯನ್ 6
3ನೇ ರೇಸ್: ಆರ್ಬ್ರಿಟ್ರೇಜ್ 5, ಸೂಪರ್‌ಇಂಪೋಸ್ 1, ಸ್ಟಾರ್ಮ್ ಕ್ಲೌಡ್ 2
4ನೇ ರೇಸ್: ಡೂರೊನ್ 5, ಅವ್ಲಾನ್ 1, ಡಿವೈನ್ ಹೋಪ್ 4
5ನೇ ರೇಸ್: ಫಾಸ್ಟ್ ಪೇಸ್ 5, ಇನ್ ದೈ ಲೈಟ್ 6, ಫೈಟಾನ್ 4
6ನೇ ರೇಸ್: ರಾಯಲ್ ಮೈಸೂರ್ 8, ಟೆಹಾನಿ 9, ಸ್ನೋಫಾಲ್ 10
7ನೇ ರೇಸ್: ಟ್ರಿಗ್ಗರ್ 9, ಎಲೊಕ್ವೆಂಟ್ 4, ಗಾಡೆಸ್ ಆಫ್ ಡಾನ್ 6
8ನೇ ರೇಸ್: ವಾಲ್ಟರ್ 8, ರಷ್ 9, ರಿಕೊಷೆಟ್ 1

ಉತ್ತಮ ಬೆಟ್: ಎಟಾಯ್ಲ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	2,3,4	5,6,7

ಹಲವೆಡೆ ವಾಹನ ಸಂಚಾರ ಬಂದ್

ಈದ್–ಮಿಲಾದ್ ಮೆರವಣಿಗೆ ಬದಲಿ ಮಾರ್ಗದ ವ್ಯವಸ್ಥೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈದ್-ಮಿಲಾದ್ ಹಬ್ಬ ದಂದು (ಸೆಪ್ಟೆಂಬರ್ 16) ಮೆರವಣಿಗೆ ಗಳು ನಡೆಯುವುದರಿಂದ ನಗರದ ಹಲವು ರಸ್ತೆಗಳಲ್ಲಿ ಸಂಚಾರ ಪೊಲೀಸರು ವಾಹನ ಸಂಚಾರ ನಿರ್ಬಂಧಿಸಿ, ಬದಲಿ ಮಾರ್ಗದ ವ್ಯವಸ್ಥೆ ಕಲ್ಪಿಸಿದ್ದಾರೆ.

ನೃಪತುಂಗ ರಸ್ತೆಯಲ್ಲಿನ ವೈ.ಎಂ. ಸಿ.ಎ ಮೈದಾನದಲ್ಲಿ ಸಾವಿರಾರು ಜನರು ಮೆರವಣಿಗೆ ಮೂಲಕ ನಗರದ ವಿವಿಧ ಸ್ಥಳಗಳಿಂದ ಬಂದು ಸೇರಲಿದ್ದಾರೆ. ಸುಗಮ ಸಂಚಾರದ ಹಿತದೃಷ್ಟಿಯಿಂದ ಈ ಕೆಳಕಂಡಂತೆ ಸಂಚಾರ ಮಾರ್ಪಾಡು ಗಳನ್ನು ಮಾಡಲಾಗಿದೆ.

ಈದ್-ಮಿಲಾದ್ ಮೆರವಣಿಗೆ ಮಾರ್ಗಗಳು:

- ಜೆ.ಸಿ. ನಗರ ದರ್ಗಾದಿಂದ ಹೊರಟು ಶಿವಾಜಿನಗರ ಕಂಟೋನ್ಮೆಂಟ್ ಕಡೆಗೆ ಸಾಗುವುದು
- ಯಲಹಂಕ ಓಲ್ಡ್ ಟೌನ್ ಮಸೀದಿಯಿಂದ ಯಲಹಂಕ ಓಲ್ಡ್ ಟೌನ್ ಮಸೀದಿಯವರೆಗೆ
- ಹಳೇ ಬಸ್ ನಿಲ್ದಾಣದಿಂದ ಸಣ್ಣ ಅಮಾನಿಕೆರೆವರೆಗೆ
- ಬೆಳ್ಳಳ್ಳಿ ಕ್ರಾಸ್‌ನಿಂದ ನಾಗವಾರ ಸಿಗ್ನಲ್‌ವರೆಗೆ
- ರಾಜಗೋಪಾಲನಗರ ಮುಖ್ಯರಸ್ತೆ ಯಿಂದ ಪೀಣ್ಯ ಎರಡನೇ ಹಂತದವರೆಗೆ
- ಸೌತ್ ಎಂಡ್ ಸರ್ಕಲ್‌ನಿಂದ ಆರ್.ವಿ ರಸ್ತೆಯಲ್ಲಿ ಲಾಲ್‌ಬಾಗ್ ವೆಸ್ಟ್ ಗೇಟ್ ಸರ್ಕಲ್‌ವರೆಗೆ
- ಗೀತಾ ಜಂಕ್ಷನ್ (ಕೂಲ್ ಜಾಯಿಂಟ್ ಜಂಕ್ಷನ್)ನಿಂದ ಸೌತ್ ಎಂಡ್ ಸರ್ಕಲ್
- ಬೇಂದ್ರೆ ಜಂಕ್ಷನ್‌ನಿಂದ ಓಬಳಪ್ಪ ಗಾರ್ಡನ್ ಜಂಕ್ಷನ್
- ಮಹಾಲಿಂಗೇಶ್ವರ ಬಡಾವಣೆಯಿಂದ ಆಡುಗೋಡಿ

ಈ ಮಾರ್ಗಗಳ ಮೂಲಕ ಎಲ್ಲ ಮೆರವಣಿಗೆಗಳು ವೈ.ಎಂ.ಸಿ.ಎ ಮೈದಾನಕ್ಕೆ ಬರಲಿವೆ.

ಸಂಚಾರ ನಿರ್ಬಂಧಿಸಿರುವ ಮಾರ್ಗಗಳು:

- ನೇತಾಜಿ ಜಂಕ್ಷನ್‌ನಿಂದ ಪಾಟರಿ ಸರ್ಕಲ್ ಮೂಲಕ ಟ್ಯಾನರಿ ರಸ್ತೆ ಕಡೆಗೆ ಸಂಚಾರ ನಿರ್ಬಂಧಿಸ ಲಾಗುತ್ತದೆ.
- ಮಾಸ್ಕ್ ಜಂಕ್ಷನ್‌ನಿಂದ ಎಂ.ಎಂ. ರಸ್ತೆ ಮೂಲಕ ನೇತಾಜಿ ಜಂಕ್ಷನ್ ವರೆಗೆ ಎಂ.ಎಂ.ರಸ್ತೆಯಲ್ಲಿ ದ್ವಿಮುಖ ಸಂಚಾರಕ್ಕೆ ಬದಲಾಗಿ ಏಕ ಮುಖ ಸಂಚಾರವನ್ನಾಗಿ ತಾತ್ಕಾಲಿಕವಾಗಿ ಮಾರ್ಪಾಡು ಮಾಡಲಾಗಿದ್ದು, ನೇತಾಜಿ ಜಂಕ್ಷನ್‌ನಿಂದ ಮಾಸ್ಕ್ ಜಂಕ್ಷನ್ ಕಡೆಗೆ ವಾಹನಗಳ ಸಂಚಾರಕ್ಕೆ ಅವಕಾಶವಿದೆ.
- ನೇತಾಜಿ ಜಂಕ್ಷನ್ ನಿಂದ ಹೇನ್ಸ್ ಜಂಕ್ಷನ್ ವರೆಗೆ ಹೇನ್ಸ್ ರಸ್ತೆಯಲ್ಲಿ ಸಂಚಾರ ನಿರ್ಬಂಧಿಸಲಾಗುತ್ತದೆ.
- ನಾಗವಾರ ಜಂಕ್ಷನ್‌ನಿಂದ ಪಾಟರಿ ಸರ್ಕಲ್ ರಸ್ತೆಯವರೆಗೆ ಭಾಗಶಃ ಸಂಚಾರ ನಿರ್ಬಂಧಿಸಲಾಗುತ್ತದೆ


ಡಿ.ಜೆ ಬಳಕೆಗೆ ಅವಕಾಶ ಇಲ್ಲ: ದಯಾನಂದ

ಈದ್ ಮಿಲಾದ್ ಅಂಗವಾಗಿ ಸೆ. 16ರಂದು ನಗರದ ವಿವಿಧ ಮೈದಾನಗಳಲ್ಲಿ ಕಾರ್ಯಕ್ರಮಗಳು ಹಾಗೂ ಸ್ತಬ್ಧಚಿತ್ರಗಳ ಮೆರವಣಿಗೆ ಆಯೋಜನೆಯಾಗಿದ್ದು, ಕಾನೂನು ಸುವ್ಯವಸ್ಥೆ ದೃಷ್ಟಿಯಿಂದ ಕೆಲ ಕಟ್ಟುನಿಟ್ಟಿನ ಸೂಚನೆಗಳನ್ನು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ನೀಡಿದ್ದಾರೆ.

ವೈ.ಎಂ.ಸಿ.ಎ ಮೈದಾನ, ಮಿಲ್ಲರ್ಸ್ ರಸ್ತೆ ಖುದ್ದುಸಾಬ್ ಈದ್ಗಾ ಮೈದಾನ, ಶಿವಾಜಿನಗರ ಛೋಟಾ ಮೈದಾನ, ಭಾರತೀನಗರ ಸುಲ್ತಾನ್ ಜೀ ಗುಂಟಾ ಮೈದಾನ ಹಾಗೂ ಇತರೆಡೆ ಕಾರ್ಯಕ್ರಮಗಳು ನಡೆಯಲಿವೆ.

ಮೆರವಣಿಗೆ ಶಾಂತ ರೀತಿಯಲ್ಲಿ ಸಾಗುವಂತೆ ಸಹಕರಿಸಬೇಕು. ಹರಿತವಾದ ವಸ್ತುಗಳನ್ನು ಹೊಂದಿರಬಾರದು. ಡಿ.ಜೆ. ಬಳಸುವಂತಿಲ್ಲ, ಸ್ತಬ್ಧಚಿತ್ರಗಳು ಪ್ರಚೋದನಾತ್ಮಕ ಅಂಶ ಒಳಗೊಂಡಿರಬಾರದು. ಪೂಜಾ ಸ್ಥಳಗಳು (ದೇವಸ್ಥಾನ/ಚರ್ಚ್‌ಗಳ) ಮುಂಭಾಗದಲ್ಲಿ ಘೋಷಣೆ ಕೂಗಬಾರದು.

ಮೆರವಣಿಗೆ ವೇಳೆ ಆಯೋಜಕರು ವಿದ್ಯುತ್ ಸಂಪರ್ಕಕ್ಕೆ ತೊಂದರೆಯಾಗದಂತೆ ನೋಡಿಕೊಳ್ಳಬೇಕು, ಬೆಂಕಿ ನಂದಿಸುವ ಸಾಮಗ್ರಿ ಇಟ್ಟುಕೊಂಡಿರಬೇಕು, ರಾತ್ರಿ ಮೆರವಣಿಗೆ ಮುಗಿದ ನಂತರ ದ್ವಿಚಕ್ರ ವಾಹನದಲ್ಲಿ ಇಬ್ಬರಿಗಿಂತ ಹೆಚ್ಚು ಜನ ಪ್ರಯಾಣಿಸಬಾರದು. ಹಿರಿಯ ನಾಗರಿಕರು, ಶಾಲಾ ಮಕ್ಕಳು ಹಾಗೂ ಇತರರಿಗೆ ತೊಂದರೆಯಾಗದಂತೆ ಧ್ವನಿವರ್ಧಕಗಳನ್ನು ಕಡಿಮೆ ಪ್ರಮಾಣದ ಶಬ್ದದೊಂದಿಗೆ ಬೆಳಗ್ಗೆ 6ರಿಂದ ರಾತ್ರಿ 10 ರ ವರೆಗೆ ಮಾತ್ರ ಬಳಸಿಕೊಳ್ಳಬೇಕು ಎಂದು ಆದೇಶಿಸಲಾಗಿದೆ.



ಬಿ.ದಯಾನಂದ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in
ಪ್ರಜಾವಾಣಿ ಶನಿವಾರ • ಸೆಪ್ಟೆಂಬರ್ 14, 2024

ಅಭಿಮತ

ಸುಭಾಷಿತ

ಸ್ನೇಹ ಮಾಡುವುದು ಬರೀ ಸಂತೋಷಕ್ಕಾಗಿ ಅಲ್ಲ. ಸ್ನೇಹಿತರು ದಾರಿ ತಪ್ಪಿದಾಗ ಅವರ ತಪ್ಪುಗಳನ್ನು ನಿಷ್ಠುರವಾಗಿ ಎತ್ತಿ ಹೇಳಬೇಕು.

–ತಿರುವಳ್ಳುವರ್

ಸಿಜೆಐ ಮನೆ ಪೂಜೆಯಲ್ಲಿ ಪ್ರಧಾನಿ ಪ್ರಶ್ನೆಗಳು, ಗುಮಾನಿಗಳನ್ನು ಸೃಷ್ಟಿಸಿದೆ

ಪ್ರಧಾನಿ ನರೇಂದ್ರ ಮೋದಿ ಅವರು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್ ಅವರ ಮನೆಯಲ್ಲಿ ನಡೆದ ಗಣೇಶ ಪೂಜೆಗೆ ಹೋಗಿರುವುದನ್ನು ವಿರೋಧ ಪಕ್ಷಗಳು ಮತ್ತು ವಕೀಲರ ಒಂದು ವರ್ಗ ತೀವ್ರವಾಗಿ ಖಂಡಿಸಿವೆ. ಪ್ರಧಾನಿ ಮತ್ತು ಸಿಜೆಐ ಅವರು ಖಾಸಗಿ ಧಾರ್ಮಿಕ ಕಾರ್ಯಕ್ರಮದಲ್ಲಿ ಒಟ್ಟಿಗೆ ಭಾಗವಹಿಸಿದ್ದು ಸಮಂಜಸವಲ್ಲ ಎಂದು ಇತರ ಕೆಲವರು ಕೂಡ ಭಾವಿಸಿದ್ದಾರೆ. ಪ್ರಧಾನಿಯವರು ಸಿಜೆಐ ಮನೆಯಲ್ಲಿ ನಡೆದ ಪೂಜೆಯಲ್ಲಿ ಭಾಗವಹಿಸಿದ್ದಕ್ಕೆ ಸಂಬಂಧಿಸಿದ ವಿಡಿಯೊ ಮತ್ತು ಫೋಟೊಗಳನ್ನು ತಮ್ಮ ಅಧಿಕೃತ 'ಎಕ್ಸ್' ಖಾತೆಯಲ್ಲಿ ಬಹಿರಂಗಪಡಿಸಿದ್ದಾರೆ. ಕಾರ್ಯಾಂಗ ಮತ್ತು ನ್ಯಾಯಾಂಗ ಎರಡೂ ಪ್ರತ್ಯೇಕ ಅಂಗಗಳು ಎಂಬ ಸಂವಿಧಾನದ ತತ್ವವನ್ನೇ ಈ ಭೇಟಿಯು ಉಲ್ಲಂಘಿಸಿದೆ ಎಂಬುದು ವಿರೋಧ ಪಕ್ಷಗಳ ಪ್ರತಿಪಾದನೆ. ಅವರಿಬ್ಬರೂ ಸ್ವೀಕರಿಸಿದ ಅಧಿಕಾರ ಮತ್ತು ಗೋಪ್ಯತೆಯ ಪ್ರಮಾಣವಚನವನ್ನು ಈ ಭೇಟಿಯ ಮೂಲಕ ಉಲ್ಲಂಘಿಸಿದ್ದಾರೆ ಎಂದು ವಿರೋಧ ಪಕ್ಷಗಳು ಹೇಳುತ್ತಿವೆ. ಸರ್ಕಾರದ ಹುದ್ದೆಯಲ್ಲಿರುವ ಪ್ರತಿಯೊಬ್ಬರೂ ಧರ್ಮನಿರಪೇಕ್ಷತೆಯನ್ನು ಅನುಸರಿಸಬೇಕು ಮತ್ತು ಧಾರ್ಮಿಕತೆಯನ್ನು ಸಾರ್ವಜನಿಕವಾಗಿ ಪ್ರದರ್ಶಿಸಬಾರದು ಎಂದು ಸಂವಿಧಾನ ಹೇಳುತ್ತದೆ. ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಮತ್ತು ಪ್ರಧಾನಿಯವರು ಜೊತೆಯಾಗಿ ಧಾರ್ಮಿಕ ಕಾರ್ಯಕ್ರಮವೊಂದರಲ್ಲಿ ಈ ಬಗೆಯಲ್ಲಿ ಹಿಂದೆಂದೂ ಕಾಣಿಸಿಕೊಂಡಿದ್ದೇ ಇಲ್ಲ. ಹಾಗಾಗಿಯೇ ಈಗಿನ ಬೆಳವಣಿಗೆಯು ಪ್ರಶ್ನೆಗಳನ್ನು ಎತ್ತಿದೆ ಹಾಗೂ ಗುಮಾನಿಗೆ ಕಾರಣವಾಗಿದೆ.



ನ್ಯಾಯಾಂಗವು ಸ್ವತಂತ್ರವಾಗಿ, ವಿವಾದಾತೀತವಾಗಿ ಇದ್ದರಷ್ಟೇ ಸಾಲದು, ಅದು ಹಾಗೆಯೇ ಇದೆ ಎಂಬುದು ಎಲ್ಲರ ಕಣ್ಣಿಗೂ ಕಾಣುವಂತೆ ಇರಬೇಕು

ಕೆಳಹಂತದ ನ್ಯಾಯಾಲಯವೇ ಇರಲಿ, ಉನ್ನತ ನ್ಯಾಯಾಲಯವೇ ಇರಲಿ ಅಲ್ಲಿ ಇರುವವರು ಕಾರ್ಯಾಂಗದ ಸದಸ್ಯರ ಜೊತೆಗೆ ನಂಟು ಬೆಳೆಸಿಕೊಳ್ಳಲೇಬಾರದು; ಕಾರ್ಯಾಂಗದ ಸದಸ್ಯರಷ್ಟೇ ಅಲ್ಲ ರಾಜಕಾರಣಿಗಳು, ಸಮಾಜದ ಮುಖಂಡರು, ಗಣ್ಯ ವ್ಯಕ್ತಿಗಳ ಜೊತೆಗೆ ಸಂಪರ್ಕ ಇರಿಸಿಕೊಂಡರೆ, ಅದು ಹಿತಾಸಕ್ತಿ ಸಂಘರ್ಷಕ್ಕೆ ಕಾರಣವಾಗಬಹುದು ಅಥವಾ ಅದು ಜನರಲ್ಲಿ ಗುಮಾನಿ ಸೃಷ್ಟಿಸಬಹುದು. ಈ ಹಿಂದಿನ ಹಲವು ನ್ಯಾಯಮೂರ್ತಿಗಳು ಈ ಶಿಷ್ಟಾಚಾರದ ಕುರಿತು ಬಹಳ ಕಟ್ಟುನಿಟ್ಟಿನಿಂದ ಇದ್ದರು. ಸಾರ್ವಜನಿಕ ಸಭೆಗಳಲ್ಲಿ ಪರಸ್ಪರ ಭೇಟಿಯನ್ನು ತಪ್ಪಿಸಿಕೊಳ್ಳುವುದು ಸಾಧ್ಯವೇ ಇಲ್ಲ. ಆದರೆ, ಪ್ರಧಾನಿಯು ಸಿಜೆಐ ಮನೆಗೆ ಭೇಟಿ ನೀಡುವುದನ್ನು ಈ ರೀತಿಯಲ್ಲಿ ನೋಡಲು ಸಾಧ್ಯವಿಲ್ಲ. ಪ್ರಧಾನಿಯವರ ಭೇಟಿಯನ್ನು ಬಿಜೆಪಿ ಬಲವಾಗಿ ಸಮರ್ಥಿಸಿಕೊಂಡಿದೆ. ಮನಮೋಹನ್ ಸಿಂಗ್ ಪ್ರಧಾನಿಯಾಗಿದ್ದಾಗ 2009ರಲ್ಲಿ ನಡೆಸಿದ ಇಫ್ತಾರ್ ಕೂಟದಲ್ಲಿ ಆಗಿನ ಸಿಜೆಐ ಕೆ.ಜಿ. ಬಾಲಕೃಷ್ಣನ್ ಭಾಗಿಯಾಗಿರಲಿಲ್ಲವೇ ಎಂದು ಬಿಜೆಪಿ ನಾಯಕರು ಪ್ರಶ್ನಿಸಿದ್ದಾರೆ. ಈ ಎರಡು ಪ್ರಸಂಗಗಳ ನಡುವೆ ಯಾವುದೇ ಹೋಲಿಕೆ ಸಾಧ್ಯವಿಲ್ಲ. ಏಕೆಂದರೆ, ಇಫ್ತಾರ್ ಕೂಟ ಎಂಬುದು ಸಾರ್ವಜನಿಕ ಕಾರ್ಯಕ್ರಮ. ಆ ಕಾರ್ಯಕ್ರಮಕ್ಕೆ ಇತರ ಹಲವರನ್ನು ಆಹ್ವಾನಿಸಲಾಗುತ್ತದೆ ಮತ್ತು ಹಲವು ಗಣ್ಯರು ಈ ಕಾರ್ಯಕ್ರಮಕ್ಕೆ ಬಂದಿರುತ್ತಾರೆ. ಆದರೆ ಮನೆಯಲ್ಲಿನ ಗಣೇಶ ಪೂಜೆಯು ಸಂಪೂರ್ಣವಾಗಿ ಖಾಸಗಿ ಕಾರ್ಯಕ್ರಮ. ಸಿಜೆಐ ಮನೆಯಲ್ಲಿ ನಡೆದ ಪೂಜೆಗೆ ವಿರೋಧ ಪಕ್ಷಗಳ ಮುಖಂಡರು ಅಥವಾ ಇತರ ಗಣ್ಯರನ್ನು ಆಹ್ವಾನಿಸಲಾಗಿತ್ತೇ ಎಂಬ ಮಾಹಿತಿ ಇಲ್ಲ. ಈ ಕುರಿತು ಮಾಹಿತಿ ಇಲ್ಲದೇ ಇರುವುದರಿಂದ, ಪೂಜೆಯಲ್ಲಿ ಪ್ರಧಾನಿಯವರ ಉಪಸ್ಥಿತಿ ಪ್ರಶ್ನೆಗಳಿಗೆ ಕಾರಣವಾಗುತ್ತದೆ.

ಸರ್ಕಾರ ಅಥವಾ ಆಡಳಿತ ಪಕ್ಷಕ್ಕೆ ಬಹಳ ಮುಖ್ಯವಾದ ಹಲವು ಮಹತ್ವದ ಪ್ರಕರಣಗಳು ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆಗೆ ಬಾಕಿ ಇವೆ ಎಂಬುದನ್ನೂ ವಿರೋಧ ಪಕ್ಷಗಳು ಉಲ್ಲೇಖಿಸಿವೆ. ಈ ರೀತಿಯಲ್ಲಿ ಒಂದಕ್ಕೊಂದು ನಂಟು ಬೆಸೆಯುವುದು ಸರಿಯಲ್ಲ. ಏಕೆಂದರೆ, ಇದು ನ್ಯಾಯಾಂಗದ ಬಗ್ಗೆಯೇ ಗುಮಾನಿ ಹುಟ್ಟಲು ಕಾರಣವಾಗುತ್ತದೆ; ಜೊತೆಗೆ, ಈಗಿನ ಮುಖ್ಯ ನ್ಯಾಯಮೂರ್ತಿಯವರು ಅತ್ಯಂತ ಗೌರವಾನ್ವಿತ ನ್ಯಾಯಮೂರ್ತಿ ಮತ್ತು ಅವರು ಅತ್ಯುನ್ನತ ನ್ಯಾಯಿಕ ತತ್ವಗಳನ್ನು ಎತ್ತಿ ಹಿಡಿದವರು. ಸಾಂವಿಧಾನಿಕ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸ್ವತಂತ್ರ ನ್ಯಾಯಾಂಗಕ್ಕೆ ಅತ್ಯಂತ ಮಹತ್ವ ಇರುವುದರಿಂದಲೇ ಈಗಿನ ವಿವಾದವು ಸೃಷ್ಟಿಯಾಗಿದೆ. ಇಂತಹ ವಿವಾದವು ಕಾರ್ಯಾಂಗಕ್ಕಿಂತ ನ್ಯಾಯಾಂಗಕ್ಕೆ ಹೆಚ್ಚು ಹಾನಿ ಉಂಟು ಮಾಡುತ್ತದೆ. ಹಾಗಾಗಿ, ಈ ವಿವಾದವನ್ನು ತಪ್ಪಿಸಬಹುದಿತ್ತು. ನ್ಯಾಯಾಂಗವು ಸ್ವತಂತ್ರವಾಗಿರಲೇಬೇಕು ಮತ್ತು ವಿವಾದಾತೀತವಾಗಿಯೂ ಇರಬೇಕು. ಆದರೆ ಅದಷ್ಟೇ ಸಾಲದು. ಅದು ಹಾಗೆಯೇ ಇದೆ ಎಂಬುದು ಎಲ್ಲರ ಕಣ್ಣಿಗೂ ಕಾಣುವಂತಿರಬೇಕು.

ತೀರ್ಮಾನ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಜನರ ಭಾಗವಹಿಸುವಿಕೆ ಹೆಚ್ಚಾಗಬೇಕು

ಬಲಗೊಳ್ಳಲಿ ಪ್ರಜೆಗಳ 'ಪ್ರಭುತ್ವ'



ವಿಶ್ಲೇಷಣೆ

ಕಿರಣ್ ಎಂ. ಗಾಜನೂರು

'ಭಾರತದಲ್ಲಿ ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರು ಮತ್ತು ಮೇಲ್ವರ್ಗದ ಬಡವರು ಸೇರಿದಂತೆ ಶೇಕಡ 90ರಷ್ಟು ಜನ ತಮ್ಮ ಬದುಕಿನ ಎಲ್ಲಾ ಹಂತಗಳನ್ನು ಪ್ರಭಾವಿಸುವ 'ರಾಜಕೀಯ ತೀರ್ಮಾನ' ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಭಾಗಿಯಾಗುವ ಅವಕಾಶವನ್ನೇ ಹೊಂದಿಲ್ಲ'.

ಇದು, ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಇತ್ತೀಚೆಗೆ ನೀಡಿರುವ ಹೇಳಿಕೆ. ಹೀಗೆ ಹೇಳುವ ಮೂಲಕ ಅವರು, ಈ ಹಿಂದಿನ 75 ವರ್ಷಗಳಲ್ಲಿ ದೇಶದ ರಾಜಕೀಯ ಪ್ರಯೋಗವು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಹೇಗೆ ವ್ಯವಸ್ಥಿತವಾಗಿ ಚುನಾವಣೆಯಲ್ಲಿನ ಮತದಾನಕ್ಕೆ ಮಾತ್ರ ಸೀಮಿತಗೊಳಿಸಿದೆ, ಆ ಮೂಲಕ ಅದರ ಮೂಲ ಆಶಯವಾದ 'ತೀರ್ಮಾನ ತೆಗೆದುಕೊಳ್ಳುವ' ಪ್ರಕ್ರಿಯೆಯಿಂದ ಅಂಚಿನ ಸಮುದಾಯಗಳನ್ನು ಹೇಗೆ ಆಚೆ ಇಟ್ಟಿದೆ ಎನ್ನುವ, ವ್ಯವಸ್ಥೆಯ ಸೃಷ್ಟಿತ ಅಸಮಾನತೆಯತ್ತ ನಮ್ಮ ಗಮನ ಸೆಳೆದಿದ್ದಾರೆ.

ದಲಿತ, ಹಿಂದುಳಿದ, ಬುಡಕಟ್ಟು ಸಮುದಾಯಗಳ ವಿವರವಾದ ಸಮೀಕ್ಷೆಯನ್ನೇ ನಡೆಸದೆ, ಅವರ ಆರ್ಥಿಕ-ಸಾಮಾಜಿಕ ಸ್ಥಿತಿ, ಸಂಪನ್ಮೂಲದ ಮೇಲೆ ಅವರು ಹೊಂದಿರುವ ಅಧಿಕಾರದ ಪ್ರಮಾಣ ಎಷ್ಟು ಎಂಬ ಬಗ್ಗೆ ಅಧ್ಯಯನವನ್ನೇ ನಡೆಸದೆ, ಅವರ ಈ ಸ್ಥಿತಿಗೆ ಕಾರಣ ಯಾರು ಎಂಬ ಪ್ರಶ್ನೆಯನ್ನು ಕೇಳಿಕೊಂಡರೆ, ಬಹುಪಾಲು ಮೊದಲ ಆರೋಪಿ ಸ್ಥಾನದಲ್ಲಿ ಕಾಂಗ್ರೆಸ್ ಪಕ್ಷ ರಾಜಕಾರಣವೇ ನಿಲ್ಲುತ್ತದೆ. ತಮ್ಮ ಸಂವಾದದಲ್ಲಿ 'ಹೌದು, ಕಾಂಗ್ರೆಸ್ ತನ್ನ ಚರಿತ್ರೆಯಲ್ಲಿ ಹಲವು ತಪ್ಪುಗಳನ್ನು, ಅವೈಜ್ಞಾನಿಕ ನಿರ್ಣಯಗಳನ್ನು ಮಾಡಿದೆ. ಈಗ ಅವುಗಳನ್ನು ತಿದ್ದಿಕೊಳ್ಳುವ ಸಮಯ' ಎನ್ನುವ ಮೂಲಕ, ಈ ಸ್ಥಿತಿಗೆ ಕಾಂಗ್ರೆಸ್ ಸಹ ಕಾರಣ ಎನ್ನುವ ಸ್ವವಿಮರ್ಶೆಯ ಮಾತುಗಳನ್ನಾಡಿದ್ದಾರೆ ರಾಹುಲ್ ಅವರು.

ವಿರೋಧ ಪಕ್ಷದ ನಾಯಕನ ಈ ಹೇಳಿಕೆಯನ್ನು ಆಡಳಿತ ಪಕ್ಷದ ವಿರುದ್ಧದ ಮಾತು ಎಂದಷ್ಟೇ ನೋಡಿದರೆ ಅದೊಂದು ಸಂಕುಚಿತ ನೋಟಕ್ರಮವಾಗುತ್ತದೆ (ಈಗ ಮಾಧ್ಯಮಗಳಲ್ಲಿ ಅದೇ ನಡೆಯುತ್ತಿದೆ). ವಾಸ್ತವದಲ್ಲಿ ರಾಹುಲ್ ಅವರ ಈ ಹೇಳಿಕೆ ದೇಶದ ಪ್ರಜಾಪ್ರಭುತ್ವದ ಭವಿಷ್ಯದ ಆರೋಗ್ಯದ ದೃಷ್ಟಿಯಿಂದ ಅತ್ಯಂತ ಮಹತ್ವದ್ದು. ನಾವು ಚರಿತ್ರೆಯನ್ನು ಗಮನಿಸುವುದಾದರೆ, 1950ರಲ್ಲಿ ನಮ್ಮ ಸಂವಿಧಾನವನ್ನು ಜಾರಿಗೊಳಿಸುವಾಗಲೇ ಅಂಬೇಡ್ಕರ್ 'ನಾವು ಇಂದು ರಾಜಕೀಯವಾಗಿ ಒಂದು ಮತ, ಒಂದು ಮೌಲ್ಯ ಎನ್ನುವ ತತ್ವವನ್ನು ಅಳವಡಿಸಿದ ರಾಜಕೀಯ ಸಮಾನತೆಯನ್ನು ಒಪ್ಪಿದ ಮತ್ತು ಸಾಮಾಜಿಕವಾಗಿ ವಿಪರೀತ ಅಸಮಾನತೆಯನ್ನು ಹೊಂದಿರುವ ವೈರುಧ್ಯಮಯ ಸನ್ನಿವೇಶಕ್ಕೆ ಕಾಲಿಡುತ್ತಿದ್ದೇವೆ. ನಮಗೆ ಸಿಕ್ಕಿರುವ ರಾಜಕೀಯ ಪ್ರಜಾಪ್ರಭುತ್ವ ಆದಷ್ಟು ಬೇಗ ಸಾಮಾಜಿಕ ಪ್ರಜಾಪ್ರಭುತ್ವವನ್ನು ಸ್ಥಾಪಿಸುವ ಬದ್ಧತೆಯನ್ನು ತೋರಬೇಕು' ಎಂದಿದ್ದರು. ಈ ಮೂಲಕ, ಇಂದು ರಾಹುಲ್ ಎತ್ತಿರುವ ಪ್ರಶ್ನೆಯನ್ನೇ ಅಂದು ಅವರು ನೇತಾರರ ಮುಂದೆ ಇಟ್ಟಿದ್ದರು.

ಆ ನಂತರ ದೇಶದ ರಾಜಕೀಯದಲ್ಲಿ ಬಹಳಷ್ಟು ನೀರು ಹರಿದಿದೆ. ಬಹುತೇಕ ಎಲ್ಲ ಪಕ್ಷಗಳ ನೇತೃತ್ವದ ಸರ್ಕಾರಗಳು, ಬಹಳ ಮುಖ್ಯವಾಗಿ ರಾಜಕೀಯ ಪಕ್ಷಗಳು ಪ್ರಜಾಪ್ರಭುತ್ವವನ್ನು 'ರಾಜಕೀಯ ಅಧಿಕಾರ' ಪಡೆಯುವ ಸಾಧನವನ್ನಾಗಿ ನೋಡಿದವೇ ವಿನಾ ಅದು ಜನರನ್ನು ರಾಜಕೀಯವಾಗಿ, ಆರ್ಥಿಕವಾಗಿ ಸಬಲೀಕರಿಸುವ ಸಾಧನ ಎಂಬ ವಿಶಾಲ ಅರ್ಥದಲ್ಲಿ ನೋಡಲೇ ಇಲ್ಲ ಅನ್ನಿಸುತ್ತದೆ!

ಸಂವಿಧಾನಕ್ಕೆ ತಿದ್ದುಪಡಿ ತರುವುದರ ಮೂಲಕ ನಗರ ಸ್ಥಳೀಯ ಸರ್ಕಾರ ಮತ್ತು ಪಂಚಾಯತ್ ರಾಜ್ ವ್ಯವಸ್ಥೆಗೆ ದಕ್ಕಿದ ಸಾಂವಿಧಾನಿಕ ಮಾನ್ಯತೆ ಈ ಪ್ರಕ್ರಿಯೆಗೆ ಒಂದು ಅಪವಾದದಂತೆ ನಮ್ಮ ನಡುವೆ ಇದೆ. ಅದನ್ನೂ ಸ್ಥಳೀಯ ಮಟ್ಟದಲ್ಲಿ ರಾಜಕೀಯ ಅಧಿಕಾರ ಪಡೆಯುವ ಸಾಧನವನ್ನಾಗಿಯೇ ನಾವು ನೋಡುತ್ತಿದ್ದೇವೆ ವಿನಾ ಪ್ರಜಾಪ್ರಭುತ್ವದ ಸಾಮಾಜೀಕರಣದ ಭಾಗವಾಗಿ ಅಲ್ಲ. ಹಾಗಾಗಿಯೇ ಎಲ್ಲಾ ಮತದಾರರು ಸದಸ್ಯರಾಗಿರುವ ಜಗತ್ತಿನ 'ನೇರ ಪ್ರಜಾಪ್ರಭುತ್ವದ ಮಾದರಿ' ಎಂದು ಕರೆಸಿಕೊಳ್ಳುವ 'ಗ್ರಾಮಸಭೆ' ಇಂದು ವ್ಯವಸ್ಥಿತವಾಗಿ ನಿರ್ಲಕ್ಷ್ಯಕ್ಕೆ ಒಳಗಾಗಿದೆ.

ಇಂದು ಈ ಎಲ್ಲಾ ಚರ್ಚೆಗಳು ಏಕೆ ಮುಖ್ಯವಾಗುತ್ತವೆ ಎಂದರೆ, ಜಗತ್ತಿನಲ್ಲಿನ ಎಲ್ಲಾ ಸರ್ವಾಧಿಕಾರಿಗಳ ಉಗಮಕ್ಕೆ ಮುಖ್ಯ ಕಾರಣ 'ರಾಜಕೀಯ ತೀರ್ಮಾನ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಜನರ ಪಾಲ್ಗೊಳ್ಳುವಿಕೆಯನ್ನು ತಡೆದಿರುವುದು' ಎಂಬ ಅಂಶವನ್ನು ರಾಜಕೀಯ ಚಿಂತಕರು ತಮ್ಮ ಶೋಧನೆಗಳ ಮೂಲಕ ಖಚಿತಪಡಿಸಿದ್ದಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸ್ಥಿತಿವಂತಿಕೆಯ ಗುಂಪು- ಉದಾಹರಣೆಗೆ ರಾಜಕಾರಣಿಗಳು ಹಾಗೂ ಅಧಿಕಾರಶಾಹಿಯು- ಭ್ರಷ್ಟತೆ, ಸ್ವಜನಪಕ್ಷಪಾತ, ಅಧಿಕಾರ ದುರುಪಯೋಗದ ಮೂಲಕ ವೈಯಕ್ತಿಕ ಲಾಭ ಮಾಡಿಕೊಳ್ಳಲು ಮುಂದಾಗುತ್ತದೆ. ಇದರ ಸಲುವಾಗಿ, ತೀರ್ಮಾನ ತೆಗೆದುಕೊಳ್ಳುವ ಪ್ರಕ್ರಿಯೆಯಿಂದ ಜನರನ್ನು ವ್ಯವಸ್ಥಿತವಾಗಿ ಆಚೆ ಇಡುತ್ತದೆ.

ವ್ಯವಸ್ಥೆಯ ಮೇಲೆ ತಾವು ಯಾವುದೇ ಪರಿಣಾಮ ಬೀರಲು ಸಾಧ್ಯವಾಗುವುದಿಲ್ಲ ಎಂದು ಜನರಿಗೆ ಯಾವಾಗ ಮನದಟ್ಟಾಗುತ್ತಾ ಹೋಗುತ್ತದೋ ಆಗ ವ್ಯವಸ್ಥೆಯ ವಿರುದ್ಧ ನಿಧಾನವಾಗಿ ಸಿನಿಕತೆಯೊಂದನ್ನು ಅವರು ಬೆಳೆಸಿಕೊಳ್ಳುತ್ತಾರೆ. ಸಿನಿಕತೆಯಲ್ಲಿ ಇರುವ ಜನರ ಎದುರು ಅಲ್ಪಾವಧಿ ಮಾತನಾಡುವ ಸರ್ವಾಧಿಕಾರಿ ಗುಣವುಳ್ಳ ನಾಯಕ, ಎಲ್ಲಾ ಸಮಸ್ಯೆಗಳನ್ನು ತನ್ನಿಂದ ಮಾತ್ರ ಪರಿಹರಿಸಲು ಸಾಧ್ಯ ಎಂಬ ಭಾಷಣವನ್ನು ಮಂಡಿಸುತ್ತಾನೆ. ಈ ಮಾತುಗಳು ಸಿನಿಕರನ್ನು ಪ್ರಭಾವಿಸಿಬಿಡುತ್ತವೆ. ತಮ್ಮೆಲ್ಲಾ ಸಮಸ್ಯೆಗಳನ್ನು ಬಗೆಹರಿಸುವ 'ಸೂಪರ್ ಹೀರೊ'ನನ್ನು ಆ ಮಾದರಿಯ ಒಬ್ಬ 'ರಾಜಕೀಯ ನಾಯಕ'ನಲ್ಲಿ ಹುಡುಕಲು ಆರಂಭಿಸುತ್ತಾರೆ. ಈ ಅಂಶವು ಸರ್ವಾಧಿಕಾರಿ ಧೋರಣೆಯ ನಾಯಕನ ಉಗಮಕ್ಕೆ ಕಾರಣವಾಗುತ್ತದೆ.



ಜಗತ್ತಿನ ಎಲ್ಲಾ ಸರ್ವಾಧಿಕಾರಿಗಳು ಹುಟ್ಟಿರುವುದು ಪ್ರಜಾಪ್ರಭುತ್ವ ವ್ಯವಸ್ಥೆ ತನ್ನ ಕಾರ್ಯಾಚರಣೆಯಲ್ಲಿ ಜನರನ್ನು ಒಳಗೊಳ್ಳಲು ಸೋತ ಕಾರಣದಿಂದಲೇ. ಉದಾಹರಣೆಗೆ, ಲಿಬಿಯಾದ ಮೊಹಮ್ಮದ್ ಅಬು ಮಿನ್ಯಾರ್ ಗಡಾಫಿ ಆರಂಭದಲ್ಲಿ ಒಬ್ಬ ಕ್ರಾಂತಿಕಾರಿ ನಾಯಕನಾಗಿದ್ದ. ಅಲ್ಲಿನ ಪ್ರಜಾಪ್ರಭುತ್ವದ ಮಿತಿಗಳ ಕುರಿತು ತನ್ನ ಭಾಷಣಗಳ ಮೂಲಕ ವಿಮರ್ಶಿಸುತ್ತಲೇ ಅಧಿಕಾರ ಹಿಡಿದು ನಂತರ ಸರ್ವಾಧಿಕಾರಿಯಾಗಿ ಬದಲಾದ ಕಥನ ನಮ್ಮ ಕಣ್ಣೆದುರಿಗೇ ಇದೆ. ಚಿಲಿಯ ಆಗಸ್ಟೋ ಪಿನೋಚೆಟ್ ಉಗಾರ್ಟೆ, ಕಾಂಗೊದ ಮೊಬುಟು ಸೆಸೆ ಸೆಕೊ, ಜರ್ಮನಿಯ ಹಿಟ್ಲರ್ ಎಲ್ಲರೂ ಈ ಪಟ್ಟಿಯಲ್ಲಿ ಸೇರುತ್ತಾರೆ.

ಸರ್ವಾಧಿಕಾರಿ ವ್ಯವಸ್ಥೆಯನ್ನು ತಡೆಯಲು ಇರುವ ಸಾಧನವೆಂದರೆ, ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಗಟ್ಟಿಗೊಳಿಸುವುದು. ಅಂದರೆ 'ತೀರ್ಮಾನ ಕೈಗೊಳ್ಳುವ' ಪ್ರಕ್ರಿಯೆಯಲ್ಲಿ ಜನರ ಭಾಗವಹಿಸುವಿಕೆಯನ್ನು ಹೆಚ್ಚು ಹೆಚ್ಚು ಖಾತರಿಪಡಿಸುವುದು, ಅದಕ್ಕೆ ಪೂರಕವಾದ ವೇದಿಕೆಗಳನ್ನು ರೂಪಿಸುವುದು. ಈ ವಾದವನ್ನೇ ವಿಸ್ತರಿಸಿದ ಅಮರ್ತ್ಯ ಸೇನ್, 'ಬಡತನ ಎಂದರೆ ಆಹಾರ ಇಲ್ಲದ ಸ್ಥಿತಿ ಮಾತ್ರವಲ್ಲ ಬದಲಾಗಿ ವ್ಯಕ್ತಿಯು ನೈತಿಕ ಹಾದಿಯ ಮೂಲಕ ತಾನು ಬಯಸುವ ಬದುಕನ್ನು ಜೀವಿಸುವ ಸಾಮರ್ಥ್ಯ ಇಲ್ಲದ ಸ್ಥಿತಿ. ಅಭಿವೃದ್ಧಿ ಎಂದರೆ ರಾಜಕೀಯ ತೀರ್ಮಾನಗಳಲ್ಲಿ ವ್ಯಕ್ತಿಯು ಪರಿಣಾಮಕಾರಿಯಾಗಿ ಭಾಗವಹಿಸುವ ಮೂಲಕ ಈ ಎಲ್ಲಾ ಸಾಮರ್ಥ್ಯವನ್ನು ಗಳಿಸಲು ನಾವು ಕೊಡುವ ಅವಕಾಶ' ಎಂಬ ಅರ್ಥದಲ್ಲಿ ವ್ಯಾಖ್ಯಾನಿಸಿದ್ದರು.

ಈಗ ಚರ್ಚೆಯಲ್ಲಿರುವ ಮತ್ತು ಎಲ್ಲಾ ರಾಜಕೀಯ ಪಕ್ಷಗಳು ಮಾತನಾಡುತ್ತಿರುವ 'ಗ್ಯಾರಂಟಿ ಯೋಜನೆಗಳು', ಮುಖ್ಯವಾಗಿ ನೇರವಾಗಿ ಫಲಾನುಭವಿ ಖಾತೆಗೆ ಹಣ ನೀಡುವ ಯೋಜನೆಗಳು ಬರೀ ಕಲ್ಯಾಣ ರಾಜ್ಯದ ಬಡತನ ನಿರ್ಮೂಲನ ಕಾರ್ಯಕ್ರಮಗಳಷ್ಟೇ ಅಲ್ಲ. ಬದಲಾಗಿ, ತಮ್ಮ ಬದುಕಿಗೆ ಅಗತ್ಯವಾದ ಸರಕು-ಸೇವೆಗಳು ಯಾವುವು ಎಂಬುದನ್ನು ತೀರ್ಮಾನಿಸುವ ಅಧಿಕಾರವನ್ನು ಜನರಿಗೇ ನೀಡುವ 'ಆರ್ಥಿಕ ಪ್ರಜಾಪ್ರಭುತ್ವ'ದ ಸಾಧನಗಳನ್ನಾಗಿಯೂ ನಾವು ವಿಶ್ಲೇಷಿಸಬೇಕಿದೆ.

ನಾಳೆ (ಸೆ. 15) ವಿಶ್ವ ಪ್ರಜಾಪ್ರಭುತ್ವ ದಿನವನ್ನು ಆಚರಿಸುತ್ತಿದ್ದೇವೆ. ಈ ಸಂದರ್ಭದಲ್ಲಿ, ಪ್ರಜಾಪ್ರಭುತ್ವವನ್ನು ಅಧಿಕಾರ ಪಡೆಯುವ ಸಾಧನವನ್ನಾಗಿ ಮಾತ್ರ ನೋಡದೆ, ಜನರನ್ನು ಪ್ರಜಾತಾಂತ್ರಿಕವಾಗಿ ಸಬಲೀಕರಿಸುವ ಅವಕಾಶವಾಗಿ ನೋಡುವ ಕಣ್ಣೋಟವೊಂದನ್ನು ನಮ್ಮ ರಾಜಕೀಯ ನಾಯಕತ್ವ ಹೊಂದಬೇಕಿದೆ. ಅದರ ಮೊದಲ ಹೆಜ್ಜೆಯು ಸಮುದಾಯಗಳ ಸಮಾಜೋ- ಆರ್ಥಿಕ ಸ್ಥಿತಿಗತಿಗಳ ಅಧ್ಯಯನದಿಂದ ಆರಂಭವಾಗಬೇಕು. ಲೋಕಸಭೆಯ ವಿರೋಧ ಪಕ್ಷದ ನಾಯಕ ಮಾತನಾಡಿರುವುದು, 21ನೇ ಶತಮಾನದ ಭಾರತದ ಪ್ರಜಾಪ್ರಭುತ್ವ ತನ್ನ ಭವಿಷ್ಯದ ದೃಷ್ಟಿಯಿಂದ ಎಲ್ಲಾ ಸಮುದಾಯಗಳನ್ನು ಒಳಗೊಳ್ಳಲೇಬೇಕಾದ ಅನಿವಾರ್ಯದ ಕುರಿತು.

ಲೇಖಕ: ಸಹಾಯಕ ಪ್ರಾಧ್ಯಾಪಕ, ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಕಲಬುರಗಿ

ಚುರುಮುರಿ



ಕನ್ನಡ ಮೆಡಿಸಿನ್

• ಮಣ್ಣೆ ರಾಜು

'ವೈದ್ಯರು ಕನ್ನಡದಲ್ಲಿ ಔಷಧಿ ಚೀಟಿ ಬರೆಯುವ ಪದ್ಧತಿ ಬರಬೇಕು ಎಂಬ ಒತ್ತಾಯ ಹೆಚ್ಚಾಗ್ತಿದೆ ಕಣ್ರೀ' ಅಂದಳು ಸುಮಿ.

'ಹೌದು, ಕೊಡುವವರಿಗೂ ಕೊಳ್ಳುವವರಿಗೂ ಔಷಧಿ ಹೆಸರು ಅರ್ಥವಾಗಲಿ ಅಂತ' ಅಂದ ಶಂಕ್ರಿ.

'ಹೌದು, ಇಂಗ್ಲಿಷ್ ಪ್ರಭಾವದಲ್ಲಿ ವೈದ್ಯಕೀಯ ಕ್ಷೇತ್ರದ ಕನ್ನಡ ಅನಾರೋಗ್ಯಕ್ಕೀಡಾಗಿದೆ. ಭಾಷಾ ಔಷಧಿ ಕೊಟ್ಟು ಕನ್ನಡಕ್ಕೆ ಶಕ್ತಿ ತುಂಬಬೇಕು. ಮೆಡಿಕಲ್ ಅನ್ನು ಕನ್ನಡಕ್ಕೆ ಅನುವಾದಿಸಿಕೊಂಡು ಕನ್ನಡ ಬೆಳೆಸಲು, ಕನ್ನಡಿಗರನ್ನು ಉಳಿಸಲು ನೆರವಾಗಬೇಕು'.

'ಇಂಗ್ಲಿಷ್ ಹೆಸರಿನ ಕಾಯಿಲೆ, ಔಷಧಿಗಳನ್ನು ಕನ್ನಡಕ್ಕೆ ತರ್ಜುಮೆ ಮಾಡೋದು ಕಷ್ಟವಾದರೆ ಇಂಗ್ಲಿಷ್ ಹೆಸರನ್ನೇ ಕನ್ನಡದಲ್ಲಿ ಬರೆಯುವಂತಾದರೂ ಸಾಕು ನಮ್ಮಂತಹ ಸಾಮಾನ್ಯರಿಗೆ ಸಹಾಯವಾಗುತ್ತದೆ'.

'ಇಂಗ್ಲಿಷ್ ಹೆಸರಿನ ಔಷಧಿಯನ್ನು ಕನ್ನಡದಲ್ಲಿ ಸ್ಪೆಲಿಂಗ್ ತಪ್ಪಿಲ್ಲದೆ ಚೀಟಿ ಬರೆಯಲು ವೈದ್ಯರು ಕನ್ನಡ ಕಾಗುಣಿತ ಜ್ಞಾನ ಬೆಳೆಸಿಕೊಳ್ಳಬೇಕಾಗುತ್ತದೆ'.

'ವೈದ್ಯಕೀಯ ಶಿಕ್ಷಣದಲ್ಲೂ ಕನ್ನಡ ಮೀಡಿಯಂ ಇದ್ದಿದ್ದರೆ ಈ ಸಮಸ್ಯೆ ಎದುರಾಗುತ್ತಿರಲಿಲ್ಲ'.

'ಕನ್ನಡ ಮೀಡಿಯಂ ಸಾಧ್ಯವಾಗದಿದ್ದರೆ ಬೇಡ, ಮೆಡಿಕಲ್ ಸಿಲೆಬಸ್‌ನಲ್ಲಿ ಔಷಧ ವಿಜ್ಞಾನದ ಕನ್ನಡ ಪಠ್ಯವನ್ನು ಅಳವಡಿಸಿದರೆ ವೈದ್ಯರು ಕನ್ನಡ ಔಷಧಿ ಚೀಟಿ ಬರೆಯಲು ಅನುಕೂಲವಾಗುತ್ತದೆ, ಕನ್ನಡದ ಆರೋಗ್ಯವೂ ಸುಧಾರಿಸುತ್ತದೆ'.

'ರೂಪಾಯಿ ನೋಟಿನ ಮೇಲೆ ಪ್ರಾದೇಶಿಕ ಭಾಷೆ ಇರುವಂತೆ ಔಷಧಿ, ಮಾತ್ರೆ ಪ್ಯಾಕೆಟ್ ಮೇಲೆ ಕನ್ನಡದಲ್ಲಿ ಹೆಸರು ಮುದ್ರಿಸಿದರೆ ರೋಗಿಗಳಿಗೂ ಅವರನ್ನು ನೋಡಿಕೊಳ್ಳುವವರಿಗೂ ಔಷಧಿ ಅರ್ಥವಾಗುತ್ತದೆ'.

'ವೈದ್ಯರ ಔಷಧಿ ಚೀಟಿಯ ಇಂಗ್ಲಿಷ್ ಬರಹ ಇಂಗ್ಲಿಷ್ ಬಲ್ಲವರಿಗೇ ಅರ್ಥವಾಗುವುದಿಲ್ಲ, ಡಾಕ್ಟರ್‌ಗಳ ಕೈಬರಹ ಜನಸಾಮಾನ್ಯರಿಗೂ ಅರ್ಥವಾಗಬೇಕು ಅಲ್ವೇನ್ರೀ?'

'ಹಾಗಂತ, ಕನ್ನಡ ಕಾಪಿರೈಟಿಂಗ್ ಬರೆದು ಹ್ಯಾಂಡ್‌ರೈಟಿಂಗ್ ಇಂಪ್ರೂವ್ ಮಾಡಿಕೊಳ್ಳಿ ಅಂತ ಡಾಕ್ಟರ್‌ಗಳಿಗೆ ಹೇಳೋದು ಉದ್ಧಟತನವಾಗುತ್ತದೆ, ಸುಮ್ನಿರು!' ಶಂಕ್ರಿ ಎಚ್ಚರಿಸಿದ.

ದಿನದ ಟ್ವೀಟ್

ಸಾರ್ವಜನಿಕ ಸಾರಿಗೆ ಬಲಪಡಿಸಿ



ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಸುಧಾರಿಸುವ ದಿಸೆಯಲ್ಲಿ ಯಾವ ಸರ್ಕಾರವೂ ಸರಿಯಾಗಿ ಕೆಲಸ ಮಾಡಿಲ್ಲ. ಈ ಕಾರ್ಯದಲ್ಲಿ ಯಾವಾಗಲೂ ವಿಳಂಬ ಧೋರಣೆಯನ್ನೇ ಅನುಸರಿಸಲಾಗುತ್ತದೆ. ಯಾವ ಪಕ್ಷವೇ ಆಗಲಿ ರಾಜಕೀಯ ಇಚ್ಛಾಶಕ್ತಿಯ ಕೊರತೆ ಕಾಣುತ್ತದೆ. ಸಬ್‌ಅರ್ಬನ್ ರೈಲು ವಿಳಂಬವಾಯಿತು, ಮೆಟ್ರೊ ವಿಳಂಬವಾಯಿತು... ಮಾಲಿನ್ಯವನ್ನು ಬಹುವಾಗಿ ನಿಯಂತ್ರಿಸುವ ಸಿಎನ್‌ಜಿಯನ್ನು ಬಸ್‌ಗಳಲ್ಲಿ ಬಳಸದಿರುವುದೇಕೆ ಎಂಬುದು ತಿಳಿಯುವುದಿಲ್ಲ.

ಕಮಲಾಕರ್ ಪಂಡಿತ್

ಎಲ್ಲರ ತಪ್ಪನ್ನೂ ಖಂಡಿಸೋಣ



ಹಿಂದೂ ಮೂಲಭೂತವಾದಿಗಳ ಕುರಿತು ಮಾತನಾಡುವಾಗ ತೋರುವ ನಿಷ್ಠುರತೆ, ಕಠೋರತೆಯನ್ನು ಮುಸ್ಲಿಂ ಮೂಲಭೂತವಾದಿಗಳ ಕುರಿತಾಗಿ ಹೇಳುವಾಗ ತೋರಿಸದಿದ್ದರೆ ನಾವು ಎಡಬಿಡಂಗಿಗಳಾಗುತ್ತೇವೆ, ಪಕ್ಷಪಾತಿಗಳಾಗುತ್ತೇವೆ. ಕ್ರಮೇಣ ನಮ್ಮ ಮಾತಿಗಿರುವ ಗೌರವವನ್ನು ಕೂಡ ಕಳೆದುಕೊಳ್ಳುತ್ತೇವೆ.

ಕಿರಣ್ ಕೊಡ್ಲಾಡಿ

ಕಿಡಿನುಡಿ



ಅನ್ನಪೂರ್ಣ ಹೋಟೆಲ್ ಸಮೂಹದ ಮಾಲೀಕ ಶ್ರೀನಿವಾಸನ್ ಅವರು ಜಿಎಸ್‌ಟಿಗೆ ಸಂಬಂಧಿಸಿದಂತೆ ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಕೊಯಮತ್ತೂರಿನ ಸಾರ್ವಜನಿಕ ಸಭೆಯಲ್ಲಿ ಕೆಲವು ಪ್ರತಿಕ್ರಿಯೆಗಳನ್ನು ನೀಡಿದರು. ಆ ಬಳಿಕ ಶ್ರೀನಿವಾಸನ್ ಅವರು ಖಾಸಗಿ ಸಭೆಯಲ್ಲಿ ಒತ್ತಾಯಪೂರ್ವಕವಾಗಿ ಸಚಿವೆಯ ಕ್ಷಮೆ ಕೋರಿದ ವಿಡಿಯೊ ಹರಿದಾಡುತ್ತಿದೆ. ಹಣಕಾಸು ಸಚಿವರಿಗೆ ನಾಚಿಕೆಯಾಗಬೇಕು. ಪ್ರತಿಕ್ರಿಯೆ ನೀಡಿದ ಉದ್ಯಮಿಯನ್ನು ನಡೆಸಿಕೊಳ್ಳುವ ಬಗೆಯೇ ಇದು? ನಮ್ಮ ಉದ್ಯಮಿಗಳಿಗೆ ಬೆದರಿಕೆ ಇದೆಯೇ?...

ಡಿ.ಮುತ್ತುಕೃಷ್ಣನ್, ಹೂಡಿಕೆದಾರ

50 ವರ್ಷಗಳ ಹಿಂದೆ

ಶನಿವಾರ, 14-9-1974

• **ಹಣಕಾಸು ಶಿಸ್ತಿನ ಜತೆಯಲ್ಲೇ ಉತ್ಪಾದನೆ, ಆಡಳಿತ ದಕ್ಷತೆಗೆ ರಿಸರ್ವ್ ಬ್ಯಾಂಕಿನ ಸಪ್ತ ಸಲಹೆ**

ಮುಂಬೈ, ಸೆ. 13– ಹಣದುಬ್ಬರ ತಡೆಗೆ ಹಣಕಾಸು ವಿಚಕ್ಷಣೆಯ ಜತೆಗೆ ಇತರ ಕ್ರಮಗಳೂ ಅಗತ್ಯವೆಂದು ರಿಸರ್ವ್ ಬ್ಯಾಂಕ್ ಸೂಚಿಸಿದೆ.

ಆಹಾರಧಾನ್ಯಗಳ ವಿತರಣೆಗೆ ದಕ್ಷ ಸರ್ಕಾರಿ ವ್ಯವಸ್ಥೆ, ಕಪ್ಪುಹಣಕ್ಕೆ ತಡೆ, ಹಣ ಸರಬರಾಜು ಕಡಿಮೆ ಮಾಡುವಿಕೆ ಹಾಗೂ ಕೃಷಿ ಮತ್ತು ಕೈಗಾರಿಕಾ ಉತ್ಪಾದನೆ ಹೆಚ್ಚಿಸಲು ದೃಢ ನಿರ್ಧಾರಯುತ ಪ್ರಯತ್ನ... ಇವುಗಳು ಬ್ಯಾಂಕಿನ ಏಳು ಪ್ರಮುಖ ಸೂಚನೆಯಲ್ಲಿ ಸೇರಿವೆ.

• **ಇದು ಬದುಕಲ್ಲ, ಬರಿ ಬವಣೆ**

ಬೆಂಗಳೂರು, ಸೆ. 13– ಐದು ತಿಂಗಳಲ್ಲಿ ನೂರಕ್ಕೆ ಸರಾಸರಿ ಮೂವತ್ತರಷ್ಟು ಬೆಲೆ ಏರಿಕೆ. ಜನಸಾಮಾನ್ಯರ ನಿತ್ಯಬಳಕೆಯ ವಸ್ತುಗಳಾದ ಎಣ್ಣೆ, ಬೇಳೆ, ಕಾಳು, ಮೈ ಸಾಬೂನು, ಬೆಲ್ಲ, ಸಕ್ಕರೆ ಮೊದಲಾದವುಗಳ ಬೆಲೆಯು ಹಬ್ಬಗಳ ಸರಣಿ ಪ್ರಾರಂಭವಾದಂತೆ ಜೀವನಕ್ಕೆ ದುರ್ಭರ ಪರಿಸ್ಥಿತಿ ಇರುವ ಜನಸಾಮಾನ್ಯರಿಗೆ ದಿಕ್ಕು ತೋಚದಂತೆ ಮಾಡಿರುವ ಸಮಸ್ಯೆ.

ನಿಗದಿಯಾದ ವರಮಾನ. ಆದರೆ ಪ್ರತಿದಿನ ಏರುಮುಖವಾಗಿರುವ ಮಾರುಕಟ್ಟೆ. ಮಿತವಾಗಿ ಬಳಸಿ–ಉಳಿಸಿ ಎಂಬ ಸರ್ಕಾರದ ಘೋಷಣೆಯನ್ನು ಕಾನೂನು ಮೂಲಕ ಜಾರಿಗೆ ತರಬೇಕಾಗಿಲ್ಲ... ಕಾರಣ, ಕೊಳ್ಳಲು ಕಾಸಿಲ್ಲದೆ, ಬದುಕಲು ಸಾಧ್ಯವಾದ ಕಡೆಗಳಲ್ಲೆಲ್ಲಾ ಸಾಲ ಮಾಡಿದರೂ ಬವಣೆ ತಪ್ಪದ ಪರಿಸ್ಥಿತಿ.

ಪೌಷ್ಟಿಕ ಆಹಾರದ ಮಾತಿರಲಿ, ಹೊಟ್ಟೆ ತುಂಬಲು ಏನಾದರೂ ಸಿಕ್ಕಿದರೆ ಸಾಕೆಂದು ಕಾತರ ಪಡುವ ಸನ್ನಿವೇಶ.

• **ಮೈಸೂರಿನಲ್ಲಿ ಲಲಿತಮಹಲ್ ಹೋಟೆಲ್ ಆರಂಭ**

ಮೈಸೂರು, ಸೆ. 13– ಇದುವರೆಗೆ ರಾಜಮಹಾರಾಜರೂ ಗಣ್ಯ ವ್ಯಕ್ತಿಗಳೂ ಇಳಿದುಕೊಳ್ಳುತ್ತಿದ್ದ ಲಲಿತಮಹಲ್ ಇಂದಿನಿಂದ ಸಾರ್ವಜನಿಕರೂ ಇಳಿದುಕೊಳ್ಳಬಹುದಾದ ಹೋಟೆಲ್ ಆಗಿ ತೆರೆಯಲ್ಪಟ್ಟಿತು. ಕೇಂದ್ರ ಪ್ರವಾಸೋದ್ಯಮ ಖಾತೆ ಸಚಿವೆ ಡಾ. ಸರೋಜಿನಿ ಮಹಿಷಿ ಅವರು ಈ ಭವ್ಯ ಹೋಟೆಲನ್ನು ಉದ್ಘಾಟಿಸಿದರು.

ಸಂಗತ

ಅರಿಯೋಣ ಹಬ್ಬದ ಒಳತಿರುಳು

ಹಬ್ಬ–ಆಚರಣೆಗಳು ಸಂಭ್ರಮ, ಸಾಮರಸ್ಯದ ಪ್ರತೀಕಗಳಾಗಿ ಉಳಿಯಲಿ

• ಚನ್ನು ಅ. ಹಿರೇಮಠ

ಮಂಡ್ಯ ಜಿಲ್ಲೆಯ ನಾಗಮಂಗಲದಲ್ಲಿ ಗಣೇಶ ಮೂರ್ತಿ ವಿಸರ್ಜನೆಯ ವೇಳೆ ಇತ್ತೀಚೆಗೆ ಕೋಮು ಗಲಭೆ ಸಂಭವಿಸಿ, ಜನರ ಆಸ್ತಿಪಾಸ್ತಿ ಅಪಾರ ಪ್ರಮಾಣದಲ್ಲಿ ನಷ್ಟಕ್ಕೀಡಾಗಿರುವುದು ವರದಿಯಾಗಿದೆ. ಹಬ್ಬಹರಿದಿನಗಳ ಸಂದರ್ಭದಲ್ಲಿ ಇಂಥ ಪ್ರಕರಣಗಳು ಆಗಾಗ್ಗೆ ಜರುಗುತ್ತಲೇ ಇವೆ. ಹೀಗಾಗಿ, ಯಾವ ಹಬ್ಬ ಬಂದರೆ ಎಲ್ಲಿ, ಯಾವಾಗ ಗಲಾಟೆ ಆರಂಭವಾಗುತ್ತದೋ ಎನ್ನುವ ಆತಂಕ ಆವರಿಸುವಂತಾಗಿದೆ. ಹಬ್ಬ-ಆಚರಣೆಗಳು ಯಾವುದೇ ಬಗೆಯಲ್ಲಿ ಅಸಹನೆಯ ಪ್ರದರ್ಶನಕ್ಕೆ ಅನುವು ಮಾಡಿಕೊಡದಂತೆ ನೋಡಿಕೊಳ್ಳಬೇಕು.

ಇಂತಹ ಸಂಘರ್ಷಗಳಿಂದ ಅಂತಿಮವಾಗಿ ಬಲಿಪಶುಗಳಾಗುವವರು ಜಾತಿ-ಧರ್ಮಗಳ ಸೋಂಕಿಲ್ಲದೆ ತಮ್ಮ ಪಾಡಿಗೆ ತಾವು ಬದುಕುತ್ತಿರುವ ಅಮಾಯಕರು. ಕೆಲವೆಡೆ ಲಾಂಗ್, ಮಚ್ಚು, ಪೆಟ್ರೋಲ್ ಬಾಂಬ್, ದೊಣ್ಣೆಗಳನ್ನು ಹಿಡಿದು ಹಬ್ಬದ ಮೆರವಣಿಗೆಗಳಲ್ಲಿ ಪಾಲ್ಗೊಳ್ಳಲಾಗುತ್ತದೆ. ಶಾಂತಿ, ನೆಮ್ಮದಿಗೆ ಕಾರಣವಾಗಬೇಕಾದ ಹಬ್ಬದ ಮೆರವಣಿಗೆಯಲ್ಲಿ ಇಂತಹ ಅಸ್ತ್ರಗಳಿಗೆ ಏನು ಕೆಲಸ ಎಂಬುದು ಅರ್ಥವಾಗದ ಸಂಗತಿ.

ಶತಶತಮಾನಗಳಿಂದಲೂ ಯಾವ ಧರ್ಮಪ್ರವರ್ತಕರೂ ತಮ್ಮ ಧರ್ಮ ಹೆಚ್ಚು, ಬೇರೊಂದು ಧರ್ಮ ಕೀಳು ಎಂಬ ಉಪದೇಶವನ್ನು ಮಾಡಿಲ್ಲ. ಹೀಗಿದ್ದರೂ ಧರ್ಮಾನುಯಾಯಿಗಳ ತಲೆಯಲ್ಲಿ ಮೇಲು–ಕೀಳಿನ ಹುಳ ಬಿಟ್ಟವರು ಮತ್ತು ಬಿಡುತ್ತಿರುವವರು ಯಾರು ಎಂಬುದು ನಿಗೂಢವಾಗಿಯೇ ಇದೆ. ಧಾರ್ಮಿಕ ಆಚರಣೆಗಳು ಅವರವರ ವೈಯಕ್ತಿಕ ಆಸಕ್ತಿ ಮತ್ತು ಆದ್ಯತೆ. ಬೇರೆ ಬೇರೆ ಧರ್ಮದವರ ಭಾವನೆಗಳಿಗೆ, ಸಾಮಾಜಿಕ ಸಾಮರಸ್ಯಕ್ಕೆ ಪರಸ್ಪರ ಗೌರವ ಕೊಡಬೇಕು, ಸೌಹಾರ್ದದ ನಡೆ–ನುಡಿಗಳಿಂದ ಪೂರಕವಾಗಿ ವರ್ತಿಸಬೇಕು. ಅದುಬಿಟ್ಟು ಮತಾಂಧ ಕೃತ್ಯಗಳಿಂದ ಪರಸ್ಪರ ಹಾನಿಗೀಡಾಗಿ, ಮನೋಕ್ಷೋಭೆ, ಸಂಕಷ್ಟಗಳಿಂದ ಬಳಲುವುದು ಯಾರಿಗೂ ಶೋಭೆ ತರುವುದಿಲ್ಲ.

ಇಂಥವೆಲ್ಲ ಅಪಸವ್ಯಗಳ ಮಧ್ಯೆ ಕೊಡಗು ಜಿಲ್ಲೆಯ ಬೋಯಿಕೇರಿಯಲ್ಲಿ ಆಯೋಜಿಸಿದ್ದ ಗಣೇಶೋತ್ಸವ ಅಚ್ಚರಿಯ ಜೊತೆಗೆ ಆನಂದವನ್ನೂ ಉಂಟು ಮಾಡುವಂತಹುದಾಗಿದೆ. ಹಿಂದೂ, ಮುಸ್ಲಿಂ, ಕ್ರೈಸ್ತ ಹೀಗೆ ಎಲ್ಲ ಧರ್ಮೀಯರೂ ಸೇರಿ ಸಮಿತಿ ರಚಿಸಿಕೊಂಡು, ಸಂತಸ, ಸಂಭ್ರಮದಿಂದ ಗಣೇಶೋತ್ಸವ ಆಚರಿಸಿದ್ದಾರೆ. ಹೀಗೆ ಸರ್ವಧರ್ಮದವರೂ ಸಮಸ್ತ ಸಮುದಾಯದವರೂ ಸಂಘಟಿತರಾಗಿ ಆಚರಿಸುವ ಹಬ್ಬಗಳು ನಿಜಕ್ಕೂ ಮನಕ್ಕೆ ಮುದ ನೀಡುತ್ತವೆ, ಬಾಂಧವ್ಯ ವರ್ಧಿಸುತ್ತವೆ, ಬಂಧುರತೆಯನ್ನು ಹೆಚ್ಚಿಸುತ್ತವೆ. ಮುಖ್ಯವಾಗಿ, ಸುರಕ್ಷತಾ ಭಾವವನ್ನು ಉದ್ದೀಪಿಸುತ್ತವೆ. ಅದರ ಸಂಭ್ರಮ, ಸುಖವನ್ನು ಬಣ್ಣಿಸುವುದು ಸಾಧ್ಯವೇ ಇಲ್ಲ, ಅನುಭವಿಸಿದಾಗಷ್ಟೇ ಅದು ನಮ್ಮ ಅರಿವಿಗೆ ಬರುವುದು. ಹೀಗಾದಾಗ ಹಬ್ಬದ ಒಳತಿರುಳು ಅರ್ಥವಾಗುತ್ತದೆ.

ವಿಚಿತ್ರವೆಂದರೆ, ಇಂತಹ ಸುಖವನ್ನು ಎಲ್ಲೆಡೆ, ಸಾರ್ವತ್ರಿಕವಾಗಿ ಅನುಭವಿಸಿ ಸಾಮರಸ್ಯ, ಸಂಭ್ರಮದ ಸುಖಾನುಭೂತಿಯನ್ನು ಪಡೆದ ವರದಿಗಳು 'ಅಚ್ಚರಿ'ಯ ಸಂಗತಿಗಳಾಗಿ ಮಾಧ್ಯಮಗಳಲ್ಲಿ ವರದಿಯಾಗುತ್ತವೆ. ಬದಲಾಗಿ ಅನುದಿನವೂ 'ಎಲ್ಲರನ್ನೂ ಒಳಗೊಂಡ' ಆಚರಣೆಗಳು ನಮ್ಮ ಸಮಾಜದಲ್ಲಿ ನಡೆಯುವಂತಾದರೆ 'ಸರ್ವ ಜನಾಂಗದ ಶಾಂತಿಯ ತೋಟ' ಎಂಬ ಕವಿವಾಣಿಯ ಆಶಯ ಸಾಕಾರಗೊಳ್ಳುತ್ತದೆ.

ಧಾರ್ಮಿಕ ಸಂಗತಿಗಳನ್ನು ನಮ್ಮ ಸಮುದಾಯಗಳು ರಾಜಕೀಯ ಹಿನ್ನೆಲೆಯಲ್ಲಿಯೇ ಪರಿಗಣಿಸುವುದಾದರೆ ಅದಕ್ಕೆ ಅರ್ಥವೇ ಇರುವುದಿಲ್ಲ. ಏಕೆಂದರೆ, ರಾಜಕೀಯವು ಸಂಘರ್ಷಗಳಿಂದಲೇ ಶುರುವಾಗುತ್ತದೆ. ಪ್ರಬುದ್ಧ ರಾಜಕಾರಣಿ ಅಥವಾ ಸಮಷ್ಟಿಪ್ರಜ್ಞೆಯ ರಾಜಕಾರಣ ಇಂದು ಕಾಣಸಿಗುವುದು ಅತಿ ದುರ್ಲಭ. ಬಹುತೇಕ ರಾಜಕೀಯ ಧುರೀಣರು ನೇರವಾಗಿ ಕೋಮು ಸಂಘರ್ಷಕ್ಕೆ ಇಳಿಯುವುದಿಲ್ಲ. ಏಕೆಂದರೆ ಅವರಿಗೆ ಚುನಾವಣೆಯ ಸಮಯದಲ್ಲಿ ಎಲ್ಲ ಕೋಮಿನವರೂ ಬೇಕು. ಇದುವರೆಗಿನ ಯಾವುದೇ ಕೋಮು ಸಂಘರ್ಷದಲ್ಲಿ ಒಬ್ಬ ರಾಜಕಾರಣಿ ಅಥವಾ ಅವನ ಕುಟುಂಬಸ್ಥರು ಭಾಗಿಯಾಗಿರುವುದನ್ನು ಅಥವಾ ಬಂಧನಕ್ಕೆ ಒಳಗಾಗಿರುವುದನ್ನು ನಾವು ಗಮನಿಸಿದ್ದೇವೆಯೇ, ಪ್ರಾಯಶಃ ಇಲ್ಲ!



ದಯನೀಯ ಸ್ಥಿತಿಯಲ್ಲಿರುವ, ಅಂದಂದಿನ ದುಡಿಮೆಯಿಂದಲೇ ಅವರವರ ಜೀವನ ನಡೆಯುವಂಥ ಯುವಕರನ್ನು ರಾಜಕೀಯ ನೇತಾರರು ಪರಸ್ಪರ ಎತ್ತಿ ಕಟ್ಟುತ್ತಾರೆ. ಅದು, ಕೋಮುಸಂಘರ್ಷಕ್ಕೆ ದಾರಿ ತೆಗೆಯುತ್ತದೆ. ರಾಜಕೀಯ ಪಕ್ಷಗಳ ನಿಯೋಗಗಳ ಭೇಟಿ, ನಷ್ಟ ಪರಿಹಾರದ ಭರ್ತಿ, ಗಲಭೆಕೋರರ ವಿರುದ್ಧ ಕಠಿಣ ಕ್ರಮದಂತಹ ಮಾತುಗಳು ಬರೀ ಕಣ್ಣೊರೆಸುವ ತಂತ್ರಗಳು. ನಮ್ಮ ಯುವ ಪೀಳಿಗೆ ಇಂತಹ ಮಾತುಗಳಿಗೆ ಮರುಳಾಗದೆ, ತಮ್ಮ ಬದುಕು, ಭವಿಷ್ಯವನ್ನು ಗಮನದಲ್ಲಿಟ್ಟು, ಕುಟುಂಬದ ಸದಸ್ಯರ ಕ್ಷೇಮ, ತಮ್ಮ ವಿದ್ಯಾಭ್ಯಾಸದಂತಹ ಸಂಗತಿಗಳಿಗೆ ಗಮನ ನೀಡಬೇಕು. ಯಾರದೋ ಮಾತು ಕೇಳಿ, ಯಾರದೋ ಮನೆ, ಅಂಗಡಿಗೆ ಕಲ್ಲು ತೂರಾಡಿ, ಬೆಂಕಿ ಹಚ್ಚಿ, ತಾನು ಕಾರಾಗೃಹದಲ್ಲಿ ಕೈದಿಯಾಗುವುದರಿಂದ ತನ್ನ ಕುಟುಂಬಕ್ಕೆ ಹೊರೆ ಆಗಬಲ್ಲನೇ ವಿನಾ ಕುಟುಂಬದ ಭಾರ ಹೊರುವ ಜವಾಬ್ದಾರಿಯ ಮಗನಂತೂ ಆಗಲಾರ.

ಈ ಮಧ್ಯೆ ಕೋಮು ಘರ್ಷಣೆಗೆ ಕಾರಣವಾಗಬಹುದಾದ ಸಂಗತಿಗಳನ್ನು ಆಯಾ ಸಮುದಾಯದ ಮುಖಂಡರು ತಮ್ಮ ಅನುಭವದ ಹಿನ್ನೆಲೆಯಲ್ಲಿ ಗ್ರಹಿಸಿ, ಗುರುತಿಸಿ, ಪ್ರಬುದ್ಧತೆಯಿಂದ ಕೂತು ಬಗೆಹರಿಸಿಕೊಳ್ಳಬೇಕು. ನಮ್ಮಷ್ಟಕ್ಕೆ ನಾವೇ ಸರಿತಪ್ಪುಗಳನ್ನು ವಿಶ್ಲೇಷಿಸಿಕೊಂಡು, ಸಮಷ್ಟಿ ಪ್ರಜ್ಞೆಯಿಂದ ಬಾಳಿದರೆ ರಾಜಕಾರಣಿಗಳು ಸಮುದಾಯಗಳ ತಂಟೆಗೆ ಬರುವುದಿಲ್ಲ. ಸಮಾಜವು ಸುರಕ್ಷಿತವಾಗುವುದಲ್ಲದೆ, ಸುಭದ್ರವಾಗಿ ಜೀವನ ಸಾಗಿಸಲು ಸಹಾಯವಾಗುತ್ತದೆ.

ದೈನಂದಿನ ಬದುಕು ಮುಖ್ಯವೇ ವಿನಾ ಎಂದೋ ಒಂದು ದಿನ ಯಾರಿಗೋ ಹಾನಿ ಮಾಡಿ ಸುಖದ ಭ್ರಮೆಯಲ್ಲಿ ತೇಲಾಡುವುದು ಯಾರಿಗೂ ಒಳಿತಲ್ಲ.

ವಾಚಕರ ವಾಣಿ

ಸಂಘಟಿತ ಪ್ರಯತ್ನದಿಂದ ಒಕ್ಕೂಟ ವ್ಯವಸ್ಥೆಗೆ ಬಲ

ಕೇಂದ್ರದ ವಿವಿಧ ತೆರಿಗೆಗಳಲ್ಲಿ ರಾಜ್ಯಗಳಿಗೆ ನ್ಯಾಯಯುತ ಪಾಲು ಕೇಳಲು ಕೇರಳ ಮುಖ್ಯಮಂತ್ರಿಯ ಅಧ್ಯಕ್ಷತೆಯಲ್ಲಿ ನಡೆದ ಕೆಲವು ರಾಜ್ಯಗಳ ಹಣಕಾಸು ಸಚಿವರ ಸಭೆಯಲ್ಲಿ ನಡೆದ ಚರ್ಚೆಗಳು ಹಾಗೂ ಈ ಕುರಿತು ಕರ್ನಾಟಕವು ರಾಜ್ಯಗಳ ಬೇಡಿಕೆ ಕುರಿತು ಒಂಬತ್ತು ರಾಜ್ಯಗಳ ಸಭೆ ಆಯೋಜಿಸಲು ಉದ್ದೇಶಿಸಿರುವುದು ಒಂದು ಸಕಾರಾತ್ಮಕ ಬೆಳವಣಿಗೆ. ಹದಿನೈದನೇ ಹಣಕಾಸು ಆಯೋಗ ಮತ್ತು ಕೇಂದ್ರ ಸರ್ಕಾರದ ತರತಮ ನೀತಿಯಿಂದಾಗಿ ಕರ್ನಾಟಕವು ತೆರಿಗೆ ಹಂಚಿಕೆಯಲ್ಲಿ ಕೇಂದ್ರದಿಂದ ದೊಡ್ಡ ಪ್ರಮಾಣದಲ್ಲಿ ಅನ್ಯಾಯಕ್ಕೆ ಒಳಗಾಗಿ, ದೊಡ್ಡ ಮೊತ್ತದ ಅನುದಾನದಿಂದ ವಂಚಿತವಾಯಿತು. ಇದೇ ರೀತಿ ಇನ್ನೂ ಕೆಲವು ರಾಜ್ಯಗಳು ನಷ್ಟಕ್ಕೆ ಒಳಗಾದವು. ಈಗ ರಾಜ್ಯ ಸರ್ಕಾರವು ಈ ಬಗೆಯ ತಾರತಮ್ಯವನ್ನು ಸರಿಪಡಿಸಲು ಹದಿನಾರನೇ ಹಣಕಾಸು ಆಯೋಗದ ಮುಂದೆ ಆಗ್ರಹಿಸಿದ್ದರೂ ಕೊನೆಗೆ ಕೇಂದ್ರ ಸರ್ಕಾರ ರಾಜಕೀಯ ಕಾರಣಗಳಿಗಾಗಿ ಅದಕ್ಕೆ ಸ್ಪಂದಿಸುವುದು ಸಂಶಯಾಸ್ಪದವಾಗಿದೆ.

ಕೇಂದ್ರದ ತಾರತಮ್ಯ ನೀತಿಯನ್ನು ವಿರೋಧಿಸಲು ರಾಜ್ಯ ಸರ್ಕಾರಗಳು ಒಟ್ಟಾಗಿ ಹೋರಾಡುವುದು ಇಂದು ಬಹಳ ಮುಖ್ಯವಾಗಿದೆ. ಒಕ್ಕೂಟ ವ್ಯವಸ್ಥೆಯನ್ನು ಬಲಪಡಿಸಲು ಕೂಡ ಇದು ಅವಶ್ಯಕ. ನ್ಯಾಯಾಂಗದ ಮೂಲಕವೂ ಹೋರಾಡಬೇಕಾದ ಅಗತ್ಯ ಇದೆ. ಇದೇ ರೀತಿ ರಾಜ್ಯ ಸರ್ಕಾರಗಳು ಒಟ್ಟಾಗಿ ದೇಸಿ ಭಾಷೆಗಳಿಗೆ ಎಲ್ಲ ಹಂತದಲ್ಲಿ ಪ್ರಾಮುಖ್ಯ ಸಿಗುವ ದಿಸೆಯಲ್ಲಿ ಹಾಗೂ ಬ್ಯಾಂಕುಗಳು ಸಹಿತ ಕೇಂದ್ರ ಸರ್ಕಾರದ ಸೇವೆಗಳಲ್ಲಿ ಎಲ್ಲ ರಾಜ್ಯಗಳಿಗೆ ಸಮಾನ ಪ್ರಮಾಣದ ಅವಕಾಶ ಸಿಗುವ ದಿಸೆಯಲ್ಲಿ ಒಗ್ಗಟ್ಟಾಗಿ ಹೋರಾಡುವುದು, ಧ್ವನಿ ಎತ್ತುವುದು ಕೂಡ ಅಗತ್ಯ. ಈ ಕುರಿತು ಒಂದು ಸಂಘಟಿತ ಪ್ರಯತ್ನಕ್ಕೆ ಕರ್ನಾಟಕ ಮುಂದಾಗುತ್ತಿರುವುದು ಒಳ್ಳೆಯ ಬೆಳವಣಿಗೆ. ನಮ್ಮ ಸಂಸದರು ಇಂಥ ಒಂದು ಪ್ರಯತ್ನಕ್ಕೆ ರಾಜಕೀಯವನ್ನು ಬದಿಗಿರಿಸಿ, ಬೆಂಬಲವಾಗಿ ನಿಂತು ರಾಜ್ಯದ ಹಿತಾಸಕ್ತಿಯನ್ನು ಕಾಪಾಡಬೇಕು.

ವೆಂಕಟೇಶ ಮಾಚಕನೂರ, ಧಾರವಾಡ

ಅಡುಗೆ ಮುನ್ನವೇ ಊಟ?!

ಮುಖ್ಯಮಂತ್ರಿ ಹುದ್ದೆ ಖಾಲಿ
ಇಲ್ಲದಿದ್ದರೂ
ಮುಖ್ಯಮಂತ್ರಿ ಆಗಲು
'ನಾನು ರೆಡಿ' ಅನ್ನುವ
ಕೆಲ ಕಾಂಗ್ರೆಸ್ ನಾಯಕರ
ಮಾತು ಕೇಳುತ್ತಿದ್ದರೆ...
ಅಡುಗೆ ಮಾಡುವುದಕ್ಕೆ ಮುನ್ನವೇ
ಊಟಕ್ಕೆ ಕುಳಿತಂತಿದೆ!

ಹರಳಹಳ್ಳಿ ಪುಟ್ಟರಾಜು
ಪಾಂಡವಪುರ

ಕನ್ನಡದಲ್ಲಿ ಔಷಧ ಚೀಟಿ: ಅವಾಸ್ತವಿಕ ನಡೆ

ಸರ್ಕಾರಿ ವೈದ್ಯರು ಕನ್ನಡದಲ್ಲಿಯೇ ಔಷಧ ಚೀಟಿ ಬರೆಯಲು ಶೀಘ್ರ ಆದೇಶ ಜಾರಿ ಮಾಡಬೇಕು ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು ಸರ್ಕಾರಕ್ಕೆ ಮನವಿ ಮಾಡಿರುವುದು ಕಾರ್ಯಸಾಧುವಲ್ಲ. ಏಕೆಂದರೆ ವೈದ್ಯಕೀಯ ಶಿಕ್ಷಣ ಇರುವುದು ಇಂಗ್ಲಿಷ್‌ನಲ್ಲಿ, ವೈದ್ಯರು ಅಧ್ಯಯನ ಮಾಡಿರುವುದು ಇಂಗ್ಲಿಷ್‌ನಲ್ಲಿ, ಔಷಧಿಗಳ ಹೆಸರಿರುವುದು ಇಂಗ್ಲಿಷ್‌ನಲ್ಲಿ. ಹಾಗಾಗಿ, ಈಗ ಔಷಧದ ಚೀಟಿಗಳನ್ನು ಕನ್ನಡದಲ್ಲಿ ಬರೆಯಿರಿ ಎಂದರೆ ಅದರಿಂದ ವೈದ್ಯರನ್ನು ಹೊಸ ಸಮಸ್ಯೆಗೆ ಸಿಲುಕಿಸಿದಂತೆ ಆಗುತ್ತದೆ.

ಆಡಳಿತದ ಎಲ್ಲ ಕ್ಷೇತ್ರಗಳಲ್ಲಿ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಕನ್ನಡ ಪೂರ್ಣಪ್ರಮಾಣದಲ್ಲಿ ಬಳಕೆಯಾಗುತ್ತಿಲ್ಲ ಎಂಬುದು ಎಲ್ಲರಿಗೂ ತಿಳಿದಿರುವಂಥದ್ದೇ. ಇಂಗ್ಲಿಷ್ ಮಾಧ್ಯಮದ ಖಾಸಗಿ ಶಾಲೆಗಳು ಸರ್ಕಾರದ ಕನ್ನಡ ಮಾಧ್ಯಮ ಶಾಲೆಗಳನ್ನು ಆಪೋಶನ ತೆಗೆದುಕೊಳ್ಳುತ್ತಿರುವ ಈ ಹೊತ್ತಿನಲ್ಲಿ, ತುರ್ತಾಗಿ ಕನ್ನಡ ಶಾಲೆಗಳನ್ನು ಉಳಿಸುವ ಮತ್ತು ಬೆಳೆಸುವ ದಿಸೆಯಲ್ಲಿ ಯೋಜನೆ ಕೈಗೊಳ್ಳುವಂತೆ ಪ್ರಾಧಿಕಾರವು ಸರ್ಕಾರವನ್ನು ಒತ್ತಾಯಿಸಬೇಕು. ಕನ್ನಡ ಶಾಲೆಗಳನ್ನು ಉಳಿಸುವುದರ ಭಾಗವಾಗಿ, ಸರ್ಕಾರದ ಸಂಬಳದ ಮೇಲೆ ಬದುಕು ಕಟ್ಟಿಕೊಂಡಿರುವ ಅಧಿಕಾರಿಗಳು ಮತ್ತು ನೌಕರರು ಒಳಗೊಂಡಂತೆ ಸರ್ಕಾರಿ ಉದ್ಯೋಗಿಗಳೆಲ್ಲರೂ ಕಡ್ಡಾಯವಾಗಿ ಸರ್ಕಾರಿ ಕನ್ನಡ ಶಾಲೆಗಳಿಗೇ ಮಕ್ಕಳನ್ನು ಸೇರಿಸುವಂತೆ ಆದೇಶ ಹೊರಡಿಸಲು ಪ್ರಾಧಿಕಾರದ ಅಧ್ಯಕ್ಷರು ಸರ್ಕಾರವನ್ನು ಒತ್ತಾಯಿಸಿದರೆ ಅದೊಂದು ಅರ್ಥಪೂರ್ಣವಾದ ಕ್ರಮವಾಗುತ್ತದೆ. ಅದುಬಿಟ್ಟು ಔಷಧ ಚೀಟಿಗಳನ್ನು ಕನ್ನಡದಲ್ಲಿ ಬರೆಯುವಂತೆ ಆದೇಶಿಸಲು ಒತ್ತಾಯಿಸುವುದರಿಂದಾಗಲೀ ಕನ್ನಡೇತರರಿಗೆ ಕನ್ನಡ ಕಲಿಸುವ ಯೋಜನೆಗಾಗಿ ಹಣವನ್ನು ಪೋಲು ಮಾಡುವುದರಿಂದಾಗಲೀ ಕನ್ನಡ ಭಾಷೆ ಬೆಳೆಯುವುದಿಲ್ಲ.

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

ತರುಣ ವಕೀಲರಿಗೆ ಸಿಗಲಿ ವಿಶೇಷ ತರಬೇತಿ

'ಮುಡಾ ನಿವೇಶನ ಹಂಚಿಕೆಗೆ ಸಂಬಂಧಿಸಿದಂತೆ ತಮ್ಮ ವಿರುದ್ಧದ ಕ್ರಿಮಿನಲ್ ಪ್ರಕರಣದ ತನಿಖೆಗೆ ರಾಜ್ಯಪಾಲರು ನೀಡಿರುವ ಆದೇಶವನ್ನು ಪ್ರಶ್ನಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಲ್ಲಿಸಿದ್ದ ರಿಟ್ ಅರ್ಜಿಯ ವಿಚಾರಣೆಗೆ ಸಂಬಂಧಿಸಿದ ತೀರ್ಪನ್ನು ಹೈಕೋರ್ಟ್ ಕಾಯ್ದಿರಿಸಿದೆ (ಪ್ರ.ವಾ., ಸೆ. 13). ಈ ಸಂಬಂಧದ ವಾದ ಮಂಡನೆಯ ಒಂದು ಹಂತದಲ್ಲಿ, ಚುನಾಯಿತ ಮುಖ್ಯಮಂತ್ರಿ ಪದವಿ ಮತ್ತು ನೇಮಕಾತಿ ಹೊಂದಿದ ರಾಜ್ಯಪಾಲರ ವಿವೇಚನಾಧಿಕಾರದ ಏರುಪೇರಿನ ಬಗ್ಗೆ ಸಹ ಕಿಂಚಿತ್ ಪ್ರಸ್ತಾಪವಾಯಿತು. ವಾದ-ಪ್ರತಿವಾದಗಳನ್ನು ನ್ಯಾಯಮೂರ್ತಿಗಳು ಸಕ್ರಿಯರಾಗಿ ಕೇಳಿದ್ದಾರಾದ್ದರಿಂದ ಮತ್ತು ಅಂತಿಮ ತೀರ್ಪಿನ ಬಗ್ಗೆ ತರಾತುರಿ ತೋರಿಲ್ಲವಾದ್ದರಿಂದ, ನಿರ್ಣಯ ಹೇಗೇ ಬಂದರೂ ಅದು ನ್ಯಾಯದ ಗೆಲುವು ಎಂದು, ನ್ಯಾಯಾಂಗದಲ್ಲಿ ವಿಶ್ವಾಸವುಳ್ಳ ಸಾಮಾನ್ಯರೆಲ್ಲರೂ ಒಪ್ಪಿಕೊಂಡಾರು. ಸಂಬಂಧಿಸಿದ ಕಕ್ಷಿದಾರರಿಗಾದರೋ ಮೇಲ್ಮನವಿಯ ಅವಕಾಶ ಇದ್ದೇ ಇರುತ್ತದೆ!

ಸಂಸತ್ತು ಮತ್ತು ಶಾಸಕಾಂಗದ ಕಲಾಪಗಳಂತೆ ನ್ಯಾಯಾಲಯದ ಕಲಾಪಗಳನ್ನು ಸಹ ಸಾರ್ವಜನಿಕರು ವೀಕ್ಷಿಸಲು ಅವಕಾಶ ಮಾಡಿಕೊಟ್ಟಿದ್ದು ಅಭಿನಂದನಾರ್ಹ. ಕೆಲವು ಎಳೆಯ ವಕೀಲರ ಎಳಸು ಬುದ್ಧಿಯನ್ನು ಕಣ್ಣಾರೆ ಕಾಣಲು ಇದು ಅವಕಾಶ ಕಲ್ಪಿಸಿತು! ಲಾಯರ್‌ಗಿರಿ ಸಹ ವೈದ್ಯ–ಎಂಜಿನಿಯರಿಂಗ್‌ನಷ್ಟೇ ವೃತ್ತಿಪರವಾಗಿದ್ದು, ವಾಸ್ತವಿಕ ಜ್ಞಾನ, ಸಾಮಾನ್ಯ ಪ್ರಜ್ಞೆ ಮತ್ತು ಸಾಂದರ್ಭಿಕ ವಾಕ್ಚಾತುರ್ಯವನ್ನು ವಿಶೇಷವಾಗಿ ಅಪೇಕ್ಷಿಸುತ್ತದೆ. ನ್ಯಾಯಾಂಗ ತನ್ನದೇ ಮರ್ಯಾದೆ ಮತ್ತು ವಿಶ್ವಾಸಾರ್ಹತೆಯ ದೃಷ್ಟಿಯಿಂದ, ತರುಣ ವಕೀಲರಿಗಾಗಿ ವಿಶೇಷ ಪ್ರಶಿಕ್ಷಣ ವ್ಯವಸ್ಥೆಯನ್ನು ರೂಪಿಸಿಕೊಳ್ಳುವ ಆವಶ್ಯಕತೆ ಇದೆ ಎನಿಸುತ್ತದೆ.

ಆರ್.ಕೆ.ದಿವಾಕರ, ಬೆಂಗಳೂರು



Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

‘ಗ್ರೇಟರ್ ಬೆಂಗಳೂರು ಆಡಳಿತ’ ಮಸೂದೆಯಿಂದ ರಾಜಧಾನಿಗೆ ಅನುಕೂಲವೇ?

ಸಿಲಿಕಾನ್ ಸಿಟಿಯ ಸಮಗ್ರ ಅಭಿವೃದ್ಧಿ, ಸಮನ್ವಯದತ್ತ ಚಿತ್ತ



• ಪಿ.ಆರ್. ರಮೇಶ್

ನಮ್ಮ ಬೆಂಗಳೂರು ನಗರವನ್ನು ಉತ್ತಮ ವಾಸಯೋಗ್ಯ, ಪರಿಸರಸ್ನೇಹಿ ನಗರವನ್ನಾಗಿ ಮಾಡಬೇಕಾಗಿದೆ. ಅಭಿವೃದ್ಧಿಯ ತುತ್ತತುದಿಯಲ್ಲಿರುವ ನಗರದಲ್ಲಿ ನೈಸರ್ಗಿಕ ಸಂಪನ್ಮೂಲವನ್ನೂ ಉಳಿಸಿಕೊಳ್ಳಬೇಕಾಗಿದೆ. ಇವೆಲ್ಲವೂ ಕಾರ್ಯಸಾಧುವಾಗಬೇಕಾದರೆ ನಗರಕ್ಕಾಗಿಯೇ ಒಂದು ಸಮನ್ವಯ ಮತ್ತು ಸಮಗ್ರ ಕಾಯ್ದೆಯ ಅಗತ್ಯವಿದೆ

ಪ್ರಜಾವಾಣಿ ಚರ್ಚೆ

ಪಾರಂಪರಿಕ ಅಸ್ತಿತ್ವ ಉಳಿಸಿಕೊಂಡಿರುವ ಕೆರೆ–ಉದ್ಯಾನಗಳ ನಗರ, ಹವಾನಿಯಂತ್ರಿತ ನಗರ, ಹೈಟೆಕ್ ಸಿಟಿ, ಕಾಸ್ಮೊಪಾಲಿಟನ್ ಸಿಟಿ, ಸಿಲಿಕಾನ್ ಸಿಟಿ ಎಂಬೆಲ್ಲ ಹೆಸರು ಹೊತ್ತಿರುವ ಬೆಂಗಳೂರು 360 ಡಿಗ್ರಿಯಲ್ಲೂ ಬೆಳೆಯುತ್ತಿದ್ದು ಇದೀಗ, ಟೆಕ್ನೋಪೊಲಿಸ್ ಸಿಟಿಯಾಗಿದೆ. ಯೋಜನಾರಹಿತವಾಗಿ ಬೆಳೆದಿರುವ ಈ ನಗರದಲ್ಲಿ ಜೀವನಮಟ್ಟ ಸುಧಾರಿಸಲು, ಸ್ವಚ್ಛ–ಅಭಿವೃದ್ಧಿಯುತ ನಗರವನ್ನಾಗಿಸಲು ಒಂದು ಸ್ಪಷ್ಟ, ಪ್ರತ್ಯೇಕ ಕಾಯ್ದೆಯ ಅಗತ್ಯವಿದೆ. ಈ ಪ್ರಯತ್ನವೇ ‘ಗ್ರೇಟರ್ ಬೆಂಗಳೂರು ಆಡಳಿತ’ ಮಸೂದೆ.

ಬೆಂಗಳೂರು ನಿರ್ಮಾಣವಾದ ಕಾಲದಿಂದಲೂ ಬೆಳವಣಿಗೆ ಕಾಣುತ್ತಲೇ ಇದೆ. ಈ ನಗರಕ್ಕೆ ಅಭಿವೃದ್ಧಿ ಕಾಮಗಾರಿಗಳಷ್ಟೇ ಅಲ್ಲ, ಅನಿಯಮಿತ ಮೂಲಸೌಕರ್ಯಗಳೂ ಸೇರಿದಂತೆ ಎಲ್ಲ ಆಯಾಮಗಳಲ್ಲೂ ನಿರ್ವಹಣೆ, ಮೇಲ್ವಿಚಾರಣೆಯ ಅಗತ್ಯವಿದೆ. ಮೂರು ದಶಕಗಳಲ್ಲಿ ನಗರ ನಿಯಂತ್ರಣವಿಲ್ಲದೆ ಅತಿವೇಗವಾಗಿ ಬೆಳೆಯುತ್ತಿದೆ. ಯೋಜನಾರಹಿತ ನಗರೀಕರಣದ ನಾಗಾಲೋಟಕ್ಕೆ ತಡೆಯನ್ನೂ ಹಾಕಬೇಕಾಗಿದೆ. ಉತ್ತಮ ಹಾಗೂ ಶಾಂತಿಯುತ ಜೀವನ, ಪರಿಸರಯುಕ್ತ ವಾತಾವರಣವಿರುವ ಕಡೆ ಬದುಕುವುದಕ್ಕಾಗಿ ಬೆಂಗಳೂರನ್ನು ಹೆಚ್ಚಿನ ಜನರು ಆಯ್ಕೆ ಮಾಡಿಕೊಳ್ಳುತ್ತಾರೆ. ಈ ವಿಷಯದಲ್ಲಿ ದೇಶದಲ್ಲೇ ಬೆಂಗಳೂರು ಅಗ್ರಸ್ಥಾನದಲ್ಲಿದೆ. ಒಂದು ಸಮೀಕ್ಷೆ ಪ್ರಕಾರ, ಪ್ರತಿ ವರ್ಷ 5 ಲಕ್ಷದಿಂದ 7 ಲಕ್ಷ ಜನರು ಬೆಂಗಳೂರಿಗೆ ಬಂದು ನೆಲಸುತ್ತಿದ್ದಾರೆ.

ಚೆನ್ನೈ, ಮುಂಬೈ, ಕೋಲ್ಕತ್ತ ನಗರಗಳು ಸಮುದ್ರದ ದಡ ಹೊಂದಿರುವುದರಿಂದ ಒಂದು ಭಾಗದಲ್ಲಿ ಮಾತ್ರ ಬೆಳೆಯುತ್ತಿವೆ. ಸಮುದ್ರ ಮಟ್ಟದಿಂದ ಸುಮಾರು 1000 ಮೀಟರ್ ಎತ್ತರದಲ್ಲಿರುವ ಬೆಂಗಳೂರು, 360 ಡಿಗ್ರಿಯಲ್ಲೂ ಬೆಳೆಯುತ್ತಿದೆ. ಮೊದಲನೇ ಪಂಚವಾರ್ಷಿಕ ಯೋಜನೆಯ ಸಂದರ್ಭದಿಂದಲೂ ಸಾರ್ವಜನಿಕ ಉದ್ದಿಮೆಗಳು ಬೆಂಗಳೂರಿಗೆ ಮೊದಲ ಪ್ರಾಶಸ್ತ್ಯ ನೀಡಿವೆ. ಅದರಿಂದಲೇ ಬಿಇಎಲ್, ಎಚ್‌ಎಂಟಿ, ಎಚ್‌ಎಎಲ್, ಬಿಎಚ್‌ಇಎಲ್‌ನಂತಹ ಹಲವು ಹಲವು ಉದ್ದಿಮೆಗಳು ಇಲ್ಲಿಗೆ ಬಂದವು. ಸಿಲಿಕಾನ್ ಸಿಟಿಯಾದ ನಂತರ ಶಿಕ್ಷಣದ ಹಬ್, ಆರೋಗ್ಯ ಪ್ರವಾಸೋದ್ಯಮದಲ್ಲೂ ಅಗ್ರಸ್ಥಾನದಲ್ಲೇ ಇದೆ. ಬೆಂಗಳೂರಿನ ಜನಸಂಖ್ಯೆ ಅಂದಾಜು 1.30 ಕೋಟಿ. ಅದರಲ್ಲಿ ಶೇ 50ರಷ್ಟೂ ಸ್ಥಳೀಯರಿಲ್ಲ. ಇಂತಹ ನಗರಕ್ಕೆ ಹಲವು ಸವಾಲುಗಳಿವೆ.

ನಮ್ಮ ಬೆಂಗಳೂರು ನಗರವನ್ನು ಉತ್ತಮ ವಾಸಯೋಗ್ಯ, ಪರಿಸರಸ್ನೇಹಿ ನಗರವನ್ನಾಗಿಸಬೇಕಾಗಿದೆ. ಅಭಿವೃದ್ಧಿ ತುತ್ತತುದಿಯಲ್ಲಿಯಲ್ಲಿರುವ ನಗರದಲ್ಲಿ ನೈಸರ್ಗಿಕ ಸಂಪನ್ಮೂಲವನ್ನೂ ಉಳಿಸಿಕೊಳ್ಳಬೇಕಾಗಿದೆ. ಇವೆಲ್ಲವೂ ಕಾರ್ಯಸಾಧುವಾಗಬೇಕಾದರೆ ನಗರಕ್ಕೇ ಒಂದು ಸಮನ್ವಯ ಕಾಯ್ದೆಯ ಅಗತ್ಯವಿದೆ. ಈಗಿರುವ ಬಿಬಿಎಂಪಿ–2020 ಕಾಯ್ದೆ ಸಮಗ್ರವಾಗಿಲ್ಲ. ನಗರದಲ್ಲಿ ನಾಗರಿಕರಿಗೆ ಸೌಲಭ್ಯ ನೀಡುತ್ತಿರುವ ಇಲಾಖೆಗಳ ಮೇಲೂ ನಿಗಾ ವಹಿಸಲಾಗುವುದಿಲ್ಲ. ಪರಂಪರೆಯನ್ನು ಉಳಿಸಿಕೊಂಡು, ತಾಂತ್ರಿಕತೆಯಲ್ಲಿ ಬೆಳೆಯುತ್ತಿರುವ ಬೆಂಗಳೂರನ್ನು ಸಮಗ್ರವಾಗಿ ಸಂರಕ್ಷಿಸಬೇಕಾಗಿದೆ. ಕೈಗಾರಿಕೆ, ನಗರ ಯೋಜನೆ, ಸಾರಿಗೆ, ಆರೋಗ್ಯ, ಶಿಕ್ಷಣ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ನಗರಕ್ಕೇ ಪ್ರತ್ಯೇಕ ನೀತಿ–ನಿಯಮಗಳು ಬೇಕಾಗುತ್ತವೆ. ಇವೆಲ್ಲದ್ದಕ್ಕೂ ಬೆಸ್ಕಾಂ, ಜಲಮಂಡಳಿ, ಆರೋಗ್ಯ, ಬಿಎಂಟಿಸಿ, ಪೊಲೀಸ್, ಸಂಚಾರ ಪೊಲೀಸ್, ಕಂದಾಯ ಸೇರಿದಂತೆ ಎಲ್ಲ ಇಲಾಖೆಗಳನ್ನೂ ಒಂದೇ ಸೂರಿನಲ್ಲಿ ತರಬೇಕಾದ ಅಗತ್ಯವಿದೆ. ಇವೆಲ್ಲವನ್ನೂ ಮನಗಂಡಿರುವ ಸರ್ಕಾರ ‘ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ’ಯನ್ನು ಮಂಡಿಸಿದೆ. ನಗರಕ್ಕೆ ತನ್ನದೇ ಬೆಳವಣಿಗೆ ಸ್ವರೂಪವನ್ನು ಕಂಡುಕೊಳ್ಳಲು ಅಗತ್ಯವಾದ ಎಲ್ಲ ರೀತಿಯ ಕಾನೂನು, ಆರ್ಥಿಕ ಬಲವನ್ನು ಈ ಮಸೂದೆ ನೀಡಲಿದೆ.

ಸಂವಿಧಾನದ ಕಲಂ 243 ಡಬ್ಲ್ಯುನ 12ನೇ ಪರಿಚ್ಛೇದದಲ್ಲಿ ನಾಗರಿಕರಿಗೆ ಒದಗಿಸಬೇಕಾದ 18 ಪ್ರಮುಖ ಸೇವೆಗಳನ್ನು ಪಾಲಿಕೆಗಳ ವ್ಯಾಪ್ತಿಗೆ ನೀಡಲಾಗಿದೆ. ಅವುಗಳೂ ಸೇರಿದಂತೆ ಸಾರಿಗೆ, ಕಂದಾಯ ಇಲಾಖೆಗಳನ್ನೂ ‘ಗ್ರೇಟರ್ ಬೆಂಗಳೂರು ಆಡಳಿತ’ದ ವ್ಯಾಪ್ತಿಗೆ ತರುವುದು ಮಸೂದೆಯ ಉದ್ದೇಶ. ಬಿಬಿಎಂಪಿ ವ್ಯಾಪ್ತಿಯನ್ನೂ ಒಳಗೊಂಡ ‘ಗ್ರೇಟರ್ ಬೆಂಗಳೂರು’ ಪ್ರದೇಶವನ್ನು ಸರ್ಕಾರ ಗುರುತಿಸಲಿದೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರ, ನಗರ ಪಾಲಿಕೆಗಳು ಮತ್ತು ವಾರ್ಡ್ ಸಮಿತಿ ಎಂಬ ಮೂರು ಹಂತದಲ್ಲಿ ಆಡಳಿತ ನಿರ್ವಹಣೆಯಾಗುತ್ತದೆ. ‘ಗ್ರೇಟರ್ ಬೆಂಗಳೂರು ಪ್ರಾಧಿಕಾರ’ ಮುಖ್ಯಮಂತ್ರಿಯವರ ನೇತೃತ್ವದಲ್ಲಿ ರಚನೆಯಾಗುತ್ತದೆ. ಸಚಿವರು, ನಗರದ ಶಾಸಕರು, ಮೇಯರ್‌ಗಳು ಹಾಗೂ ಎಲ್ಲ ಇಲಾಖೆಯ ಮುಖ್ಯಸ್ಥರು ಈ ಪ್ರಾಧಿಕಾರದಲ್ಲಿ ಸದಸ್ಯರಾಗಿರುತ್ತಾರೆ. ಎಲ್ಲ ಇಲಾಖೆಗಳ ವ್ಯಾಪ್ತಿಗೂ ಅನ್ವಯಿಸುವ ನೀತಿ–ನಿಯಮಗಳನ್ನು ಇಲ್ಲೇ ರಚಿಸಲಾಗುತ್ತದೆ. ಮುಖ್ಯಮಂತ್ರಿಯವರ ಅಧ್ಯಕ್ಷತೆಯ ಪ್ರಾಧಿಕಾರದಿಂದ ಪಾಲಿಕೆಗಳಿಗೆ ಸಮತೋಲಿತವಾಗಿ ಹಣಕಾಸು, ಅನುದಾನದ ಹಂಚಿಕೆಯನ್ನೂ ನಿರ್ವಹಿಸಲಾಗುತ್ತದೆ.

ಪ್ರಾಧಿಕಾರವು ಆರ್ಥಿಕ ಅಭಿವೃದ್ಧಿ ಏಜೆನ್ಸಿಯಾಗಿ, ಸಾರ್ವಜನಿಕ– ಖಾಸಗಿ ಸಹಭಾಗಿತ್ವದ ಮಾದರಿಯಲ್ಲಿ ಹೂಡಿಕೆಗಳನ್ನೂ ಆಕರ್ಷಿಸಲಾಗುತ್ತದೆ. ಇದರಿಂದ ಉದ್ಯೋಗ ಸೃಷ್ಟಿಯಾಗುತ್ತದೆ. ಹವಾಮಾನ ಕ್ರಿಯಾಕೋಶದಿಂದ, ನಗರ, ಪ್ರಾದೇಶಿಕ– ಪಟ್ಟಣ ಯೋಜನೆ, ಮೂಲ ಸೌಕರ್ಯ ಮತ್ತು ಸಾರಿಗೆ, ಪರಿಸರ ಮತ್ತು ಹವಾಮಾನ ಬದಲಾವಣೆ, ಬಡತನ ಮತ್ತು ಒಳಗೊಳ್ಳುವಿಕೆ, ಮಾಹಿತಿ ಮತ್ತು ಸಂವಹನ ತಂತ್ರಜ್ಞಾನಗಳ ಅಭಿವೃದ್ಧಿಗೆ ಪ್ರಾಧಿಕಾರದ ಮೇಲ್ವಿಚಾರಣೆಯಲ್ಲಿ ಕಾರ್ಯತಂತ್ರ ರೂಪುಗೊಳ್ಳಲಿದೆ. ‘ಗ್ರೇಟರ್ ಬೆಂಗಳೂರು’ನಲ್ಲಿ ರಚನೆಯಾಗುವ ನಗರ ಪಾಲಿಕೆಗಳಲ್ಲಿ ಮೇಯರ್, ಮುಖ್ಯ ಆಯುಕ್ತ, ಜಂಟಿ ಆಯುಕ್ತರು, ಸ್ಥಾಯಿ ಸಮಿತಿಗಳೂ, ವಲಯ ಸಮಿತಿಗಳು, ವಾರ್ಡ್ ಸಮಿತಿಗಳು ಹಾಗೂ ಪ್ರದೇಶ ಸಭಾಗಳಿದ್ದು ಸ್ಥಳೀಯ ಅಗತ್ಯಗಳನ್ನು ಪೂರೈಸಲು ಕಾರ್ಯನಿರ್ವಹಿಸಲಿವೆ. ಸ್ಥಳೀಯ ಸಮಸ್ಯೆಗಳಿಗೆ ನಗರಪಾಲಿಕೆ ಮಟ್ಟದಲ್ಲಿ ಪೂರ್ಣ ಪರಿಹಾರ ಸಾಧ್ಯವಾಗದಿದ್ದರೆ, ಪ್ರಾಧಿಕಾರದಲ್ಲಿ ವಿಷಯ ಮಂಡಿಸಿ, ಅಗತ್ಯ ಸಲಹೆ ಹಾಗೂ ಸಹಕಾರವನ್ನೂ ಪಡೆದುಕೊಳ್ಳಬಹುದಾಗಿದೆ.

‘ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ’ ದೀರ್ಘಕಾಲದಲ್ಲಿ ಬೆಂಗಳೂರನ್ನು ಅತ್ಯುತ್ತಮವಾಗಿ ನಿರ್ವಹಣೆ ಮಾಡುವಂತಹ ವಿಶೇಷ ಉದ್ದೇಶ ಹೊಂದಿದೆ. ನಗರ ಯೋಜನೆಗಳ ಮೇಲೆ ಅಂಕುಶವಿರಿಸಿ, ನಗರವನ್ನು ಜೀವನಯೋಗ್ಯ ನಗರವನ್ನಾಗಿಸುವ ಕಾಯ್ದೆ ಇದಾಗಲಿದೆ. ಸಮನ್ವಯ–ಸಮಗ್ರ ಕಾಯ್ದೆಯಾಗಲಿರುವ ‘ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ’ಗೆ ಇನ್ನಷ್ಟು ಸೇರಿಸಲೂ ಅವಕಾಶವಿದೆ. ಅದಕ್ಕಾಗಿಯೇ ಸಿಎಂ ಸಿದ್ದರಾಮಯ್ಯ ಹಾಗೂ ಬೆಂಗಳೂರು ಅಭಿವೃದ್ಧಿ ಸಚಿವರೂ ಆಗಿರುವ ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಜಂಟಿ ಸದನ ಸಮಿತಿ ರಚಿಸಿದ್ದಾರೆ. ಅಷ್ಟೇ ಅಲ್ಲದೆ, ಸಂಘ–ಸಂಸ್ಥೆಗಳು, ನಾಗರಿಕರು ಅಭಿಪ್ರಾಯಗಳನ್ನು ಹಂಚಿಕೊಳ್ಳಬಹುದು. ಒಟ್ಟಾರೆಯಾಗಿ, ಇಲಾಖೆಗಳ ನಡುವೆ ಸಮನ್ವಯ ಸಾಧಿಸುವ ಆಡಳಿತ ನಿರ್ವಹಣೆಗೆ ಹೊಸತನ ನೀಡುವ ‘ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ’ ನಗರಕ್ಕೆ ಅತಿಹೆಚ್ಚು ಅಗತ್ಯವಿದೆ.

ಲೇಖಕ: ಬೆಂಗಳೂರಿನ ಮಾಜಿ ಮೇಯರ್


ನಿರೂಪಣೆ: ಆರ್. ಮಂಜುನಾಥ್

ಆಡಳಿತ ಸುಧಾರಣೆಗೆ ಬಿಬಿಸಿ ಜಿಬಿಜಿ ಮಸೂದೆಯೇ ಸೂಕ್ತ



• ಶ್ರೀಕಾಂತ್ ವಿಶ್ವನಾಥನ್

ಹೊಸ ಮಸೂದೆಯಲ್ಲಿ ಹಲವು ಕೊರತೆಗಳಿದ್ದು ಇದು ಬೆಂಗಳೂರಿನ ಆಡಳಿತವನ್ನು ಸುಧಾರಿಸುವುದಿಲ್ಲ. 2014ರ ಬಿಬಿಸಿ ಜಿಬಿಜಿ ಕರಡು ಮಸೂದೆಯು ಬೆಂಗಳೂರಿನ ಭರವಸೆಯ ಆಶಾಕಿರಣವಾಗಿದೆ. ರಾಜಧಾನಿಯ ಆಡಳಿತ ಮತ್ತು ಜನಜೀವನ ಸುಧಾರಣೆಗೆ ಬೇಕಾದ ಎಲ್ಲ ಅಂಶಗಳು ಅದರಲ್ಲಿ ಅಡಕವಾಗಿವೆ



ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು (ಬಿಬಿಎಂಪಿ) ಪುನರ್‌ರಚಿಸಲು ಸರ್ಕಾರ ನೇಮಿಸಿರುವ ಈಗಿನ ಬ್ರ್ಯಾಂಡ್ ಬೆಂಗಳೂರು ಸಮಿತಿಯ (ಬಿಬಿಸಿ) ಹಿಂದಿನ ರೂಪವಾಗಿದ್ದ ತಜ್ಞರ ಸಮಿತಿಯು 2014ರಲ್ಲಿ ರಚಿಸಿದ್ದ ‘ಗ್ರೇಟರ್ ಬೆಂಗಳೂರು ಆಡಳಿತ’ (ಜಿಬಿಜಿ– The Greater Bengaluru Governance (GBG)) ಕರಡು ಮಸೂದೆಯು ಬೆಂಗಳೂರಿನ ಆಡಳಿತವನ್ನು ಸುಗಮಗೊಳಿಸುವ ಆಶಾಕಿರಣ. ಇದು ಮಹಾನಗರದ ಆಡಳಿತ, ಪ್ರದೇಶ ಅಭಿವೃದ್ಧಿ ಯೋಜನೆ ಮತ್ತು ವಿಕೇಂದ್ರೀಕೃತ ಜನ ಸಹಭಾಗಿತ್ವದ ಆಡಳಿತವನ್ನು ಒದಗಿಸುವ ಪ್ರಗತಿಪರ ಮತ್ತು ಆಧುನಿಕ ಮಸೂದೆಯಾಗಿದೆ. ರಾಜಧಾನಿಯ ಈಗಿನ ಅಸಮರ್ಪಕ ಆಡಳಿತವು ಎದುರಿಸುತ್ತಿರುವ ಕುಡಿಯುವ ನೀರು, ಸಂಚಾರ ವ್ಯವಸ್ಥೆ, ನೆರೆ ಅಥವಾ ಕೈಗೆಟಕುವ ವಸತಿ ವ್ಯವಸ್ಥೆ ಸೇರಿದಂತೆ ಎಲ್ಲ ರೀತಿಯ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸುತ್ತದೆ.

ಸಮನ್ವಯದ ಕೊರತೆ: ಮೊದಲನೆಯದಾಗಿ, ಬೆಂಗಳೂರಿಗೆ ಸಂಬಂಧಿಸಿದಂತೆ ಹಲವು ಸಂಸ್ಥೆಗಳು, ಸರ್ಕಾರಿ ಇಲಾಖೆಗಳು ಕಾರ್ಯನಿರ್ವಹಿಸುತ್ತಿವೆ. ಇವುಗಳಲ್ಲಿ ಯಾವ ಸಂಸ್ಥೆಯೂ ಪರಸ್ಪರ ಸಮನ್ವಯದಿಂದ ಕೆಲಸ ಮಾಡುವುದಿಲ್ಲ. ಉದಾಹರಣೆಗೆ, ಬಿಬಿಎಂಪಿಯು ಬಸ್ ತಂಗುದಾಣ, ರಸ್ತೆಗಳ ನಿರ್ಮಾಣ ಜವಾಬ್ದಾರಿ ಹೊತ್ತಿದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ನಗರ ಯೋಜನೆ ಮತ್ತು ಹೊರವರ್ತುಲ ರಸ್ತೆಯಂತಹ ಮೂಲಸೌಕರ್ಯ ಯೋಜನೆಗಳನ್ನು ನಿರ್ವಹಿಸುತ್ತದೆ. ಸಾರಿಗೆ ಬಸ್‌ಗಳ ನಿರ್ವಹಣೆಯ ಹೊಣೆ ಬಿಎಂಟಿಸಿಯದ್ದು. ಬೆಂಗಳೂರು ಸಂಚಾರ ಪೊಲೀಸ್ (ಬಿಟಿಪಿ) ಇಲಾಖೆ ವಾಹನಗಳ ಸಂಚಾರ ನಿಯಂತ್ರಿಸುತ್ತದೆ. ಆದರೆ, ನಗರದ ವಿಚಾರದಲ್ಲಿ ಈ ಸಂಸ್ಥೆಗಳು ಏಕರೂಪದ ಕಾರ್ಯತಂತ್ರ ಹೊಂದಿಲ್ಲ ಮತ್ತು ಸಕ್ರಿಯವಾಗಿ ಪರಸ್ಪರ ಸಮನ್ವಯವನ್ನೂ ಸಾಧಿಸುತ್ತಿಲ್ಲ.

ಈ ಸಮಸ್ಯೆಗೆ 2014ರ ಬಿಬಿಸಿ ಜಿಬಿಜಿ ಮಸೂದೆಯಲ್ಲಿ ಪರಿಹಾರವಿದೆ. ಈ ಮಸೂದೆಯು ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ರೂಪದಲ್ಲಿ ಏಕೀಕೃತ ಮತ್ತು ಸಂಯೋಜಿತವಾದ ಅಧಿಕಾರವನ್ನು ಸ್ಥಾಪಿಸುತ್ತದೆ. ನಗರದ ಆಡಳಿತ ನಿರ್ವಹಿಸುವ ಮತ್ತು ವಿವಿಧ ಸೇವೆಗಳನ್ನು ಒದಗಿಸುವ ಎಲ್ಲ ಸಂಸ್ಥೆಗಳನ್ನು ಒಟ್ಟಾಗಿ ಈ ಪ್ರಾಧಿಕಾರದ ಅಡಿಯಲ್ಲಿ ತರುತ್ತದೆ. ಮುಖ್ಯಮಂತ್ರಿಯವರು ಜಿಬಿಎಯ ಮುಖ್ಯಸ್ಥರಾಗಬೇಕು. ಸಿಎಂ ನೇತೃತ್ವ ವಹಿಸಿದರೆ, ಎದುರಾಗುವ ಯಾವುದೇ ಬಿಕ್ಕಟ್ಟನ್ನು ಪರಿಹರಿಸಲು ಮತ್ತು ಸಂಸ್ಥೆಗಳ ನಡುವೆ ಸಮನ್ವಯ ಸಾಧಿಸುವ ನಿಟ್ಟಿನಲ್ಲಿ ಪ್ರಾಧಿಕಾರಕ್ಕೆ ಹೆಚ್ಚು ಶಕ್ತಿ ಬರುತ್ತದೆ.

ಮಾಸ್ಟರ್ ಪ್ಲಾನ್ ಅಗತ್ಯ: ಎರಡನೆಯದಾಗಿ, ಬೆಂಗಳೂರು ನಗರವು ಯೋಜನಾರಹಿತವಾದ ಅಭಿವೃದ್ಧಿಯಿಂದ ನಲುಗುತ್ತಿದೆ. ನಗರದ ಅಭಿವೃದ್ಧಿಗೆ ಸಂಬಂಧಿಸಿದಂತೆ ಉತ್ತಮವಾದ ಮಾಸ್ಟರ್ ಪ್ಲಾನ್ ಇಲ್ಲ. ಈ ಹಿಂದೆ ಅನುಮೋದಿಸಲಾಗಿದ್ದ ಮಾಸ್ಟರ್ ಪ್ಲಾನ್‌ನ ಅವಧಿ 2015ಕ್ಕೇ ಕೊನೆಗೊಂಡಿದೆ. ಅತ್ಯುತ್ತಮ ಮಾಸ್ಟರ್ ಪ್ಲಾನ್ ಹೇಗಿರಬೇಕು ಎಂದರೆ, ಸರ್ಕಾರಿ ಕಚೇರಿಗಳು ಜನರಿಗೆ ಹತ್ತಿರದಲ್ಲಿರಬೇಕು. ಶಾಲೆಗಳು ಮತ್ತು ಆಟದ ಮೈದಾನಗಳಿಗಾಗಿ ಮಕ್ಕಳು ಹೆಚ್ಚು ದೂರ ಪ್ರಯಾಣಿಸುವಂತಿರಬಾರದು. ಹಸಿರು ಪ್ರದೇಶಗಳು (ಉದ್ಯಾನ) ಇರಬೇಕು. ವಲಸಿಗರು ಮತ್ತು ನಗರ ಪ್ರದೇಶದ ಬಡವರಿಗೆ ಕೈಗೆಟಕುವ ದರದಲ್ಲಿ ವಸತಿ ಮತ್ತು ಇತರ ಸವಲತ್ತುಗಳು ಸಿಗುವಂತಾಗಬೇಕು. ಆದರೆ, ಈ ವಿಷಯಗಳಲ್ಲಿ ಈಗಿನ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಅಸಮರ್ಥವಾಗಿದೆ ಎಂಬುದು ಸಾಬೀತಾಗಿದೆ. ಅದಕ್ಕೆ ರಾಜಕೀಯ ಹಸ್ತಕ್ಷೇಪವೋ ಅಥವಾ ಜಡತ್ವವೋ ಅಥವಾ ಬೇರೆ ಯಾವುದೇ ಕಾರಣವೋ ಗೊತ್ತಿಲ್ಲ. ಬಿಬಿಸಿ ಜಿಬಿಜಿ ಮಸೂದೆಯು ಪ್ರಾದೇಶಿಕ ಅಥವಾ ಮಹಾನಗರ ಮಟ್ಟ, ನಗರ ಮಟ್ಟ ಮತ್ತು ವಾರ್ಡ್ ಮಟ್ಟಗಳಲ್ಲಿ ವ್ಯವಸ್ಥಿತ ಮತ್ತು ಸಮಗ್ರ ಅಭಿವೃದ್ಧಿಯನ್ನು ಕೈಗೊಳ್ಳಲು ಪೂರಕವಾಗಿರುವ ಪ್ರಬಲವಾದ ನಿಯಮಗಳನ್ನು ಹೊಂದಿದೆ.

ಆಡಳಿತದಲ್ಲಿ ಜನರ ಸಹಭಾಗಿತ್ವ: ಮೂರನೆಯದಾಗಿ, ಬೆಂಗಳೂರಿನಂತಹ ಯಾವುದೇ ದೊಡ್ಡ ನಗರ ಪ್ರತಿ ದಿನವೂ ಹಲವು ಸವಾಲುಗಳನ್ನು ಎದುರಿಸುತ್ತಿರುತ್ತದೆ. ಹೀಗಿರುವಾಗ, ನಮ್ಮ ನಾಗರಿಕರಿಗೆ ಕನಿಷ್ಠ ಗುಣಮಟ್ಟದ ಬದುಕನ್ನು ಖಾತ್ರಿಪಡಿಸುವ ದಿಸೆಯಲ್ಲಿ ನಾವು ಒದಗಿಸುವ ಸೇವೆಗಳನ್ನು ನಿರಂತರವಾಗಿ ಹೇಗೆ ಸುಧಾರಿಸಬಹುದು? ಅದಕ್ಕಾಗಿ ವಿಕೇಂದ್ರೀಕೃತ ಜನಸಹಭಾಗಿತ್ವದ ಆಡಳಿತ ಬೇಕು. ಅನುದಾನಗಳ ಕೊರತೆ, ಸಿಬ್ಬಂದಿ ಕೊರತೆ ಮತ್ತು ಅರ್ಥಪೂರ್ಣವಾದ ಯಾವ ಅಧಿಕಾರವೂ ಇಲ್ಲದಿರುವ ಬಿಬಿಎಂಪಿಯಂತಹ ಒಂದು ಸಂಸ್ಥೆ 700 ಚದರ ಕಿ.ಮೀನಷ್ಟು ವಿಸ್ತಾರವಾಗಿರುವ ಮತ್ತು 1 ಕೋಟಿಯಷ್ಟು ಜನಸಂಖ್ಯೆ ಇರುವ ನಗರವೊಂದನ್ನು ನಿರ್ವಹಿಸುವ ಈಗಿನ ಮಾದರಿ ಕಾರ್ಯಸಾಧುವೇ ಅಲ್ಲ. ಜನರಿಗೆ ಹೆಚ್ಚು ಹತ್ತಿರವಾಗಿರುವ ಮತ್ತು ಸ್ಥಳೀಯ ಸರ್ಕಾರಗಳಂತೆ ಹೆಚ್ಚು ಅಧಿಕಾರ ಹೊಂದಿರುವ ನಗರಪಾಲಿಕೆಗಳು ನಮಗೆ ಬೇಕು. ಬಿಸಿಸಿ, ಜಿಬಿಜಿ ಮಮೂದೆಯು ಬಿಬಿಎಂಪಿಗಿಂತ ಹೆಚ್ಚು ಅಧಿಕಾರ ಹೊಂದಿರುವ ಸಣ್ಣ ಸಣ್ಣ ಹಲವು ನಗರ ಪಾಲಿಕೆಗಳನ್ನು ಸೃಷ್ಟಿಸಲು ಅವಕಾಶ ಕಲ್ಪಿಸುತ್ತದೆ.

ನಾಗರಿಕರು ತಮ್ಮ ನೆರೆಹೊರೆಗಳ ನಾಗರಿಕ ವಿಚಾರಗಳ ಮಾಲೀಕತ್ವ ಹೊಂದುವ ಮತ್ತು ಆಡಳಿತದಲ್ಲಿ ಭಾಗಿಯಾಗುವಂತಹ ವ್ಯವಸ್ಥೆ ನಮಗೆ ಅಗತ್ಯವಿದೆ. ಸ್ವಚ್ಛತೆ, ಬೀದಿ ದೀಪಗಳು, ಸುರಕ್ಷತೆ, ಜಲಸಂರಕ್ಷಣೆ, ಫುಟ್‌ಪಾತ್‌ಗಳ ನಿರ್ವಹಣೆ, ಚರಂಡಿ ವ್ಯವಸ್ಥೆ, ಸಾರ್ವಜನಿಕ ಶೌಚಾಲಯಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ವಿವಿಧ ಕಾಮಗಾರಿಗಳು ನಿಗದಿತ ಸಮಯದಲ್ಲಿ ಪೂರ್ಣಗೊಂಡಿವೆಯೇ ಎಂಬುದರ ಮೇಲೆ ನಿಗಾ ಇಡುವುದು ಸೇರಿದಂತೆ ನೆರೆಹೊರೆಯಲ್ಲಿನ ಸಮಸ್ಯೆಗಳನ್ನು ನಿರ್ವಹಿಸಲು ವಾರ್ಡ್ ಮಟ್ಟದ ಅಧಿಕಾರಿಗಳೊಂದಿಗೆ ಪಾಲುದಾರರಾಗಲು ನಾಗರಿಕರಿಗೂ ಅವಕಾಶ ಸಿಗಬೇಕು. ತಮ್ಮ ವಾರ್ಡ್‌ಗಳಲ್ಲಿ ಗುತ್ತಿಗೆದಾರರು ನಡೆಸುತ್ತಿರುವ ಕಾಮಗಾರಿಗಳು ಮತ್ತು ಅವುಗಳ ವೆಚ್ಚ ಸೇರಿದಂತೆ ವಾರ್ಡ್‌ಗೆ ಸಂಬಂಧಿಸಿದ ಎಲ್ಲ ಮಾಹಿತಿಗಳೂ ನಾಗರಿಕರಿಗೆ ದೊರಕಬೇಕು. ಆಡಳಿತ ನಿರ್ವಹಣೆಯಲ್ಲಿ ಜನರು ಭಾಗವಹಿಸುವುದರಿಂದ ಸರ್ಕಾರದ ಮೇಲಿನ ನಂಬಿಕೆ ಇನ್ನಷ್ಟು ಬಲಗೊಳ್ಳುತ್ತದೆ. ಹಳೆಯ ಕರಡು ಮಸೂದೆಯು ಆಡಳಿತದಲ್ಲಿ ಜನರ ಸಹಭಾಗಿತ್ವವನ್ನು ಸುಗಮಗೊಳಿಸಲು ವಾರ್ಡ್ ಸಮಿತಿಗಳಿಗೆ ಹೆಚ್ಚಿನ ಅಧಿಕಾರ ನೀಡುತ್ತದೆ. ಪ್ರದೇಶ ಸಭಾಗಳನ್ನು ರಚಿಸಿಲೂ ಅವಕಾಶ ಕಲ್ಪಿಸುತ್ತದೆ.

ಸರ್ಕಾರ ಈಗ ಮಂಡಿಸಿರುವ ‘ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ’ಯಲ್ಲಿ ಹಲವು ಕೊರತೆಗಳಿದ್ದು, ಇದು ಬೆಂಗಳೂರಿನ ಆಡಳಿತವನ್ನು ಸುಧಾರಿಸುವುದಿಲ್ಲ. ಹಾಗಾಗಿ ರಾಜ್ಯ ಸರ್ಕಾರವು ಬಿಬಿಸಿ ಜಿಬಿಜಿ ಮಸೂದೆಯನ್ನು ಮತ್ತೆ ತಂದು, ಅದನ್ನು ಇನ್ನಷ್ಟು ಸುಧಾರಿಸುವುದಕ್ಕಾಗಿ ಸಾರ್ವಜನಿಕರ ಅಭಿಪ್ರಾಯಪಡೆಯಬೇಕು. ಮತ್ತು ಇನ್ನಷ್ಟು ವಿಳಂಬ ಮಾಡದೇ ಚುನಾವಣೆ ನಡೆಸಬೇಕು.

ಲೇಖಕ: ‘ಜನಾಗ್ರಹ’ ಮುಖ್ಯ ಕಾರ್ಯನಿರ್ವಹಣಾಧಿಕಾರಿ



ಚಿತ್ರದ ದೃಶ್ಯ

ಭಿನ್ನ ಕಥೆಯ ಸಹಜ ಲೋಕ

ನಾವು ನೋಡಿದ ಸಿನಿಮಾ

ಕಾಲಾಪತ್ಥರ್ (ಕನ್ನಡ)

- **ನಿರ್ದೇಶನ:** ವಿಕ್ಕಿ ವರುಣ್
- **ನಿರ್ಮಾಣ:** ನಾಗರಾಜ್ ಬಿಲ್ಲಿನಕೋಟೆ, ಭುವನ್ ಸುರೇಶ್
- **ತಾರಾಗಣ:** ವಿಕ್ಕಿ ವರುಣ್, ಧನ್ಯಾ ರಾಮ್‌ಕುಮಾರ್, ನಾಗಾಭರಣ, ರಾಜೇಶ್ ನಟರಂಗ ಮತ್ತಿತರರು

ಸೈನಿಕ, ಸೈನ್ಯದಲ್ಲಿದ್ದಾನೆ ಎಂದರೆ ಆತ ದೇಶದ ಗಡಿಯಲ್ಲಿ ಬಂದೂಕು ಹಿಡಿದು ಓಡಾಡುತ್ತಾನೆ ಎಂಬ ಕಲ್ಪನೆ ಸಹಜ. ಆದರೆ ಸೈನ್ಯದಲ್ಲಿ ಆತ ಜೀಪ್ ಚಾಲಕ, ಬಾಣಸಿಗ ಕೂಡ ಆಗಿರಬಹುದೆಂಬ ವಾಸ್ತವದೊಂದಿಗೆ ‘ಕಾಲಾಪತ್ಥರ್’ ಚಿತ್ರ ಪ್ರಾರಂಭವಾಗುತ್ತದೆ. ಚಿತ್ರದ ನಾಯಕ, ಉತ್ತರ ಕರ್ನಾಟಕದ ಶಂಕ್ರ ಸೇನೆಯಲ್ಲಿದ್ದಾನೆ, ಧೀರ, ಸಾಹಸಿ ಎಂದು ಊರೆಲ್ಲ ಸಂಭ್ರಮಿಸುತ್ತಿರುತ್ತದೆ. ಆದರೆ ಶಂಕ್ರ ಕಾಶ್ಮೀರದ ಸೇನಾ ಬೆಟಾಲಿಯನ್‌ನಲ್ಲಿ ಅಡುಗೆಯವನಾಗಿರುತ್ತಾನೆ. ಶಂಕ್ರನ ಈ ಜಗತ್ತನ್ನು ಕಟ್ಟಿಕೊಡುವ ‘ಬಾಂಡಲಿ, ಸೌಟ’ ಗೀತೆ. ಅದಕ್ಕೆ ದೃಶ್ಯ ಸಂಯೋಜನೆ ಭಿನ್ನವಾಗಿದೆ.

ಸೇನೆಯಲ್ಲಿ ತನ್ನ ಶೌರ್ಯವನ್ನು ಪ್ರದರ್ಶಿಸಿ, ತಾನು ಸೌಟು ಬಿಟ್ಟು ಗನ್ ಹಿಡಿಯುವ ಸೈನಿಕನಾಗಬೇಕೆಂಬ ಅವಕಾಶಕ್ಕಾಗಿ ಕಾಯುತ್ತಿರುವ ಶಂಕ್ರನಿಗೊಂದು ದಿನ ಆ ಅವಕಾಶ ಲಭಿಸುತ್ತದೆ. ಭಯೋತ್ಪಾದಕರ ಜೊತೆ, ಸೌಟು, ಸಿಲಿಂಡರ್, ಪಾತ್ರೆಗಳನ್ನೆಲ್ಲ ಬಳಸಿ ಹೋರಾಡುವ ಫೈಟ್ ಕೂಡ ಹೊಸತಾಗಿದೆ. ಆದರೆ ಗನ್ ಹಿಡಿದು ಬಂದ ಭಯೋತ್ಪಾದಕರು ಈತನ ಜೊತೆಗೆ ಸೌಟು ಹಿಡಿದು ಏಕೆ ಹೋರಾಡುತ್ತಾರೆ ಎಂಬ ಪ್ರಶ್ನೆಗೆ ಉತ್ತರ ಸಿಗುವುದಿಲ್ಲ!

ಭಯೋತ್ಪಾದಕರನ್ನು ಹೊಡೆದುರುಳಿಸಿದ ಶಂಕ್ರ ರಾತ್ರೋರಾತ್ರಿ ಜನಪ್ರಿಯನಾಗಿ, ಸುದ್ದಿವಾಹಿನಿಗಳಿಗೆ ಆಹಾರವಾಗುತ್ತಾನೆ. ಹುಟ್ಟೂರಲ್ಲಿ ಶಂಕ್ರನ ಮೂರ್ತಿಯೊಂದು ತಲೆ ಎತ್ತುತ್ತದೆ. ಆ ಶಿಲೆಯ ಮೂರ್ತಿಯಿಂದ ಊರಲ್ಲಿ, ಶಂಕ್ರನ ಬದುಕಿನಲ್ಲಿ ಏನೆಲ್ಲ ಆಗುತ್ತದೆ ಎಂಬುದೇ ಚಿತ್ರದ ಕಥೆ. ಸತ್ಯಪ್ರಕಾಶ್ ಅವರ ಕಥೆಯಾಗಿದ್ದರಿಂದ ಇಲ್ಲಿಯೂ ಸ್ವಲ್ಪ ‘ರಾಮಾ ರಾಮಾ ರೇ’ ಚಿತ್ರದ ಛಾಯೆಯಿದೆ. ಚಿತ್ರದ ಕಥೆಯೇ ಭಿನ್ನ ಮತ್ತು ಬಹಳ ಸಹಜವಾಗಿ ನಡೆಯುತ್ತದೆ. ಒಂದಷ್ಟು ತಿರುವುಗಳೊಂದಿಗೆ ದ್ವಿತೀಯಾರ್ಧದ ಚಿತ್ರಕಥೆಯನ್ನು ಸ್ವಲ್ಪ ಗಟ್ಟಿಯಾಗಿಸುವ ಅವಕಾಶ ನಿರ್ದೇಶಕರಿಗಿತ್ತು. ಕಂಟೆಂಟ್ ಜೊತೆಗೆ ನಾಯಕ–ನಾಯಕಿ ಪ್ರೀತಿ ಇನ್ನಷ್ಟು ಗಾಢವಾಗಬಹುದಿತ್ತು. ನಗುವಿಗೊಂದಷ್ಟು ಜಾಗ ಬೇಕಿತ್ತು.

ಚಿತ್ರದ ದೊಡ್ಡ ಶಕ್ತಿ ನಟರ ದಂಡು. ಸೈನಿಕನಾಗಿ ವಿಕ್ಕಿ ವರುಣ್ ಇಷ್ಟವಾಗುತ್ತಾರೆ. ಶಿಕ್ಷಕಿ ಪಾತ್ರದಲ್ಲಿ ಧನ್ಯಾ ರಾಮ್‌ಕುಮಾರ್ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ. ಊರಿನ ಗೌಡರಾಗಿ ಟಿ.ಎಸ್.ನಾಗಾಭರಣ ವಿಭಿನ್ನವಾಗಿ ಕಾಣಿಸುತ್ತಾರೆ. ಸಂದೀಪ್ ಅವರ ಛಾಯಾಚಿತ್ರಗ್ರಹಣ ಉತ್ತರ ಕರ್ನಾಟಕ ಊರುಗಳನ್ನು ಚೆಂದವಾಗಿ ಕಟ್ಟಿಕೊಟ್ಟಿದೆ. ಅನೂಪ್ ಸೀಳೀನ್ ಸಂಗೀತ ಕಥೆಗೆ ಪೂರಕವಾಗಿದೆ.

ವಿನಾಯಕ ಕೆ.ಎಸ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪದಬಂಧ 5802


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಜನ ಮಾಡಿರುವ ಎಣ್ಣೆ ಮಜ್ಜನ (4)
3.ಶ್ರೇಷ್ಠವಾದ ಕಾವ್ಯ (4)
5.ಪಕ್ಷಿ ಅಥವಾ ಗಂಧರ್ವ (3)
7.ತನ್ಮಯನಾಗಿ ಕುಳಿತಿರುವ ಮಗ! (3)
8.ತವರಲ್ಲಿರುವ ಲೋಹ! (3)
10.ಈತ ವಿವೇಕಶಾಲಿ (5)
11.ಅರಾಮವಾಗಿ ಈಜುತ್ತಿರುವ ಹಂಸ (3)
13.ಚನ್ನಾಗಿ ಕಡೆಯಲ್ಪಟ್ಟಿದ್ದು (3)
14.ಮುಂದೆ ಬರಲಿರುವ ಕಾಲ (3)
16.ಗೌರವಕ್ಕೆ ಪಾತ್ರನಾದವನು (4)
17.ಶೀರ್ಷಿಕೆ ಅಥವಾ ತಲೆಬರಹ (4)

ಮೇಲಿಂದ ಕೆಳಕ್ಕೆ

1.ಅನಿರೀಕ್ಷಿತವಾಗಿ ಬಂದ ಅತಿಥಿ (4)
2.ನಖರ ಮಾಡುವಾಗ ಕಾಣಿಸಿದ ಉಗುರು! (2)
3.ಮಧುರ ಫಲಗಳನ್ನು ನೀಡುವ ವೃಕ್ಷ (2)
4.ತಡೆ ಎನ್ನುವ ಪದಕ್ಕೊಂದು ಪರ್ಯಾಯ ಪದ (3)
6.ಚಂಬೆಳಕಿನ ಕವಿ ಎಂದೇ ಪ್ರಖ್ಯಾತರಾದವರು (7)
7.ಈ ತರ ತಮ್ಮ ತೋರಿದ ಭೇದಭಾವ! (4)
9.ಸೂರ್ಯನ ಮಗ (4)
12.ಭೋಜನ ಸಮಾರಂಭಕ್ಕೆ ಬೇಕಾದ ಸಾಧನ ಸಾಮಗ್ರಿ (4)
13.ನಡುವೆ ಇರುವುದು (3)
14.ಭರವಸೆಯ ಮಾತಿನಲ್ಲಿರುವ ಹೆದರಿಕೆ! (2)
15.ಗುರುವಿಗೆ ತಕ್ಕ ವಿದ್ಯಾರ್ಥಿ ತಿರುಗಿದ್ದಾನಲ್ಲಾ! (2)



5801ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:

1.ನಾಟಿಮದ್ದು 3.ತಲೆಗಾಪು 5.ಡಿಕಾವು 7.ಪಡಪೋಸಿ 9.ಗುಣಿ 10.ಡಿಕ್ಕಿ 11.ತಲೋದರಿ 13.ಹೆಡಿಗೆ 16.ಹಕೀಕತ್ತು 17.ದಳಪತಿ

ಮೇಲಿಂದ ಕೆಳಕ್ಕೆ:

1.ನಾಡಾಡಿ 2.ಮರೆವು 3.ತಡಬಡ 4.ಪುಷ್ಕರ 6.ಕಾಗುಣಿತ 7.ಪರಾರಿ 8.ಸಿಡಿಮಿಡಿ 12.ದಸಕತ್ತು 13.ವ್ಯಾಮೋಹ 14.ಹೆಚ್ಚಳ 15.ಗೆಳತಿ

ಸುಡೊಕು 6817

	7	9			3		8	
				8		2		9
8	1		2	6			3	
	8					1		5
	9	2	8		5		6	
5						8		
9		7	5					6
	5				2		4	
4	3		6		1			2

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6816 ಸುಡೊಕು

9	2	8	3	6	7	4	5	1
3	6	4	9	1	5	8	7	2
5	7	1	2	4	8	9	6	3
7	4	2	6	3	9	1	8	5
8	3	9	5	7	1	2	4	6
1	5	6	8	2	4	3	9	7
2	8	5	1	9	6	7	3	4
4	9	3	7	5	2	6	1	8
6	1	7	4	8	3	5	2	9

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಶನಿವಾರ ಸೆಪ್ಟೆಂಬರ್ 14, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಶುಕ್ಲ ಏಕಾದಶಿ ಗಂ. 20-42 ನಕ್ಷತ್ರ: ಉತ್ತರಾಷಾಢ ಗಂ. 20-33 ಯೋಗ: ಶೋಭನ ಗಂ. 18-17 ಕರಣ: ವಣಿಜ ಗಂ. 9-42, ಸಿಂಹ ಮಾಸದ 28 ನೇ ದಿನ, ಮಳೆನಕ್ಷತ್ರ: ಉತ್ತರಫಲ್ಗುಣಿ 1.
ರಾಹುಕಾಲ: ಬೆಳಿಗ್ಗೆ 09-00 – 10-30
ಸೂರ್ಯೋದಯ: 06-23 **ಸೂರ್ಯಾಸ್ತ :** 06-29
ಮುಸ್ಲಿಂ ದಿನಾಂಕ: 10 ರಬಿಉಲ್ಲಾವಲ್
ದಿನ ವಿಶೇಷ: ಓಣಂ ಒಂದನೇ ದಿನ **ಅದೃಷ್ಟ ಸಂಖ್ಯೆ:** 3, 10

ಮೇಷ: ಸಮಾರಂಭದಲ್ಲಿ ನಿಮ್ಮ ಹಾಜರಿಯು ವಿಶೇಷವಾದ ಕಳೆ ತರಲಿದೆ. ನೀವು ಪ್ರಯತ್ನಿಸಿದ ಕಾರ್ಯಗಳು ಗುರು-ಹಿರಿಯರ ಅನುಗ್ರಹದಿಂದ ಕೈಗೂಡಲಿವೆ. ಸ್ನೇಹಿತರಿಂದ ಸಕಾಲಕ್ಕೆ ಸಹಾಯ ಸಿಗಲಿದೆ.

ವೃಷಭ: ಪರೋಪಕಾರದ ಫಲದಿಂದಾಗಿ ದೊಡ್ಡ ಸಮಸ್ಯೆಗಳೂ ಮಂಜಿನಂತೆ ಕರಗಿ ಹೋಗುವವು. ಸ್ನೇಹಿತರು ಹಾಗೂ ಕುಟುಂಬ ಸದಸ್ಯರಿಂದ ಭಾವನಾತ್ಮಕ ಸಹಕಾರ ಸಿಗಲಿದೆ.

ಮಿಥುನ: ಕಾರ್ಯ ವೈಖರಿಯನ್ನು ಬದಲಿಸಿ ಪ್ರಾಮಾಣಿಕವಾಗಿ ಪ್ರಯತ್ನಿಸಿದರೆ ಜಯ ನಿಮ್ಮದಾಗುವುದು. ನಿಮ್ಮ ಸಂಪತ್ತಿನ ಬಗ್ಗೆ ನೆರೆಹೊರೆಯವರಿಗೆ ಅಸೂಯೆ ಉಂಟಾಗುವುದು.

ಕರ್ಕಾಟಕ: ನಿಮ್ಮ ನಿರ್ಧಾರ ಸರಿಯಾದುದೆಂದು ಮನವರಿಕೆಯಾಗಲಿದೆ. ವೃತ್ತಿ ಜೀವನದಲ್ಲಿ ಲೋಪಗಳುಂಟಾಗುವ ಸಂಭವವಿರುವುದರಿಂದ ಹೆಚ್ಚಿನ ಜಾಗ್ರತೆ ವಹಿಸುವುದು ಅಗತ್ಯ.

ಸಿಂಹ: ಕಠಿಣ ಶ್ರಮದ ಫಲವಾಗಿ ಗುರಿಗಳು ಈಡೇರಲಿವೆ. ನಿಮ್ಮ ಧ್ಯೇಯಗಳನ್ನು ಎಲ್ಲರಿಗೂ ಪಸರಿಸುವ ಕೆಲಸವನ್ನು ಮಾಡುವಿರಿ. ಅನಿವಾರ್ಯವಾಗಿ ಆತುರದ ನಿರ್ಧಾರವನ್ನು ತೆಗೆದುಕೊಳ್ಳಬೇಕಾಗಬಹುದು.

ಕನ್ಯಾ: ಸರ್ಕಾರದಿಂದ ನಿವೇಶನ ಮಂಜೂರು ಮಾಡಿಸಿಕೊಳ್ಳಲು ಹೆಚ್ಚು ಶ್ರಮ ವಹಿಸಿದರೆ ಕೈಗೂಡಲಿದೆ. ಬಾಯಿ ಚಪಲಕ್ಕೆ ತಿಂದ ಆಹಾರವು ಅನಾರೋಗ್ಯಕ್ಕೆ ಕಾರಣವಾಗುವುದು. ವಿಶೇಷ ವ್ಯಕ್ತಿಯು ಉಡುಗೊರೆ ನೀಡಬಹುದು.

ತುಲಾ: ಆಲಸ್ಯತನದಿಂದ ಹೊರಬಂದಲ್ಲಿ ಯಾವುದೇ ಸಮಸ್ಯೆಗಳು ಬರಲಾರವು. ಕುಟುಂಬದ ಸದಸ್ಯರೊಂದಿಗೆ ಅನಗತ್ಯವಾಗಿ ವಾದಿಸಬೇಡಿ. ವಾಹನ ವ್ಯವಹಾರಗಳಲ್ಲಿ ವಿಶೇಷ ಲಾಭವಾಗಲಿದೆ.

ವೃಶ್ಚಿಕ: ಮಾತಾ-ಪಿತೃಗಳಿಂದ ಪ್ರೋತ್ಸಾಹ ದೊರೆಯಲಿದೆ. ಸಂಬಂಧಿಕರ ಆಗಮನದಿಂದ ಮನೆಯಲ್ಲಿ ಸಂಭ್ರಮದ ವಾತಾವರಣ ಉಂಟಾಗುವುದು. ನೂತನ ಗೃಹ ನಿರ್ಮಾಣದ ಬಗ್ಗೆ ಯೋಚಿಸಬಹುದು.

ಧನು: ಸಮಾಜದಲ್ಲಿ ಉತ್ತಮ ಸ್ಥಾನಮಾನ ದೊರಕಿಸಿಕೊಳ್ಳಲು ಪ್ರಾಮಾಣಿಕವಾಗಿ ಪ್ರಯತ್ನಿಸಿ. ಮನೆಯಲ್ಲಿ ಯಾರ ನೆರವೂ ಇಲ್ಲದೆ ಎಲ್ಲಾ ಕಾರ್ಯಗಳನ್ನು ಸ್ವಯಂ ನೀವೇ ನಿರ್ವಹಿಸುವಿರಿ.

ಮಕರ: ಹಳೆಯ ವಿಷಯಗಳನ್ನು ಆಗಾಗ ನೆನಪಿಸಿಕೊಂಡು ದುಃಖ ಪಡುವುದು ಸರಿಯಲ್ಲ. ಉದ್ಯೋಗ ತ್ಯಜಿಸಿ ಹುಟ್ಟಿದ ಊರಿನಲ್ಲಿ ಕೃಷಿ ಮಾಡುವ ಯೋಚನೆ ಬರುವುದು. ಧರ್ಮ ಕಾರ್ಯಗಳಲ್ಲಿ ನಿರಂತರವಾಗಿ ತೊಡಗಿಕೊಳ್ಳಿ.

ಕುಂಭ: ಸಮಸ್ಯೆ ಮತ್ತು ದುಃಖಗಳೆರಡೂ ಒಟ್ಟಿಗೆ ಬಾಧಿಸಲಿವೆ. ಕೆಲಸ ಕಾರ್ಯಗಳನ್ನು ಶೀಘ್ರವಾಗಿ ಪೂರ್ಣಗೊಳಿಸಲು ನಿರ್ಧರಿಸಿ. ಒಳ್ಳೆಯ ಕಾರ್ಯಗಳು ತಕ್ಷಣ ಫಲ ಕೊಡುವುದಿಲ್ಲ.

ಮೀನ: ನಿಮ್ಮ ನಿಲುವು ಸಮರ್ಪಕವಾದುದು ಎಂದು ಇತರರಿಗೆ ಮನವರಿಕೆ ಮಾಡಿಕೊಡುವಿರಿ. ಅಪಾಯಕಾರಿ ವಸ್ತುಗಳೊಂದಿಗೆ ಕಾರ್ಯನಿರ್ವಹಿಸುವಾಗ ಹೆಚ್ಚಿನ ಜಾಗ್ರತೆ ವಹಿಸುವುದು ಸೂಕ್ತ.

ಒಂದು ತಾಲ್ಲೂಕಿನ ವ್ಯಾಪ್ತಿಯ ಕರ್ತವ್ಯಕ್ಕೆ ಗರಿಷ್ಠ ಏಳು ವರ್ಷಗಳ ಮಿತಿ • ವರ್ಗಾವಣೆ ಪ್ರಕ್ರಿಯೆ ಮಧ್ಯದಲ್ಲೇ ಸೇರ್ಪಡೆ

ದೀರ್ಘಾವಧಿ ಠಿಕಾಣಿ: ಪಿಡಿಒಗಳ ಎತ್ತಂಗಡಿ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಒಂದೇ ಗ್ರಾಮ ಪಂಚಾಯಿತಿ ಅಥವಾ ತಾಲ್ಲೂಕಿನಲ್ಲಿ ಸಚಿವರು, ಶಾಸಕರ ಶಿಫಾರಸು ಬಳಸಿಕೊಂಡು ಹಲವು ವರ್ಷಗಳಿಂದ ಠಿಕಾಣಿ ಹೂಡಿದ್ದ ಎಲ್ಲ ಪಿಡಿಒ, ಕಾರ್ಯದರ್ಶಿಗಳನ್ನು ಎತ್ತಂಗಡಿ ಮಾಡಲು ಗ್ರಾಮೀಣಾಭಿವೃದ್ಧಿ ಇಲಾಖೆ ಸಿದ್ಧತೆ ನಡೆಸಿದೆ.

ಗ್ರಾಮೀಣ ಆಡಳಿತದಲ್ಲಿ ತ್ವರಿತ ಸೇವೆ ಒದಗಿಸುವುದು, ಪಂಚಾಯಿತಿ ಕಲ್ಪಿಸಿ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕುವುದು, ಅಧಿಕಾರಿಗಳ ಅನುಕೂಲ ಮತ್ತು ಸಿಬ್ಬಂದಿಯ ದಕ್ಷತೆ ಹೆಚ್ಚಿಸುವ ಉದ್ದೇಶ ಇಟ್ಟುಕೊಂಡು ಪಿಡಿಒ (ಪಂಚಾಯಿತಿ ಅಭಿವೃದ್ಧಿ ಅಧಿಕಾರಿ), ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಗ್ರೇಡ್–1, ಕಾರ್ಯದರ್ಶಿ ಗ್ರೇಡ್–2, ದ್ವಿತೀಯ ದರ್ಜೆ ಲೆಕ್ಕ ಸಹಾಯಕರನ್ನು ಇದೇ ಮೊದಲ ಬಾರಿ ಕೌನ್ಸೆಲಿಂಗ್ ಮೂಲಕ ವರ್ಗಾವಣೆ ಮಾಡಲು ಗ್ರಾಮೀಣಾಭಿವೃದ್ಧಿ ಇಲಾಖೆ ಜೂನ್ 25ರಂದು ಆದೇಶ ಹೊರಡಿಸಿತ್ತು.

ಆಯಾ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯ ಎಲ್ಲ ಅಧಿಕಾರಿ, ಸಿಬ್ಬಂದಿಯ ದಾಖಲಾತಿ ಪರಿಶೀಲನಾ ಕಾರ್ಯವನ್ನೂ ಈಗಾಗಲೇ ಪೂರ್ಣಗೊಳಿಸಲಾಗಿತ್ತು. ಸರ್ಕಾರದ ಹೇಳಿಕೆಯಂತೆ ಆಗಸ್ಟ್ 10 ರೊಳಗೆ ವರ್ಗಾವಣೆ ಪ್ರಕ್ರಿಯೆ ಪೂರ್ಣಗೊಳಿಸಬೇಕಿತ್ತು. ಈಗ ಕೌನ್ಸೆಲಿಂಗ್ ಪ್ರಕ್ರಿಯೆ ಆರಂಭಿಸಿರುವ ಮಧ್ಯದಲ್ಲೇ ಕರ್ನಾಟಕ ರಾಜ್ಯ ನಾಗರಿಕ ಸೇವೆಗಳ ವರ್ಗಾವಣೆ ನಿಯಂತ್ರಣ ನಿಯಮಗಳಿಗೆ ತಿದ್ದುಪಡಿ ತರಲು ಕರಡು ಪ್ರಕಟಿಸಲಾಗಿದೆ. ಒಂದೇ ತಾಲ್ಲೂಕಿನಲ್ಲಿ ಗರಿಷ್ಠ ಏಳು ವರ್ಷ ಕೆಲಸ ಮಾಡಿರುವ ಎಲ್ಲ ಪಿಡಿಒ, ಕಾರ್ಯದರ್ಶಿಗಳನ್ನು ಅದೇ ತಾಲ್ಲೂಕು ವ್ಯಾಪ್ತಿಯ ಯಾವುದೇ ಪಂಚಾಯಿತಿಗಳ ಖಾಲಿ ಹುದ್ದೆಗಳಿಗೆ ಪರಿಗಣಿಸದಂತೆ ನಿರ್ಬಂಧಿಸುವ ಅಂಶವನ್ನು ಸೇರಿಸಲಾಗಿದೆ.



ಶಾಲೆಗಳು ಆರಂಭವಾಗಿವೆ. ಒತ್ತಡದ ವಾತಾವರಣದ ನಡುವೆ ಕೆಲಸ ಮಾಡುವ ಪಿಡಿಒಗಳಿಗೆ ಆಘಾತ ತಂದಿದೆ

ರಾಜು ವಾರದ, ಅಧ್ಯಕ್ಷ, ಕರ್ನಾಟಕ ರಾಜ್ಯ ಪಿಡಿಒಗಳ ಕ್ಷೇಮಾಭಿವೃದ್ಧಿ ಸಂಘ



ಸಾರ್ವಜನಿಕ ಹಿತಾಸಕ್ತಿಯಿಂದ ನಿರ್ಧಾರ ಕೈಗೊಳ್ಳಲಾಗಿದೆ. ಆಕ್ಷೇಪಣೆ ಪರಿಗಣಿಸಿ, 7 ದಿನದ ನಂತರ ಅಧಿಸೂಚನೆ ಹೊರಡಿಸಲಾಗುವುದು

ಉಮಾ ಮಹಾದೇವನ್ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಇಲಾಖೆ

ಪಿಡಿಒ, ಕಾರ್ಯದರ್ಶಿಗಳ ವಿರೋಧ: ಏಳು ವರ್ಷಕ್ಕಿಂತ ಮೇಲ್ಪಟ್ಟು ಒಂದೇ ತಾಲ್ಲೂಕಿನಲ್ಲಿ ಕೆಲಸ ಮಾಡುತ್ತಿರುವವರನ್ನು ಹೊರಗೆ ಕಳುಹಿಸುವ ಗ್ರಾಮೀಣಾಭಿವೃದ್ಧಿ ಇಲಾಖೆ ನಡೆಗೆ ಗ್ರಾಮ ಪಂಚಾಯಿತಿ ಪಿಡಿಒ, ಕಾರ್ಯದರ್ಶಿಗಳು ವಿರೋಧ ವ್ಯಕ್ತಪಡಿಸಿದ್ದಾರೆ.

'ಎಲ್ಲ ಇಲಾಖೆಗಳಲ್ಲೂ ವರ್ಗಾವಣೆ ನೌಕರ ಸ್ನೇಹಿಯಾಗಿರುತ್ತದೆ. ಗ್ರಾಮೀಣಾಭಿವೃದ್ಧಿ ಇಲಾಖೆ ಮಾತ್ರ ನೌಕರರ ಬದುಕಿನ ಜೊತೆ ಚೆಲ್ಲಾಟವಾಡುವ ನಿರ್ಧಾರ ಕೈಗೊಂಡಿದೆ. ಒಂದು ತಾಲ್ಲೂಕಿನಲ್ಲಿ ಕೆಲಸ ಮಾಡುತ್ತಿರುವ ಪಿಡಿಒಗಳನ್ನು ಸಾಮೂಹಿಕವಾಗಿ ಹೊರಹಾಕುವ ಪ್ರಕ್ರಿಯೆಯನ್ನು ಪ್ರಾರಂಭಿಸಿರುವುದು ಅವೈಜ್ಞಾನಿಕ ಕ್ರಮ. ತಕ್ಷಣ ತಿದ್ದುಪಡಿ ಕರಡು ಹಿಂಪಡೆಯಬೇಕು. ಇಲ್ಲದಿದ್ದರೆ ರಾಜ್ಯದಾದ್ಯಂತ ಹೋರಾಟ ನಡೆಸಲು ಸಂಘದ ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳಲಾಗುವುದು' ಎನ್ನುತ್ತಾರೆ ಕರ್ನಾಟಕ ರಾಜ್ಯ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ರಾಜು ವಾರದ.

5,189 ಕೆಲಸ ಮಾಡುತ್ತಿರುವ ಪಿಡಿಒಗಳು	1,590 ಪಂಚಾಯಿತಿ ಕಾರ್ಯದರ್ಶಿಗಳು ಗ್ರೇಡ್–1	3,108 ಪಂಚಾಯಿತಿ ಕಾರ್ಯದರ್ಶಿಗಳು ಗ್ರೇಡ್–2	2,234 ದ್ವಿತೀಯ ದರ್ಜೆ ಲೆಕ್ಕ ಸಹಾಯಕರು

ಶೇ 30 ವರ್ಗಾವಣೆ, ತಾಲ್ಲೂಕು ತೊರೆದವರು ಕಡಿಮೆ

ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ 2023-24ನೇ ಸಾಲಿನಲ್ಲಿ ಸಾರ್ವತ್ರಿಕ ವರ್ಗಾವಣೆ ನಡೆಸಲಾಗಿತ್ತು. ಪಿಡಿಒಗಳ ವೃಂದದಲ್ಲಿ ಶೇ 6ರಷ್ಟು ಮಂದಿಯನ್ನು ವರ್ಗಾವಣೆ ಮಾಡುವ ಅಧಿಕಾರವನ್ನು ಗ್ರಾಮೀಣಾಭಿವೃದ್ಧಿ ಸಚಿವರಿಗೆ ನೀಡಲಾಗಿತ್ತು. ನಿಯಮದಂತೆ 312 ಪಿಡಿಒಗಳ ವರ್ಗಾವಣೆಗೆ ಮಾತ್ರ ಅವಕಾಶವಿತ್ತು. ಆದರೆ, 1,562 ಪಿಡಿಒಗಳನ್ನು (ಶೇ 30.07) ವರ್ಗಾವಣೆ ಮಾಡಲಾಗಿತ್ತು. ವಿಧಾನಸಭೆಯಲ್ಲಿ ಶಾಸಕರ ಪ್ರಶ್ನೆಗೆ ನೀಡಿದ ಉತ್ತರದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರು ಈ ಮಾಹಿತಿ ಹಂಚಿಕೊಂಡಿದ್ದರು.

ಶೇ 30.07ರಷ್ಟು ವರ್ಗಾವಣೆ ನಡೆದರೂ ತಾವು ಕೆಲಸ ಮಾಡುತ್ತಿರುವ ತಾಲ್ಲೂಕು ತೊರೆದು ಹೊರ ಹೋದವರು ಶೇ 10ರಷ್ಟು ಮಾತ್ರ. ಅದು ಸ್ವಯಂ ಇಚ್ಛೆಯಿಂದ. ಶೇ 60ಕ್ಕಿಂತ ಹೆಚ್ಚು ಪಿಡಿಒ, ಕಾರ್ಯದರ್ಶಿಗಳು ಒಂದೇ ತಾಲ್ಲೂಕಿನಲ್ಲಿ 15–20 ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ.

ಸಿಜೆಐ ಮನೆಯಲ್ಲಿ ಮೋದಿ ಪೂಜೆ ತಪ್ಪೇನಿದೆ?–ಸೋಮಣ್ಣ

ಪ್ರಜಾವಾಣಿ ವಾರ್ತೆ



ವಿ. ಸೋಮಣ್ಣ

ಮೈಸೂರು: 'ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರ ಮನೆಯಲ್ಲಿ ನಡೆದ ಗಣೇಶ ಚತುರ್ಥಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಪಾಲ್ಗೊಂಡಿದ್ದರಲ್ಲಿ ತಪ್ಪೇನಿದೆ' ಎಂದು ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಕೇಳಿದರು.

ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಸಿಜೆಐ ದೇಶದ ಸಂಪತ್ತು. ಮೋದಿಯವರನ್ನು ಇಡೀ ಜಗತ್ತೇ ಇಷ್ಟಪಡುತ್ತಿದೆ. ದೇಶದ ಉನ್ನತ ಸ್ಥಾನದಲ್ಲಿರುವ ಇಬ್ಬರೂ ಸೇರಿ ಗಣಪತಿಯನ್ನು ಪೂಜಿಸಿದರೆ ತಪ್ಪನ್ನೇಕೆ ಹುಡುಕುತ್ತೀರಾ? ಅವರಿಬ್ಬರೂ ಒಂದೆಡೆ ಸೇರುವುದೇ ಬೇಡವೆಂದರೆ ಹೇಗೆ? ಮೊಸರಲ್ಲಿ ಕಲ್ಲು ಹುಡುಕಬಾರದು' ಎಂದರು.

'ಮನಮೋಹನ್ ಸಿಂಗ್ ಪ್ರಧಾನಿಯಾಗಿದ್ದಾಗ ಏನು ನಡೆದಿತ್ತೆಂಬುದನ್ನು ವಿರೋಧ ಪಕ್ಷದವರು ಒಮ್ಮೆ ನೆನಪಿಸಿಕೊಳ್ಳಲಿ. ಸಣ್ಣ-ಪುಟ್ಟದ್ದನ್ನು ದೊಡ್ಡದು ಮಾಡುವುದು ಬೇಡ. ಗಣೇಶನ ಪೂಜೆಗೆ ಹೋಗಿದ್ದ ಪ್ರಧಾನಿಯನ್ನು ಅಭಿನಂದಿಸದೆ, ಹಾದಿ ಬೀದಿಯಲ್ಲಿ ಮಾತನಾಡುವುದು ಸರಿಯಲ್ಲ' ಎಂದರು.

ನಾಗಮಂಗಲ ಗಲಭೆ ಬಗ್ಗೆ ಪ್ರತಿಕ್ರಿಯಿಸಿ, 'ತಪ್ಪು ಮಾಡಿದವರು ಎಷ್ಟೇ ಪ್ರಭಾವಿಗಳಾಗಿದ್ದರೂ ಸರ್ಕಾರ ಕಠಿಣ ಕ್ರಮ ಜರುಗಿಸಬೇಕು. ಹಿರಿಯರು, ಅನುಭವಿಗಳೂ ಆದ ಗೃಹ ಸಚಿವ ಜಿ. ಪರಮೇಶ್ವರ, ಅದು ಸಣ್ಣ ಘಟನೆ ಎಂದು ಯಾಕೆ ಹೇಳಿದ್ದಾರೋ ಗೊತ್ತಾಗುತ್ತಿಲ್ಲ. ಮತಗಳ ಓಲೈಕೆ ರಾಜಕಾರಣವನ್ನು ಬಿಡಬೇಕು' ಎಂದರು.

'ಸಿಜೆಐ ಮನೆಗೆ ಪ್ರಧಾನಿ ಹೋಗಬಾರದೇ?'

ಹುಬ್ಬಳ್ಳಿ: 'ಮನಮೋಹನ್ ಸಿಂಗ್ ಪ್ರಧಾನಿ ಆಗಿದ್ದಾಗ ಕಾಂಗ್ರೆಸ್ ನಡೆಸಿದ ಇಫ್ತಿಯಾರ್ ಕೂಟಕ್ಕೆ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ (ಸಿಜೆಐ) ಪಾಲ್ಗೊಳ್ಳಬಹುದು. ಗಣೇಶ ಉತ್ಸವಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಸಿಜೆಐ ಮನೆಗೆ ಹೋಗಬಾರದು ಎನ್ನುವುದು ಯಾವ ನ್ಯಾಯ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಪ್ರಶ್ನಿಸಿದರು.

'ಆಹ್ವಾನದ ಮೇರೆಗೆ ಮೋದಿ ಅವರು ಸಿಜೆಐ ಡಿ.ವೈ.ಚಂದ್ರಚೂಡ್ ಅವರ ಮನೆಗೆ ಹೋಗಿದ್ದರು. ಅದು ಧಾರ್ಮಿಕ, ಸಾಮಾಜಿಕ ಕಾರ್ಯಕ್ರಮವಾಗಿದ್ದು, ಹೋಗಬಾರದೆಂದು ಎಲ್ಲಿಯೂ ಇಲ್ಲ. ಪ್ರಧಾನಿ ಅವರು ಗಣಪತಿ ಪೂಜೆ ಮಾಡಿದ್ದಕ್ಕೆ ಕಾಂಗ್ರೆಸ್ ವಿರೋಧಿಸುತ್ತಿದೆ' ಎಂದು ಅವರು ಶುಕ್ರವಾರ ಸುದ್ದಿಗಾರರಿಗೆ ತಿಳಿಸಿದರು.

ಆಶಾ ಕಾರ್ಯಕರ್ತೆಯರ ಶಕ್ತಿ ಪ್ರದರ್ಶನ

ಕಲಬುರಗಿಯಲ್ಲಿ ರಾಜ್ಯ ಸಮ್ಮೇಳನ: ಸರ್ಕಾರಿ ನೌಕರರೆಂದು ಪರಿಗಣಿಸಲು ಒತ್ತಾಯ

ಪ್ರಜಾವಾಣಿ ವಾರ್ತೆ



ಕಲಬುರಗಿಯಲ್ಲಿ ಶುಕ್ರವಾರ ನಡೆದ ಕರ್ನಾಟಕ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘಟನೆಯ ಪ್ರಥಮ ರಾಜ್ಯಮಟ್ಟದ ಸಮ್ಮೇಳನದ ಅಂಗವಾಗಿ ಆಶಾ ಕಾರ್ಯಕರ್ತೆಯರು ಮೆರವಣಿಗೆ ನಡೆಸಿದರು ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

ಕಲಬುರಗಿ: ರಾಜ್ಯದ ಮೂಲೆ ಮೂಲೆಯಿಂದ ಬಂದಿದ್ದ ಸಾವಿರಾರು ಆಶಾ ಕಾರ್ಯಕರ್ತೆಯರು ನಗರದಲ್ಲಿ ಶುಕ್ರವಾರ ಬೃಹತ್ ಮೆರವಣಿಗೆ ನಡೆಸುವ ಮೂಲಕ ಶಕ್ತಿ ಪ್ರದರ್ಶಿಸಿ ತಮ್ಮ ಬೇಡಿಕೆಗಳ ಈಡೇರಿಕೆಗೆ ಹಕ್ಕೊತ್ತಾಯ ಮಂಡಿಸಿದರು.

ಆಲ್ ಇಂಡಿಯಾ ಯುನೈಟೆಡ್ ಟ್ರೇಡ್ ಯೂನಿಯನ್ ಸೆಂಟರ್ (ಎಐಯುಟಿಯುಸಿ) ಸಂಯೋಜಿತ ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ನೇತೃತ್ವದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿದ್ದ ಆಶಾ ಕಾರ್ಯಕರ್ತೆಯರು ನಗರದ ಸರ್ದಾರ್ ವಲ್ಲಭಭಾಯಿ ಪಟೇಲ್ ವೃತ್ತದಿಂದ ಸ್ಟೇಶನ್ ರಸ್ತೆ, ಎಸ್.ಎಂ. ಪಂಡಿತ್ ರಂಗಮಂದಿರದ ಮಾರ್ಗವಾಗಿ ಪಬ್ಲಿಕ್ ಗಾರ್ಡನ್ ಸಮೀಪದ ವೀರಶೈವ ಕಲ್ಯಾಣ ಮಂಟಪ ತಲುಪಿದರು. ಅಲ್ಲಿ ಆಶಾ ಕಾರ್ಯಕರ್ತೆಯರ ರಾಜ್ಯಮಟ್ಟದ ಪ್ರಥಮ ಸಮ್ಮೇಳನ ನಡೆಸಲಾಯಿತು.

ಸಮ್ಮೇಳನದಲ್ಲಿ ಮಾತನಾಡಿದ ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ (ಕಮ್ಯುನಿಸ್ಟ್) ಪಕ್ಷದ ರಾಜ್ಯ ಕಾರ್ಯದರ್ಶಿ ಕೆ. ಉಮಾ, 'ಆಶಾ ಕಾರ್ಯಕರ್ತೆಯರನ್ನು ಸರ್ಕಾರಿ ನೌಕರರೆಂದು ಪರಿಗಣಿಸಬೇಕು. ಅಲ್ಲಿಯವರೆಗೆ ಅವರನ್ನು ಕಾರ್ಮಿಕರು ಎಂದು ಪರಿಗಣಿಸಿ ಎಲ್ಲಾ ಶಾಸನಬದ್ಧ ಸೌಲಭ್ಯಗಳನ್ನು ಒದಗಿಸಬೇಕು. ಸಾಮಾಜಿಕ ಭದ್ರತೆಯನ್ನು ಖಾತ್ರಿಪಡಿಸಬೇಕು. ಈಗ ನೀಡುತ್ತಿರುವ ಗೌರವಧನ ಯಾವುದಕ್ಕೂ ಸಾಲುತ್ತಿಲ್ಲ. ಹೀಗಾಗಿ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಆಶಾ ಕಾರ್ಯಕರ್ತೆಯರಿಗೆ ಕನಿಷ್ಠ ವೇತನ ಕಾಯ್ದೆಯಡಿ ಮಾಸಿಕ ₹ 15 ಸಾವಿರ ಪ್ರೋತ್ಸಾಹ ಧನ ನೀಡಬೇಕು' ಎಂದು ಒತ್ತಾಯಿಸಿದರು.

'ಆಶಾ ಕಾರ್ಯಕರ್ತೆಯರ ಸೇವೆ ಇಲ್ಲದ ದಿನಗಳಲ್ಲಿ ಪ್ರತಿ ಲಕ್ಷಕ್ಕೆ 5 ಸಾವಿರ ಮಕ್ಕಳು ಹೆರಿಗೆ ಸಂಬಂಧಿ ತೊಂದರೆಯಿಂದ ಸಾವಿಗೀಡಾಗುತ್ತಿದ್ದರು. ಇಂದು ಮಕ್ಕಳ ಸಾವಿನ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿದೆ. ಆಶಾ ಕಾರ್ಯಕರ್ತೆಯರ ಸೇವೆಯನ್ನು ಸರ್ಕಾರ ಗಮನಿಸಿ ಬೇಡಿಕೆಗಳನ್ನು ಈಡೇರಿಸಬೇಕು' ಎಂದರು.

ಎಐಯುಟಿಯುಸಿ ಕಾರ್ಮಿಕ ಸಂಘಟನೆಯ ರಾಜ್ಯ ಅಧ್ಯಕ್ಷ ಕೆ. ಸೋಮಶೇಖರ್, ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ರಾಜ್ಯ ಅಧ್ಯಕ್ಷ ಕೆ. ಸೋಮಶೇಖರ್ ಯಾದಗಿರಿ, ಕಾರ್ಯದರ್ಶಿ ಡಿ. ನಾಗಲಕ್ಷ್ಮಿ, ಉಪಾಧ್ಯಕ್ಷೆ ರಮಾ ಟಿ.ಸಿ, ಮೆಡಿಕಲ್ ಸರ್ವಿಸ್ ಸೆಂಟರ್ ರಾಷ್ಟ್ರೀಯ ಉಪಾಧ್ಯಕ್ಷೆ ಡಾ. ಸುಧಾ ಕಾಮತ್ ಅವರು ಮಾತನಾಡಿ ಆಶಾ ಕಾರ್ಯಕರ್ತೆರು ಎದುರಿಸುತ್ತಿರುವ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಿದರು.

ಸುದ್ದಿ 2 ನಿಮಿಷ

ಕಾಲೇಜು ವಿದ್ಯಾರ್ಥಿನಿ ಮೇಲೆ ಅತ್ಯಾಚಾರ

ಉಪ್ಪಿನಂಗಡಿ (ದಕ್ಷಿಣ ಕನ್ನಡ): ಕಾಲೇಜು ವಿದ್ಯಾರ್ಥಿನಿಯನ್ನು ಪುಸಲಾಯಿಸಿ ಕಾಡಿಗೆ ಕರೆದೊಯ್ದು ಅತ್ಯಾಚಾರ ಎಸಗಿರುವ ಆರೋಪದಲ್ಲಿ ವಿಟ್ಲ ನಿವಾಸಿ ಸತೀಶ್ (38) ಎಂಬಾತನ ವಿರುದ್ಧ ಪೋಕ್ಸೊ ಪ್ರಕರಣ ದಾಖಲಾಗಿದೆ.

ಕಾಲೇಜೊಂದರ ವಿದ್ಯಾರ್ಥಿನಿಯನ್ನು ಜೂನ್ 14ರಂದು ಪುತ್ತೂರಿನಲ್ಲಿ ಪರಿಚಯಿಸಿಕೊಂಡಿದ್ದ ಆರೋಪಿ, ಫೋನ್ ಮೂಲಕ ಸಂಪರ್ಕ ಸಾಧಿಸಿ ಆತ್ಮೀಯತೆ ಬೆಳೆಸಿದ್ದ. ಜುಲೈ 21ರಂದು ಆಕೆಯನ್ನು ನೆಲ್ಯಾಡಿಗೆ ಬರಲು ಹೇಳಿದ್ದ. ಅಲ್ಲಿಂದ ಆಕೆಯನ್ನು ಪಿಕಪ್ ವಾಹನದಲ್ಲಿ ಬಜತ್ತೂರು ಗ್ರಾಮದ ಕಾಂಚನ ಎಂಬಲ್ಲಿನ ಕಾಡಿಗೆ ಕರೆದೊಯ್ದು ಅತ್ಯಾಚಾರ ಎಸಗಿದ್ದ. ಈ ವಿಚಾರವನ್ನು ಯಾರಿಗೂ ಹೇಳದಂತೆ ಬೆದರಿಕೆ ಒಡ್ಡಿದ್ದ ಎಂದು ಸಂತ್ರಸ್ತೆ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ.

ಉಪ್ಪಿನಂಗಡಿ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಅಮೆರಿಕದಲ್ಲಿ 'ಪಟ್ಲ ಫೌಂಡೇಷನ್ ಡೇ' ಘೋಷಣೆ: ಸತೀಶ್ ಶೆಟ್ಟಿ



ಮಂಗಳೂರು: ಮಂಗಳೂರಿನ ಯಕ್ಷಧ್ರುವ ಪಟ್ಲ ಫೌಂಡೇಷನ್ ಪ್ರದರ್ಶಿಸಿದ ಯಕ್ಷಗಾನ ಹಾಗೂ ಪಟ್ಲ ಫೌಂಡೇಷನ್ ಕಾರ್ಯ ಚಟುವಟಿಕೆಯನ್ನು ಮೆಚ್ಚಿ ಅಮೆರಿಕದ ವಿಸ್ಕಾನ್ಸಿನ್ ರಾಜ್ಯದ ಬ್ರೂಕ್‌ಫೀಲ್ಡ್ ನಗರದ ಮೇಯರ್ ಸ್ಟೀವನ್ ವಿ. ಪೋಂಟೊ ಅವರು ಆಗಸ್ಟ್ 18 ಅನ್ನು 'ಯಕ್ಷಧ್ರುವ ಪಟ್ಲ ಫೌಂಡೇಷನ್ ಡೇ' ಎಂದು ಘೋಷಿಸಿದ್ದಾರೆ.

ಅಮೆರಿಕ ತಿರುಗಾಟದಲ್ಲಿರುವ ಯಕ್ಷಧ್ರುವ ಪಟ್ಲ ಫೌಂಡೇಷನ್‌ನ ಒಂಬತ್ತು ಕಲಾವಿದರು ಕನ್ನಡ ಸಂಘಟನೆಗಳ ಸಹಕಾರದಲ್ಲಿ ವಿವಿಧೆಡೆ ಯಕ್ಷಗಾನ ಪ್ರದರ್ಶನ ನೀಡುತ್ತಿದ್ದಾರೆ.

ಈ ಸಾಧನೆಗೆ ಮಿಲ್ವಾಕಿ ಕನ್ನಡ ಸಂಘದವರು ಸಹಕಾರ ನೀಡಿದ್ದಾರೆ. ಇತ್ತೀಚೆಗೆ ಕ್ಯಾಲಿಫೋರ್ನಿಯಾ ರಾಜ್ಯದ ಫೀನಿಕ್ಸ್ ನಗರದ ಮೇಯರ್ ಅವರು ಜುಲೈ 27 ಅನ್ನು 'ಯಕ್ಷಧ್ರುವ ಪಟ್ಲ ಫೌಂಡೇಷನ್ ಡೇ' ಎಂದು ಘೋಷಿಸಿದ್ದರು ಎಂದು ಪ್ರವಾಸ ತಂಡದಲ್ಲಿರುವ ಪಟ್ಲ ಫೌಂಡೇಷನ್ ಸ್ಥಾಪಕಾಧ್ಯಕ್ಷ ಪಟ್ಲ ಸತೀಶ್ ಶೆಟ್ಟಿ ತಿಳಿಸಿದ್ದಾರೆ.

ಇಂದು, ನಾಳೆ ನಡೆಯಬೇಕಿದ್ದ ಪರೀಕ್ಷೆ ಮುಂದೂಡಿದ ಕೆಪಿಎಸ್‌ಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ಇಲಾಖೆಗಳ ಗ್ರೂಪ್–ಬಿ ಹುದ್ದೆಗಳ ನೇಮಕಾತಿಗಾಗಿ ಇದೇ ಶನಿವಾರ (ಸೆ.14), ಭಾನುವಾರ (ಸೆ.15) ನಡೆಯಬೇಕಿದ್ದ ಕನ್ನಡ ಭಾಷಾ ಪರೀಕ್ಷೆ ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಕರ್ನಾಟಕ ಲೋಕ ಸೇವಾ ಆಯೋಗವು (ಕೆಪಿಎಸ್‌ಸಿ) ಶುಕ್ರವಾರ ಮುಂದೂಡಿದೆ.

ಇದೇ ಹುದ್ದೆಗಳ ನೇಮಕಾತಿಗಾಗಿ ಇತರೆ ದಿನಾಂಕಗಳಲ್ಲಿ ನಡೆಯಬೇಕಿದ್ದ ವಿಷಯವಾರು ಪತ್ರಿಕೆಗಳ ಎಲ್ಲ ಸ್ಪರ್ಧಾತ್ಮಕ ಪರೀಕ್ಷೆಗಳನ್ನೂ ಮುಂದೂಡಲಾಗಿದೆ.

ಗ್ರೂಪ್ ಬಿ ಮತ್ತು ಸಿ ಹುದ್ದೆಗಳ ನೇಮಕಾತಿಯಲ್ಲಿ ಎಲ್ಲ ಪ್ರವರ್ಗಗಳ ಅಭ್ಯರ್ಥಿಗಳಿಗೆ ಅನ್ವಯವಾಗುವಂತೆ ಗರಿಷ್ಠ ವಯೋಮಿತಿಯನ್ನು ಮೂರು ವರ್ಷ ಸಡಿಲಿಸಿ ಇದೇ 10ರಂದು ರಾಜ್ಯ ಸರ್ಕಾರ ಆದೇಶಿಸಿತ್ತು.

ಈ ವಯೋಮಿತಿ ಸಡಿಲಿಕೆಯು ಒಂದು ಬಾರಿ ಮಾತ್ರ ಅನ್ವಯವಾಗಲಿದ್ದು, ಈಗಾಗಲೇ ಹೊರಡಿಸಲಾಗಿರುವ ನೇರ ನೇಮಕಾತಿ ಅಧಿಸೂಚನೆಗಳು ಮತ್ತು ಮುಂದಿನ ಒಂದು ವರ್ಷದಲ್ಲಿ ನಡೆಯಲಿರುವ ನೇಮಕಾತಿಗಳಲ್ಲಿ ಇದನ್ನು ಪಾಲಿಸಬೇಕು ಎಂದು ಸರ್ಕಾರ ಆದೇಶಿಸಿತ್ತು. ಹೀಗಾಗಿ ಶನಿವಾರ ಮತ್ತು ಭಾನುವಾರ ನಡೆಯಬೇಕಿದ್ದ ಪರೀಕ್ಷೆಗಳನ್ನು ಮುಂದೂಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಗರಿಷ್ಠ ವಯೋಮಿತಿ ಮೂರು ವರ್ಷ ಸಡಿಲಿಕೆ ಅನ್ವಯವಾಗುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅವಕಾಶ ಮಾಡಿಕೊಡುವ ಉದ್ದೇಶದಿಂದ ಪರೀಕ್ಷೆಗಳನ್ನು ಮುಂದೂಡಲಾಗಿದೆ. ಅಭ್ಯರ್ಥಿಗಳು ಹೊಸದಾಗಿ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದ ನಂತರ ಪರೀಕ್ಷೆಗಳ ದಿನಾಂಕವನ್ನು ನಿಗದಿ ಮಾಡಲಾಗುತ್ತದೆ ಎಂದು ಪ್ರಕಟಣೆ ಹೇಳಿದೆ.

ಈಡಿಗ ವಧು–ವರರ ಸಮಾವೇಶ ಸೆ. 22ಕ್ಕೆ

ಬೆಂಗಳೂರು: ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘವು ಸೆಪ್ಟೆಂಬರ್ 22 ರಂದು ಶೇಷಾದ್ರಿಪುರದಲ್ಲಿರುವ ಈಡಿಗ ಭವನದಲ್ಲಿ 'ವಧು-ವರರ ಮುಖಾ-ಮುಖಿ ಸಮಾವೇಶ' ಹಮ್ಮಿಕೊಂಡಿದೆ.

ಸೆ.22ರಂದು ಬೆಳಿಗ್ಗೆ 10 ಗಂಟೆಗೆ ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘದ ವಾರ್ಷಿಕ ಸರ್ವಸದಸ್ಯರ ಸಭೆ ನಡೆಯಲಿದೆ. ಬೆಳಿಗ್ಗೆ 11.30ಕ್ಕೆ ವಧು-ವರರ ಮುಖಾ–ಮುಖಿ ಸಮಾವೇಶ ನಡೆಯಲಿದೆ. ಆಸಕ್ತ ವಧು–ವರರು ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಮತ್ತು ಮಾಹಿತಿಯೊಂದಿಗೆ ಭಾಗವಹಿಸಬಹುದು ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಎಚ್.ಟಿ. ಮೋಹನ್‌ದಾಸ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿಳಾಸ: ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘ, ನಂ. 185, ಈಡಿಗ ಭವನ, ರಾಜೀವ್‌ಗಾಂಧಿ ವೃತ್ತ, ಶೇಷಾದ್ರಿಪುರ, ಬೆಂಗಳೂರು–20.

ಮಾಹಿತಿಗೆ: 080–23560574/48145442.

'ಅತ್ಯಾಚಾರ ಪ್ರಕರಣ ದಾಖಲಿಸಿದ್ದ ದಲಿತ ಕುಟುಂಬಕ್ಕೆ ದಿನಸಿ ನಿರಾಕರಣೆ'

ಪ್ರಜಾವಾಣಿ ವಾರ್ತೆ



ಸುರಪುರ ಡಿವೈಎಸ್ಪಿ ಜಾವೀದ್ ಇನಾಮದಾರ್ ಅವರು ಗ್ರಾಮಕ್ಕೆ ಗುರುವಾರ ರಾತ್ರಿ ಭೇಟಿ ನೀಡಿ ಪರಿಶೀಲಿಸಿದರು

ಯಾದಗಿರಿ: ಜಿಲ್ಲೆಯ ಹುಣಸಗಿ ತಾಲ್ಲೂಕಿನ ಗ್ರಾಮವೊಂದರಲ್ಲಿ ಬಾಲಕಿ ಮೇಲೆ ಅತ್ಯಾಚಾರ ಎಸಗಿದ ಆರೋಪಿ ವಿರುದ್ಧ ಪ್ರಕರಣ ದಾಖಲಿಸಿದ್ದಕ್ಕೆ ಗ್ರಾಮದ ಸವರ್ಣೀಯರು ಪರಿಶಿಷ್ಟ ಜಾತಿಯ ಕುಟುಂಬದವರಿಗೆ ಅಂಗಡಿಯಲ್ಲಿ ದಿನಸಿ ವಸ್ತುಗಳನ್ನು ಕೊಡುತ್ತಿಲ್ಲ ಎಂದು ಸಂತ್ರಸ್ತ ಬಾಲಕಿಯ ತಂದೆ ದೂರಿದ್ದಾರೆ.

ಸವರ್ಣೀಯ ಸಮುದಾಯಕ್ಕೆ ಸೇರಿದ ಯುವಕನು ಪರಿಶಿಷ್ಟ ಜಾತಿಗೆ ಸೇರಿದ 15 ವರ್ಷದ ಬಾಲಕಿ ಮೇಲೆ ಅತ್ಯಾಚಾರ ಎಸಗಿದ್ದರಿಂದ ಆಕೆ 5 ತಿಂಗಳ ಗರ್ಭಿಣಿಯಾಗಿದ್ದಳು. ಬಾಲಕಿಯ ಪೋಷಕರು ಯುವಕನ ವಿರುದ್ಧ ನೀಡಿದ ದೂರಿನಂತೆ ಆಗಸ್ಟ್ 12ರಂದು ನಾರಾಯಣಪುರ ಪೊಲೀಸ್ ಠಾಣೆಯಲ್ಲಿ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಾಗಿತ್ತು.

ಘಟನೆ ವಿವರ: ಬಾಲಕಿಯ ತಂದೆ, ತಾಯಿ ದೂರದ ಪಟ್ಟಣವೊಂದರಲ್ಲಿ ಕೂಲಿ ಕೆಲಸ ಮಾಡುತ್ತಿದ್ದರು. ಗ್ರಾಮಕ್ಕೆ ಮರಳಿದ ಮೇಲೆ ಮಗಳ ಮೇಲೆ ಅತ್ಯಾಚಾರ ನಡೆದಿರುವ ವಿಷಯ ತಿಳಿದು ಆಸ್ಪತ್ರೆಯಲ್ಲಿ ಪರೀಕ್ಷೆ ಮಾಡಿಸಿದಾಗ ಬಾಲಕಿ ಗರ್ಭಿಣಿಯಾಗಿದ್ದಾಳೆ ಎಂಬ ಗೊತ್ತಾಗಿದೆ.

'ಮಾದಿಗ ಜಾತಿಯವಳಾಗಿದ್ದರಿಂದ ನಿನ್ನ ಜೊತೆ ಮದುವೆ ಮಾಡಿಕೊಳ್ಳುವುದಿಲ್ಲ. ಗರ್ಭಪಾತ ಮಾಡಿಸಿಕೊಂಡು ಬಿಡು. ಈ ಬಗ್ಗೆ ಬೇರೆಯವರಿಗೆ ಹೇಳಿದರೆ ಜೀವ ತೆಗೆಯುತ್ತೇನೆ' ಎಂದು ಯುವಕನು ಬೆದರಿಕೆ ಹಾಕಿದ್ದರಿಂದ ಬಾಲಕಿ ಯಾರಿಗೂ ಹೇಳಿರಲಿಲ್ಲ' ಎಂದು ದೂರಿನಲ್ಲಿ ತಿಳಿಸಲಾಗಿದೆ.

'ಪ್ರಕರಣ ದಾಖಲಿಸಿರುವ ಕಾರಣಕ್ಕೆ ದಲಿತರಾಗಿರುವ ನಮಗೆ ಎರಡು ದಿನಗಳಿಂದ ಗ್ರಾಮದಲ್ಲಿ ಯಾವುದೇ ಅಂಗಡಿಯಲ್ಲೂ ದಿನಸಿ ವಸ್ತುಗಳನ್ನು ಕೊಡುತ್ತಿಲ್ಲ' ಎಂದು ಸಂತ್ರಸ್ತ ಬಾಲಕಿಯ ತಂದೆ ದೂರಿದ್ದಾರೆ.

ಶಾಂತಿ ಸಭೆ: ಈ ವಿಚಾರ ತಿಳಿದು ತಿಳಿದು ಸುರಪುರ ಡಿವೈಎಸ್ಪಿ ಜಾವೀದ್ ಇನಾಮದಾರ್ ಅವರು ಗ್ರಾಮಕ್ಕೆ ಗುರುವಾರ ರಾತ್ರಿ ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದರು. ಶುಕ್ರವಾರ ಸಂಜೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಿ.ಸಂಗೀತಾ ಗ್ರಾಮದಲ್ಲಿ ಶಾಂತಿ ಸಭೆ ನಡೆಸಿದ್ದಾರೆ.

ಈ ಘಟನೆ ಕುರಿತು ಪ್ರತಿಕ್ರಿಯಿಸಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಿ.ಸಂಗೀತಾ ಅವರು, 'ಬಹಿಷ್ಕಾರ ಘಟನೆ ಆ ಗ್ರಾಮದಲ್ಲಿ ಕಂಡು ಬಂದಿಲ್ಲ. ಅಲ್ಲಿಗೆ ಭೇಟಿ ನೀಡಿದ್ದೇನೆ. ಎರಡು ಸಮುದಾಯವರು ಅಪಾರ್ಥ ಮಾಡಿಕೊಂಡಿದ್ದರು. ಎರಡು ಸಮುದಾಯಗಳನ್ನು ಕರೆಸಿ ಮಾತುಕತೆ ನಡೆಸಿದ್ದೇವೆ. ತಮ್ಮ ತಪ್ಪು ತಿದ್ದುಕೊಂಡು ಪರಸ್ಪರ ಕೂಡಿ ಬಾಳುತ್ತೇವೆ ಎಂದು ಹೇಳಿದ್ದಾರೆ' ಎಂದು ತಿಳಿಸಿದರು.

ಬಾಲಕಿ ಮೇಲೆ ಅತ್ಯಾಚಾರ ನಡೆಸಿರುವ ಘಟನೆಗೆ ಸಂಬಂಧಿಸಿದಂತೆ ಪೋಕ್ಸೊ ಕಾಯ್ದೆ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೇಲಿನ ದೌರ್ಜನ್ಯ ತಡೆ ಕಾಯ್ದೆಯಡಿ ಪ್ರಕರಣ ದಾಖಲಾಗಿದ್ದು, ಯುವಕ ನ್ಯಾಯಾಂಗ ಬಂಧನದಲ್ಲಿದ್ದಾನೆ.

ಛಲವಾದಿ ನಾರಾಯಣಸ್ವಾಮಿ ಖಂಡನೆ

'ಹುಣಸಗಿ ತಾಲ್ಲೂಕಿನ ಗ್ರಾಮವೊಂದರಲ್ಲಿ ಪರಿಶಿಷ್ಟ ಜಾತಿಯ ಕುಟುಂಬದವರಿಗೆ ಬಹಿಷ್ಕಾರ ಹಾಕಿ ದಿನಸಿ ವಸ್ತುಗಳನ್ನು ಕೊಡದಿರುವ ಘಟನೆ ಖಂಡನೀಯ' ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ತಿಳಿಸಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿರುವ ಅವರು, 'ಜಿಲ್ಲಾಡಳಿತ, ಜಿಲ್ಲಾ ಉಸ್ತುವಾರಿ ಸಚಿವರು ಗ್ರಾಮಕ್ಕೆ ಭೇಟಿ ನೀಡದಿರುವುದರಿಂದ ದಲಿತರಿಗೆ ಅವಮಾನವಾಗಿದೆ. ರಾಜ್ಯ ಸರ್ಕಾರ ದಲಿತರನ್ನು ಸಂಪೂರ್ಣ ನಿರ್ಲಕ್ಷ್ಯ ಮಾಡುತ್ತಿದೆ. ಸೆ.17ರಂದು ಖುದ್ದಾಗಿ ಗ್ರಾಮಕ್ಕೆ ಭೇಟಿ ನೀಡುತ್ತೇನೆ' ಎಂದು ತಿಳಿಸಿದ್ದಾರೆ.

ನಿಂಬಾಳ್ಕರ್‌ಗೆ ಗುಪ್ತಚರ ಹೊಣೆ

ಪ್ರಜಾವಾಣಿ ವಾರ್ತೆ



ಹೇಮಂತ್ ನಿಂಬಾಳ್ಕರ್

ಬೆಂಗಳೂರು: ಗುಪ್ತಚರ ವಿಭಾಗದ ಎಡಿಜಿಪಿ ಕೆ.ವಿ.ಶರತ್ ಚಂದ್ರ ಅವರನ್ನು ವರ್ಗಾವಣೆ ಮಾಡಿದ್ದು, ಆ ಹುದ್ದೆಯ ಹೊಣೆಯನ್ನು ಹೇಮಂತ ಎಂ.ನಿಂಬಾಳ್ಕರ್ ಅವರಿಗೆ ವಹಿಸಲಾಗಿದೆ.

ಶರತ್ ಚಂದ್ರ ಅವರನ್ನು ಪೊಲೀಸ್ ನೇಮಕಾತಿ ವಿಭಾಗಕ್ಕೆ ವರ್ಗಾಯಿಸಿದ್ದು, ಸಂಚಾರ ಮತ್ತು ರಸ್ತೆ ಸುರಕ್ಷತಾ ವಿಭಾಗವನ್ನು ಹೆಚ್ಚುವರಿಯಾಗಿ ನೀಡಲಾಗಿದೆ.

ಪೊಲೀಸ್ ನೇಮಕಾತಿ ವಿಭಾಗದ ಎಡಿಜಿಪಿ ಉಮೇಶ್ ಕುಮಾರ್ ಅವರನ್ನು ವರ್ಗಾಯಿಸಲಾಗಿದ್ದು, ಹುದ್ದೆ ತೋರಿಸಿಲ್ಲ. ಸಂಚಾರ ಮತ್ತು ರಸ್ತೆ ಸುರಕ್ಷತೆ ವಿಭಾಗದಿಂದ ಅಲೋಕ್ ಕುಮಾರ್ ಅವರನ್ನು ವರ್ಗಾವಣೆ ಮಾಡಲಾಗಿದೆ.

ನಿಂಬಾಳ್ಕರ್ ಅವರು ಹೆಚ್ಚುವರಿಯಾಗಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತರ ಜವಾಬ್ದಾರಿಯನ್ನು ನಿಭಾಯಿಸಲಿದ್ದಾರೆ.

ಐಎಎಸ್ ಅಧಿಕಾರಿಗಳ ವರ್ಗಾವಣೆ: ಐಎಎಸ್ ಅಧಿಕಾರಿ ಗರಿಮಾ ಪನ್ವಾರ್ ಅವರನ್ನು ಆರೋಗ್ಯ ಇಲಾಖೆಯ ಡಿಜಿಟಲ್ ಆರೋಗ್ಯ (ಇ–ಹೆಲ್ತ್) ನಿರ್ದೇಶಕಿ ಹುದ್ದೆಗೆ ವರ್ಗಾವಣೆ ಮಾಡಿ ಆಗಸ್ಟ್ 28ರಂದು ಹೊರಡಿಸಿದ್ದ ಆದೇಶವನ್ನು, ರಾಜ್ಯ ಸರ್ಕಾರವು ತಕ್ಷಣದಿಂದಲೇ ಅನ್ವಯವಾಗುವಂತೆ ಶುಕ್ರವಾರ ಹಿಂಪಡೆದಿದೆ.

ಸಂಕ್ಷಿಪ್ತ ಸುದ್ದಿ

ಗುಂಡಿಕ್ಕಿ ಹತ್ಯೆ



ವಿಶ್ವನಾಥ ಜಮಾದಾರ

ಆಳಂದ (ಕಲಬುರಗಿ ಜಿಲ್ಲೆ): ತಾಲ್ಲೂಕಿನ ಖಾನಾಪುರ ಕ್ರಾಸ್ ಸಮೀಪದ ಆಳಂದ–ವಾಗ್ದರಿ ಮುಖ್ಯರಸ್ತೆ ಮೇಲೆ ಪಡಸಾವಳಿ ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ವಿಶ್ವನಾಥ ಕಲ್ಯಾಣಿ ಜಮಾದಾರ (53) ಅವರನ್ನು ಶುಕ್ರವಾರ ಗುಂಡಿಕ್ಕಿ ಹತ್ಯೆ ಮಾಡಲಾಗಿದೆ.

ಹಳೆ ದ್ವೇಷದ ಹಿನ್ನೆಲೆಯಲ್ಲಿ ಘಟನೆ ನಡೆದಿರುವ ಶಂಕೆ ವ್ಯಕ್ತವಾಗಿದೆ.

'ಹಣ ಕೇಳಿದರೆ ದೂರು ನೀಡಿ'

ಬೆಂಗಳೂರು: ಅನುದಾನಿತ ಪಾಲಿಟೆಕ್ನಿಕ್, ಎಂಜಿನಿಯರಿಂಗ್ ಕಾಲೇಜುಗಳ ಕೆಲಸಗಳಿಗೆ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ ಸೇರಿದಂತೆ ಯಾರಾದರೂ ಹಣಕ್ಕೆ ಬೇಡಿಕೆ ಇಟ್ಟರೆ ಕೇಂದ್ರ ಕಚೇರಿಗೆ ಅಥವಾ ಲೋಕಾಯುಕ್ತಕ್ಕೆ ದೂರು ನೀಡುವಂತೆ ತಾಂತ್ರಿಕ ಶಿಕ್ಷಣ ಇಲಾಖೆ ಸುತ್ತೋಲೆ ಹೊರಡಿಸಿದೆ.

ಕೇಂದ್ರ ಕಚೇರಿಯಲ್ಲಿನ ಅಧಿಕಾರಿಗಳು ಮತ್ತು ಸಿಬ್ಬಂದಿ ಹೆಸರು ಬಳಸಿಕೊಂಡು ಸಿಬ್ಬಂದಿ ವೇತನ, ಸಹಾಯಾನುದಾನ, ವೇತನ ಬಾಕಿಗಳು, ಪಿಂಚಣಿ ಮಂಜೂರಾತಿ ಸೌಲಭ್ಯಗಳನ್ನು ಮಾಡಿಕೊಡುವುದಾಗಿ ಉಪನ್ಯಾಸಕರು ಹಾಗೂ ಬೋಧಕೇತರ ಬಳಿ ಹಣ ವಸೂಲಿ ಮಾಡುತ್ತಿರುವ ಸುದ್ದಿಗಳು ಹರಿದಾಡುತ್ತಿವೆ. ಯಾರಾದರೂ ಇಂತಹ ಬೇಡಿಕೆ ಇಟ್ಟರೆ ತಕ್ಷಣ 080–2220077, 22200291ಗೆ ಮಾಹಿತಿ ನೀಡಬೇಕು ಎಂದು ತಾಂತ್ರಿಕ ಶಿಕ್ಷಣ ಇಲಾಖೆ ನಿರ್ದೇಶಕರು ಕೋರಿದ್ದಾರೆ.

ಮಠಗಳ ಶಾಲೆಗೆ ಮೊಟ್ಟೆ ಬೇಡ: ಕಾಶಿ, ಶ್ರೀಶೈಲ ಶ್ರೀ

ಬೆಂಗಳೂರು: ವೀರಶೈವ-ಲಿಂಗಾಯತ ಸೇರಿದಂತೆ ವಿವಿಧ ಧರ್ಮ ಪೀಠಗಳು, ಮಠಗಳು ನಡೆಸುವ ಅನುದಾನಿತ ವಿದ್ಯಾ ಸಂಸ್ಥೆಗಳಲ್ಲಿ ಮಕ್ಕಳಿಗೆ ಮೊಟ್ಟೆ ನೀಡಬಾರದು ಎಂದು ಕಾಶಿ ಪೀಠದ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಹಾಗೂ ಶ್ರೀಶೈಲ ಪೀಠದ ಚೆನ್ನಸಿದ್ಧರಾಮ ಪಂಡಿತಾರಾಧ್ಯ ಸ್ವಾಮೀಜಿ ಒತ್ತಾಯಿಸಿದ್ದಾರೆ.

ಬಹುತೇಕ ಮಠ-ಮಂದಿರಗಳ ಶಿಕ್ಷಣ ಸಂಸ್ಥೆಗಳು ನಡೆಸುತ್ತಿರುವ ಶಾಲೆಗಳು ಮಠ-ಪೀಠಗಳ ಆವರಣದಲ್ಲಿಯೇ ನಡೆಯುತ್ತಿವೆ. ಅಲ್ಲಿಯ ವಿದ್ಯಾರ್ಥಿಗಳಿಗೆ ಮೊಟ್ಟೆ ವಿತರಣೆ ಮಾಡುವುದು ಧಾರ್ಮಿಕ ತತ್ವ-ಸಿದ್ಧಾಂತಗಳಿಗೆ ವಿರುದ್ಧವಾಗಿದೆ ಎಂದಿದ್ದಾರೆ.ಇಂತಹ ನಿರ್ಧಾರಗಳನ್ನು ತೆಗೆದುಕೊಳ್ಳುವ ಮೊದಲು ಧಾರ್ಮಿಕ ಭಾವನೆಗಳಿಗೆ ಧಕ್ಕೆಯಾಗದ ರೀತಿ ಶಾಲಾ ಶಿಕ್ಷಣ ಇಲಾಖೆ ಆದೇಶಗಳನ್ನು ಹೊರಡಿಸಬೇಕು ಎಂದು ಹೇಳಿದ್ದಾರೆ.

ಬಾಳೆಹಣ್ಣು-ಶೇಂಗಾಚಿಕ್ಕಿಗೆ ಕೋರಿಕೆ: ಮೊಟ್ಟೆ ನಿರಾಕರಿಸುವ ಮಕ್ಕಳಿಗೆ ನೀಡಿದಂತೆ ಮಠ-ಮಂದಿರಗಳು ನಡೆಸುವ ಶಾಲಾ ವಿದ್ಯಾರ್ಥಿಗಳಿಗೆ ನಿತ್ಯವೂ ಬಾಳೆಹಣ್ಣು ಹಾಗೂ ಶೇಂಗಾಚಿಕ್ಕಿ ವಿತರಣೆ ಮಾಡಲು ಪರಿಷ್ಕೃತ ಆದೇಶ ಹೊರಡಿಸಬೇಕು ಎಂದು ಕೋರಿದ್ದಾರೆ.

ಯುವಕನಿಗೆ ಥಳಿತ

ಕೊಪ್ಪಳ: ತಾಲ್ಲೂಕಿನ ಬೋಚನಹಳ್ಳಿ ಗ್ರಾಮದಲ್ಲಿ ಕಟ್ಟೆಯ ಮೇಲೆ ಕುಳಿತು ಸಿಗರೇಟು ಸೇದುತ್ತಿದ್ದ ಗುಡದಪ್ಪ ಮುಳ್ಳಣ್ಣ (21) ಎಂಬುವವರನ್ನು ಅದೇ ಗ್ರಾಮದ ಕೆಲವು ಯುವಕರು ಕಂಬಕ್ಕೆ ಕಟ್ಟಿ ಥಳಿಸಿದ್ದಾರೆ.

ಮಾದಿಗ ಸಮುದಾಯಕ್ಕೆ ಸೇರಿದ ಗುಡದಪ್ಪನ ಜೊತೆ ಆರಂಭದಲ್ಲಿ ಮಾತಿನ ಚಕಮಕಿ ನಡೆಸಿದ ಯುವಕರ ಗುಂಪು ಬಳಿಕ ಜಾತಿನಿಂದನೆ ಮಾಡಿದೆ ಎಂದು ಥಳಿತಕ್ಕೆ ಒಳಗಾದ ಯುವಕ ನೀಡಿದ ದೂರಿನ ಮೇರೆಗೆ ಅಳವಂಡಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಪ್ರತಿದೂರು: ಥಳಿತದ ವೇಳೆ ಪರಸ್ಪರ ಎರಡೂ ಕಡೆಯುವರು ಹೊಡೆದಾಡಿಕೊಂಡಿದ್ದು ಇದರಲ್ಲಿ ಗಾಯಗೊಂಡಿರುವ ವಾಲ್ಮೀಕಿ ಸಮುದಾಯದ ನಾಗನಗೌಡ ಪೊಲೀಸ್ ಪಾಟೀಲ ಎಂಬುವರು ಕೂಡ ಶುಕ್ರವಾರ ಗುಡದಪ್ಪನ ವಿರುದ್ಧ ಪ್ರತಿದೂರು ದಾಖಲಿಸಿದ್ದಾರೆ.

ಮುಂದಿನ ವಾರ ನ್ಯಾಯಾಲಯಕ್ಕೆ ತಾಂತ್ರಿಕ ಸಾಕ್ಷ್ಯಾಧಾರ ಸಲ್ಲಿಕೆ: ಎಸ್‌ಪಿಪಿ

ದರ್ಶನ್ ನ್ಯಾಯಾಂಗ ಬಂಧನದ ಅವಧಿ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿಗಳಾದ ನಟ ದರ್ಶನ್, ಅವರ ಆಪ್ತೆ ಪವಿತ್ರಾಗೌಡ ಸೇರಿದಂತೆ 17 ಆರೋಪಿಗಳ ನ್ಯಾಯಾಂಗ ಬಂಧನದ ಅವಧಿಯನ್ನು ಮಂಗಳವಾರದವರೆಗೆ (ಸೆಪ್ಟೆಂಬರ್ 17) ವಿಸ್ತರಿಸಿ, 24ನೇ ಎಸಿಎಂಎಂ ನ್ಯಾಯಾಲಯ ಶುಕ್ರವಾರ ಆದೇಶಿಸಿತು.

ಬಳ್ಳಾರಿ ಕೇಂದ್ರ ಕಾರಾಗೃಹದಿಂದ ದರ್ಶನ್, ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಿಂದ ಪವಿತ್ರಾಗೌಡ ಹಾಗೂ ದೀಪಕ್, ತುಮಕೂರು ಜೈಲಿನಿಂದ ಕಾರ್ತಿಕ್, ನಿಖಿಲ್ ನಾಯಕ್, ಬೆಳಗಾವಿ ಜೈಲಿನಿಂದ ಪ್ರದೂಷ್ ಸೇರಿದಂತೆ ರಾಜ್ಯದ ವಿವಿಧ ಕಾರಾಗೃಹದಲ್ಲಿರುವ 17 ಆರೋಪಿಗಳನ್ನು ವಿಡಿಯೊ ಕಾನ್ಫರೆನ್ಸ್ ಮೂಲಕ ನ್ಯಾಯಾಧೀಶರ ಎದುರು ಹಾಜರುಪಡಿಸಲಾಯಿತು.

ಆರೋಪಿಗಳ ಪರ ವಕೀಲರು ವಾದ ಮಂಡಿಸಿ, 'ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖಾಧಿಕಾರಿಗಳು ಇನ್ನೂ ಪೂರ್ಣ ಪ್ರಮಾಣದ ದೋಷಾರೋಪ ಪಟ್ಟಿ ಸಲ್ಲಿಸಿಲ್ಲ. ನ್ಯಾಯಾಲಯಕ್ಕೆ ತಾಂತ್ರಿಕ ಸಾಕ್ಷ್ಯಾಧಾರ ಒದಗಿಸಿಲ್ಲ. ಅಪರಾಧ ಪ್ರಕ್ರಿಯಾ ಸಂಹಿತೆಯ ಸೆಕ್ಷನ್ 164ರ ಅಡಿ ಹೇಳಿಕೆ ನೀಡಿದ್ದವರ ಪ್ರಮಾಣೀಕೃತ ದಾಖಲಾತಿ ನೀಡಿಲ್ಲ' ಎಂದು ಆಕ್ಷೇಪಿಸಿದರು.

'ಮುಂದಿನ ವಾರ ತಾಂತ್ರಿಕ ಸಾಕ್ಷ್ಯಾಧಾರಗಳನ್ನು ತನಿಖಾಧಿಕಾರಿಗಳು ಸಲ್ಲಿಸಲಿದ್ದಾರೆ' ಎಂದು ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಪ್ರಸನ್ನ ಕುಮಾರ್ ಮಾಹಿತಿ ನೀಡಿದರು.

ತಾಂತ್ರಿಕ ಸಾಕ್ಷ್ಯಾಧಾರ ಸಲ್ಲಿಸಿದ ನಂತರ ಸೆಷನ್ಸ್ ನ್ಯಾಯಾಲಯಕ್ಕೆ ಪ್ರಕರಣ ವರ್ಗಾವಣೆ ಮಾಡುವಂತೆ ಆರೋಪಿಗಳ ಪರ ವಕೀಲರು ಕೋರಿದರು. ವಾದ–ಪ್ರತಿವಾದ ಆಲಿಸಿದ ನ್ಯಾಯಾಧೀಶರು ಪ್ರಕರಣದ ವಿಚಾರಣೆ ಮುಂದೂಡಿ ಆದೇಶಿಸಿದರು.

ಜಾಮೀನು ಅರ್ಜಿ ಹಿಂಪಡೆದ ಪವಿತ್ರಾ ಗೌಡ



ಪವಿತ್ರಾಗೌಡ

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ಮೊದಲ ಆರೋಪಿ ಪವಿತ್ರಾ ಗೌಡ, ಜಾಮೀನು ಕೋರಿ ಹೈಕೋರ್ಟ್‌ಗೆ ಸಲ್ಲಿಸಿದ್ದ ಅರ್ಜಿಯನ್ನು ಹಿಂಪಡೆದಿದ್ದಾರೆ. ಈ ಸಂಬಂಧ ಪವಿತ್ರಾ ಗೌಡ ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು ನ್ಯಾಯಮೂರ್ತಿ ಎಸ್. ವಿಶ್ವಜಿತ್ ಶೆಟ್ಟಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಪ್ರಕರಣದ ವಿಶೇಷ ಪ್ರಾಸಿಕ್ಯೂಟರ್ ಪಿ.ಪ್ರಸನ್ನ ಕುಮಾರ್, 'ಈಗಾಗಲೇ ವಿಚಾರಣಾ ನ್ಯಾಯಾಲಯಕ್ಕೆ 4 ಸಾವಿರ ಪುಟಗಳ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ. ಅದರಲ್ಲಿರುವ ಅಂಶಗಳನ್ನು ಪರಿಶೀಲಿಸಿ ವಿಚಾರಣಾ ನ್ಯಾಯಾಲಯ ಮುಂದಿನ ಕ್ರಮ ಜರುಗಿಸಲಿದೆ. ಆದ್ದರಿಂದ, ಪವಿತ್ರಾ ಗೌಡ ವಿಚಾರಣಾ ನ್ಯಾಯಾಲಯದಲ್ಲೇ ಜಾಮೀನು ಅರ್ಜಿ ಸಲ್ಲಿಸಬಹುದು. ದೋಷಾರೋಪ ಪಟ್ಟಿ ಸಲ್ಲಿಕೆಯಾಗಿರುವ ಕಾರಣ ಪ್ರಕರಣದ 7ನೇ ಆರೋಪಿ ಅನುಕುಮಾರ್ ಸಹ ಹೈಕೋರ್ಟ್‌ಗೆ ಸಲ್ಲಿಸಿದ್ದ ಜಾಮೀನು ಅರ್ಜಿ ಹಿಂಪಡೆದಿದ್ದಾರೆ' ಎಂದು ನ್ಯಾಯಪೀಠಕ್ಕೆ ವಿವರಿಸಿದರು.

ಇದಕ್ಕೆ ನ್ಯಾಯಮೂರ್ತಿಗಳು, ಪವಿತ್ರಾ ಗೌಡ ಪರ ಹಿರಿಯ ವಕೀಲ ಟಾಮಿ ಸೆಬಾಸ್ಟಿಯನ್ ಅವರನ್ನು ಉದ್ದೇಶಿಸಿ, 'ದೋಷಾರೋಪ ಪಟ್ಟಿ ಸಲ್ಲಿಕೆಯಾಗಿರುವ ಕಾರಣ ಸೆಷನ್ಸ್ ನ್ಯಾಯಾಲಯದಲ್ಲೇ ಜಾಮೀನು ಅರ್ಜಿ ಸಲ್ಲಿಸಬಹುದು. ಹಾಗಾಗಿ, ನೀವು ಈ ಅರ್ಜಿ ಮುಂದುವರಿಸುತ್ತೀರಾ ಅಥವಾ ಹಿಂಪಡೆಯುತ್ತೀರಾ' ಎಂದು ಪ್ರಶ್ನಿಸಿದರು. ಇದಕ್ಕೆ ಟಾಮಿ ಸೆಬಾಸ್ಟಿಯನ್ ಅರ್ಜಿ ಹಿಂಪಡೆಯುವುದಾಗಿ ತಿಳಿಸಿದರು.

ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ಪವಿತ್ರಾ ಗೌಡ ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು ನಗರದ 57ನೇ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶ ಜೈಶಂಕರ್ 2024 ಆಗಸ್ಟ್ 31ರಂದು ವಜಾಗೊಳಿಸಿದ್ದರು.

ಸನ್ನೆ ಮಾಡಿಲ್ಲ: ದರ್ಶನ್ ಸಮರ್ಥನೆ



ದರ್ಶನ್

ಬಳ್ಳಾರಿ: 'ಮಾಧ್ಯಮಗಳಿಗೆ ನಾನು ಯಾವುದೇ ಸನ್ನೆ ಪ್ರದರ್ಶಿಸಿಲ್ಲ. ಹಾಗೊಂದು ವೇಳೆ ತಪ್ಪು ಮಾಡಿದ್ದರೆ ನನ್ನನ್ನು ಬೇರೆ ಜೈಲಿಗೆ ವರ್ಗಾಯಿಸಿ' ಎಂದು ನಟ ದರ್ಶನ್ ಅಧಿಕಾರಿಗಳಿಗೆ ಹೇಳಿರುವುದಾಗಿ ಗೊತ್ತಾಗಿದೆ.

ಗುರುವಾರ ಕಾರಾಗೃಹದ ಹೊರ ವಿಶೇಷ ಭದ್ರತಾ ಕೊಠಡಿಯಿಂದ ಸಂದರ್ಶಕರ ಕೊಠಡಿಗೆ ತೆರಳುವ ಮತ್ತು ಮರಳುವ ವೇಳೆ ದರ್ಶನ್ ಮಧ್ಯದ ಬೆರಳು ಪ್ರದರ್ಶಿಸಿದ್ದರು. ಇದರ ಬಗ್ಗೆ ಕಾರಾಗೃಹದ ಅಧಿಕಾರಿಗಳು ದರ್ಶನ್ ಅವರನ್ನು ವಿಚಾರಿಸಿದ್ದು, 'ನಾನು ಮಾಧ್ಯಮಗಳಿಗೆ ಬೆರಳು ತೋರಿಸಿಲ್ಲ. ನನ್ನಿಂದ ತಪ್ಪಾಗಿಲ್ಲ. ನಾನು ಮಾಡಿದ್ದು ತಪ್ಪಾಗಿದ್ದರೆ, ಬೇರೆ ಜೈಲಿಗೆ ವರ್ಗಾಯಿಸಿ' ಎಂದು ಹೇಳಿದ್ದಾರೆ ಎನ್ನಲಾಗಿದೆ.

ಇನ್ನು ಶುಕ್ರವಾರ ದರ್ಶನ್‌ಗೆ ಟಿವಿ ಕೊಡಬೇಕಿತ್ತು. ಆದರೆ, ಗುರುವಾರದ ಘಟನೆಯಿಂದ ಟಿ.ವಿ ಕೊಡುವುದನ್ನು ತಾತ್ಕಾಲಿಕವಾಗಿ ಮುಂದೂಡಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

'ಎಲ್ಲರಿಗೂ ಟಿ.ವಿ ಕೊಟ್ಟಿದ್ದೀರಿ. ನನಗೂ ಕೊಡಿ' ಎಂದು ದರ್ಶನ್ ನಿತ್ಯವೂ ಸಿಬ್ಬಂದಿಯನ್ನು ಕೇಳುತ್ತಿದ್ದಾರೆ ಎನ್ನಲಾಗಿದೆ.

'ದರ್ಶನ್‌ಗೆ ಟಿ.ವಿ ಕೊಟ್ಟರೂ, ಯಾವುದೇ ಕೇಬಲ್ ಚಾನೆಲ್‌ಗಳು ನೋಡಲು ಸಿಗುವುದಿಲ್ಲ. ಜೈಲು ನಿಯಮಗಳ ಪ್ರಕಾರ ದೂರದರ್ಶನ (ಡಿಡಿ) ವಾಹಿನಿಗಳು ಮಾತ್ರವೇ ಲಭ್ಯವಾಗಲಿವೆ' ಎಂದು ಅಧಿಕಾರಿಗಳು ತಿಳಿಸಿದರು.

ಚಲಿಸುತ್ತಿದ್ದ ರೈಲಿನಲ್ಲಿ 11 ವರ್ಷದ ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪ

ರೈಲ್ವೆ ಉದ್ಯೋಗಿ ಥಳಿಸಿ ಕೊಂದ ಪ್ರಯಾಣಿಕರು

ಪ್ರಜಾವಾಣಿ ವಾರ್ತೆ/ಪಿಟಿಐ

ಮುಖ್ಯಾಂಶಗಳು

- ಉದ್ಯೋಗಿಗೆ ಪ್ರಯಾಣಿಕರಿಂದ ಮನಬಂದಂತೆ ಥಳಿತ
- ಅಪರಿಚಿತ ಪ್ರಯಾಣಿಕರ ವಿರುದ್ಧ ಪ್ರಕರಣ ದಾಖಲು
- ಹತ್ಯೆಯಾದ ರೈಲ್ವೆ ಉದ್ಯೋಗಿ ಬಿಹಾರದ ಸಮಷ್ಟಿಪುರ ನಿವಾಸಿ

ಲಖನೌ/ ಕಾನ್ಪುರ: ಉತ್ತರ ಪ್ರದೇಶದ ಲಖನೌನಿಂದ ಕಾನ್ಪುರದ ನಡುವೆ ಚಲಿಸುತ್ತಿದ್ದ ಹಮ್‌ಸಫರ್ ಎಕ್ಸ್‌ಪ್ರೆಸ್ ರೈಲಿನಲ್ಲಿ 11 ವರ್ಷದ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಎಂದು ಆರೋಪಿಸಿ ರೈಲ್ವೆ ಉದ್ಯೋಗಿಯನ್ನು ಸಹ ಪ್ರಯಾಣಿಕರು ರೈಲಿನಲ್ಲಿ ಥಳಿಸಿ ಕೊಂದಿರುವ ಘಟನೆ ನಡೆದಿದೆ.

ಹತ್ಯೆಯಾದ ರೈಲ್ವೆ ಉದ್ಯೋಗಿ, ಬಿಹಾರದ ಸಮಷ್ಟಿಪುರ ನಿವಾಸಿ ಪ್ರಶಾಂತ್ ಕುಮಾರ್ (34) ಎಂದು ಗುರುತಿಸಲಾಗಿದೆ. ಅವರು ರೈಲಿನಲ್ಲಿ ಬಿಹಾರದ ಸಿವಾನ್‌ನಿಂದ ದೆಹಲಿಗೆ ಪ್ರಯಾಣಿಸುತ್ತಿದ್ದರು. ತನ್ನ 'ಬರ್ತ್' ಆಸನವನ್ನು ಬಾಲಕಿಗೆ ಬಿಟ್ಟುಕೊಟ್ಟಿದ್ದರು ಎಂದು ಪೊಲೀಸರು ಹೇಳಿದ್ದಾರೆ.

ಗುರುವಾರ ಮುಂಜಾನೆ ರೈಲು ಲಖನೌ ನಿಲ್ದಾಣದ ಸಮೀಪಿಸುತ್ತಿದ್ದ ವೇಳೆ ಪ್ರಶಾಂತ್, ಎ.ಸಿ ಕೋಚ್‌ನಲ್ಲಿ 11 ವರ್ಷದ ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ್ದಾರೆ ಎಂದು ಆರೋಪಿಸಲಾಗಿದೆ.

ಬಾಲಕಿಯ ತಾಯಿ ಶೌಚಾಲಯಕ್ಕೆ ತೆರಳಿದ್ದಾಗ ಪ್ರಶಾಂತ್, ಬಾಲಕಿಯನ್ನು ಅನುಚಿತವಾಗಿ ಸ್ಪರ್ಶಿಸಿದ್ದಾನೆ. ಬಾಲಕಿಯು ತಾಯಿಗೆ ನಡೆದ ಸಂಗತಿ ವಿವರಿಸಿದ್ದಾಳೆ. ವಿಷಯ ತಿಳಿದು ಕೆರಳಿದ ಪ್ರಯಾಣಿಕರು ಹಾಗೂ ಬಾಲಕಿಯ ಕುಟುಂಬಸ್ಥರು, ರೈಲು ಕಾನ್ಪುರ ನಿಲ್ದಾಣ ತಲುಪುವವರೆಗೂ ಪ್ರಶಾಂತ್‌ಗೆ ಮನಬಂದಂತೆ ಥಳಿಸಿದ್ದಾರೆ. ಪೊಲೀಸರು ಪ್ರಶಾಂತ್ ಅವರನ್ನು ಆಸ್ಪತ್ರೆಗೆ ದಾಖಲಿಸಿದ್ದಾರೆ. ಆದರೆ ಅಷ್ಟರಲ್ಲಿ ಅವರು ಮೃತಪಟ್ಟಿದ್ದರು ಎಂದು ವೈದ್ಯರು ತಿಳಿಸಿದ್ದಾರೆ.

ಸಂತ್ರಸ್ತೆಯ ತಾಯಿ, ಪ್ರಶಾಂತ್ ವಿರುದ್ಧ ಭಾರತೀಯ ನ್ಯಾಯ ಸಂಹಿತೆ ಮತ್ತು ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಿಸಿದ್ದಾರೆ ಎಂದು ರೈಲ್ವೆಯ ಹೆಚ್ಚುವರಿ ಮಹಾ ನಿರ್ದೇಶಕ ಡಿ. ಪ್ರಕಾಶ್ ಮಾಹಿತಿ ನೀಡಿದ್ದಾರೆ.

ಮೂಲಗಳ ಪ್ರಕಾರ, ಪ್ರಶಾಂತ್ ಅವರ ತಂದೆ ರೈಲ್ವೆ ಉದ್ಯೋಗಿಯಾಗಿದ್ದರು. ಅವರು ಕೆಲಸದಲ್ಲಿ ಇದ್ದಾಗಲೇ ನಿಧನರಾಗಿದ್ದರು. ಹಾಗಾಗಿ ಮಗನಿಗೆ ಆ ಉದ್ಯೋಗ ಸಿಕ್ಕಿತ್ತು.

ಪ್ರತ್ಯೇಕ ಪ್ರಕರಣ: ಇಬ್ಬರು ಬಾಲಕಿಯರ ಮೇಲೆ ಸಾಮೂಹಿಕ ಅತ್ಯಾಚಾರ

ಅಗರ್ತಲಾ/ಬಿಹಾರ (ಪಿಟಿಐ): ತ್ರಿಪುರಾ ಮತ್ತು ಬಿಹಾರದಲ್ಲಿ ಇಬ್ಬರು ಬಾಲಕಿಯರ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿರುವ ಪ್ರತ್ಯೇಕ ಘಟನೆಗಳು ವರದಿಯಾಗಿವೆ.

ಉತ್ತರ ತ್ರಿಪುರಾ ಜಿಲ್ಲೆಯಲ್ಲಿ ಇಬ್ಬರು ವ್ಯಕ್ತಿಗಳು 16 ವರ್ಷದ ಬಾಲಕಿಯನ್ನು ಅಪಹರಿಸಿ, ಆಕೆಯ ಮೇಲೆ ಸಾಮೂಹಿಕ ಅತ್ಯಾಚಾರ ಮಾಡಲಾಗಿದೆ.

ತೀವ್ರವಾಗಿ ಗಾಯಗೊಂಡಿರುವ ಬಾಲಕಿಗೆ ಧರ್ಮನಗರ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ಗುರುವಾರ ಮಧ್ಯಾಹ್ನ ಬಾಲಕಿಯು ಗ್ರಾಮದ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ವೇಳೆ, ಬೈಕ್‌ನಲ್ಲಿ ಬಂದ ಆರೋಪಿಗಳು ಆಕೆಯನ್ನು ಅಪಹರಿಸಿ ಹತ್ತಿರದ ಕಾಡಿಗೆ ಕೊಂಡೊಯ್ದಿದ್ದಾರೆ. ಅಲ್ಲಿ ಆಕೆಯ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿದ್ದಾರೆ. ಬಳಿಕ ಬಾಲಕಿಯನ್ನು ಬಿಟ್ಟು ಪರಾರಿಯಾಗಿದ್ದಾರೆ' ಎಂದು ಹಿರಿಯ ಪೊಲೀಸ್ ಅಧಿಕಾರಿ ಭಾನುಪದ ಚಕ್ರವರ್ತಿ ಅವರು ತಿಳಿಸಿದರು.

ಬಿಹಾರದ ಚಂಪಾರಣ ಜಿಲ್ಲೆಯಲ್ಲಿ 15 ವರ್ಷದ ಬಾಲಕಿ ಮೇಲೆ ಆರು ಯುವಕರು ಸಾಮೂಹಿಕ ಅತ್ಯಾಚಾರ ಎಸಗಿರುವ ಘಟನೆ ನಡೆದಿದೆ. ಕೃತ್ಯದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ ನಂತರ ಬಾಲಕಿಯ ತಂದೆ ದೂರು ನೀಡಿದ್ದು, ಆರು ಮಂದಿ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ.

'ಮೂವರನ್ನು ಬಂಧಿಸಲಾಗಿದೆ. ಇತರರ ಬಂಧನಕ್ಕೆ ಶೋಧ ನಡೆಸಲಾಗುತ್ತಿದೆ. ಸಂತ್ರಸ್ತೆಯನ್ನು ವೈದ್ಯಕೀಯ ಪರೀಕ್ಷೆಗೆ ಕಳುಹಿಸಲಾಗಿದೆ' ಎಂದು ಉಪ ಪೊಲೀಸ್ ವರಿಷ್ಠಾಧಿಕಾರಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಸಂತ್ರಸ್ತ ಬಾಲಕಿಯ ಹಿರಿಯ ಸಹೋದರಿ 'ನನ್ನ ತಂಗಿಯನ್ನು ರಕ್ಷಿಸಿ ಆಸ್ಪತ್ರೆಗೆ ದಾಖಲಿಸಿದ್ದೇವೆ. ಆಕೆಯ ಸ್ಥಿತಿ ಗಂಭೀರವಾಗಿದೆ. ಆಕೆಯ ಮೇಲೆ ಅತ್ಯಾಚಾರ ಎಸಗಿದವರು, ಆಕೆ ಸತ್ತು ಹೋಗಿದ್ದಾಳೆ ಎಂದು ಭಾವಿಸಿ ಕಾಡಿನಲ್ಲಿ ಬಿಟ್ಟು ಹೋಗಿದ್ದರು' ಎಂದರು.

ಬಿಹಾರ: ನರ್ಸ್ ಮೇಲೆ ವೈದ್ಯನಿಂದ ಅತ್ಯಾಚಾರಕ್ಕೆ ಯತ್ನ– ಮೂವರ ಬಂಧನ

ಪಟ್ನಾ: ಕೋಲ್ಕತ್ತ ವೈದ್ಯ ವಿದ್ಯಾರ್ಥಿನಿ ಮೇಲೆ ನಡೆದ ಅತ್ಯಾಚಾರ ಪ್ರಕರಣ ಮಾಸುವ ಮುನ್ನವೇ, ವೈದ್ಯ ಮತ್ತು ಆತನ ಇಬ್ಬರು ಸ್ನೇಹಿತರು ನರ್ಸ್ ಮೇಲೆ ಅತ್ಯಾಚಾರಕ್ಕೆ ಯತ್ನಿಸಿರುವ ಘಟನೆ ಬಿಹಾರದಲ್ಲಿ ನಡೆದಿದೆ.

'ಆಸ್ಪತ್ರೆಯಲ್ಲಿ ಮೂವರು ಮದ್ಯಪಾನ ಮಾಡಿದ್ದರು. ಬಟ್ಟೆ ಬಿಚ್ಚಿ ಅತ್ಯಾಚಾರಕ್ಕೆ ಯತ್ನಿಸಿದರು. ಈ ವೇಳೆ ಸ್ವಯಂ ರಕ್ಷಣೆಗಾಗಿ ಶಸ್ತ್ರಚಿಕಿತ್ಸೆಗೆ ಬಳಸುವ ಬ್ಲೇಡ್‌ನಿಂದ ಅವರಿಗೆ ಚುಚ್ಚಿ ಹೊರಗೆ ಓಡಿ ಬಂದೆ. ನಂತರ ಪೊಲೀಸರಿಗೆ ಮಾಹಿತಿ ನೀಡಿದೆ' ಎಂದು ಸಂತ್ರಸ್ತೆ ದೂರಿನಲ್ಲಿ ತಿಳಿಸಿದ್ದಾರೆ.

ವೈದ್ಯರನ್ನು ಡಾ.ಸಂಜಯ್ ಕುಮಾರ್ ಎಂದು ಗುರುತಿಸಲಾಗಿದೆ. ಇವರು ಸಮಷ್ಟಿಪುರದಲ್ಲಿ ಆರ್‌ಬಿಎಸ್ ಹೆಲ್ತ್‌ಕೇರ್ ಸೆಂಟರ್ ನಡೆಸುತ್ತಿದ್ದಾರೆ. ಪ್ರಕರಣ ಸಂಬಂಧ ಮೂವರನ್ನೂ ಬಂಧಿಸಲಾಗಿದೆ.

ಅತ್ಯಾಚಾರ: 6 ಆರೋಪಿಗಳ ಬಂಧನ

ಇಂದೋರ್ (ಪಿಟಿಐ): ಮಧ್ಯಪ್ರದೇಶದಲ್ಲಿ ತರಬೇತಿನಿರತ ಸೇನಾ ಅಧಿಕಾರಿಗಳ ಮೇಲೆ ಹಲ್ಲೆ ಮಾಡಿ ಅವರ ಸ್ನೇಹಿತೆ ಮೇಲೆ ಅತ್ಯಾಚಾರ ಎಸಗಿದ ಆರು ಮಂದಿಯನ್ನು ಬಂಧಿಸಲಾಗಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು. ಈ ಮಧ್ಯೆ, ಸೇನಾಧಿಕಾರಿಗಳ ವಿರುದ್ಧ ಇಲಾಖಾ ವಿಚಾರಣೆಗೆ ಆದೇಶಿಸಲಾಗಿದೆ.

ರೋಹಿತ್ ಗಿರ್ವಾಲ್ (23), ಸಂದೀಪ್ ವಾರಿಯಾ (18) ಮತ್ತು ಸಚಿನ್ ಮಾಕ್ವಾನ (25) ಎಂಬವರನ್ನು ಕೃತ್ಯ ನಡೆದ ಸ್ಥಳದ ಸಮೀಪವೇ ಬಂಧಿಸಲಾಗಿತ್ತು. ಉಳಿದ ಮೂವರು ಪರಾರಿಯಾಗಿದ್ದರು. ಸುಳಿವು ನೀಡಿದವರಿಗೆ ತಲಾ 10,000 ನೀಡುವುದಾಗಿ ಘೋಷಿಸಲಾಗಿತ್ತು. ಅನಿಲ್ ಬರೋರ್ (27), ಪವನ್ ಬಾನ್ಸುನಿಯಾ (23) ಮತ್ತು ರಿತೇಶ್ ಭಾಬರ್ (25) ಎಂಬವರನ್ನು ಬುಧವಾರ ಮತ್ತು ಗುರುವಾರ ಬಂಧಿಸಲಾಗಿದೆ.

'ಸುಪ್ರೀಂ' ಆದೇಶ ಕೇಂದ್ರಕ್ಕೆ ಕೊಟ್ಟ ತಪರಾಕಿ: ಸಿ.ಎಂ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೆ ಜಾಮೀನು ನೀಡಿ, ಜೈಲಿನಿಂದ ಬಿಡುಗಡೆಗೊಳಿಸಿದ ಸುಪ್ರೀಂ ಕೋರ್ಟ್ ಆದೇಶ ಸಾಂವಿಧಾನಿಕ ಸಂಸ್ಥೆಗಳನ್ನು ತಮ್ಮ ರಾಜಕೀಯ ದ್ವೇಷ ಸಾಧನೆಗಾಗಿ ದುರ್ಬಳಕೆ ಮಾಡಿಕೊಳ್ಳುತ್ತಿರುವ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರಕ್ಕೆ ಕೊಟ್ಟ ತಪರಾಕಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಈ ಕುರಿತು 'ಎಕ್ಸ್'ನಲ್ಲಿ ಪ್ರತಿಕ್ರಿಯಿಸಿರುವ ಅವರು, 'ಈ ಆದೇಶ ದೇಶದ ನ್ಯಾಯಾಂಗದ ಮೇಲಿನ ನಂಬಿಕೆಯನ್ನು ಮತ್ತಷ್ಟು ದೃಢೀಕರಿಸಿದೆ. ಸತ್ಯ ಮತ್ತು ನ್ಯಾಯದ ಪರವಾಗಿ ಹೋರಾಡುತ್ತಿರುವ ಎಲ್ಲರಲ್ಲೂ ಭರವಸೆ ಹುಟ್ಟಿಸಿದೆ' ಎಂದಿದ್ದಾರೆ.

'ದ್ವೇಷದ ರಾಜಕಾರಣಕ್ಕೆ ಇಳಿದಿರುವ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ನ್ಯಾಯಾಲಯದ ಈ ಆದೇಶದಿಂದಾದರೂ ಪಾಠ ಕಲಿತು, ಎಚ್ಚೆತ್ತುಕೊಳ್ಳಲಿ. ಅಂತಿಮವಾಗಿ ಸತ್ಯವೇ ಗೆಲ್ಲುವುದು, ನ್ಯಾಯವೇ ಬಾಳುವುದು. ಸತ್ಯಮೇವ ಜಯತೆ' ಎಂದಿದ್ದಾರೆ.



ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಸ್ವಾಗತಕ್ಕಾಗಿ ತಿಹಾರ್ ಜೈಲಿನ ಹೊರಗಡೆ ಕಾಯುತ್ತಿದ್ದ ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಹಾಗೂ ಎಎಪಿ ನಾಯಕರಾದ ಮನೀಷ್ ಸಿಸೋಡಿಯಾ, ಸಂಜಯ್ ಸಿಂಗ್ ಹಾಗೂ ಸಂದೀಪ್ ಪಾಠಕ್ ಅವರು ಮಳೆಯ ನಡುವೆಯೇ ಸಂಭ್ರಮಿಸಿದರು –ಪಿಟಿಐ ಚಿತ್ರ

ಜಾಮೀನು ಪಡೆದ ಎಎಪಿಯ 4ನೇ ನಾಯಕ

ದೆಹಲಿ ಅಬಕಾರಿ ನೀತಿ ಹಗರಣದಲ್ಲಿ ಜಾಮೀನು ಪಡೆದ ನಾಲ್ಕನೇ ಎಎಪಿ ನಾಯಕ ಕೇಜ್ರಿವಾಲ್. ಈ ಹಿಂದೆ ರಾಜ್ಯಸಭಾ ಸದಸ್ಯ ಸಂಜಯ್ ಸಿಂಗ್, ಮಾಜಿ ಉಪಮುಖ್ಯಮಂತ್ರಿ ಮನೀಷ್ ಸಿಸೋಡಿಯಾ, ಪಕ್ಷದ ಸಂವಹನ ವಿಭಾಗದ ಮಾಜಿ ಉಸ್ತುವಾರಿ ವಿಜಯ್ ನಾಯರ್ ಅವರಿಗೆ ಜಾಮೀನು ನೀಡಲಾಗಿತ್ತು. ಈ ಪ್ರಕರಣದಲ್ಲಿ ಬಿಆರ್‌ಎಸ್ ನಾಯಕಿ ಕೆ.ಕವಿತಾ, ಹೈದರಾಬಾದ್‌ನ ಉದ್ಯಮಿ ಅರುಣ್ ಪಿಳ್ಳೈ, ಉದ್ಯಮಿ ಅಭಿಷೇಕ್ ಬೊನಾಪಲ್ಲಿ ಹಾಗೂ ಮದ್ಯ ಉದ್ಯಮಿ ಸಮೀರ್ ಮಹೇಂದ್ರು ಅವರಿಗೆ ಜಾಮೀನು ಸಿಕ್ಕಿತ್ತು.

ಜಾಮೀನು ಪಡೆದವರು

ಆರೋಪಿ	ಬಂಧನ	ಜಾಮೀನು
ಅರವಿಂದ ಕೇಜ್ರಿವಾಲ್	2024 ಮಾರ್ಚ್ 21 (ಇ.ಡಿ), 2024 ಜೂನ್ 26 (ಸಿಬಿಐ)	2024 ಜುಲೈ 12 (ಇ.ಡಿ), 2024 ಸೆ.13 (ಸಿಬಿಐ)
ಮನೀಷ್ ಸಿಸೋಡಿಯಾ	2023ರ ಫೆ.26 (ಸಿಬಿಐ) 2023ರ ಮಾರ್ಚ್ 9 (ಇ.ಡಿ),	2024 ಆಗಸ್ಟ್ 9
ಸಂಜಯ್ ಸಿಂಗ್	2023ರ ಅಕ್ಟೋಬರ್ 4 (ಇ.ಡಿ)	2024 ಏಪ್ರಿಲ್ 2
ಕೆ.ಕವಿತಾ	2024 ಮಾರ್ಚ್ 15 (ಇ.ಡಿ), 2024 ಏಪ್ರಿಲ್ 11 (ಸಿಬಿಐ)	2024 ಆಗಸ್ಟ್ 27
ವಿಜಯ್ ನಾಯರ್	2022ರ ಸೆ.27 (ಸಿಬಿಐ) 2022ರ ನ.13 (ಇ.ಡಿ),	2024 ಸೆ.3
ಅರುಣ್ ಪಿಳ್ಳೈ	2023ರ ಮಾರ್ಚ್ 6 (ಇ.ಡಿ)	2024 ಸೆ.11
ಅಭಿಷೇಕ್ ಬೊನಾಪಲ್ಲಿ	2022ರ ಅ.10 (ಸಿಬಿಐ), ನ.14 (ಇ.ಡಿ)	2024 ಮಾರ್ಚ್ 24
ಸಮೀರ್ ಮಹೇಂದ್ರು	2022ರ ಸೆ.7 (ಸಿಬಿಐ)	ಸೆ.9

ಸಿಬಿಐಗೆ ಕುಟುಕಿದ ಸುಪ್ರೀಂ ಕೋರ್ಟ್

ಒಂದನೇ ಪುಟದಿಂದ...

ಕೇಜ್ರಿವಾಲ್ ಅವರನ್ನು ಬಂಧಿಸಿರುವ ಸಿಬಿಐ ಕ್ರಮ ನ್ಯಾಯಯುತವಾಗಿಲ್ಲ ಹಾಗೂ ಹಲವು ಪ್ರಶ್ನೆಗಳನ್ನು ಹುಟ್ಟು ಹಾಕಿದೆ ಎಂದು ಭುಯಾನ್ ಪ್ರತಿಪಾದಿಸಿದರು. ಜಾಮೀನು ಅರ್ಜಿಯ ಸಂಬಂಧ ಸಮ್ಮತಿಯ ಪ್ರತ್ಯೇಕ ತೀರ್ಪು ನೀಡಿರುವ ಅವರು, ಈ ಪ್ರಕರಣದಲ್ಲಿ ತನಿಖಾ ಸಂಸ್ಥೆಯ ಕಾರ್ಯವೈಖರಿಯನ್ನು ಕಟುವಾಗಿ ಟೀಕಿಸಿದರು.

ಕಲ್ಲಿದ್ದಲು ಹಗರಣದ ವಿಚಾರಣೆಯ (2013ರ ಮೇ ತಿಂಗಳು) ಸಂದರ್ಭದಲ್ಲಿ ನ್ಯಾಯಮೂರ್ತಿ ಆರ್.ಎಂ. ಲೋಧಾ ನೇತೃತ್ವದ ಸುಪ್ರೀಂ ಕೋರ್ಟ್ ಪೀಠವು 'ಕೇಂದ್ರೀಯ ತನಿಖಾ ಸಂಸ್ಥೆಯು ಯಜಮಾನನ ಧ್ವನಿಯಲ್ಲಿ ಮಾತನಾಡುವ ಪಂಜರದ ಗಿಳಿ ಇದ್ದಂತೆ' ಎಂದು ಅಭಿಪ್ರಾಯ ವ್ಯಕ್ತಪಡಿಸಿತ್ತು. ನ್ಯಾಯಪೀಠವು ತನಿಖಾ ಸಂಸ್ಥೆಯನ್ನು ಮತ್ತೊಮ್ಮೆ ಪಂಜರದ ಗಿಳಿಗೆ ಹೋಲಿಸಿದೆ.

'ಸಿಬಿಐ ಒಂದು ಪ್ರಮುಖ ತನಿಖಾ ಸಂಸ್ಥೆಯಾಗಿದೆ. ಸಾರ್ವಜನಿಕ ಹಿತಾಸಕ್ತಿಯಿಂದ ಈ ಸಂಸ್ಥೆಗೆ ಉನ್ನತ ಸ್ಥಾನ ನೀಡಲಾಗಿದೆ. ಯಾವುದೇ ತನಿಖೆಗಳು ನ್ಯಾಯಯುತವಾಗಿ ನಡೆದಿಲ್ಲ ಅಥವಾ ಪಕ್ಷಪಾತದಿಂದ ಕೂಡಿದೆ ಎಂಬ ಭಾವನೆ ಮೂಡದಂತೆ ನಡೆದುಕೊಳ್ಳುವುದು ಸಂಸ್ಥೆಯ ಹೊಣೆ' ಎಂದು ಭುಯಾಂ ಹೇಳಿದರು.

> **ಜಾಮೀನು ಷರತ್ತುಗಳ ಅನ್ವಯ ಕೇಜ್ರಿವಾಲ್ ಯಾವುದೇ ಅಧಿಕಾರ ಚಲಾಯಿಸುವಂತಿಲ್ಲ. ಅವರು ಮುಖ್ಯಮಂತ್ರಿ ಸ್ಥಾನಕ್ಕೆ ಕೂಡಲೇ ರಾಜೀನಾಮೆ ನೀಡಲಿ**
>
> **ಗೌರವ್ ಭಾಟಿಯಾ,**
> ಬಿಜೆಪಿ ರಾಷ್ಟ್ರೀಯ ವಕ್ತಾರ

'ಇತ್ತೀಚೆಗಷ್ಟೇ ಇದೇ ನ್ಯಾಯಾಲಯ ಸಿಬಿಐ ಅನ್ನು ಪಂಜರದ ಗಿಳಿ ಎಂದು ಕರೆದಿತ್ತು. ಹಾಗಾಗಿ, ತಾವು ಪಂಜರದ ಗಿಳಿಗಳಲ್ಲ ಎಂಬುದನ್ನು ಸಿಬಿಐ ಅಧಿಕಾರಿಗಳು ಸಾಬೀತುಪಡಿಸುವ ಅಗತ್ಯವಿದೆ' ಎಂದು ಅವರು ಹೇಳಿದರು.

'ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಈಗಾಗಲೇ ಕಠಿಣ ಷರತ್ತುಗಳನ್ನೊಳಗೊಂಡ ಜಾಮೀನು ನೀಡಿರುವಾಗ ಮತ್ತೆ ಅದೇ ಅಪರಾಧಕ್ಕೆ ಸಂಬಂಧಿಸಿದಂತೆ ಅರವಿಂದ ಕೇಜ್ರಿವಾಲ್ ಅವರನ್ನು ಬಂಧಿಸಿರುವುದು ಸಂಪೂರ್ಣವಾಗಿ ಅಸಮರ್ಥನೀಯ' ಎಂದು ನ್ಯಾಯಮೂರ್ತಿ ಅಭಿಪ್ರಾಯಪಟ್ಟರು.

'ದೆಹಲಿ ಮುಖ್ಯಮಂತ್ರಿಯನ್ನು 2023ರ ಮಾರ್ಚ್ ತಿಂಗಳಲ್ಲಿ ಸಿಬಿಐ ವಿಚಾರಣೆಗೆ ಒಳಪಡಿಸಿತ್ತು. ಆಗ ಅವರಿಗೆ ಬಂಧಿಸುವ ಅಗತ್ಯ ಕಾಣಲಿಲ್ಲ. 22 ತಿಂಗಳವರೆಗೆ ಮೌನವಾಗಿತ್ತು. ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಬಂಧಿಸಿದ ಪ್ರಕರಣದಲ್ಲಿ ಕೇಜ್ರಿವಾಲ್ ಅವರಿಗೆ ಜಾಮೀನು ಸಿಕ್ಕ ಕೂಡಲೇ ಸಿಬಿಐ ಅಧಿಕಾರಿಗಳು ಸಕ್ರಿಯರಾದರು. ಅವರನ್ನು ಕಸ್ಟಡಿಗೆ ಪಡೆದರು. ಇ.ಡಿ ಪ್ರಕರಣದಲ್ಲಿ ಬಿಡುಗಡೆಯಾಗುವ ಹೊಸ್ತಿಲಿನಲ್ಲಿರುವಾಗ ಬಂಧಿಸುವ ತುರ್ತು ಏನಿತ್ತು ಎಂಬುದು ನಮಗೆ ಅರ್ಥವಾಗುತ್ತಿಲ್ಲ' ಎಂದು ಅವರು ಪ್ರಶ್ನಿಸಿದರು.

'ಕೇಜ್ರಿವಾಲ್ ಅವರ ಬಂಧನಕ್ಕೆ ಸಿಬಿಐ ಸ್ಪಷ್ಟ ಸಮರ್ಥನೆ ನೀಡಿಲ್ಲ. ಜತೆಗೆ, ಕೇಜ್ರಿವಾಲ್ ಹಾರಿಕೆ ಉತ್ತರಗಳನ್ನು ನೀಡುತ್ತಿದ್ದಾರೆ ಎಂದು ಆರೋಪಿಸಿ ಅವರ ಬಂಧನವನ್ನು ಮುಂದುವರಿಸಿದೆ. ಅಸಹಕಾರವನ್ನು ಸ್ವಯಂ ದೋಷಾರೋಪಣೆ ಎಂದು ಅರ್ಥೈಸಲಾಗುವುದಿಲ್ಲ' ಎಂದು ಅವರು ವಿಶ್ಲೇಷಿಸಿದರು.

ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ (ಇ.ಡಿ ಪ್ರಕರಣ) ಕೇಜ್ರಿವಾಲ್ ಅವರಿಗೆ ಮುಖ್ಯಮಂತ್ರಿ ಕಚೇರಿಗೆ ಪ್ರವೇಶಿಸುವುದು ಅಥವಾ ಕಡತಗಳಿಗೆ ಸಹಿ ಹಾಕುವುದರಿಂದ ನಿರ್ಬಂಧ ಹೇರಿರುವ ಕುರಿತು ಅವರು, 'ಪ್ರತ್ಯೇಕ ಪ್ರಕರಣ ಆಗಿರುವುದರಿಂದ ನ್ಯಾಯಾಂಗದ ಶಿಸ್ತಿನ ಕಾರಣದಿಂದ ನಾನು ಆ ಕುರಿತು ಪ್ರತಿಕ್ರಿಯಿಸುವುದಿಲ್ಲ' ಎಂದು ಹೇಳಿದರು.

ಎಎಪಿಯಲ್ಲಿ ನವೋಲ್ಲಾಸ

ದೆಹಲಿ ವಿಧಾನಸಭಾ ಚುನಾವಣೆಗೆ ನಾಲ್ಕು ತಿಂಗಳು ಹಾಗೂ ಹರಿಯಾಣ ವಿಧಾನಸಭಾ ಚುನಾವಣೆಗೆ ಕೆಲವೇ ದಿನಗಳು ಉಳಿದಿರುವ ಸಮಯದಲ್ಲಿ ಪಕ್ಷದ ವರಿಷ್ಠ ನಾಯಕ ಬಿಡುಗಡೆಯಾಗಿರುವುದು ಆಮ್ ಆದ್ಮಿ ಪಕ್ಷಕ್ಕೆ ನವಚೈತನ್ಯ ನೀಡಿದಂತಾಗಿದೆ.

ಹರಿಯಾಣ ವಿಧಾನಸಭಾ ಚುನಾವಣೆಯಲ್ಲಿ ಪಕ್ಷ ಏಕಾಂಗಿಯಾಗಿ ಸ್ಪರ್ಧಿಸುತ್ತಿದೆ. ಈ ಸಲ ಪಕ್ಷ ಖಾತೆ ತೆರೆಯುವ ಉಮೇದಿನಲ್ಲಿದೆ. ಕೇಜ್ರಿವಾಲ್ ಪ್ರಚಾರದಿಂದ ಪಕ್ಷಕ್ಕೆ ಭಾರಿ ಅನುಕೂಲವಾಗಲಿದೆ ಎಂದು ಪಕ್ಷದ ನಾಯಕರು ವಿಶ್ವಾಸ ವ್ಯಕ್ತಪಡಿಸುತ್ತಾರೆ. ಕೇಜ್ರಿವಾಲ್ ಬಿಡುಗಡೆಯನ್ನು ಸತ್ಯಮೇವ ಜಯತೇ ಎಂದೂ ಬಣ್ಣಿಸಿದ್ದಾರೆ.

'ಹರಿಯಾಣ ಮತ್ತು ದೆಹಲಿಯಲ್ಲಿ ಎಎಪಿಯು ಬಿಜೆಪಿಯನ್ನು ಸೋಲಿಸಲಿದೆ. ಕೇಜ್ರಿವಾಲ್ ಅವರ ಉಪಸ್ಥಿತಿಯು ನಮ್ಮನ್ನು ಬಲಪಡಿಸುತ್ತದೆ' ಎಂದು ರಾಜ್ಯಸಭಾ ಸದಸ್ಯ ಸಂಜಯ್ ಸಿಂಗ್ ಹೇಳಿದರು.

'ಪಕ್ಷವು ಅವರ ನಾಯಕತ್ವದಲ್ಲಿ ಗುಜರಾತ್ ಮತ್ತು ದೆಹಲಿಯಲ್ಲಿ ಚುನಾವಣೆ ಎದುರಿಸಿದೆ ಮತ್ತು ಅವರು ಹರಿಯಾಣ ಚುನಾವಣೆಯ ಉಸ್ತುವಾರಿ ವಹಿಸಿಕೊಳ್ಳುತ್ತಾರೆ' ಎಂದು ಸಂಸದ ರಾಘವ್ ಛಡ್ಡಾ ತಿಳಿಸಿದರು.

ಕೇಂದ್ರ ಗೃಹ ಸಚಿವ ಅಮಿತ್ ಶಾ ರಾಜೀನಾಮೆಗೆ ಎಎಪಿ ನಾಯಕರು ಒತ್ತಾಯಿಸಿದರು. 'ಹಲವು ದಾಳಿಗಳನ್ನು ನಡೆಸಲಾಯಿತು. ಆದರೆ, ಒಂದು ಪೈಸೆ ಅಕ್ರಮ ಸಂಪತ್ತು ಪತ್ತೆಯಾಗಿಲ್ಲ. ಆದರೂ ನಮ್ಮ ಹಲವು ನಾಯಕರನ್ನು ಕಂಬಿ ಹಿಂದೆ ಹಾಕಲಾಯಿತು. ಕೇಜ್ರಿವಾಲ್‌ಗೆ ಜಾಮೀನು ನೀಡಿರುವ ಸುಪ್ರೀಂ ಕೋರ್ಟ್‌ನ ತೀರ್ಪು ಗೃಹ ಸಚಿವ ಶಾ ಅವರ ಮುಖಕ್ಕೆ ಕಪಾಳಮೋಕ್ಷವಾಗಿದೆ. ಅವರು ಕೂಡಲೇ ರಾಜೀನಾಮೆ ನೀಡಬೇಕು' ಎಂದು ದೆಹಲಿ ಸಚಿವ ಅತಿಶಿ ಆಗ್ರಹಿಸಿದರು.

ಕೇಜ್ರಿವಾಲ್ ಅವರಿಗೆ ಜಾಮೀನು ಸಿಕ್ಕಿದ್ದಕ್ಕೆ ಇಂಡಿಯಾ ಮೈತ್ರಿಕೂಟದ ನಾಯಕರು ಸಂತಸ ವ್ಯಕ್ತಪಡಿಸಿದರು.

ಉಚಿತ ಕೊಡುಗೆ ಪ್ರಶ್ನಿಸಿದ ಅರ್ಜಿ ವಿಚಾರಣೆಗೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಉಚಿತ ಕೊಡುಗೆಗಳನ್ನು ನೀಡುವುದಾಗಿ ರಾಜಕೀಯ ಪಕ್ಷಗಳು ಚುನಾವಣೆಗೂ ಮೊದಲು ಭರವಸೆ ನೀಡುವುದನ್ನು 'ಭ್ರಷ್ಟ ಮಾರ್ಗ' ಎಂದು ಘೋಷಿಸುವಂತೆ ಕೋರಿರುವ ಹೊಸ ಅರ್ಜಿಯೊಂದನ್ನು ವಿಚಾರಣೆಗೆ ಕೈಗೆತ್ತಿಕೊಳ್ಳಲು ಸುಪ್ರೀಂ ಕೋರ್ಟ್ ಶುಕ್ರವಾರ ತೀರ್ಮಾನಿಸಿದೆ.

ಬೆಂಗಳೂರಿನ ಲಕ್ಷ್ಮೀದೇವಿ ಎನ್ನುವವರು ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಮತ್ತು ಚುನಾವಣಾ ಆಯೋಗಕ್ಕೆ ನೋಟಿಸ್ ಜಾರಿಗೊಳಿಸಲು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್ ನೇತೃತ್ವದ ತ್ರಿಸದಸ್ಯ ಪೀಠ ಸೂಚಿಸಿದೆ.

ವಕೀಲ ಅಶ್ವಿನಿ ಕುಮಾರ್ ಉಪಾಧ್ಯಾಯ ಸಲ್ಲಿಸಿರುವ ಇದೇ ಸ್ವರೂಪದ ಇನ್ನೊಂದು ಅರ್ಜಿಯ ಜೊತೆಯಲ್ಲೇ ಈ ಅರ್ಜಿಯನ್ನೂ ಇರಿಸುವಂತೆ ಕೋರ್ಟ್ ಸೂಚನೆ ನೀಡಿದೆ. ಚುನಾವಣಾ ಪ್ರಕ್ರಿಯೆಯು ನ್ಯಾಯಮಾರ್ಗದಲ್ಲಿ ನಡೆಯುವುದನ್ನು ಖಾತರಿಪಡಿಸಲು, ಸಾರ್ವಜನಿಕ ನಿಧಿಯನ್ನು ಜವಾಬ್ದಾರಿಯಿಂದ ಬಳಕೆ ಮಾಡುವಂತಾಗಲು ಚುನಾವಣಾ ಪ್ರಣಾಳಿಕೆಗಳಿಗೆ ಸಂಬಂಧಿಸಿದಂತೆ ಸ್ಪಷ್ಟ ನಿಯಮಗಳು ಇರಬೇಕು, ಅವಾಸ್ತವಿಕವಾದ ಹಾಗೂ ಹಣಕಾಸಿನ ದೃಷ್ಟಿಯಿಂದ ಹೊರೆಯಾಗುವ ಭರವಸೆಗಳನ್ನು ನೀಡುವುದನ್ನು ನಿಷೇಧಿಸಬೇಕು ಎಂದು ಅರ್ಜಿಯಲ್ಲಿ ಕೋರಲಾಗಿದೆ. 'ಇಂತಹ ನಿಯಮಗಳು ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆಯ ತತ್ವ ರಕ್ಷಿಸುವಂತೆ ಇರಬೇಕು. ರಾಜ್ಯಗಳ ಹಣಕಾಸಿನ ಆರೋಗ್ಯವನ್ನು ಕಾಯುವಂತೆ ಮತ್ತು ಮತದಾರರ ಹಿತವನ್ನು ಕಾಯುವಂತೆ ಇರಬೇಕು' ಎಂದು ಅರ್ಜಿಯಲ್ಲಿ ವಿವರಿಸಲಾಗಿದೆ.

ಚುನಾವಣೆ ಸಂದರ್ಭದಲ್ಲಿ ರಾಜಕೀಯ ಪಕ್ಷಗಳು ತಾವು ಅಧಿಕಾರಕ್ಕೆ ಬಂದರೆ ಸರ್ಕಾರದ ಬೊಕ್ಕಸದಿಂದ ಉಚಿತ ಕೊಡುಗೆ ನೀಡಲಾಗುವುದು ಎಂಬ ಭರವಸೆ ಕೊಡುವುದನ್ನು, ಅದರಲ್ಲೂ ಮುಖ್ಯವಾಗಿ ಹಣದ ರೂಪದಲ್ಲಿ ಉಚಿತ ಕೊಡುಗೆ ನೀಡಲಾಗುವುದು ಎಂಬ ಭರವಸೆ ನೀಡುವುದನ್ನು, ಪ್ರಜಾ ಪ್ರಾತಿನಿಧ್ಯ ಕಾಯ್ದೆ – 1951ರ ಅಡಿಯಲ್ಲಿ ಭ್ರಷ್ಟ ಮಾರ್ಗ ಎಂದು ಘೋಷಿಸಬೇಕು ಎಂದು ಅರ್ಜಿದಾರರು ಕೋರಿದ್ದಾರೆ.

ಕರ್ನಾಟಕದ ಉದಾಹರಣೆಯನ್ನು ನೀಡಿರುವ ಅರ್ಜಿಯು, ಉಚಿತ ಕೊಡುಗೆಗಳನ್ನು ನೀಡುವುದಾಗಿ ಯಾವ ನಿಯಂತ್ರಣವೂ ಇಲ್ಲದ ಭರವಸೆ ಕೊಟ್ಟ ಕಾರಣದಿಂದಾಗಿ, ಸರ್ಕಾರದ ಬೊಕ್ಕಸದ ಮೇಲೆ ಗಣನೀಯವಾದ ಹೊರೆ ಬಿದ್ದಿದೆ ಎಂದು ಹೇಳಿದೆ.

ಟೈಟ್ಲರ್ ವಿರುದ್ಧ ದೋಷಾರೋಪ

ಕೊಲೆ: 1984ರ ಸಿಖ್ ವಿರೋಧಿ ದಂಗೆ; ಸಿಬಿಐ ವಿಶೇಷ ಕೋರ್ಟ್ ಸೂಚನೆ

ನವದೆಹಲಿ (ಪಿಟಿಐ): 1984ರ ಸಿಖ್ ವಿರೋಧಿ ದಂಗೆ ಸಂದರ್ಭದಲ್ಲಿ ಉತ್ತರ ದೆಹಲಿಯ ಪುಲ್ ಬಂಗಶ್ ಪ್ರದೇಶದಲ್ಲಿ ನಡೆದ ಮೂವರ ಹತ್ಯೆ ಪ್ರಕರಣದಲ್ಲಿ ಕಾಂಗ್ರೆಸ್ ನಾಯಕ ಜಗದೀಶ್ ಟೈಟ್ಲರ್ ವಿರುದ್ಧ ದೆಹಲಿ ನ್ಯಾಯಾಲಯವು ಕೊಲೆ ಹಾಗೂ ಇತರ ಅಪರಾಧಗಳಿಗೆ ಸಂಬಂಧಿಸಿ ಶುಕ್ರವಾರ ದೋಷಾರೋಪ ನಿಗದಿ ಮಾಡಿದೆ.


ಜಗದೀಶ್ ಟೈಟ್ಲರ್

'ಈ ಪ್ರಕರಣಗಳಲ್ಲಿ ನಾನು ನಿರಪರಾಧಿ' ಎಂಬುದಾಗಿ ಟೈಟ್ಲರ್ ಅವರು ನ್ಯಾಯಾಲಯಕ್ಕೆ ನಿವೇದನೆ ಮಾಡಿದರು. ಆಗ, ವಿಚಾರಣೆ ಎದುರಿಸುವಂತೆ ಸಿಬಿಐ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ರಾಕೇಶ್ ಸಿಯಾಲ್ ಅವರು ಟೈಟ್ಲರ್ ಅವರಿಗೆ ನಿರ್ದೇಶನ ನೀಡಿದರು.

ಕೊಲೆ ಅಲ್ಲದೇ, ಕಾನೂನುಬಾಹಿರವಾಗಿ ಗುಂಪು ಸೇರಿದ್ದು, ಗಲಭೆಗೆ ಪ್ರಚೋದನೆ, ಎರಡು ಗುಂಪುಗಳ ನಡುವೆ ದ್ವೇಷ ಹುಟ್ಟುಹಾಕಿದ್ದು ಮತ್ತು ಅಕ್ರಮ ಪ್ರವೇಶ ಹಾಗೂ ಕಳ್ಳತನ ಸೇರಿದಂತೆ ವಿವಿಧ ಅಪರಾಧ ಕೃತ್ಯಗಳಿಗೆ ಸಂಬಂಧಿಸಿ ಆರೋಪ ನಿಗದಿಪಡಿಸುವಂತೆ ನ್ಯಾಯಾಲಯ ಆದೇಶಿಸಿತು.

ಪ್ರಕರಣದ ಪ್ರಮುಖ ಅಂಶಗಳು

- ಪ್ರಕರಣಕ್ಕೆ ಸಂಬಂಧಿಸಿ ಕಳೆದ ವರ್ಷ ಮೇ 20ರಂದು ಟೈಟ್ಲರ್ ವಿರುದ್ಧ ಸಿಬಿಐ ದೋಷಾರೋಪಪಟ್ಟಿ ಸಲ್ಲಿಸಿತ್ತು
- ಕಳೆದ ವರ್ಷ ಆಗಸ್ಟ್‌ನಲ್ಲಿ ಟೈಟ್ಲರ್ ಅವರಿಗೆ ಸೆಷನ್ಸ್ ನ್ಯಾಯಾಲಯ ನಿರೀಕ್ಷಣಾ ಜಾಮೀನು ಮಂಜೂರು ಮಾಡಿತ್ತು

'ಆರೋಪಿಯನ್ನು ವಿಚಾರಣೆಗೆ ಒಳಪಡಿಸಲು ಸಾಕಷ್ಟು ಸಾಕ್ಷ್ಯಗಳಿವೆ' ಎಂದು ಆ.30ರಂದು ನ್ಯಾಯಾಧೀಶರು ತಿಳಿಸಿದ್ದರು. 'ಟೈಟ್ಲರ್ ಅವರು 1984ರ ನವೆಂಬರ್ 1ರಂದು ಬಿಳಿ ಬಣ್ಣದ ಅಂಬಾಸಿಡರ್ ಕಾರಿನಲ್ಲಿ ಪುಲ್ ಬಂಗಶ್ ಗುರುದ್ವಾರದ ಬಳಿ ಬಂದಿದ್ದರು. ಕಾರಿನಿಂದ ಇಳಿದ ಅವರು 'ಸಿಖ್ಖರನ್ನು ಕೊಲ್ಲಿರಿ, ಅವರು ನಮ್ಮ ತಾಯಿಯನ್ನು ಕೊಂದಿದ್ದಾರೆ' ಎಂದು ಹೇಳುವ ಮೂಲಕ ಅಲ್ಲಿದ್ದ ಗುಂಪನ್ನು ಪ್ರಚೋದಿಸಿದ್ದರು. ಬಳಿಕ ಅಲ್ಲಿ ನಡೆದ ಗಲಭೆಯಲ್ಲಿ ಮೂವರನ್ನು ಹತ್ಯೆ ಮಾಡಲಾಯಿತು' ಎಂದು ಸಾಕ್ಷಿಯೊಬ್ಬರ ಹೇಳಿಕೆಯನ್ನು ಸಿಬಿಐ ಚಾರ್ಜ್‌ಶೀಟ್‌ನಲ್ಲಿ ಉಲ್ಲೇಖಿಸಿದೆ.

ಕೋಚಿಂಗ್ ಕೇಂದ್ರದಲ್ಲಿ ಸಾವು ಆರೋಪಿಗಳಿಗೆ ಜಾಮೀನು

ನವದೆಹಲಿ (ಪಿಟಿಐ): ಹಳೆ ರಾಜೇಂದರ್ ನಗರದ ಕೋಚಿಂಗ್ ಕೇಂದ್ರವೊಂದರ ತಳಮಹಡಿಯ ನಾಲ್ವರು ಮಾಲೀಕರಿಗೆ ದೆಹಲಿ ಹೈಕೋರ್ಟ್ ಶುಕ್ರವಾರ ಮಧ್ಯಂತರ ಜಾಮೀನು ನೀಡಿದೆ. ಈ ಜಾಮೀನು ಜನವರಿ 30ರವರೆಗೆ ಚಾಲ್ತಿಯಲ್ಲಿರುತ್ತದೆ.



ನಾಗರಿಕ ಸೇವಾ ಪರೀಕ್ಷೆಗಳಿಗೆ ಸಿದ್ಧತೆ ನಡೆಸುತ್ತಿದ್ದ ಮೂವರು ಈ ಕೋಚಿಂಗ್ ಕೇಂದ್ರದ ತಳಮಹಡಿಯಲ್ಲಿ ಜುಲೈ ತಿಂಗಳಲ್ಲಿ ಮಳೆ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದರು.

ಆರೋಪಿಗಳಾದ ಪರ್ವಿಂದರ್ ಸಿಂಗ್, ತೇಜಿಂದರ್ ಸಿಂಗ್, ಹರ್ವಿಂದರ್ ಸಿಂಗ್ ಮತ್ತು ಸರಬ್ಜಿತ್ ಸಿಂಗ್ ಅವರು ರೆಡ್ ಕ್ರಾಸ್ ಸಂಸ್ಥೆಗೆ ₹5 ಕೋಟಿ ಜಮಾ ಮಾಡಿದರೆ ಜಾಮೀನು ಸಿಗುತ್ತದೆ ಎಂದು ನ್ಯಾಯಮೂರ್ತಿ ದಿನೇಶ್ ಕುಮಾರ್ ಶರ್ಮ ಅವರು ಹೇಳಿದ್ದಾರೆ. ಆರೋಪಿಗಳ ನಡತೆಗೆ ಕ್ಷಮೆ ಇಲ್ಲ, ಅವರು ದುರಾಸೆಯಿಂದ ನಡೆದುಕೊಂಡಿದ್ದಾರೆ ಎಂದು ನ್ಯಾಯಮೂರ್ತಿ ಹೇಳಿದ್ದಾರೆ.

ಅನುಮತಿ ಇಲ್ಲದೆ ಯಾವುದೇ ಕೋಚಿಂಗ್ ಕೇಂದ್ರ ನಡೆಸಲು ಅವಕಾಶ ಇರಬಾರದು, ಅದನ್ನು ಖಾತರಿಪಡಿಸಲು ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಯೊಬ್ಬರ ನೇತೃತ್ವದಲ್ಲಿ ಸಮಿತಿಯೊಂದನ್ನು ಲೆಫ್ಟಿನೆಂಟ್ ಗವರ್ನರ್ ನೇಮಕ ಮಾಡಬೇಕು ಎಂಬ ಷರತ್ತನ್ನು ಕೂಡ ಜಾಮೀನು ಆದೇಶದಲ್ಲಿ ವಿಧಿಸಲಾಗಿದೆ.

ಅಧಿಕಾರಿಗಳು ರಾಜಧಾನಿಯಲ್ಲಿ ಕೋಚಿಂಗ್ ಕೇಂದ್ರಗಳಿಗೆ ಪ್ರತ್ಯೇಕ ಸ್ಥಳವೊಂದನ್ನು ನಿಗದಿ ಮಾಡಬೇಕು ಎಂದು ಕೂಡ ನ್ಯಾಯಮೂರ್ತಿ ಹೇಳಿದ್ದಾರೆ.

ತಾವು ತಳಮಹಡಿಯ ಮಾಲೀಕರು ಮಾತ್ರ. ಅದನ್ನು ಬಾಡಿಗೆ ಆಧಾರದಲ್ಲಿ ಕೋಚಿಂಗ್ ಕೇಂದ್ರಕ್ಕೆ ನೀಡಲಾಗಿತ್ತು. ಅಭ್ಯರ್ಥಿಗಳು ಮೃತಪಟ್ಟಿದ್ದರಲ್ಲಿ ತಮ್ಮ ಪಾತ್ರ ಇಲ್ಲ ಎಂದು ನಾಲ್ವರು ಆರೋಪಿಗಳು ಜಾಮೀನು ಅರ್ಜಿಯಲ್ಲಿ ಹೇಳಿದ್ದರು.

ಸುದ್ದಿ 2 ನಿಮಿಷ

ಪೋರ್ಟ್ ಬ್ಲೇರ್ ಇನ್ನು 'ಶ್ರೀ ವಿಜಯ ಪುರಂ'

ನವದೆಹಲಿ (ಪಿಟಿಐ): ಪೋರ್ಟ್ ಬ್ಲೇರ್ ನಗರವನ್ನು 'ಶ್ರೀ ವಿಜಯ ಪುರಂ' ಎಂದು ಮರುನಾಮಕರಣ ಮಾಡಲು ಕೇಂದ್ರ ಸರ್ಕಾರ ತೀರ್ಮಾನಿಸಿದೆ ಎಂದು ಗೃಹ ಸಚಿವ ಅಮಿತ್ ಶಾ ಶುಕ್ರವಾರ ತಿಳಿಸಿದ್ದಾರೆ. ಕೇಂದ್ರಾಡಳಿತ ಪ್ರದೇಶವಾದ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಸಮೂಹದ ರಾಜಧಾನಿ ಪೋರ್ಟ್ ಬ್ಲೇರ್.

ದೇಶದ ಇತಿಹಾಸ ಹಾಗೂ ಸ್ವಾತಂತ್ರ್ಯ ಹೋರಾಟದಲ್ಲಿ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಸಮೂಹಕ್ಕೆ ಸಾಟಿಯಿಲ್ಲದ ಸ್ಥಾನವಿರುವ ಕಾರಣಕ್ಕೆ ವಸಾಹತುಶಾಹಿ ಹೆಜ್ಜೆಗುರುತುಗಳಿಂದ ದೇಶವನ್ನು ಮುಕ್ತಗೊಳಿಸಲು ನಿರ್ಧರಿಸಲಾಗಿದೆ ಎಂದು ಶಾ ಅವರು ಹೇಳಿದ್ದಾರೆ.

ಹಿಂದಿನ ಹೆಸರಿನಲ್ಲಿ ವಸಾಹತುಶಾಹಿಯ ಛಾಯೆ ಇತ್ತು. ಆದರೆ 'ಶ್ರೀ ವಿಜಯ ಪುರಂ' ಎಂಬ ಹೆಸರು ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಗಳಿಸಿದ ವಿಜಯವನ್ನು, ಅದರಲ್ಲಿ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಸಮೂಹ ಹೊಂದಿದ್ದ ವಿಶಿಷ್ಟವಾದ ಪಾತ್ರವನ್ನು ಸಂಕೇತಿಸುತ್ತದೆ ಎಂದು ಹೇಳಿದ್ದಾರೆ.



ಚೋಳ ಸಾಮ್ರಾಜ್ಯದ ನೌಕಾನೆಲೆಯಾಗಿದ್ದ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಸಮೂಹವು ಈಗ ದೇಶದ ಅಭಿವೃದ್ಧಿ ಹಾಗೂ ಯುದ್ಧತಂತ್ರದ ಮಹತ್ವಾಕಾಂಕ್ಷೆಗಳ ನೆಲೆಯಾಗಲು ಸನ್ನದ್ಧವಾಗಿದೆ ಎಂದು ಶಾ ಹೇಳಿದ್ದಾರೆ.

ಸೆಬಿ ಅಧ್ಯಕ್ಷೆ ಮಾಧವಿ ವಿರುದ್ಧ ಸಂಸದೆ ಮಹುವಾ ದೂರು

ನವದೆಹಲಿ (ಪಿಟಿಐ): ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯ (ಸೆಬಿ) ಅಧ್ಯಕ್ಷೆ ಮಾಧವಿ ಪುರಿ ಬುಚ್ ಅವರ ವಿರುದ್ಧ ಲೋಕಪಾಲಕ್ಕೆ ದೂರು ನೀಡಿರುವುದಾಗಿ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷದ ಸಂಸದೆ ಮಹುವಾ ಮೊಯಿತ್ರಾ ಅವರು ಶುಕ್ರವಾರ ತಿಳಿಸಿದ್ದಾರೆ.

ಲೋಕಪಾಲ ಸಂಸ್ಥೆಯು ಈ ದೂರಿನ ಬಗ್ಗೆ ಪ್ರಾಥಮಿಕ ತನಿಖೆ ನಡೆಸುವುದಕ್ಕೆ ಇ.ಡಿ ಅಥವಾ ಸಿಬಿಐಗೆ ಸೂಚಿಸಬೇಕು, ಅದಾದ ನಂತರ 'ಪೂರ್ಣ ಪ್ರಮಾಣದಲ್ಲಿ ಎಫ್‌ಐಆರ್ ದಾಖಲಿಸಿ' ತನಿಖೆ ನಡೆಸಬೇಕು ಎಂದು ಮಹುವಾ ಅವರು ಆಗ್ರಹಿಸಿದ್ದಾರೆ.

ದೂರನ್ನು ಆನ್‌ಲೈನ್ ಮೂಲಕ ಹಾಗೂ ಭೌತಿಕವಾಗಿ ನೀಡಿರುವುದಕ್ಕೆ ದಾಖಲೆಗಳನ್ನು ಮಹುವಾ ಅವರು ಸಾಮಾಜಿಕ ಜಾಲತಾಣಗಳ ಮೂಲಕ ಹಂಚಿಕೊಂಡಿದ್ದಾರೆ. 'ಲೋಕಪಾಲ ಸಂಸ್ಥೆಯು ಈ ದೂರಿನ ಬಗ್ಗೆ ಪ್ರಾಥಮಿಕ ತನಿಖೆ ನಡೆಸುವಂತೆ ಸಿಬಿಐ ಅಥವಾ ಇ.ಡಿಗೆ 30 ದಿನಗಳ ಒಳಗೆ ಸೂಚನೆ ನೀಡಬೇಕು' ಎಂದು ಅವರು ಹೇಳಿದ್ದಾರೆ.

ಇಲ್ಲಿ ಭಾಗಿಯಾಗಿರುವ ಪ್ರತಿ ಸಂಸ್ಥೆಯನ್ನೂ ತನಿಖೆಗೆ ಒಳಪಡಿಸಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ಕೋಲ್ಕತ್ತ: ಸ್ವಾಸ್ಥ್ಯ ಭವನದ ಬಳಿ ಮುಂದುವರಿದ ಕಿರಿಯ ವೈದ್ಯರ ಧರಣಿ

ಪ್ರಧಾನಿ ಮಧ್ಯಪ್ರವೇಶಕ್ಕೆ ಮನವಿ

ಕೋಲ್ಕತ್ತ (ಪಿಟಿಐ): ಆರ್.ಜಿ.ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ನಡೆದಿದ್ದ ವೈದ್ಯ ವಿದ್ಯಾರ್ಥಿನಿ ಮೇಲಿನ ಅತ್ಯಾಚಾರ– ಕೊಲೆ ಪ್ರಕರಣ ಖಂಡಿಸಿ ಪ್ರತಿಭಟನೆ ನಡೆಸುತ್ತಿರುವ ಕಿರಿಯ ವೈದ್ಯರು, ಬಿಕ್ಕಟ್ಟು ಶಮನಕ್ಕೆ ಮಧ್ಯಪ್ರವೇಶಿಸುವಂತೆ ರಾಷ್ಟ್ರಪತಿ ದ್ರೌಪದಿ ಮುರ್ಮು ಮತ್ತು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮನವಿ ಮಾಡಿದ್ದಾರೆ.

'ಹೇಯ ಕೃತ್ಯಕ್ಕೆ ಬಲಿಯಾದ ನಮ್ಮ ಸಹೋದ್ಯೋಗಿಗೆ ನ್ಯಾಯ ಒದಗಿಸಲು ನೀವು ಮಧ್ಯಪ್ರವೇಶಿಸಬೇಕೆಂದು ಮನವಿ ಮಾಡುತ್ತೇವೆ. ಹಾಗಾದಲ್ಲಿ ನಮಗೆ ಯಾವುದೇ ಭಯವಿಲ್ಲದೆ ಕರ್ತವ್ಯ ನಿರ್ವಹಿಸಲು ಸಾಧ್ಯವಾಗುತ್ತದೆ' ಎಂದು ಪತ್ರದಲ್ಲಿ ತಿಳಿಸಿದ್ದಾರೆ. 'ಈ ಸಂಕಷ್ಟದ ಸಮಯದಲ್ಲಿ ನಿಮ್ಮ ಮಧ್ಯ-ಪ್ರವೇಶವು ನಮಗೆ ಭರವಸೆಯ ಬೆಳಕಾಗಿ ಪರಿಣಮಿಸಲಿದೆ. ನಮ್ಮನ್ನು ಆವರಿಸಿರುವ ಕತ್ತಲೆಯಿಂದ ಹೊರಬರಲು ದಾರಿಯನ್ನು ತೋರಿಸಲಿದೆ' ಎಂದಿದ್ದಾರೆ.

ಮುಂದುವರಿದ ಧರಣಿ: ಪಶ್ಚಿಮ ಬಂಗಾಳದ ಆರೋಗ್ಯ ಇಲಾಖೆಯ ಕೇಂದ್ರ ಕಚೇರಿಯ ಬಳಿ ಕಿರಿಯ ವೈದ್ಯರು ನಡೆಸುತ್ತಿರುವ ಧರಣಿ ಸತತ ಮೂರನೇ ದಿನವೂ ಮುಂದುವರಿಯಿತು. ಬಿಕ್ಕಟ್ಟು ಬಗೆಹರಿಸುವ ಉದ್ದೇಶದಿಂದ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಮತ್ತು ಕಿರಿಯ ವೈದ್ಯರ ಮಧ್ಯೆ ಗುರುವಾರ ನಡೆಯಬೇಕಿದ್ದ ಮಾತುಕತೆ ಮುರಿದುಬಿದ್ದಿತ್ತು. ಸಂಧಾನ ಮಾತುಕತೆಯನ್ನು ನೇರ ಪ್ರಸಾರ ಮಾಡಬೇಕು ಎಂಬ ವೈದ್ಯರ ಷರತ್ತಿಗೆ ಸರ್ಕಾರ ಒಪ್ಪಿಕೊಳ್ಳದ ಕಾರಣ ಸಭೆ ನಡೆಯಲಿಲ್ಲ.

₹2 ಲಕ್ಷ ಪರಿಹಾರ: ವೈದ್ಯರ ಮುಷ್ಕರದ ಕಾರಣ ಸೂಕ್ತ ಚಿಕಿತ್ಸೆ ಲಭಿಸದೆ ಮೃತಪಟ್ಟ 29 ಮಂದಿಯ ಕುಟುಂಬಗಳಿಗೆ ಬಂಗಾಳ ಸರ್ಕಾರ ತಲಾ ₹2 ಲಕ್ಷ ಪರಿಹಾರ ಘೋಷಿಸಿದೆ.


ಕೋಲ್ಕತ್ತದ ಸ್ವಾಸ್ಥ್ಯ ಭವನದ ಮುಂದೆ ಧರಣಿ ನಡೆಸುತ್ತಿರುವ ಕಿರಿಯ ವೈದ್ಯರು ಶುಕ್ರವಾರ ಮಳೆಯಿಂದ ರಕ್ಷಣೆ ಪಡೆಯಲು ತಾಡಪತ್ರಿ ಮೊರೆ ಹೋದರು

—ಪಿಟಿಐ ಚಿತ್ರ

'ಆರೋಪ ಪಟ್ಟಿ ಸಲ್ಲಿಕೆ ವಿಳಂಬ ಏಕೆ?'

ನವದೆಹಲಿ: ವೈದ್ಯ ವಿದ್ಯಾರ್ಥಿನಿ ಕೊಲೆ ಪ್ರಕರಣದಲ್ಲಿ ಆರೋಪ ಪಟ್ಟಿ ಸಲ್ಲಿಸಲು ಸಿಬಿಐ ವಿಳಂಬ ಮಾಡುತ್ತಿರುವುದನ್ನು ತೃಣಮೂಲ ಕಾಂಗ್ರೆಸ್ ನಾಯಕ ಡೆರಿಕ್ ಒಬ್ರಯಾನ್ ಪ್ರಶ್ನಿಸಿದ್ದಾರೆ.

'ಸಂತ್ರಸ್ತೆಯ ಕುಟುಂಬವು ನ್ಯಾಯಕ್ಕಾಗಿ ಇನ್ನೆಷ್ಟು ದಿನ ಕಾಯಬೇಕು? ಆರೋಪಿಗಳು ಯಾರು ಎಂಬುದು ಸಿಬಿಐಗೆ ಗೊತ್ತಿದೆ. ಎಲ್ಲ ಸಾಕ್ಷ್ಯಗಳೂ ಅವರ ಬಳಿ ಇದೆ. ಆದರೂ ಆರೋಪ ಪಟ್ಟಿ ಸಲ್ಲಿಸುತ್ತಿಲ್ಲ ಏಕೆ? ವಿಚಾರಣೆಯನ್ನು ವಿಳಂಬಗೊಳಿಸುತ್ತಿರುವುದು ಏಕೆ? ನಮಗೆ ತ್ವರಿತ ನ್ಯಾಯ ಬೇಕು' ಎಂದು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಮಂಪರು ಪರೀಕ್ಷೆ: ಸಿಬಿಐ ಮನವಿ ತಿರಸ್ಕಾರ

ವೈದ್ಯ ವಿದ್ಯಾರ್ಥಿನಿ ಮೇಲೆ ಅತ್ಯಾಚಾರ ಎಸಗಿ ಹತ್ಯೆಗೈದ ಪ್ರಕರಣದ ಆರೋಪಿ ಸಂಜಯ್ ರಾಯ್‌ನನ್ನು ಮಂಪರು ಪರೀಕ್ಷೆಗೆ ಒಳಪಡಿಸಲು ಅನುಮತಿ ನೀಡುವಂತೆ ಸಿಬಿಐ ಮಾಡಿದ ಮನವಿಯನ್ನು ಸ್ಥಳೀಯ ನ್ಯಾಯಾಲಯ ಶುಕ್ರವಾರ ತಿರಸ್ಕರಿಸಿದೆ.

'ಮಂಪರು ಪರೀಕ್ಷೆಗೆ ಒಳಗಾಗಲು ರಾಯ್ ಒಪ್ಪಿಕೊಂಡಿದ್ದ. ಆದರೆ ನ್ಯಾಯಾಧೀಶರು ಕೇಳುವಾಗ ಪರೀಕ್ಷೆಗೆ ಒಳಗಾಗುವುದಿಲ್ಲ ಎಂದಿದ್ದಾನೆ' ಎಂದು ಸಿಬಿಐ ಅಧಿಕಾರಿಯೊಬ್ಬರು ಹೇಳಿದ್ದಾರೆ. ರಾಯ್ ನೀಡುತ್ತಿರುವ ಹೇಳಿಕೆಗಳು ಸತ್ಯವೇ ಎಂಬುದನ್ನು ಪರಿಶೀಲಿಸಲು ಮಂಪರು ಪರೀಕ್ಷೆಗೆ ಒಳಪಡಿಸಲು ಸಿಬಿಐ ನಿರ್ಧರಿಸಿತ್ತು. ತನಿಖಾ ತಂಡ ಆರೋಪಿಯನ್ನು ಈಗಾಗಲೇ ಸುಳ್ಳು ಪತ್ತೆ ಪರೀಕ್ಷೆಗೆ ಒಳಪಡಿಸಿದೆ.

'ಸಿಜೆಐ ಮನೆಗೆ ಭೇಟಿ: ಶಿಷ್ಟಾಚಾರದ ಪ್ರಶ್ನೆ'

ಮುಂಬೈ (ಪಿಟಿಐ): ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ ಚಂದ್ರಚೂಡ್ ಅವರ ಮನೆಯಲ್ಲಿ ನಡೆದ ಗಣೇಶ ಹಬ್ಬದಲ್ಲಿ ಪ್ರಧಾನಿ ನರೇಂದ್ರ ಮೋದಿ ಪಾಲ್ಗೊಂಡದ್ದು ಶಿಷ್ಟಾಚಾರದ ಬಗ್ಗೆ ಪ್ರಶ್ನೆಗಳನ್ನು ಹುಟ್ಟುಹಾಕಿದೆ ಎಂದು ಶಿವಸೇನಾ (ಯುಬಿಟಿ) ಶುಕ್ರವಾರ ಹೇಳಿದೆ.

ಸಿಜೆಐ ನಿವಾಸಕ್ಕೆ ಮೋದಿ ಅವರು ಬುಧವಾರ ಭೇಟಿ ನೀಡಿ ಪೂಜೆಯಲ್ಲಿ ಪಾಲ್ಗೊಂಡಿದ್ದರು. ಇದು ಪರ–ವಿರೋಧ ಚರ್ಚೆಗೆ ಕಾರಣವಾಗಿತ್ತು. 'ಪ್ರಧಾನಿ ಮತ್ತು ಸಿಜೆಐ ನಡುವಣ ಖಾಸಗಿ ಭೇಟಿಯು ಶಿಷ್ಟಾಚಾರಕ್ಕೆ ಸಂಬಂಧಿಸಿದಂತೆ ಪ್ರಶ್ನೆ ಏಳುವಂತೆ ಮಾಡಿದೆ' ಎಂದು ಪಕ್ಷದ ಮುಖವಾಣಿ 'ಸಾಮ್ನಾ'ದ ಸಂಪಾದಕೀಯ ಹೇಳಿದೆ.

ಮೋದಿ ಅವರನ್ನು ಆಹ್ವಾನಿಸುವ ಚಂದ್ರಚೂಡ್ ನಿರ್ಧಾರವನ್ನೂ ಟೀಕಿಸಿದ್ದು, 'ನಿವೃತ್ತಿಯ ಬಳಿಕ ಚಂದ್ರಚೂಡ್ ಅವರಿಗೆ ಮೋದಿ ಅವರು ಯಾವ ಸ್ಥಾನಮಾನ ನೀಡುವರು ಎಂಬುದು ಕುತೂಹಲದ ವಿಷಯ' ಎಂದಿದೆ. ಸುಪ್ರೀಂ ಕೋರ್ಟ್ ವೆಬ್‌ಸೈಟ್‌ನಲ್ಲಿರುವ ಮಾಹಿತಿ ಪ್ರಕಾರ, ಚಂದ್ರಚೂಡ್ ಅವರು ಈ ವರ್ಷದ ನವೆಂಬರ್ 10ರಂದು ನಿವೃತ್ತಿ ಹೊಂದಲಿದ್ದಾರೆ.

ರೆಸ್ಟೋರೆಂಟ್ ಮಾಲೀಕರು ಕ್ಷಮೆ ಕೋರುವಂತೆ ಮಾಡಿದ ಸಚಿವರು

ನಿರ್ಮಲಾ ದುರಹಂಕಾರ: ಟೀಕೆ

ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಬಗ್ಗೆ ಕಳವಳ ವ್ಯಕ್ತಪಡಿಸಿದ ರೆಸ್ಟೋರೆಂಟ್ ಮಾಲೀಕರೊಬ್ಬರು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ಕ್ಷಮೆಯಾಚಿಸಿದ ಘಟನೆಗೆ ಸಂಬಂಧಿಸಿದಂತೆ ಕಾಂಗ್ರೆಸ್, ಕೇಂದ್ರ ಸರ್ಕಾರದ ಮೇಲೆ ವಾಗ್ದಾಳಿ ನಡೆಸಿದೆ.


ನಿರ್ಮಲಾ

ತಮಿಳುನಾಡಿನ ಅನ್ನಪೂರ್ಣ ರೆಸ್ಟೋರೆಂಟ್ ಚೈನ್‌ನ ಮಾಲೀಕರು ನಿರ್ಮಲಾ ಅವರ ಕ್ಷಮೆಯಾಚಿಸಿದ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದೆ.

ರೆಸ್ಟೋರೆಂಟ್ ಮಾಲೀಕ ತಿರು ಶ್ರೀನಿವಾಸನ್, ಹಣಕಾಸು ಸಚಿವರು ಆಯೋಜಿಸಿದ್ದ ಸಭೆಯಲ್ಲಿ ಜಿಎಸ್‌ಟಿಯ ಸಂಕೀರ್ಣತೆಯ ಬಗ್ಗೆ ಕಳವಳ ವ್ಯಕ್ತಪಡಿಸಿದ್ದಾರೆ. ತಾವಾಡಿದ ಮಾತುಗಳಿಗೆ ಆ ಬಳಿಕ ಖಾಸಗಿ ಭೇಟಿ ವೇಳೆ ಕ್ಷಮೆಯಾಚಿಸಿದ್ದಾರೆ. ಶ್ರೀನಿವಾಸನ್ ಸಭೆಯಲ್ಲಿ ಮಾತನಾಡಿದ ಮತ್ತು ಖಾಸಗಿ ಭೇಟಿಯಲ್ಲಿ ಕ್ಷಮೆಯಾಚಿಸಿದ ವಿಡಿಯೊಗಳನ್ನು ಕಾಂಗ್ರೆಸ್ ವಕ್ತಾರೆ ಸುಪ್ರಿಯಾ ಶ್ರೀನೆತ್ ಅವರು ನವದೆಹಲಿಯಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಪ್ರದರ್ಶಿಸಿದ್ದಾರೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ನಿರ್ಮಲಾ ವಿರುದ್ಧ ವಾಗ್ದಾಳಿ ನಡೆಸಿದ್ದು, 'ರೆಸ್ಟೋರೆಂಟ್ ಮಾಲೀಕರನ್ನು ಅವಮಾನ ಮಾಡಿದ ಘಟನೆಯು 'ಅಧಿಕಾರದ ದುರಹಂಕಾರ'ವನ್ನು ತೋರಿಸುತ್ತದೆ. ಹಣಕಾಸು ಸಚಿವರು ಸಾರ್ವಜನಿಕ ಸಂವಾದಗಳಲ್ಲಿ ಪದೇ ಪದೇ ಇಂತಹ ತಪ್ಪು ಮಾಡುತ್ತಿದ್ದಾರೆ' ಎಂದು ದೂರಿದರು.

'ರೆಸ್ಟೋರೆಂಟ್ ಮಾಲೀಕರು ಜಿಎಸ್‌ಟಿ ಲೋಪಗಳ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಕೇಳಿದ್ದಾರೆ. ಅವರ ಮಾತುಗಳಿಗೆ ವ್ಯಂಗ್ಯವಾಗಿ ನಕ್ಕ ಸಚಿವರು ಆ ಬಳಿಕ ಬಲವಂತದಿಂದ ಕ್ಷಮೆ ಕೇಳುವಂತೆ ಮಾಡಿದ್ದಾರೆ' ಎಂದು ಆರೋಪಿಸಿದ್ದಾರೆ.

'ಅನ್ನಪೂರ್ಣ ರೆಸ್ಟೋರೆಂಟ್‌ನಂತಹ ಸಣ್ಣ ಉದ್ಯಮದ ಮಾಲೀಕರು ಸರಳೀಕೃತ ಜಿಎಸ್‌ಟಿಗೆ ಮನವಿ ಮಾಡಿದಾಗ ಅವರಿಗೆ ಅಗೌರವ ತೋರಲಾಗುತ್ತದೆ. ಆದರೆ, ಶತಕೋಟ್ಯಧಿಪತಿ ಗೆಳೆಯರು ಕಾನೂನು ಬದಲಿಸಲು ಅಥವಾ ದೇಶದ ಸಂಪತ್ತನ್ನು ತಮ್ಮದಾಗಿಸಿಕೊಳ್ಳಲು ಪ್ರಯತ್ನಿಸಿದಾಗ ಪ್ರಧಾನಿ ಮೋದಿ ಅವರು ಕೆಂಪು ಹಾಸಿನ ಸ್ವಾಗತ ನೀಡುವರು' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಟೀಕಿಸಿದ್ದಾರೆ.

ಅಣ್ಣಾಮಲೈ ಕ್ಷಮೆಯಾಚನೆ

ಖಾಸಗಿ ಮಾತುಕತೆಯ ವಿಡಿಯೊ ಬಹಿರಂಗಗೊಂಡದ್ದಕ್ಕೆ ಬಿಜೆಪಿ ತಮಿಳುನಾಡು ಘಟಕದ ಮುಖ್ಯಸ್ಥ ಕೆ.ಅಣ್ಣಾಮಲೈ ಅವರು ಕ್ಷಮೆಯಾಚಿಸಿದ್ದಾರೆ.

'ನಮ್ಮ ಕಾರ್ಯಕರ್ತರು ಮಾಡಿದ ಈ ಕೆಲಸಕ್ಕೆ ತಮಿಳುನಾಡು ಬಿಜೆಪಿ ಘಟಕದ ಪರವಾಗಿ ಕ್ಷಮೆಯಾಚಿಸುತ್ತೇನೆ. ಅನ್ನಪೂರ್ಣ ರೆಸ್ಟೋರೆಂಟ್ ಮಾಲೀಕ ಶ್ರೀನಿವಾಸನ್ ಅವರೊಂದಿಗೆ ಮಾತನಾಡಿದ್ದು, ಖಾಸಗಿತನದ ಉಲ್ಲಂಘನೆಗಾಗಿ ವಿಷಾದ ವ್ಯಕ್ತಪಡಿಸಿದ್ದೇನೆ. ಈ ವಿವಾದವನ್ನು ಇಲ್ಲಿಗೆ ಕೊನೆಗೊಳಿಸಬೇಕು ಎಂದು ಎಲ್ಲರನ್ನೂ ಕೇಳಿಕೊಳ್ಳುತ್ತೇನೆ' ಎಂದಿದ್ದಾರೆ.

ಕೇಂದ್ರ ಶಿಕ್ಷಣ ಸಚಿವಾಲಯಕ್ಕೆ ಎನ್‌ಸಿಇಆರ್‌ಟಿ ಶಿಫಾರಸು

12ನೇ ತರಗತಿ ಮೌಲ್ಯಮಾಪನಕ್ಕೆ ಹೊಸ ವಿಧಾನ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಷ್ಟ್ರೀಯ ಶಿಕ್ಷಣ ನೀತಿಗೆ (ಎನ್‌ಇಪಿ) ಅನುಗುಣವಾಗಿ ಶಾಲಾ ಪರೀಕ್ಷಾ ವ್ಯವಸ್ಥೆಯಲ್ಲಿ ಸುಧಾರಣೆ ತರಲು ವಿಭಿನ್ನ ವಿಧಾನಗಳೊಂದಿಗೆ ಹೊಸ ಮೌಲ್ಯಮಾಪನ ವ್ಯವಸ್ಥೆ ಪರಿಚಯಿಸಲು ರಾಷ್ಟ್ರೀಯ ಶೈಕ್ಷಣಿಕ ಸಂಶೋಧನಾ ಮತ್ತು ತರಬೇತಿ ಪರಿಷತ್ತು (ಎನ್‌ಸಿಇಆರ್‌ಟಿ) ಇತ್ತೀಚೆಗೆ ಶಿಫಾರಸು ಮಾಡಿದೆ.

ಅಲ್ಲದೆ ಈ ಶಿಫಾರಸುಗಳನ್ನು ಅನುಷ್ಠಾನಗೊಳಿಸಲು ರಾಜ್ಯ ಸರ್ಕಾರಗಳಿಗೆ ಪತ್ರ ಬರೆಯುವಂತೆ ಒತ್ತಾಯಿಸಿ ಕೇಂದ್ರ ಶಿಕ್ಷಣ ಸಚಿವಾಲಯಕ್ಕೆ ಪತ್ರ ಬರೆದಿದೆ. 9, 10 ಮತ್ತು 11ನೇ ತರಗತಿಗಳಿಗೆ ಬೋರ್ಡ್ ಪರೀಕ್ಷೆಗಳನ್ನು ತೆಗೆಯಬೇಕು ಹಾಗೂ ವರ್ಷದ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ಪಡೆದ ಅಂಕಗಳನ್ನು ಒಳಗೊಂಡಂತೆ 12ನೇ ತರಗತಿಯ ಫಲಿತಾಂಶದ ಮೌಲ್ಯಮಾಪನ ಮಾಡಬೇಕು ಎಂಬುದು ಎನ್‌ಸಿಇಆರ್‌ಟಿಯ ಪ್ರಮುಖ ಶಿಫಾರಸು ಆಗಿದೆ.

ವಿರೋಧ ಪಕ್ಷಗಳು ಅಳ್ವಿಕೆಯಲ್ಲಿರುವ ರಾಜ್ಯಗಳು ಮತ್ತು ಕೇಂದ್ರದ ನಡುವಿನ ಹಗ್ಗ ಜಗ್ಗಾಟದ ನಡುವೆಯೂ ಈ ಸುಧಾರಣೆಗಳನ್ನು ಜಾರಿಗೊಳಿಸಲು ಕೆಲ ರಾಜ್ಯ ಮಂಡಳಿಗಳು ಮುಕ್ತವಾಗಿವೆ. ಆದರೆ ಅವುಗಳಿಗೆ ಅಲ್ಲಿನ ರಾಜ್ಯ ಸರ್ಕಾರಗಳು ಅಧಿಸೂಚನೆ ಹೊರಡಿಸಬೇಕಾದ ಅಗತ್ಯವಿದೆ. ಹೀಗಾಗಿ ಕೇಂದ್ರ ಸರ್ಕಾರವು ರಾಜ್ಯಗಳಿಗೆ ಪತ್ರ ಬರೆದು ಅಧಿಸೂಚನೆ ಹೊರಡಿಸುವಂತೆ ತಿಳಿಸಬೇಕು ಎಂದು ಎನ್‌ಸಿಇಆರ್‌ಟಿ ಪತ್ರದಲ್ಲಿ ಉಲ್ಲೇಖಿಸಿದೆ.

ಎನ್‌ಸಿಇಆರ್‌ಟಿ ಅಡಿಯಲ್ಲಿರುವ 'ಪಿಎಆರ್‌ಎಕೆಎಚ್' (ಕಾರ್ಯಕ್ಷಮತೆಯ ಮೌಲ್ಯಮಾಪನ, ಸಮಗ್ರ ಅಭಿವೃದ್ಧಿಗಾಗಿ ಜ್ಞಾನದ ಪರಾಮರ್ಶೆ ಮತ್ತು ವಿಶ್ಲೇಷಣೆ) ಸಂಸ್ಥೆ 'ಶಿಕ್ಷಣ ಮಂಡಳಿಗಳಲ್ಲಿ ಸಮಾನತೆ ಸ್ಥಾಪಿಸುವ' ಕುರಿತು ಈ ಶಿಫಾರಸುಗಳನ್ನು ಮಾಡಿದೆ.

ಪ್ರಮುಖ ಶಿಫಾರಸುಗಳು

- ಮಂಡಳಿಗಳು ಶೈಕ್ಷಣಿಕ ವರ್ಷವನ್ನು ಎರಡು ಕಾಲಾವಧಿಗಳಲ್ಲಿ ವಿಭಜಿಸಬೇಕು. 9ನೇ ತರಗತಿಯಿಂದ 12ನೇ ತರಗತಿವರೆಗೆ ಹಂತ ಹಂತವಾಗಿ ಅಂಕಗಳನ್ನು ಸರಿಹೊಂದಿಸಿ, ಸಂಕಲನಾತ್ಮಕ ಮೌಲ್ಯಮಾಪನಕ್ಕೆ ಒತ್ತು ನೀಡಬೇಕು
- 9ರಿಂದ 12ನೇ ತರಗತಿವರೆಗೆ ವಿದ್ಯಾರ್ಥಿಗಳು ಪಡೆದಿರುವ ಅಂಕಗಳನ್ನು ಶೇಕಡಾವಾರು ಪ್ರಮಾಣದಲ್ಲಿ ಮೌಲ್ಯ (ವೆಟೇಜ್) ನಿಗದಿಪಡಿಸಬೇಕು
- ಅಂದರೆ, 9ನೇ ತರಗತಿಗೆ ಶೇ 15ರಷ್ಟು, 10ನೇ ತರಗತಿಗೆ ಶೇ 20ರಷ್ಟು, 11ನೇ ತರಗತಿಗೆ ಶೇ 25ರಷ್ಟು ಮತ್ತು 12ನೇ ತರಗತಿಗೆ ಶೇ 40ರಷ್ಟು ಮೌಲ್ಯ ನೀಡುವ ಮೂಲಕ 12ನೇ ತರಗತಿಯ ಒಟ್ಟಾರೆ ಮೌಲ್ಯಮಾಪನ ಮಾಡಬೇಕು
- ದೇಶದಾದ್ಯಂತ ವಿವಿಧ ರಾಜ್ಯ ಮಂಡಳಿಗಳಲ್ಲಿನ ವಿದ್ಯಾರ್ಥಿಗಳಲ್ಲಿಯಷ್ಟೇ ಅಲ್ಲದೇ, ಪ್ರತಿ ಮಂಡಳಿಗಳ ವ್ಯಾಪ್ತಿಯ ವಿದ್ಯಾರ್ಥಿಗಳ ಕಾರ್ಯಕ್ಷಮತೆಯಲ್ಲಿ ವ್ಯತ್ಯಾಸ ಇದೆ ಎಂಬುದನ್ನು ವರದಿ ಉಲ್ಲೇಖಿಸಿದೆ. ದೇಶದಲ್ಲಿ ಸಿಬಿಎಸ್‌ಇ, ಐಸಿಎಸ್‌ಇ ಸೇರಿ ಮೂರು ರಾಷ್ಟ್ರಮಟ್ಟದ ಮಂಡಳಿಗಳು ಒಳಗೊಂಡಂತೆ ಒಟ್ಟು 59 ಶಾಲಾ ಮಂಡಳಿಗಳು ಕಾರ್ಯ ನಿರ್ವಹಿಸುತ್ತಿವೆ.

ತಿರುವನಂತಪುರ: ಬಯಲು ಬಂದೀಖಾನೆಯಲ್ಲಿ ಸುಧಾರಣೆಯ ಕಾರ್ಯ

ಕೊಲೆ ಅಪರಾಧಿಗಳೀಗ ಕೃಷಿಕರು

ತಿರುವನಂತಪುರ(ಪಿಟಿಐ): ತಿರುವನಂತಪುರದಿಂದ 50 ಕಿ.ಮೀ. ದೂರದ ನೆಟ್ಟುಕಾಲತ್ತೇರಿಯಲ್ಲಿರುವ ಬಯಲು ಬಂದೀಖಾನೆ ಮತ್ತು ಸುಧಾರಣಾ ಮಂದಿರದ ಪುರುಷ ಕೈದಿಗಳಿಗೆ ಈಗ ಬಿಡುವಿಲ್ಲದ ದುಡಿಮೆ. ಓಣಂ ಸಮೀಪಿಸುತ್ತಿರುವ ಕಾರಣ, ಅವರಿಗೆ ಕೈತುಂಬಾ ಕೆಲಸ, ಗಳಿಕೆಯ ಅವಕಾಶ...



ಶಿಕ್ಷೆಯ ಅವಧಿ ಮುಗಿದ ಮೇಲೆ ಜೈಲಿನಿಂದ ಬಿಡುಗಡೆಗೊಂಡ ನಂತರ, ಸ್ವಂತ ಉದ್ಯೋಗ ಕಂಡುಕೊಳ್ಳಲು ಅನುವಾಗುವಂತೆ ಇಲ್ಲಿನ ಕೈದಿಗಳಿಗೆ ವಿವಿಧ ಕೌಶಲಗಳನ್ನು ಕಲಿಸಲಾಗುತ್ತಿದೆ. ಬಿಡುಗಡೆಗೊಂಡ ಕೈದಿಗಳ ಪುನರ್ವಸತಿಗಾಗಿ ಕೈಗೊಂಡಿರುವ ಈ ಪ್ರಾಯೋಗಿಕ ಕ್ರಮಗಳತ್ತಲೇ ಈಗ ಎಲ್ಲ ದೃಷ್ಟಿ ನೆಟ್ಟಿದೆ.

ನೆಟ್ಟುಕಾಲತ್ತೇರಿಯಲ್ಲಿನ 472 ಎಕರೆ ಪ್ರದೇಶವನ್ನು ವಿವಿಧ ತರಬೇತಿ ನೀಡುವುದಕ್ಕೆ ಅಭಿವೃದ್ಧಿಪಡಿಸಲಾಗಿದೆ. ಕೈದಿಗಳು ರಬ್ಬರ್ ಕೃಷಿ, ಹೈನುಗಾರಿಕೆ, ಜೇನು ಸಾಕಣೆ ಸೇರಿದಂತೆ ವಿವಿಧ ಕಾರ್ಯಗಳಲ್ಲಿ ತೊಡಗಿದ್ದಾರೆ.

ತಿಳಿದೊ ಇಲ್ಲವೇ ಆಕಸ್ಮಿಕವಾಗಿಯೋ ವ್ಯಕ್ತಿಯನ್ನು ಅಥವಾ ಹಲವರನ್ನು ಕೊಲೆ ಮಾಡಿದ ಪ್ರಕರಣಗಳಲ್ಲಿ ಶಿಕ್ಷೆಗೆ ಗುರಿಯಾದವರು ಈಗ ಕೃಷಿಕರಾಗಿದ್ದು, ಶ್ರಮವಹಿಸಿ ದುಡಿಯುತ್ತಿದ್ದಾರೆ. 20 ವರ್ಷಗಳಿಗಿಂತ ಹೆಚ್ಚು ಕಾಲದಿಂದ ಶಿಕ್ಷೆ ಅನುಭವಿಸುತ್ತಿರುವವರೂ ಇದ್ದಾರೆ.

ಪರಿಶ್ರಮದಿಂದ ಕೃಷಿ ಉತ್ಪನ್ನಗಳು ಕೈಗೆ ಬರುತ್ತಿರುವ ಕಾರಣ ಇಲ್ಲಿನ ಕೈದಿಗಳಲ್ಲಿ ಸಂಭ್ರಮ ಮನೆ ಮಾಡಿದೆ.

'ಇದೊಂದು ರೀತಿ ಕೃಷಿ ಚಿಕಿತ್ಸೆ. ಸಸ್ಯವೊಂದನ್ನು ಬೆಳೆಸುವುದು. ಅದರಲ್ಲಿ ಹೂವರಳಿ, ನಂತರ ಫಲ ಬಿಟ್ಟಾಗ ಕೃಷಿ ಮಾಡಿದ ವ್ಯಕ್ತಿಗೆ ಸಿಗುವ ಆನಂದ, ಅವರಲ್ಲಿ ಕಂಡುಬರುವ ಸಕಾರಾತ್ಮಕ ಬದಲಾವಣೆ ಅನನ್ಯ' ಎಂದು ಬಯಲು ಬಂದೀಖಾನೆ ಪ್ರಭಾರ ಸೂಪರಿಂಟೆಂಡೆಂಟ್ ರಾಜೇಶ್ ಕುಮಾರ್ ಹೇಳುತ್ತಾರೆ.

'ಓಣಂ ಹಬ್ಬದ ವೇಳೆಯ ಮಾರುಕಟ್ಟೆ ದೃಷ್ಟಿಯಲ್ಲಿಟ್ಟುಕೊಂಡೇ ಇಲ್ಲಿ ನಾವು ವಿವಿಧ ತರಕಾರಿಗಳನ್ನು ಬೆಳೆಯುತ್ತಿದ್ದೇವೆ. ಹಬ್ಬ ಆರಂಭಕ್ಕೂ ಎರಡು ದಿನಗಳ ಮುಂಚೆ ಇವುಗಳನ್ನು ಪೂಜಾಪುರಂನಲ್ಲಿರುವ ನಮ್ಮ ಕೇಂದ್ರ ಕಚೇರಿ ಬಳಿಯ ಮಾರುಕಟ್ಟೆಗೆ ಕಳಿಸುತ್ತೇವೆ' ಎಂದು ಬಯಲು ಬಂದೀಖಾನೆಯ ಕೃಷಿ ಅಧಿಕಾರಿ ಅಜಿತ್ ಸಿಂಗ್ ಹೇಳುತ್ತಾರೆ.

ಭೂಮಿಕಾ ಓದಿರಿ

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	18000-28500
ಹೊಸತು	28500-40500
ಹಳತು	40500-48000
ಚಿತ್ರದುರ್ಗ	
ಅಪಿ	47100-47500
ಬೆಟ್ಟೆ	33100-33500
ಕೆಂಪುಗೋಟು	27600-28000
ರಾಶಿ	46600-47000
ಕಾರ್ಕಳ	
ಹೊಸತು	25000-40500
ಹಳತು	30000-48000
ಕುಮಟ	
ಚಿಪ್ಪು	21569-26019
ಕೋಕ	6099-20099
ಫ್ಯಾಕ್ಟರಿ	8019-17629
ಹಳೆಚಾಲಿ	35569-38499
ಹೊಸಚಾಲಿ	30189-34899
ಪುತ್ತೂರು	
ಹೊಸತು	36000-40500
ಶಿವಮೊಗ್ಗ	
ಬೆಟ್ಟೆ	43800-55200
ಗೊರಬಲು	17011-32369
ಹೊಸತು	42509-45099
ರಾಶಿ	32999-48659
ಸರಕು	60869-80070
ಸಿದ್ದಾಪುರ	
ಬಿಳಿಗೋಟು	24789-28009
ಚಾಲಿ	32029-35009
ಕೋಕ	23909-25899
ಕೆಂಪುಗೋಟು	20389-22909
ರಾಶಿ	41099-45699
ತಟ್ಟಿಬೆಟ್ಟೆ	43699-43699
ಶಿರಸಿ	
ಬೆಟ್ಟೆ	23809-34799
ಬಿಳಿಗೋಟು	19111-29699
ಚಾಲಿ	31099-36428
ರಾಶಿ	38689-45891
ಯಲ್ಲಾಪುರ	
ಬಿಳಿಗೋಟು	16899-28900
ಚಾಲಿ	29400-35899
ಕೋಕ	4400-17699
ಕೆಂಪುಗೋಟು	16309-25300
ರಾಶಿ	40009-54689
ತಟ್ಟಿಬೆಟ್ಟೆ	26899-31779


ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹10000-15000
ತಿಪಟೂರು	₹14500-14502
ತುರುವೇಕೆರೆ	₹14000-14000

ಈರುಳ್ಳಿ (ಕ್ವಿಂಟಲ್‌ಗೆ)

ದಪ್ಪ	₹3000-3600
ಮಧ್ಯಮ	₹2000-3000
ಸಣ್ಣ	₹1000-2000

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ


ಹಿಂದಿನ ಅಂತ್ಯ	25,388
ಇಂದಿನ ಅಂತ್ಯ	25,356
▼	32
ದಿನದ ಕನಿಷ್ಠ	25,292

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್‌-4	₹226
ಆರ್‌ಎಸ್‌ಎಸ್‌-5	₹221
ಗುಡ್ ಲಾಟ್ (ಪ್ರತಿ ಕೆ.ಜಿಗೆ)	₹206

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹545
12 ಕ್ಕೆ	₹75
ಮೈಸೂರು	
100ಕ್ಕೆ	₹550

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ)	₹391-562
ದ್ವಿತಳಿ (ಬಿ.ವಿ)	₹346-717

ಮುದ್ರೆಮನೆ ಕಾಫಿ (50 ಕೆಜಿಗೆ)



ಎಪಿ	₹17250
ಎಸಿ	₹10800
ಆರ್‌ಪಿ	₹19000
ಆರ್‌ಸಿ	₹10270

ಕ್ರಮಿಸುವ ಹಾದಿ ಇನ್ನೂ ದೂರ: ಗವರ್ನರ್ ಶಕ್ತಿಕಾಂತ ದಾಸ್ ಅಭಿಮತ


ರೆಪೊ ದರ ಕಡಿತ ಅನುಮಾನ

ಸಿಂಗಪುರ (ಪಿಟಿಐ): 'ಚಿಲ್ಲರೆ ಹಣದುಬ್ಬರವು ಸತತ ಎರಡನೇ ತಿಂಗಳು ಇಳಿಕೆಯಾಗಿದ್ದರೂ ನಾವು ಕ್ರಮಿಸುವ ಹಾದಿ ಇನ್ನೂ ದೂರವಿದೆ' ಎಂದು ಭಾರತೀಯ ರಿಸರ್ವ್ ಬ್ಯಾಂಕ್‌ನ ಗವರ್ನರ್ ಶಕ್ತಿಕಾಂತ ದಾಸ್ ಹೇಳಿದ್ದಾರೆ.

ಆ ಮೂಲಕ ಮುಂದಿನ ತಿಂಗಳು 7ರಿಂದ 9ರ ವರೆಗೆ ನಡೆಯಲಿರುವ ಆರ್‌ಬಿಐ ಹಣಕಾಸು ನೀತಿ ಸಮಿತಿ ಸಭೆಯಲ್ಲಿ ರೆಪೊ ದರ ಕಡಿತಗೊಳಿಸುವ ಸಾಧ್ಯತೆ ಕಡಿಮೆ ಎಂಬ ಬಗ್ಗೆ ಸುಳಿವು ನೀಡಿದ್ದಾರೆ.

ಜುಲೈ ಮತ್ತು ಆಗಸ್ಟ್‌ನಲ್ಲಿ ಹಣದುಬ್ಬರವು ಆರ್‌ಬಿಐ ನಿಗದಿಪಡಿಸಿರುವ ಶೇ 4ರ ಮಿತಿಯೊಳಗೆ ದಾಖಲಾಗಿದೆ. ಹಾಗಾಗಿ, ಆರ್‌ಬಿಐ ರೆಪೊ ದರ ಕಡಿತಗೊಳಿಸಲಿದೆ ಎಂಬ ಆಸೆ ಗೃಹ ಹಾಗೂ ವಾಹನ ಸಾಲಗಾರರಲ್ಲಿ ಚಿಗುರೊಡೆದಿತ್ತು.

ಬ್ರೆಟ್ಟನ್ ವುಡ್ಸ್ ಸಮಿತಿಯಿಂದ ಶುಕ್ರವಾರ 'ಹಣಕಾಸು ವೇದಿಕೆಯ ಭವಿಷ್ಯ' ಕುರಿತು ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ದಾಸ್ ಅವರು, '2022ರ ಏಪ್ರಿಲ್‌ನಲ್ಲಿ ಚಿಲ್ಲರೆ ಹಣದುಬ್ಬರವು ಶೇ 7.8ರಷ್ಟು ಗರಿಷ್ಠ ಮಟ್ಟಕ್ಕೆ ದಾಖಲಾಗಿತ್ತು. ಸದ್ಯ ನಿಗದಿಪಡಿಸಿದ ಗುರಿಯೊಳಗೆ ದಾಖಲಾಗಿದೆ. ಆದರೆ, ನಾವು ಸಾಗುವ ಹಾದಿ ದೂರವಿರುವುದರಿಂದ ಬೇರೆ ಮಾರ್ಗದತ್ತ ನೋಡಲು ಶಕ್ತವಾಗಿಲ್ಲ' ಎಂದರು.



'ಜಾಗತಿಕ ಆರ್ಥಿಕ ಚಟುವಟಿಕೆಗಳು ಮತ್ತು ವ್ಯಾಪಾರ ಇಳಿಮುಖವಾಗಿದೆ. ಹಣದುಬ್ಬರದ ಕೊನೆಯ ಮೈಲಿಯು ಸಾಕಷ್ಟು ಸವಾಲುಗಳು ಒಡ್ಡಿದೆ. ಇದರಿಂದ ಆರ್ಥಿಕ ಸ್ಥಿರತೆ ಕಾಯ್ದುಕೊಳ್ಳಲು ಕಷ್ಟಕರವಾಗಿದೆ' ಎಂದು ಹೇಳಿದರು.

ಹಣದುಬ್ಬರವನ್ನು ಸ್ಥಿರವಾಗಿ ನಿಯಂತ್ರಿಸಬೇಕು. ಹಾಗಾಗಿ, ಅದಕ್ಕೂ ಮೊದಲೇ ಹಣಕಾಸು ನೀತಿಯನ್ನು ಸಡಿಲಗೊಳಿಸುವಿಕೆಗೆ ಜಾಗತಿಕ ಮಟ್ಟದಲ್ಲಿ ಕೇಂದ್ರೀಯ ಬ್ಯಾಂಕ್‌ಗಳು ಹಿಂದಡಿ ಇಟ್ಟಿವೆ ಎಂದು ದಾಸ್ ತಿಳಿಸಿದರು.

ಭಾರತೀಯ ರಿಸರ್ವ್ ಬ್ಯಾಂಕ್ ಕಳೆದ 18 ತಿಂಗಳಿನಿಂದಲೂ ರೆಪೊ ದರದಲ್ಲಿ ಯಥಾಸ್ಥಿತಿ ಕಾಯ್ದುಕೊಂಡಿದೆ.

ಚಿನ್ನದ ದರ ₹1,200, ಬೆಳ್ಳಿ ₹2 ಸಾವಿರ ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಶುಕ್ರವಾರ ಚಿನ್ನ ಮತ್ತು ಬೆಳ್ಳಿ ಧಾರಣೆಯು ಏರಿಕೆಯಾಗಿದೆ.

10 ಗ್ರಾಂ ಚಿನ್ನದ ದರವು ₹1,200 ಏರಿಕೆಯಾಗಿ ₹75,550ಕ್ಕೆ ಮಾರಾಟವಾಗಿದೆ. ಇದು ಎರಡು ತಿಂಗಳ ಗರಿಷ್ಠ ದರವಾಗಿದೆ.

ಬೆಳ್ಳಿ ಧಾರಣೆ ಕೆ.ಜಿಗೆ ₹2 ಸಾವಿರ ಹೆಚ್ಚಳವಾಗಿ ₹89 ಸಾವಿರಕ್ಕೆ ಮುಟ್ಟಿದೆ. ಕಳೆದ ನಾಲ್ಕು ದಿನದ ವಹಿವಾಟಿನಲ್ಲಿ ಬೆಳ್ಳಿ ದರದಲ್ಲಿ ₹5,200 ಏರಿಕೆಯಾಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಮುಂದಿನ ವಾರ ಅಮೆರಿಕ ಕೇಂದ್ರೀಯ ಬ್ಯಾಂಕ್ ಆದ ಫೆಡರಲ್ ರಿಸರ್ವ್ ಬ್ಯಾಂಕ್ ಬಡ್ಡಿದರ ಕಡಿತಗೊಳಿಸುವ ನಿರೀಕ್ಷೆಯಿದೆ. ಡಾಲರ್ ಮೌಲ್ಯ ಇಳಿಕೆಯಾಗಿದೆ. ಹಬ್ಬದ ಋತುವಿನ ಅಂಗವಾಗಿ ಗ್ರಾಹಕರಿಂದ ಖರೀದಿ ಹೆಚ್ಚಿದೆ. ಹಾಗಾಗಿ, ಹಳದಿ ಲೋಹದ ಬೆಲೆ ಏರಿಕೆಯಾಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

₹2,610 ಕೋಟಿ ಮುಟ್ಟುಗೋಲು; ಹಿಂಡನ್‌ಬರ್ಗ್ ರಿಸರ್ಚ್ ಹೇಳಿಕೆ

ಅದಾನಿಗೆ ಸೇರಿದ ಸ್ವಿಸ್ ಖಾತೆ ಜಪ್ತಿ



ನವದೆಹಲಿ (ಪಿಟಿಐ): ಹಣ ಅಕ್ರಮ ವರ್ಗಾವಣೆ ಆರೋಪದ ಮೇರೆಗೆ ಸ್ವಿಟ್ಜರ್ಲೆಂಡ್ ಅಧಿಕಾರಿಗಳು, ಸ್ವಿಸ್ ಬ್ಯಾಂಕ್‌ನಲ್ಲಿ ಹಲವು ಖಾತೆ ಹೊಂದಿದ್ದ ತೈವಾನ್ ನಿವಾಸಿಯನ್ನು ಬಂಧಿಸಿದ್ದು, ಆತನಿಗೆ ಸೇರಿದ ₹2,610 ಕೋಟಿಯನ್ನು ಮುಟ್ಟುಗೋಲು ಹಾಕಿಕೊಂಡಿದ್ದಾರೆ.

ಚಾಂಗ್ ಚುಂಗ್-ಲಿಂಗ್ ಬಂಧಿತ. ಈತ ಅದಾನಿ ಸಮೂಹದ ಜೊತೆಗೆ ನಿಕಟ ಸಂಪರ್ಕ ಹೊಂದಿದ್ದಾನೆ ಎಂದು ಶಂಕಿಸಲಾಗಿದೆ. ಅದಾನಿ ಸಮೂಹದ ವಿರುದ್ಧ 2023ರ ಜನವರಿಯಲ್ಲಿ ಅಮೆರಿಕದ ಶಾರ್ಟ್ ಸೆಲ್ಲರ್ ಕಂಪನಿ ಹಿಂಡನ್‌ಬರ್ಗ್ ರಿಸರ್ಚ್ ಬಿಡುಗಡೆಗೊಳಿಸಿದ ವರದಿಯಲ್ಲಿ ಈತನ ಹೆಸರು ಪ್ರಸ್ತಾಪವಾಗಿತ್ತು.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಹಿಂಡನ್‌ಬರ್ಗ್ ರಿಸರ್ಚ್ ತನ್ನ 'ಎಕ್ಸ್' ಖಾತೆಯಲ್ಲಿ ಸ್ವಿಸ್ ಮಾಧ್ಯಮ ವೆಬ್‌ಸೈಟ್ ಗೋಥಮ್ ಸಿಟಿ ಪ್ರಕಟಿಸಿರುವ ವರದಿ ಉಲ್ಲೇಖಿಸಿ ಅದಾನಿ ಸಮೂಹದ ವಿರುದ್ಧ ಹೊಸ ವರದಿ ಪ್ರಕಟಿಸಿದೆ.

2021ರಿಂದಲೂ ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಉದ್ಯಮಿ ಗೌತಮ್ ಅದಾನಿ ವಿರುದ್ಧ ಸ್ವಿಟ್ಜರ್ಲೆಂಡ್ ಅಧಿಕಾರಿಗಳು ತನಿಖೆ ನಡೆಸುತ್ತಿದ್ದಾರೆ. ಇದರ ಭಾಗವಾಗಿ ಸ್ವಿಸ್ ಬ್ಯಾಂಕ್‌ನಲ್ಲಿ ಅದಾನಿ ಅವರ ಹಲವು ಖಾತೆಗಳಲ್ಲಿದ್ದ ಈ ಹಣವನ್ನು ವಶಕ್ಕೆ ಪಡೆದಿದ್ದಾರೆ ಎಂದು ಹೇಳಿದೆ.

ಚಾಂಗ್ ಚುಂಗ್-ಲಿಂಗ್, ಅದಾನಿ ಸಮೂಹಕ್ಕೆ ಸೇರಿದ ಮಾರಿಷಸ್ ಮತ್ತು ಬರ್ಮುಡಾ ಫಂಡ್‌ಗಳಲ್ಲಿ ಮಾಡಿರುವ ಕಾನೂನುಬಾಹಿರ ಹೂಡಿಕೆ ಬಗ್ಗೆ ಅಲ್ಲಿನ ಅಧಿಕಾರಿಗಳು ತನಿಖೆ ನಡೆಸುತ್ತಿದ್ದಾರೆ ಎಂದು ತಿಳಿಸಿದೆ.

ತನಿಖೆಗೆ ಕಾಂಗ್ರೆಸ್ ಒತ್ತಾಯ: ಅದಾನಿ ಸಮೂಹದ ವಿರುದ್ಧ ಕೇಳಿಬಂದಿರುವ ಆರೋಪದ ಬಗ್ಗೆ ಸುಪ್ರೀಂ ಕೋರ್ಟ್ ಮೇಲ್ವಿಚಾರಣೆಯಲ್ಲಿ ತನಿಖೆ ನಡೆಸಬೇಕು. ಈ ಪ್ರಕರಣದ ವಿಚಾರಣೆಯನ್ನು ಸಂಸತ್‌ನ ಜಂಟಿ ಸದನ ಸಮಿತಿಗೂ ಒಪ್ಪಿಸಬೇಕು ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಹಾಗೂ ಮಾಧ್ಯಮ ವಿಭಾಗದ ಮುಖ್ಯಸ್ಥ ಜೈರಾಮ್ ರಮೇಶ್ ಆಗ್ರಹಿಸಿದ್ದಾರೆ.


ಆರೋಪ ನಿರಾಕರಿಸಿದ ಅದಾನಿ ಸಮೂಹ

ಹಿಂಡನ್‌ಬರ್ಗ್ ರಿಸರ್ಚ್ ಮಾಡಿರುವ ಆರೋಪ ನಿರಾಧಾರವಾದುದು. ಕಂಪನಿ ವಿರುದ್ಧ ಸ್ವಿಸ್ ನ್ಯಾಯಾಲಯದಲ್ಲಿ ಯಾವುದೇ ವಿಚಾರಣೆ ನಡೆಯುತ್ತಿಲ್ಲ. ಕಂಪನಿಗೆ ಸೇರಿದ ಯಾವುದೇ ಬ್ಯಾಂಕ್ ಖಾತೆಗಳನ್ನು ಅಲ್ಲಿನ ಅಧಿಕಾರಿಗಳು ಜಪ್ತಿ ಮಾಡಿಲ್ಲ ಎಂದು ಅದಾನಿ ಸಮೂಹ ಪ್ರತಿಕ್ರಿಯಿಸಿದೆ.

ಗೌತಮ್ ಅದಾನಿ ಜೊತೆಗೆ ನಿಕಟ ಸಂಪರ್ಕ ಹೊಂದಿರುವ ವ್ಯಕ್ತಿಗೆ ಸೇರಿದ ಐದು ಬ್ಯಾಂಕ್ ಖಾತೆಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಈ ಬಗ್ಗೆ ಫೆಡರಲ್ ಕ್ರಿಮಿನಲ್ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿದೆ ಎಂದು ಗೋಥಮ್ ಸಿಟಿ ವರದಿ ಮಾಡಿದೆ.

'ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಲಯವು ಸಮೂಹದ ಹೆಸರನ್ನು ಉಲ್ಲೇಖಿಸಿಲ್ಲ. ಈ ಬಗ್ಗೆ ಅಧಿಕಾರಿಗಳು ಸ್ಪಷ್ಟೀಕರಣ ಅಥವಾ ಮಾಹಿತಿ ಕೇಳಿಲ್ಲ. ನಮ್ಮ ಸಾಗರೋತ್ತರ ವ್ಯವಹಾರವು ಪಾರದರ್ಶಕವಾಗಿದೆ. ಅಲ್ಲಿನ ಕಾನೂನುಗಳನ್ನು ಪಾಲಿಸಲಾಗುತ್ತಿದೆ' ಎಂದು ಅದಾನಿ ಸಮೂಹ ತಿಳಿಸಿದೆ.

'ಕೈ' ಆರೋಪ ನಿರಾಧಾರ: ಬುಚ್ ದಂಪತಿ



ನವದೆಹಲಿ (ಪಿಟಿಐ): 'ಕಾಂಗ್ರೆಸ್ ಪಕ್ಷವು ತಮ್ಮ ವಿರುದ್ಧ ಮಾಡಿರುವ ಆರೋಪಗಳು ದುರುದ್ದೇಶಪೂರಿತ ಹಾಗೂ ಮಾನಹಾನಿಕರವಾಗಿದ್ದು, ಸತ್ಯಕ್ಕೆ ದೂರವಾಗಿವೆ' ಎಂದು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ ಅಧ್ಯಕ್ಷೆ (ಸೆಬಿ) ಮಾಧವಿ ಪುರಿ ಬುಚ್ ಹಾಗೂ ಅವರ ಪತಿ ಧವಳ್ ಬುಚ್ ಅವರು, ಶುಕ್ರವಾರ ಜಂಟಿ ಹೇಳಿಕೆಯಲ್ಲಿ ತಿಳಿಸಿದ್ದಾರೆ.

'ನಾವು ಸಲ್ಲಿಸಿರುವ ಆದಾಯ ತೆರಿಗೆ ರಿಟರ್ನ್ಸ್‌ನಲ್ಲಿನ ಮಾಹಿತಿ ಆಧರಿಸಿ ಕಾಂಗ್ರೆಸ್ ಆರೋಪ ಮಾಡಿದೆ. ರಿಟರ್ನ್ಸ್ ಸಲ್ಲಿಕೆಯಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಲಾಗಿದೆ. ಈ ಮಾಹಿತಿಯನ್ನು ಬಹಿರಂಗಪಡಿಸುವ ಮೂಲಕ ಕಾಂಗ್ರೆಸ್ ನಮ್ಮ ಖಾಸಗಿತನದ ಹಕ್ಕಿಗೆ ಧಕ್ಕೆ ತಂದಿದೆ. ಅಲ್ಲದೆ, ಇದು ಆದಾಯ ತೆರಿಗೆ ಕಾಯ್ದೆಯ ಉಲ್ಲಂಘನೆಯೂ ಆಗಿದೆ' ಎಂದು ಹೇಳಿದ್ದಾರೆ. 'ಸೆಬಿಗೆ ಸೇರ್ಪಡೆಯಾದ ಬಳಿಕ ಅಗೋರಾ ಅಡ್ವೈಸರಿ, ಅಗೋರಾ ಪಾರ್ಟ್‌ನರ್ಸ್, ಮಹೀಂದ್ರ ಸಮೂಹ, ಪಿಡಿಲೈಟ್, ಡಾ.ರೆಡ್ಡೀಸ್, ಅಲ್ವಾರೆಜ್, ಮಾರ್ಷಲ್, ವಿಸು ಲೀಸಿಂಗ್ ಅಥವಾ ಐಸಿಐಸಿಐ ಬ್ಯಾಂಕ್ ನೊಂದಿಗೆ ವ್ಯವಹಾರ ನಡೆಸಿಲ್ಲ' ಎಂದು ಹೇಳಿದ್ದಾರೆ.

'ಕಾಂಗ್ರೆಸ್ ಆರೋಪವು ಸುಳ್ಳಿನ ಕಂತೆಯಾಗಿದೆ. ಸೆಬಿಯ ನಿಯಮಾವಳಿಗಳು ಮತ್ತು ಮಾರ್ಗಸೂಚಿಗಳನ್ನು ಪಾಲಿಸಲಾಗಿದೆ' ಎಂದು ಮಾಧವಿ ತಿಳಿಸಿದ್ದಾರೆ.

ಕಾಂಗ್ರೆಸ್ ಇತ್ತೀಚೆಗೆ ಬುಚ್ ದಂಪತಿ ವಿರುದ್ಧ ಸರಣಿ ಆರೋಪ ಮಾಡಿತ್ತು. ಮಾಧವಿ ಅವರು ಅಗೋರಾ ಅಡ್ವೈಸರಿ ಪ್ರೈವೆಟ್ ಲಿಮಿಟೆಡ್ ಹೆಸರಿನ ಕನ್ಸಲ್ಟೆನ್ಸಿ ಸರ್ವಿಸ್ ಸಂಸ್ಥೆ ಹೊಂದಿದ್ದಾರೆ. ಇದರಲ್ಲಿ ಶೇ 99ರಷ್ಟು ಷೇರು ಹೊಂದಿದ್ದಾರೆ. ಈ ಸಂಸ್ಥೆ ಮೂಲಕ ಮಹೀಂದ್ರ ಆ್ಯಂಡ್ ಮಹೀಂದ್ರ ಸಮೂಹಕ್ಕೆ ಸೇವೆ ನೀಡಿದ್ದಾರೆ. ಅವರ ಪತಿ ಧವಳ್ ಬುಚ್ ಅವರು, ಇದೇ ಕಂಪನಿಯಿಂದ ₹4.78 ಕೋಟಿ ಆದಾಯ ಗಳಿಸಿದ್ದಾರೆ ಎಂದು ಆರೋಪಿಸಿತ್ತು.

ವಿನಿಮಯ ದರ

$ ಡಾಲರ್	83.92
£ ಪೌಂಡ್	110.23
€ ಯುರೊ	93.09
¥ ಯೆನ್ (100ಕ್ಕೆ)	60

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1515 (1530)
ಸೋಯಾ (ರಿಫೈನ್ಡ್)	₹1045 (1020)
ಸೂರ್ಯಕಾಂತಿ (ರಿಫೈನ್ಡ್)	₹1040 (1030)
ಪಾಮೋಲಿನ್	₹1040 (1025)

ಮುಂಬೈ ಧಾರಣೆ (ಶೇಂಗಾ)

13-09-2024

ಜಾವಾ 70/80(ಹೊಸ)	11500-11600
ಜಾವಾ 80/90(ಹೊಸ)	10900-11000
ದಪ್ಪ ಮಧ್ಯಪ್ರದೇಶ(ಹೊಸ)	9300-9400
ದಪ್ಪ ಗುಜರಾತ್(ಹೊಸ)	10100-10200

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1525 (1540)
ಒಂದು ವಾರದ ಡೆಲಿವರಿ	1520 (1535)
ಪಾಮ್ ವಾರದ ಡೆಲಿವರಿ	1038 (1023)
ಸೂರ್ಯಕಾಂತಿ ಎಣ್ಣೆ ಕಚ್ಚಾ	990 (965)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಚಿನ್ನ 10ಗ್ರಾಂ	₹72,900 (71,900)
ಬೆಳ್ಳಿ ಕೆ.ಜಿ	₹87,000 (83,900)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಸುದ್ದಿ 2 ನಿಮಿಷ

ಆಲಂಕಾರಿಕ ಮೀನುಗಾರಿಕೆ ಕುರಿತ ಆ್ಯಪ್ ಬಿಡುಗಡೆ

ನವದೆಹಲಿ (ಪಿಟಿಐ): ದೇಶದಲ್ಲಿ ಆಲಂಕಾರಿಕ ಮೀನುಗಾರಿಕೆಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಭಾರತೀಯ ಕೃಷಿ ಅನುಸಂಧಾನ ಪರಿಷತ್‌ನ ಅಧೀನದಲ್ಲಿ ಬರುವ ಕೇಂದ್ರೀಯ ಸಿಹಿನೀರು ಜಲಕೃಷಿ ಸಂಸ್ಥೆಯು 'ರಂಗೀನ್ ಮಛ್ಲಿ' ಹೆಸರಿನ ಮೊಬೈಲ್ ಆ್ಯಪ್ ಅನ್ನು ಬಿಡುಗಡೆಗೊಳಿಸಿದೆ.

ಪ್ರಧಾನ ಮಂತ್ರಿ ಮತ್ಸ್ಯ ಸಂಪದ ಯೋಜನೆಯಡಿ (ಪಿಎಂಎಂಎಸ್‌ವೈ) ಈ ಆ್ಯಪ್ ಅನ್ನು ಅಭಿವೃದ್ಧಿಪಡಿಸಲಾಗಿದೆ.



ಈ ಆ್ಯಪ್‌ನಲ್ಲಿ ಎಂಟು ಭಾಷೆಗಳಲ್ಲಿ ಮಾಹಿತಿ ದೊರೆಯಲಿದೆ.

ಆಲಂಕಾರಿಕ ಮೀನು ಕೃಷಿಕರು ಮತ್ತು ಅಕ್ವೇರಿಯಂ ಮಾಲೀಕರಿಗೆ ಮೀನು ಸಾಕಾಣಿಕೆ ಬಗ್ಗೆ ಮಾಹಿತಿ ಒದಗಿಸಲಿದೆ. ಗೂಗಲ್ ಪ್ಲೇ ಸ್ಟೋರ್ ಮೂಲಕ ಇದನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.

ಆಲಂಕಾರಿಕ ಮೀನುಗಳ ಸಂರಕ್ಷಣೆ, ತಳಿ ವೈವಿಧ್ಯತೆ, ಅಭಿವೃದ್ಧಿ, ನಿರ್ವಹಣೆ, ಮೀನುಗಳ ಆಹಾರ ಸೇರಿದಂತೆ ಸಮಗ್ರ ಮಾಹಿತಿ ದೊರೆಯಲಿದೆ. ಅಲ್ಲದೆ, ಹತ್ತಿರದಲ್ಲಿರುವ ಅಕ್ವೇರಿಯಂ ಅಂಗಡಿಗಳ ಬಗ್ಗೆ ಮಾಹಿತಿ ಇದೆ. ಇದರಿಂದ ಸ್ಥಳೀಯ ವ್ಯಾಪಾರಕ್ಕೆ ಉತ್ತೇಜನ ಸಿಗಲಿದೆ ಎಂದು ಕೇಂದ್ರ ಮೀನುಗಾರಿಕೆ, ಪಶು ಸಂಗೋಪನೆ ಮತ್ತು ಹೈನುಗಾರಿಕೆ ಸಚಿವಾಲಯ ತಿಳಿಸಿದೆ.

ಈರುಳ್ಳಿ : ಕನಿಷ್ಠ ರಫ್ತು ದರ ರದ್ದು

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಈರುಳ್ಳಿ ರಫ್ತಿಗೆ ನಿಗದಿ ಪಡಿಸಿದ್ದ ಕನಿಷ್ಠ ರಫ್ತು ದರವನ್ನು (ಎಂಇಪಿ) ರದ್ದುಪಡಿಸಿದೆ. ಶುಕ್ರವಾರದಿಂದಲೇ ಈ ಆದೇಶ ಜಾರಿಗೆ ಬಂದಿದೆ.

ಕನಿಷ್ಠ ರಫ್ತು ದರವನ್ನು ಪ್ರತಿ ಟನ್‌ಗೆ ₹46,154ಕ್ಕೆ (550 ಡಾಲರ್) ನಿಗದಿಪಡಿಸಲಾಗಿತ್ತು. ಇದರಿಂದ ರೈತರು ಈ ದರಕ್ಕಿಂತ ಕಡಿಮೆ ಬೆಲೆಯಲ್ಲಿ ಜಾಗತಿಕ ಮಾರುಕಟ್ಟೆಯಲ್ಲಿ ಈರುಳ್ಳಿ ಮಾರಾಟಕ್ಕೆ ಅಡ್ಡಿಯಾಗಿತ್ತು. ಈರುಳ್ಳಿ ರಫ್ತಿಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ ಎಂದು ವಿದೇಶಿ ವ್ಯಾಪಾರದ ಮಹಾ ನಿರ್ದೇಶನಾಲಯ (ಡಿಜಿಎಫ್‌ಟಿ) ತಿಳಿಸಿದೆ.

ಬಾಸುಮತಿ ಅಕ್ಕಿ: ಬಾಸುಮತಿ ಅಕ್ಕಿ ರಫ್ತಿಗೆ ನಿಗದಿಪಡಿಸಿದ್ದ ಕನಿಷ್ಠ ದರವನ್ನೂ ಸರ್ಕಾರ ರದ್ದುಪಡಿಸಿದೆ. ಪ್ರತಿ ಟನ್‌ಗೆ ₹79,678 ದರ ನಿಗದಿಪಡಿಸಲಾಗಿತ್ತು. ಇಡೀ ದೇಶದಲ್ಲಿಯೇ ಹರಿಯಾಣ ಮತ್ತು ಪಂಜಾಬ್‌ನಲ್ಲಿ ಅತಿಹೆಚ್ಚು ಪ್ರಮಾಣದಲ್ಲಿ ಬಾಸುಮತಿ ಅಕ್ಕಿ ಬೆಳೆಯಲಾಗುತ್ತದೆ.

ಬ್ರಿಟನ್ ರಾಜತಾಂತ್ರಿಕರನ್ನು ಹೊರಹಾಕಲಿರುವ ರಷ್ಯಾ

ಮಾಸ್ಕೊ (ಎಪಿ): ಬ್ರಿಟನ್ನಿನ ಆರು ಮಂದಿ ರಾಜತಾಂತ್ರಿಕರು ಬೇಹುಗಾರಿಕೆಯಲ್ಲಿ ತೊಡಗಿದ್ದಾರೆ ಎಂದು ಆರೋಪಿಸಿರುವ ರಷ್ಯಾದ ಫೆಡರಲ್ ಸೆಕ್ಯುರಿಟಿ ಸರ್ವಿಸ್ (ಎಫ್‌ಎಸ್‌ಬಿ), ಇವರಿಗೆ ನೀಡಿರುವ ಮಾನ್ಯತೆಯನ್ನು ಹಿಂಪಡೆಯಲು ತೀರ್ಮಾನಿಸಲಾಗಿದೆ ಎಂದು ತಿಳಿಸಿದೆ.

ಈ ರಾಜತಾಂತ್ರಿಕರನ್ನು ದೇಶದಿಂದ ಹೊರಹಾಕಲಾಗುತ್ತದೆ ಎಂದು ಎಫ್‌ಎಸ್‌ಬಿ ಅಧಿಕಾರಿಯೊಬ್ಬರು ತಿಳಿಸಿರುವುದಾಗಿ ರಷ್ಯಾದ ಸರ್ಕಾರಿ ಸ್ವಾಮ್ಯದ ಟಿ.ವಿ. ವಾಹಿನಿ ಹೇಳಿದೆ. ಬ್ರಿಟನ್ ಪ್ರಧಾನಿ ಕಿಯರ್ ಸ್ಟಾರ್ಮರ್ ಅವರು ವಾಷಿಂಗ್ಟನ್‌ಗೆ ಭೇಟಿ ನೀಡುವ ಸಂದರ್ಭದಲ್ಲಿ ಈ ಬೆಳವಣಿಗೆ ನಡೆದಿದೆ.

ಪಾಶ್ಚಿಮಾತ್ಯ ರಾಷ್ಟ್ರಗಳು ಪೂರೈಸಿರುವ ಶಸ್ತ್ರಾಸ್ತ್ರಗಳನ್ನು ರಷ್ಯಾದ ಗಡಿಯೊಳಕ್ಕೆ ಬಳಕೆ ಮಾಡಲು ಉಕ್ರೇನ್ ಅನುಮತಿ ಕೋರಿರುವುದು ಸೇರಿದಂತೆ ಹಲವು ವಿಷಯಗಳನ್ನು ಸ್ಟಾರ್ಮರ್ ಅವರು ಅಮೆರಿಕದ ಅಧ್ಯಕ್ಷ ಜೋ ಬೈಡನ್ ಅವರೊಂದಿಗೆ ಚರ್ಚಿಸಲಿದ್ದಾರೆ.

ವಾಷಿಂಗ್ಟನ್‌ಗೆ ತೆರಳುವ ಸಂದರ್ಭದಲ್ಲಿ ಸ್ಟಾರ್ಮರ್ ಅವರು, 'ರಷ್ಯಾದ ಜೊತೆ ಬ್ರಿಟನ್ ಸಂಘರ್ಷ ಬಯಸುವುದಿಲ್ಲ' ಎಂದು ಹೇಳಿದ್ದಾರೆ.

ಲಂಬ ಉಡ್ಡಯನದ ಕ್ಷಿಪಣಿ ಪರೀಕ್ಷೆ ಯಶಸ್ವಿ

ಬಾಲೇಶ್ವರ (ಒಡಿಶಾ) (ಪಿಟಿಐ): 'ಲಂಬ ಉಡ್ಡಯನದ – ಕಡಿಮೆ ವ್ಯಾಪ್ತಿಯ, ನೆಲದಿಂದ ಆಗಸದ ಗುರಿಗೆ ದಾಳಿ ನಡೆಸುವ' (ವಿಎಲ್–ಎಸ್‌ಆರ್‌ಎಸ್‌ಎಎಂ) ಕ್ಷಿಪಣಿಯ ಪರೀಕ್ಷೆಯು ಶುಕ್ರವಾರ ಯಶಸ್ವಿಯಾಗಿ ನಡೆದಿದೆ. ಒಡಿಶಾ ಕರಾವಳಿಯ ಚಂಡೀಪುರದಲ್ಲಿನ ಪರೀಕ್ಷಾ ಕೇಂದ್ರದಲ್ಲಿ ಈ ಕ್ಷಿಪಣಿಯ ಪರೀಕ್ಷಾರ್ಥ ಪ್ರಯೋಗ ಗುರುವಾರವೂ ನಡೆದಿತ್ತು.

ಎರಡೂ ಪರೀಕ್ಷೆಗಳು ಯಶಸ್ಸು ಕಂಡಿವೆ ಎಂಬುದನ್ನು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ (ಡಿಆರ್‌ಡಿಒ) ಪ್ರಕಟಣೆಯು ತಿಳಿಸಿದೆ. ಎರಡೂ ಪರೀಕ್ಷೆಗಳಲ್ಲಿ ಈ ಕ್ಷಿಪಣಿಯು, ಸಮುದ್ರದ ಮಟ್ಟಕ್ಕೆ ಬಹಳ ಸನಿಹದಲ್ಲಿ ತೀವ್ರ ವೇಗದಿಂದ ಸಾಗುತ್ತಿದ್ದ ಗುರಿಯೊಂದನ್ನು ಯಶಸ್ವಿಯಾಗಿ ಧ್ವಂಸಗೊಳಿಸಿದೆ ಎಂದು ಹೇಳಿಕೆಯು ತಿಳಿಸಿದೆ.

ನಿಖರವಾಗಿ ದಾಳಿ ನಡೆಸುವ ಹಾಗೂ ಗುರಿಯನ್ನು ಧ್ವಂಸಗೊಳಿಸುವ ಸಾಮರ್ಥ್ಯವನ್ನು ಕ್ಷಿಪಣಿಯು ತೋರಿಸಿಕೊಟ್ಟಿದೆ ಎಂದು ಅದು ಹೇಳಿದೆ.

ಕ್ಷಿಪಣಿಯ ಪರೀಕ್ಷೆ ಯಶಸ್ಸು ಕಂಡಿರುವುದಕ್ಕೆ ರಕ್ಷಣಾ ಸಚಿವ ರಾಜನಾಥ ಸಿಂಗ್ ಅವರು ಡಿಆರ್‌ಡಿಒ, ಭಾರತೀಯ ನೌಕಾಪಡೆ ಮತ್ತು ಈ ಪ್ರಯೋಗದಲ್ಲಿ ಭಾಗಿಯಾಗಿದ್ದ ಎಲ್ಲ ತಂಡಗಳಿಗೆ ಅಭಿನಂದನೆ ಸಲ್ಲಿಸಿದ್ದಾರೆ.



ವಿಎಲ್–ಎಸ್‌ಆರ್‌ಎಸ್‌ಎಎಂ ಕ್ಷಿಪಣಿ ಪರೀಕ್ಷೆ ಯಶಸ್ವಿಯಾಗಿ ನಡೆಯಿತು –ಪಿಟಿಐ ಚಿತ್ರ

ಸುರಕ್ಷತೆಯ ದೃಷ್ಟಿಯಿಂದ ಬಾಲೇಶ್ವರ ಜಿಲ್ಲಾ ಆಡಳಿತವು, ಕ್ಷಿಪಣಿ ಪರೀಕ್ಷಾ ಕೇಂದ್ರದ 2.5 ಕಿ.ಮೀ. ಸುತ್ತಳತೆ ಪ್ರದೇಶದಲ್ಲಿನ ಆರು ಗ್ರಾಮಗಳ 3,100 ಜನರನ್ನು ತಾತ್ಕಾಲಿಕವಾಗಿ ಸ್ಥಳಾಂತರಿಸಿತ್ತು.

ಕ್ವಾಡ್ ಶೃಂಗಸಭೆ ಆಯೋಜಿಸಿದ ಜೋ ಬೈಡನ್

ವಾಷಿಂಗ್ಟನ್ (ಪಿಟಿಐ): ಅಮೆರಿಕದ ಅಧ್ಯಕ್ಷ ಜೋ ಬೈಡನ್ ಅವರು ಮುಂದಿನ ವಾರ ಕ್ವಾಡ್ ರಾಷ್ಟ್ರಗಳ ಶೃಂಗಸಭೆಯನ್ನು ಆಯೋಜಿಸಿದ್ದಾರೆ. ಸಭೆಯಲ್ಲಿ ಆಸ್ಟ್ರೇಲಿಯಾ, ಭಾರತ ಹಾಗೂ ಜಪಾನ್‌ನ ಪ್ರಧಾನಮಂತ್ರಿಗಳು ಭಾಗವಹಿಸಲಿದ್ದಾರೆ ಎಂದು ಅಧ್ಯಕ್ಷರ ವಕ್ತಾರರು ಗುರುವಾರ ತಿಳಿಸಿದ್ದಾರೆ.

ಈ ವರ್ಷ ನಡೆಯಬೇಕಿದ್ದ 'ಕ್ವಾಡ್' ಶೃಂಗಸಭೆಯನ್ನು ಭಾರತವು ಮುಂದಿನ ವರ್ಷ ಆಯೋಜಿಸಿದೆ. ಅಧ್ಯಕ್ಷ ಹುದ್ದೆಯಿಂದ ಕೆಳಗಿಳಿಯಲು ಕೆಲವೇ ತಿಂಗಳು ಬಾಕಿ ಉಳಿದಿರುವಂತೆಯೇ, ಜೋ ಬೈಡನ್ ಅವರು ಕ್ವಾಡ್ ಶೃಂಗಸಭೆ ಆಯೋಜಿಸುವ ಮೂಲಕ ಮಹತ್ವದ ವಿದೇಶಾಂಗ ನೀತಿಯ ಪರಂಪರೆಯನ್ನು ಮುಂದುವರಿಸುವ ಪ್ರಯತ್ನ ನಡೆಸಿದ್ದಾರೆ ಎಂದು ವಿಶ್ಲೇಷಿಸಲಾಗಿದೆ.

'ಸೆ. 21ರಂದು ಕ್ವಾಡ್ ಶೃಂಗಸಭೆ ಶುರುವಾಗಲಿದ್ದು ಆಸ್ಟ್ರೇಲಿಯಾ ಪ್ರಧಾನಿ ಆಂಥೋನಿ ಅಲ್ಬನೀಸ್, ಭಾರತದ ಪ್ರಧಾನಿ ನರೇಂದ್ರ ಮೋದಿ, ಜಪಾನ್‌ನ ಪ್ರಧಾನಿ ಫ್ಯುಮಿಯೊ ಕಿಶಿಡಾ ಅವರನ್ನು ಸ್ವಾಗತಿಸಲು ಎದುರು ನೋಡುತ್ತಿದ್ದಾರೆ' ಎಂದು ಶ್ವೇತಭವನದ ಮಾಧ್ಯಮ ಕಾರ್ಯದರ್ಶಿ ಕರೈನ್ ಜೀನ್ ಪಿಯಾರೆ ತಿಳಿಸಿದ್ದಾರೆ.

'ಕ್ವಾಡ್' ರಾಜತಾಂತ್ರಿಕ ಸಹಭಾಗಿತ್ವದ ಒಕ್ಕೂಟವಾಗಿದ್ದು, ಅಮೆರಿಕ, ಭಾರತ, ಆಸ್ಟ್ರೇಲಿಯಾ ಹಾಗೂ ಜಪಾನ್ ಸದಸ್ಯ ರಾಷ್ಟ್ರಗಳಾಗಿವೆ.

ಲಡ್ಡು ಕದ್ದ ಆರೋಪ: ಬಾಲಕಿಯರಿಬ್ಬರ ಉಚ್ಚಾಟನೆ

ಪ್ರಜಾವಾಣಿ ವಾರ್ತೆ

ಲಖನೌ: ಲಡ್ಡುಗಳನ್ನು ಕಳವು ಮಾಡಿದ ಆರೋಪದಡಿ ಸಹರಾನ್‌ಪುರ ಜಿಲ್ಲೆಯ ಸಲ್ಹಾಪುರ ಗ್ರಾಮದಲ್ಲಿ ಇಬ್ಬರು ಬಾಲಕಿಯರನ್ನು ಶಾಲೆಯಿಂದ ಹೊರಹಾಕಲಾಗಿದೆ.

ಅಕ್ಕ–ತಂಗಿಯರೂ ಆಗಿರುವ ಈ ಬಾಲಕಿಯರು ಕ್ರಮವಾಗಿ 8 ಮತ್ತು 7ನೇ ತರಗತಿಯಲ್ಲಿ ಓದುತ್ತಿದ್ದರು. ಶಾಲೆಯ ಪ್ರಾಂಶುಪಾಲರ ವಿರುದ್ಧ ಕ್ರಮ ಜರುಗಿಸುವಂತೆ ಕೋರಿ ಬಾಲಕಿಯರ ತಂದೆ ಪೊಲೀಸರಿಗೆ ದೂರು ನೀಡಿದ್ದಾರೆ.

ಕಳೆದ ತಿಂಗಳು, ಸ್ವಾತಂತ್ರ್ಯ ದಿನಾಚರಣೆಯಂದು ಈ ಘಟನೆ ನಡೆದಿದೆ. ಬಾಲಕಿಯರ ಪಾಲಕರು ಈ ಕುರಿತು ಪೊಲೀಸರು ಮತ್ತು ಶಿಕ್ಷಣ ಇಲಾಖೆಯ ಜಿಲ್ಲಾ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದರಿಂದ ಗುರುವಾರ ಗೊತ್ತಾಗಿದೆ.

ಸ್ವಾತಂತ್ರ್ಯೋತ್ಸವ ದಿನದಂದು ಎಲ್ಲ ಮಕ್ಕಳಿಗೆ ಹಂಚಿದ ನಂತರವೂ ಉಳಿದಿದ್ದ ಲಡ್ಡುಗಳನ್ನು ಪ್ರಾಂಶುಪಾಲರ ಕಚೇರಿಯಲ್ಲಿ ಇಡಲಾಗಿತ್ತು. ಈ ಇಬ್ಬರು ಬಾಲಕಿಯರು ಕಚೇರಿ ಪ್ರವೇಶಿಸಿ, ಲಡ್ಡುಗಳನ್ನು ಕಳವು ಮಾಡಿದ್ದರು ಎಂದು ಆರೋಪಿಸಲಾಗಿದೆ.

'ಬಾಲಕಿಯರ ವರ್ಗಾವಣೆ ಪ್ರಮಾಣಪತ್ರದಲ್ಲಿ 'ಉತ್ತಮ ನಡತೆ ಹೊಂದಿಲ್ಲ' ಎಂಬುದಾಗಿ ನಮೂದಿಸುವೆ. ಇದರಿಂದ ಅವರಿಗೆ ಬೇರೆ ಯಾವುದೇ ಶಾಲೆಯಲ್ಲಿ ಪ್ರವೇಶ ಸಿಗುವುದಿಲ್ಲ ಎಂಬುದಾಗಿ ಪ್ರಾಂಶುಪಾಲ, ಪಾಲಕರಿಗೆ ಬೆದರಿಕೆ ಹಾಕಿದ್ದರು' ಎಂದೂ ಆರೋಪಿಸಲಾಗಿದೆ.

ಈ ಕುರಿತು ಪ್ರತಿಕ್ರಿಯಿಸಿರುವ ಶಿಕ್ಷಣ ಇಲಾಖೆ ಅಧಿಕಾರಿಗಳು, 'ಘಟನೆ ಸಂಬಂಧ ತನಿಖೆ ನಡೆಯುತ್ತಿದೆ. ಅನಾರೋಗ್ಯ ಕಾರಣದಿಂದ ಪ್ರಾಂಶುಪಾಲ ಆಸ್ಪತ್ರೆಗೆ ದಾಖಲಾಗಿದ್ದಾರೆ. ಮನೆಗೆ ಮರಳಿದ ನಂತರ ಅವರನ್ನು ವಿಚಾರಣೆಗೆ ಒಳಪಡಿಸಲಾಗುವುದು' ಎಂದು ಶುಕ್ರವಾರ ಹೇಳಿದ್ದಾರೆ.

17ರಿಂದ ಸ್ವಚ್ಛತಾ ಅಭಿಯಾನ: 2 ಲಕ್ಷ ಸ್ಥಳ ಗುರುತು

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದಾದ್ಯಂತ ಇದೇ 17ರಿಂದ ಅಕ್ಟೋಬರ್ 2ರವರೆಗೆ (15 ದಿನಗಳು) ಶುಚಿತ್ವ ಅಭಿಯಾನ ನಡೆಯಲಿದ್ದು, ಅದಕ್ಕಾಗಿ ಎರಡು ಲಕ್ಷಕ್ಕೂ ಹೆಚ್ಚು ಸ್ಥಳಗಳನ್ನು ಗುರುತಿಸಲಾಗಿದೆ ಎಂದು ಕೇಂದ್ರ ಸರ್ಕಾರ ಶುಕ್ರವಾರ ತಿಳಿಸಿದೆ.

ಈ ವರ್ಷದ 'ಸ್ವಚ್ಛತಾ ಕಿ ಸೇವಾ ಅಭಿಯಾನ'ದ ವಿಷಯವು 'ಸ್ವಭಾವ ಸ್ವಚ್ಛತಾ ಸಂಸ್ಕಾರ ಸ್ವಚ್ಛತಾ' ಆಗಿದ್ದು, ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯ, ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಜಲ ಶಕ್ತಿ ಸಚಿವಾಲಯಗಳ ಸಹಯೋಗದೊಂದಿಗೆ ನಡೆಯಲಿದೆ ಎಂದು ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವ ಮನೋಹರ್ ಲಾಲ್ ಖಟ್ಟರ್ ಸುದ್ದಿಗಾರರಿಗೆ ಹೇಳಿದರು.

ಅಭಿಯಾನದಲ್ಲಿ ಎಲ್ಲ ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳು, ಸ್ಥಳೀಯ ಸಂಸ್ಥೆಗಳು, ಮುಖ್ಯಮಂತ್ರಿಗಳು, ಕೇಂದ್ರ ಸಚಿವರು, ಸಂಸದರು, ಶಾಸಕರು ಕೈಜೋಡಿಸುವ ವಿಶ್ವಾಸವಿದೆ ಎಂದರು.







ರಾಷ್ಟ್ರೀಯ ಸೀನಿಯರ್ ಈಜು: ರಿಲೆಯಲ್ಲಿ ಕರ್ನಾಟಕ, ರೈಲ್ವೆ ತಂಡಗಳ ದಾಖಲೆ

ಕರ್ನಾಟಕ ತಂಡಕ್ಕೆ ಚಾಂಪಿಯನ್ ಪಟ್ಟ

● ವಿಕ್ರಂ ಕಾಂತಿಕೆರೆ

ಮಂಗಳೂರು: ಆತಿಥೇಯ ಕರ್ನಾಟಕ, ಶುಕ್ರವಾರ ಇಲ್ಲಿ ಮುಕ್ತಾಯಗೊಂಡ ರಾಷ್ಟ್ರೀಯ ಸೀನಿಯರ್ ಈಜು ಚಾಂಪಿಯನ್‌ಷಿಪ್‌ನಲ್ಲಿ ಸಮಗ್ರ ಪ್ರಶಸ್ತಿ ತನ್ನದಾಗಿಸಿಕೊಂಡಿತು. ಈ ಕೂಟದಲ್ಲಿ ಒಟ್ಟು 17 ಚಿನ್ನ, 12 ಬೆಳ್ಳಿ ಮತ್ತು 4 ಕಂಚಿನ ಪದಕ ಗೆದ್ದ ಕರ್ನಾಟಕ ಸತತ ಎರಡನೇ ಬಾರಿ ಚಾಂಪಿಯನ್ ಆಯಿತು.

ಮಹಾರಾಷ್ಟ್ರ 6 ಚಿನ್ನ, ತಲಾ 4 ಬೆಳ್ಳಿ ಮತ್ತು ಕಂಚಿನ ಪದಕಗಳನ್ನು ಗಳಿಸಿ ಎರಡನೇ ಸ್ಥಾನ ಪಡೆಯಿತು.

ಭಾರತ ಈಜು ಫೆಡರೇಷನ್, ಎಮ್ಮೆಕೆರೆಯ ಈಜುಕೊಳದಲ್ಲಿ ಆಯೋಜಿಸಿದ್ದ ಕೂಟದಲ್ಲಿ ಕರ್ನಾಟಕದ ಅನೀಶ್ ಎಸ್.ಗೌಡ ಮತ್ತು ಹಾಶಿಕಾ ರಾಮಚಂದ್ರ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ವಿಭಾಗದ ವೈಯಕ್ತಿಕ ಚಾಂಪಿಯನ್ ಎನಿಸಿಕೊಂಡರು.

ಕೊನೆಯ ದಿನದ ಮೊದಲ ನಾಲ್ಕು ಸ್ಪರ್ಧೆಗಳ ಪೈಕಿ ಮೂರರಲ್ಲಿ ಕರ್ನಾಟಕ ಚಿನ್ನ ಗೆದ್ದುಕೊಂಡಿತು. ಮಹಿಳೆಯರ 400 ಮೀ. ವೈಯಕ್ತಿಕ ಮೆಡ್ಲೆಯ ಕೊನೆಯ ಲ್ಯಾಪ್‌ನಲ್ಲಿ ಬಿರುಸಿನ ಸ್ಟ್ರೋಕ್‌ಗಳೊಂದಿಗೆ ಮುನ್ನುಗ್ಗಿದ ತಾನ್ಯಾ ಷಡಕ್ಷರಿ ಚಿನ್ನಕ್ಕೆ ಮುತ್ತಿಟ್ಟರು. ಪುರುಷರ ಮತ್ತು ಮಹಿಳೆಯರ 200 ಮೀ ಫ್ರೀಸ್ಟೈಲ್‌ನ ಚಿನ್ನವೂ ಕರ್ನಾಟಕಕ್ಕೆ ಲಭಿಸಿತು. ಪುರುಷರ ವಿಭಾಗದಲ್ಲಿ ಅನೀಶ್ ಗೌಡ ಮೊದಲಿಗರಾದರು. ಮಹಿಳೆಯರ ವಿಭಾಗದಲ್ಲಿ ಹಾಶಿಕಾ ಮತ್ತು ಶಿರೀನ್ ನಡುವೆ ಚಿನ್ನಕ್ಕೆ ಪೈಪೋಟಿ ಏರ್ಪಟ್ಟಿತ್ತು. ಹಾಶಿಕಾ ಅಂತಿಮ 20 ಮೀಟರ್‌ಗಳಿದ್ದಾಗ ಮುನ್ನುಗ್ಗಿ ಚಿನ್ನ ಗೆದ್ದರು. ತಮಿಳುನಾಡಿನ ಧನುಷ್ ಸುರೇಶ್ ಅವರಿಂದ ಕ್ಷಣಕ್ಷಣವೂ ಸವಾಲು ಎದುರಿಸಿದ ಕರ್ನಾಟಕದ ವಿದಿತ್ ಶಂಕರ್ 100 ಮೀ ಬ್ರೆಸ್ಟ್ ಸ್ಟ್ರೋಕ್ ರೇಸ್‌ನಲ್ಲಿ ಗೆದ್ದರು.



ಸಮಗ್ರ ಚಾಂಪಿಯನ್ ಪಟ್ಟ ಗಳಿಸಿದ ಕರ್ನಾಟಕದ ಈಜುಪಟುಗಳ ಸಂಭ್ರಮ ಪ್ರಜಾವಾಣಿ ಚಿತ್ರ: ಫಕ್ರುದ್ದೀನ್ ಎಚ್

ನಾಲ್ಕನೇ ದಿನದ ಫಲಿತಾಂಶಗಳು: ಪುರುಷರ ವಿಭಾಗ: 100 ಮೀ ಬ್ರೆಸ್ಟ್ ಸ್ಟ್ರೋಕ್: ವಿದಿತ್ ಎಸ್. ಶಂಕರ್ (ಕರ್ನಾಟಕ)–1, ಧನುಷ್ (ತಮಿಳುನಾಡು)–2, ರಾಣಾ ಪ್ರತಾಪ್ (ಜಾರ್ಖಂಡ್)–3. ಕಾಲ: 1ನಿ 2.75ಸೆ; 100 ಮೀ ಬಟರ್‌ಫ್ಲೈ: ಮಿಹಿರ್ ಆಮ್ರೆ (ಮಹಾರಾಷ್ಟ್ರ)–1, ಬೆನೆಡಿಕ್ಟನ್ ರೋಹಿತ್ (ತಮಿಳುನಾಡು)–2, ಬಿಕ್ರಂ ಚಾಂಗ್ಮೈ (ರೈಲ್ವೆ)–3. ಕಾಲ: 53.68ಸೆ; 200 ಮೀ ಫ್ರೀಸ್ಟೈಲ್: ಅನೀಶ್ ಗೌಡ (ಕರ್ನಾಟಕ)–1, ಆನಂದ್ (ಸರ್ವಿಸಸ್)–2, ದೇವಾಂಶ್ (ರೈಲ್ವೆ)–3. ಕಾಲ: 1ನಿ 52.9ಸೆ; 200 ಮೀ ಬ್ಯಾಕ್‌ಸ್ಟ್ರೋಕ್: ನಿತಿಕ್ (ತಮಿಳುನಾಡು)–1, ರಿಷಭ್ (ಮಹಾರಾಷ್ಟ್ರ)–2, ಆಕಾಶ್ ಮಣಿ (ಕರ್ನಾಟಕ)–3. ಕಾಲ: 2ನಿ 3.47ಸೆ; 400 ಮೀ ಮೆಡ್ಲೆ: ಯುಗ್ ಚಲಾನಿ (ರಾಜಸ್ತಾನ)–1, ಸಾಮದೇವ್ (ಆಂಧ್ರಪ್ರದೇಶ)–2, ವರ್ಷಿತ್ (ತೆಲಂಗಾಣ)–3. ಕಾಲ: 4ನಿ 36.39ಸೆ; 4x100 ಮೀ ಫ್ರೀಸ್ಟೈಲ್ ರಿಲೆ: ಕರ್ನಾಟಕ (ಪೃಥ್ವಿ, ಕಾರ್ತಿಕೇಯನ್, ಆಕಾಶ್, ಶ್ರೀಹರಿ ನಟರಾಜ್)–1, ಸರ್ವಿಸಸ್–2, ತಮಿಳುನಾಡು–3. ಕಾಲ: 3ನಿ 28.9ಸೆ (ಕೂಟ ದಾಖಲೆ).

ಮಹಿಳೆಯರ ವಿಭಾಗ: 100 ಮೀ ಬ್ರೆಸ್ಟ್ ಸ್ಟ್ರೋಕ್: ಹರ್ಷಿತಾ (ರೈಲ್ವೆ)–1, ಮನ್ನತಾ ಮಿಶ್ರಾ (ಒಡಿಶಾ)–2, ಜ್ಯೋತಿ (ಮಹಾರಾಷ್ಟ್ರ)–3. ಕಾಲ: 1ನಿ 14.16ಸೆ; 100 ಮೀ ಬಟರ್‌ಫ್ಲೈ: ಆಸ್ತಾ (ರೈಲ್ವೆ)–1, ಸೃಷ್ಟಿ (ಒಡಿಶಾ)–2, ಸುಹಾಸಿನಿ ಘೋಷ್ (ಕರ್ನಾಟಕ)–3. ಕಾಲ: 1ನಿ 3.87ಸೆ; 200 ಮೀ ಫ್ರೀಸ್ಟೈಲ್: ಹಾಶಿಕಾ ರಾಮಚಂದ್ರ (ಕರ್ನಾಟಕ)–1, ಅದಿತಿ (ಮಹಾರಾಷ್ಟ್ರ)–2, ವೃತ್ತಿ (ತೆಲಂಗಾಣ)–3. ಕಾಲ: 2ನಿ 6.49ಸೆ; 200 ಮೀ ಬ್ಯಾಕ್‌ಸ್ಟ್ರೋಕ್: ಸೌಬ್ರೃತಿ (ಬಂಗಾಳ)–1, ಪ್ರತ್ಯಾಷಾ (ಒಡಿಶಾ)–2, ಪ್ರತಿಷ್ಠಾ (ಮಹಾರಾಷ್ಟ್ರ)–3. ಕಾಲ: 2ನಿ 21.76ಸೆ; 400 ಮೀ ಮೆಡ್ಲೆ: ತಾನ್ಯಾ ಷಡಕ್ಷರಿ (ಕರ್ನಾಟಕ)–1, ಸಾನ್ವಿ (ಮಹಾರಾಷ್ಟ್ರ)–2, ಶ್ರೀನಿಧಿ (ತಮಿಳುನಾಡು)–3. ಕಾಲ: 5ನಿ 8.10ಸೆ; 4x100 ಮೀ ಫ್ರೀಸ್ಟೈಲ್: ರೈಲ್ವೆ–1, ಕರ್ನಾಟಕ (ಶಿರೀನ್, ವಿಹಿತಾ, ಶಾಲಿನಿ, ಹಾಶಿಕಾ)–2, ಮಹಾರಾಷ್ಟ್ರ–3. ಕಾಲ: 4ನಿ 1.83ಸೆ (ಕೂಟ ದಾಖಲೆ).

ಕೂಟ ದಾಖಲೆ

ಕೊನೆಯ ದಿನ ಬೆಳಿಗ್ಗೆ ನಡೆದ ಪುರುಷರ 4x100 ಮೀ. ಫ್ರೀಸ್ಟೈಲ್ ರಿಲೆಯಲ್ಲಿ ಕರ್ನಾಟಕ ದಾಖಲೆ ಬರೆಯಿತು. ಪೃಥ್ವಿ ಎಂ, ಕಾರ್ತಿಕೇಯನ್ ನಾಯರ್, ಆಕಾಶ್ ಮಣಿ ಮತ್ತು ಶ್ರೀಹರಿ ನಟರಾಜ್ ಅವರನ್ನು ಒಳಗೊಂಡ ತಂಡ 3 ನಿ 28.9 ಸೆಕೆಂಡುಗಳ ಸಾಧನೆಯೊಂದಿಗೆ ತನ್ನದೇ ದಾಖಲೆ (3:28.16) ಉತ್ತಮಪಡಿಸಿಕೊಂಡಿತು. ಮಹಿಳೆಯರ 4x100 ಮೀ ಫ್ರೀಸ್ಟೈಲ್ ರಿಲೆಯಲ್ಲಿ ರೈಲ್ವೆ ದಾಖಲೆ ಬರೆಯಿತು. ಕರ್ನಾಟಕ ಬೆಳ್ಳಿ ಗೆದ್ದುಕೊಂಡಿತು.

ಚೆನ್ನೈ 'ಟೆಸ್ಟ್'ಗೆ ಭಾರತ ಅಭ್ಯಾಸ

ರೋಹಿತ್, ವಿರಾಟ್ ತಾಲೀಮು: ಗಂಭೀರ್ ಮಾರ್ಗದರ್ಶನ

ಚೆನ್ನೈ (ಪಿಟಿಐ): ರೋಹಿತ್ ಶರ್ಮಾ ನಾಯಕತ್ವದ ಭಾರತ ತಂಡವು ದೀರ್ಘ ಕಾಲದ ನಂತರ ಟೆಸ್ಟ್ ಕ್ರಿಕೆಟ್ ಅಭ್ಯಾಸಕ್ಕೆ ಮರಳಿದೆ.

ಹೊಸ ಕೋಚ್ ಗೌತಮ್ ಗಂಭೀರ್ ಅವರ ಮಾರ್ಗದರ್ಶನದಲ್ಲಿ ತಂಡದ ಆಟಗಾರರು ಶುಕ್ರವಾರ ಎಂ.ಎ. ಚಿದಂಬರಂ ಕ್ರೀಡಾಂಗಣದಲ್ಲಿ ಅಭ್ಯಾಸ ನಡೆಸಿದರು. ರೋಹಿತ್, ವಿರಾಟ್ ಕೊಹ್ಲಿ ಮತ್ತು ಸಹ ಆಟಗಾರರು ಇದ್ದರು. ಬೌಲಿಂಗ್ ಕೋಚ್ ಮಾರ್ನೆ ಮಾರ್ಕೆಲ್ ಮತ್ತು ಬ್ಯಾಟಿಂಗ್ ಕೋಚ್ ವಿಕ್ರಂ ರಾಥೋಡ್ ಕೂಡ ಈ ಸಂದರ್ಭದಲ್ಲಿ ಮಾರ್ಗದರ್ಶನ ನೀಡಿದರು.

'ಕ್ರಿಕೆಟ್ ಋತುವಿನ ಆರಂಭಕ್ಕೆ ಕ್ಷಣಗಣನೆ ಆರಂಭವಾಗಿದೆ. ತವರಿನಲ್ಲಿ ಕಣಕ್ಕಿಳಿಯಲು ಭಾರತ ತಂಡವು ಅಭ್ಯಾಸ ಶುರು ಮಾಡಿದೆ' ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ತನ್ನ ಸಾಮಾಜಿಕ ಜಾಲತಾಣಗಳ ಖಾತೆಗಳಲ್ಲಿ ಪೋಸ್ಟರ್ ಹಾಕಿದೆ. ಗಂಭೀರ್ ಅವರು ತಮ್ಮ ನೆರವು ಸಿಬ್ಬಂದಿ ಮತ್ತು ನಾಯಕ ರೋಹಿತ್ ಅವರೊಂದಿಗೆ ಸಮಾಲೋಚನೆ ನಡೆಸುತ್ತಿರುವ ಚಿತ್ರಗಳೂ ಇದರಲ್ಲಿವೆ.

ರೋಹಿತ್ ಅವರು ಗುರುವಾರ ರಾತ್ರಿ ಚೆನ್ನೈಗೆ ಬಂದಿಳಿದರು. ವಿರಾಟ್ ಲಂಡನ್‌ನಿಂದ ನೇರವಾಗಿ ಚೆನ್ನೈಗೆ ಬಂದರು. ಅವರು ಬೆಳಗಿನ ಜಾವ ತಲುಪಿದರು. ವೇಗಿ ಜಸ್‌ಪ್ರೀತ್ ಬೂಮ್ರಾ, ಬ್ಯಾಟರ್ ಕೆ.ಎಲ್. ರಾಹುಲ್ ಮತ್ತು ವಿಕೆಟ್‌ಕೀಪರ್ ರಿಷಭ್ ಪಂತ್ ಕೂಡ ಇದೇ ದಿನ ಬಂದರು.



ತಂಡದ ಆಟಗಾರರೊಂದಿಗೆ ಸಮಾಲೋಚನೆ ನಡೆಸಿದ ಮುಖ್ಯ ಕೋಚ್ ಗೌತಮ್ ಗಂಭೀರ್, ಬ್ಯಾಟಿಂಗ್ ಕೋಚ್ ವಿಕ್ರಂ ರಾಥೋಡ್ ಮತ್ತು ಬೌಲಿಂಗ್ ಕೋಚ್ ಮಾರ್ನೆ ಮಾರ್ಕೆಲ್ –ಪಿಟಿಐ ಚಿತ್ರ

ಆಟಗಾರರು ಸುಮಾರು ಒಂದು ತಿಂಗಳು ಬಿಡುವಿನ ನಂತರ ಅಂತರರಾಷ್ಟ್ರೀಯ ಕ್ರಿಕೆಟ್ ಕಣಕ್ಕೆ ಮರಳುತ್ತಿದ್ದಾರೆ. ಆಗಸ್ಟ್‌ನಲ್ಲಿ ಶ್ರೀಲಂಕಾ ಎದುರಿನ ಏಕದಿನ ಕ್ರಿಕೆಟ್ ಸರಣಿಯಲ್ಲಿ ತಂಡವು ಆಡಿತ್ತು.

ಗಂಭೀರ್ ಅವರು ಮುಖ್ಯ ಕೋಚ್ ಆದ ನಂತರ ಭಾರತ ತಂಡವು ಆಡಲಿರುವ ಮೊದಲ ಟೆಸ್ಟ್ ಪಂದ್ಯ ಇದಾಗಿದೆ. ಬಾಂಗ್ಲಾ ತಂಡವು ಪಾಕಿಸ್ತಾನ ತಂಡವನ್ನು ಅದರ ತವರಿನಲ್ಲಿಯೇ ಮಣಿಸಿ ಸರಣಿ ಕಿರೀಟ ಧರಿಸಿತು. ಅದರಿಂದಾಗಿ ಅಪಾರ ಆತ್ಮವಿಶ್ವಾಸದಲ್ಲಿರುವ ಪ್ರವಾಸಿ ತಂಡವು ಭಾರತಕ್ಕೆ ಕಠಿಣ ಸವಾಲೊಡ್ಡುವ ಸಾಧ್ಯತೆ ಇದೆ.

ಬಾಂಗ್ಲಾ ಎದುರಿನ ಎರಡು ಪಂದ್ಯಗಳ ಸರಣಿಯ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ (ಡಬ್ಲ್ಯುಟಿಸಿ) ಭಾಗವಾಗಿದೆ. ಇದಾದ ನಂತರ ಭಾರತವು ತವರಿನಲ್ಲಿ ನ್ಯೂಜಿಲೆಂಡ್ ಎದುರು ಆಡಲಿದೆ. ಅದರ ನಂತರ ಆಸ್ಟ್ರೇಲಿಯಾದಲ್ಲಿ ಬಾರ್ಡರ್–ಗಾವಸ್ಕರ್ ಟ್ರೋಫಿ ಟೂರ್ನಿಯಲ್ಲಿ ಐದು ಪಂದ್ಯಗಳನ್ನು ಆಡಲಿದೆ.

ಡಬ್ಲ್ಯುಟಿಸಿ ಪಾಯಿಂಟ್ ಪಟ್ಟಿಯಲ್ಲಿ ಭಾರತ (ಶೇ 68.52) ಅಗ್ರಸ್ಥಾನದಲ್ಲಿದೆ. ಆಸ್ಟ್ರೇಲಿಯಾ (ಶೇ 62.50) ಎರಡನೇ ಸ್ಥಾನದಲ್ಲಿದೆ. ಬಾಂಗ್ಲಾ ತಂಡವು (ಶೇ 45.83) ನಾಲ್ಕನೇ ಸ್ಥಾನದಲ್ಲಿದೆ.

ಭಾರತ ತಂಡವು ಬಾಂಗ್ಲಾ ಎದುರು ಚೆನ್ನೈ (ಸೆ.19ರಿಂದ 23) ಹಾಗೂ ಕಾನ್ಪುರ (ಸೆ. 27 ರಿಂದ ಅ.1) ನಗರಗಳಲ್ಲಿ ಟೆಸ್ಟ್ ಪಂದ್ಯಗಳನ್ನು ಆಡಲಿದೆ.

ಇಂದು ಸಾಂಪ್ರದಾಯಿಕ ಎದುರಾಳಿಗಳ ಮುಖಾಮುಖಿ

ಪಾಕ್ ವಿರುದ್ಧ ಭಾರತ ನೆಚ್ಚಿನ ತಂಡ

ಹುಲುನ್‌ಬುಯಿರ್ (ಚೀನಾ), (ಪಿಟಿಐ): ಈಗಾಗಲೇ ಸೆಮಿಫೈನಲ್‌ಗೆ ಸ್ಥಾನ ಕಾದಿರಿಸಿರುವ ಭಾರತ ತಂಡವು, ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ ಟೂರ್ನಿಯ ಬಹುನಿರೀಕ್ಷಿತ ಪಂದ್ಯದಲ್ಲಿ ಪಾಕಿಸ್ತಾನ ತಂಡವನ್ನು ಶನಿವಾರ ಎದುರಿಸಲಿದೆ. ಭಾರತ ತಂಡವು ಇದುವರೆಗಿನ ಅಮೋಘ ಯಶಸ್ಸಿನ ಓಟವನ್ನು ಮುಂದುವರಿಸುವ ಉಮೇದಿನಲ್ಲಿದೆ.

ಆರು ತಂಡಗಳಿರುವ ಕಣದಲ್ಲಿ ಭಾರತ ಆಡಿರುವ ನಾಲ್ಕೂ ಪಂದ್ಯಗಳನ್ನು ಹೆಚ್ಚಿನ ಪ್ರಯಾಸವಿಲ್ಲದೇ ಗೆದ್ದುಕೊಂಡಿದೆ. ಪಾಯಿಂಟ್ಸ್ ಪಟ್ಟಿಯಲ್ಲಿ ಪಾಕಿಸ್ತಾನವು ಎರಡನೇ ಸ್ಥಾನದಲ್ಲಿದೆ.

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆದ್ದಿರುವ ಭಾರತ ಇಲ್ಲಿ ಪ್ರಶಸ್ತಿಗೆ ನೆಚ್ಚಿನ ತಂಡವಾಗಿದ್ದು, ಇದುವರೆಗೆ ಅದಕ್ಕೆ ಯೋಗ್ಯ ರೀತಿಯಲ್ಲಿ ಆಡಿದೆ.

ಇನ್ನೊಂದೆಡೆ ಪಾಕಿಸ್ತಾನ ತಂಡ, ಪಂದ್ಯದಿಂದ ಪಂದ್ಯಕ್ಕೆ ಸುಧಾರಿತ ಪ್ರದರ್ಶನ ನೀಡುತ್ತಿದೆ. ಮಲೇಷ್ಯಾ ಮತ್ತು ದಕ್ಷಿಣ ಕೊರಿಯಾ ವಿರುದ್ಧ 2–2 ಡ್ರಾ ಮಾಡಿಕೊಂಡಿದ್ದ ಅಹಮದ್ ಭಟ್ ನೇತೃತ್ವದ ತಂಡ ನಂತರ ಜಪಾನ್ ಮತ್ತು ಚೀನಾ ವಿರುದ್ಧ ಕ್ರಮವಾಗಿ 2–1 ಮತ್ತು 5–1 ಅಂತರದ ಜಯ ದಾಖಲಿಸಿದೆ.

ಇತ್ತೀಚಿನ ಫಲಿತಾಂಶಗಳನ್ನು ಗಮನಿಸಿದರೆ, ಈ ಪಂದ್ಯದಲ್ಲಿ ಭಾರತವೇ, 'ದಾಯಾದಿ' ರಾಷ್ಟ್ರದ ವಿರುದ್ಧ ಫೆವರೀಟ್ ಆಗಿದೆ.

ಕಳೆದ ವರ್ಷ ಹಾಂಗ್‌ಝೌ ಏಷ್ಯನ್ ಕ್ರೀಡೆಗಳಲ್ಲಿ ಭಾರತ 10–2 ರಿಂದ ಪಾಕಿಸ್ತಾನ ತಂಡವನ್ನು ಸದೆಬಡಿದಿತ್ತು. ಅದಕ್ಕಿಂತ ಕೆಲವು ತಿಂಗಳು ಮೊದಲು ಚೆನ್ನೈನಲ್ಲಿ ನಡೆದ ಏಷ್ಯನ್ ಚಾಂಪಿಯನ್ಸ್ ಟ್ರೋಫಿಯಲ್ಲಿ ಪಾಕ್ ವಿರುದ್ಧ 4–0 ಜಯಗಳಿಸಿತ್ತು. 2022ರಲ್ಲಿ ಜಕಾರ್ತಾದಲ್ಲಿ ನಡೆದ ಏಷ್ಯಾ ಕಪ್‌ನಲ್ಲಿ ಯುವ ಆಟಗಾರರಿದ್ದ ತಂಡ, ಪಾಕ್ ವಿರುದ್ಧ 1–1 ಡ್ರಾ ಸಾಧಿಸಿತ್ತು. ಢಾಕ್ಕಾದಲ್ಲಿ 2021ರಲ್ಲಿ ನಡೆದ ಇದೇ (ಎಸಿಟಿ) ಟೂರ್ನಿಯಲ್ಲಿ 4–3 ರಿಂದ ಪಾಕ್ ವಿರುದ್ಧ ಗೆದ್ದು ಕಂಚಿನ ಪದಕ ತನ್ನದಾಗಿಸಿಕೊಂಡಿತ್ತು.



ಹರ್ಮನ್‌ಪ್ರೀತ್ ಸಿಂಗ್

ತಂಡದ ನಾಯಕ ಹರ್ಮನ್‌ಪ್ರೀತ್ ಸಿಂಗ್, ಪ್ಯಾರಿಸ್‌ನಲ್ಲಿ ತೋರಿದ ಉತ್ತಮ ಪ್ರದರ್ಶನವನ್ನು ಇಲ್ಲಿಯೂ ಮುಂದುವರಿಸಿದ್ದಾರೆ. 'ನನ್ನ ಹಾಕಿ ಜೀವನದ ಆರಂಭದ ದಿನಗಳಲ್ಲಿ ಎದುರಿಸಿದ ಪಾಕ್ ತಂಡದ ಕೆಲವು ಆಟಗಾರರು ಈಗಲೂ ತಂಡದಲ್ಲಿದ್ದಾರೆ. ಅವರು ಸೋದರರಿದ್ದಂತೆ. ನಿಜ, ಮೈದಾನದಲ್ಲಿ ನಾವು ಬೇರೆ ಎದುರಾಳಿಗಳನ್ನು ಎದುರಿಸುವ ರೀತಿಯಲ್ಲೇ ಆಡುತ್ತೇವೆ. ಭಾವನೆಗಳನ್ನು ನಿಯಂತ್ರಣದಲ್ಲಿ ಇಟ್ಟು ಆಡಬೇಕಾಗುತ್ತದೆ' ಎಂದರು.

ದಿನದ ಇತರ ಪಂದ್ಯಗಳಲ್ಲಿ, ಮಲೇಷ್ಯಾ, ದಕ್ಷಿಣ ಕೊರಿಯಾ ತಂಡವನ್ನು, ಆತಿಥೇಯ ಚೀನಾವು, ಜಪಾನ್ ತಂಡವನ್ನು ಎದುರಿಸಲಿವೆ.

ದುಲೀಪ್ ಟ್ರೋಫಿ ಕ್ರಿಕೆಟ್: ದೇವದತ್ತ ಪಡಿಕ್ಕಲ್ ಏಕಾಂಗಿ ಹೋರಾಟ

ಮಯಂಕ್, ಪ್ರಥಮ್ ಶತಕದ ಜೊತೆಯಾಟ

ಅನಂತಪುರ (ಪಿಟಿಐ): ಕರ್ನಾಟಕದ ಮಯಂಕ್ ಅಗರವಾಲ್ ನಾಯಕತ್ವದ ಭಾರತ ಎ ತಂಡವು ಇಲ್ಲಿ ನಡೆಯುತ್ತಿರುವ ದುಲೀಪ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯದ ಎರಡನೇ ದಿನದಾಟದ ಮುಕ್ತಾಯಕ್ಕೆ 222 ರನ್‌ಗಳ ಮುನ್ನಡೆ ಸಾಧಿಸಿದೆ.

ಮೊದಲ ದಿನವಾದ ಗುರುವಾರ ಬ್ಯಾಟಿಂಗ್ ಮಾಡಿದ ಭಾರತ ಎ ತಂಡವು 290 ರನ್ ಗಳಿಸಿತು. ಅದಕ್ಕುತ್ತರವಾಗಿ ಶುಕ್ರವಾರ ಭಾರತ ಡಿ ತಂಡವು 52.1 ಓವರ್‌ಗಳಲ್ಲಿ 183 ರನ್ ಗಳಿಸಿ, 107 ರನ್‌ಗಳ ಹಿನ್ನಡೆ ಅನುಭವಿಸಿತು.

ಕನ್ನಡಿಗ ದೇವದತ್ತ ಪಡಿಕ್ಕಲ್ (92; 124ಎ, 4X15) ಅವರ ಏಕಾಂಗಿ ಹೋರಾಟವು ಭಾರತ ಡಿ ತಂಡಕ್ಕೆ ಮುನ್ನಡೆ ಕೊಡಿಸಲು ಸಾಕಾಗಲಿಲ್ಲ. ಉಳಿದ ಬ್ಯಾಟರ್‌ಗಳು ವೈಫಲ್ಯ ಅನುಭವಿಸಿದರು. ಎ ತಂಡದ ಎಡಗೈ ವೇಗಿ ಖಲೀಲ್ ಅಹಮದ್ (39ಕ್ಕೆ3) ಮತ್ತು ಅಕೀಬ್ ಖಾನ್ (41ಕ್ಕೆ3) ಮಿಂಚಿದರು.

ಎರಡನೇ ಇನಿಂಗ್ಸ್‌ನಲ್ಲಿ ನಾಯಕ ಮಯಂಕ್ (56; 87ಎ, 4X8) ಮತ್ತು ಪ್ರಥಮ್ ಸಿಂಗ್ (ಬ್ಯಾಟಿಂಗ್ 59; 82ಎ, 4X6) ಅವರು ಮೊದಲ ವಿಕೆಟ್ ಜೊತೆಯಾಟದಲ್ಲಿ 115 ರನ್ ಸೇರಿಸಿದರು.

ಇದರಿಂದಾಗಿ ಮಯಂಕ್ ಬಳಗವು ಎದುರಾಳಿ ಪಡೆಗೆ ಬೃಹತ್ ಗುರಿ ನೀಡುವ ವಿಶ್ವಾಸದಲ್ಲಿದೆ. ಮಯಂಕ್ ಅಗರವಾಲ್ ಅವರು ಇನಿಂಗ್ಸ್‌ನ 29ನೇ ಓವರ್ ಬೌಲಿಂಗ್ ಮಾಡಿದ ಶ್ರೇಯಸ್ ಅಯ್ಯರ್ ಅವರಿಗೇ ಕ್ಯಾಚಿತ್ತು ನಿರ್ಗಮಿಸಿದರು. ಇದರಿಂದಾಗಿ ಜೊತೆಯಾಟ ಮುರಿಯಿತು.

ಮೊದಲ ದಿನದಾಟದಲ್ಲಿ ಬ್ಯಾಟಿಂಗ್ ಮಾಡಿದ ಭಾರತ ಎ ತಂಡಕ್ಕೆ ಆಸರೆಯಾಗಿದ್ದ ಶಮ್ಸ್ ಮುಲಾನಿ (89; 187ಎ) ಅವರಿಗೆ ಶತಕ ಪೂರೈಸುವ ಅವಕಾಶವನ್ನು ಬೌಲರ್‌ಗಳು ನೀಡಲಿಲ್ಲ. ಇದರಿಂದಾಗಿ ತಂಡದ ಇನಿಂಗ್ಸ್‌ಗೆ ಬೇಗ ತೆರೆಬಿತ್ತು.

ಆದರೆ, ಡಿ ತಂಡದ ನಾಯಕ ಶ್ರೇಯಸ್ ಸೇರಿದಂತೆ ಪ್ರಮುಖ ಬ್ಯಾಟರ್‌ಗಳು ಎಡವಿದರು. ಸಂಕ್ಷಿಪ್ತ ಸ್ಕೋರು: ಭಾರತ ಎ: ಮೊದಲ ಇನಿಂಗ್ಸ್: 290; ಭಾರತ ಡಿ: 52.1 ಓವರ್‌ಗಳಲ್ಲಿ 183 (ದೇವದತ್ತ ಪಡಿಕ್ಕಲ್ 92, ಹರ್ಷಿತ್ ರಾಣಾ 31, ಖಲೀಲ್ ಅಹಮದ್ 39ಕ್ಕೆ3, ಅಕೀಬ್ ಖಾನ್ 41ಕ್ಕೆ3) ಎರಡನೇ ಇನಿಂಗ್ಸ್: ಭಾರತ ಎ: 28.1 ಓವರ್‌ಗಳಲ್ಲಿ 1 ವಿಕೆಟ್‌ಗೆ 115 (ಮಯಂಕ್ ಅಗರವಾಲ್ 56, ಪ್ರಥಮ್ ಸಿಂಗ್ ಬ್ಯಾಟಿಂಗ್ 59)



ದೇವದತ್ತ ಪಡಿಕ್ಕಲ್

ಬಿ ತಂಡ ಮರುಹೋರಾಟ

ಅನಂತಪುರ (ಪಿಟಿಐ): ಭಾರತ ಬಿ ತಂಡದ ಆರಂಭಿಕ ಜೋಡಿ ಅಭಿಮನ್ಯು ಈಶ್ವರನ್ ಮತ್ತು ಎನ್. ಜಗದೀಶನ್ ಅವರು ಶತಕದ ಜೊತೆಯಾಟದ ಮೂಲಕ ಭಾರತ ಸಿ ತಂಡದ ಬೃಹತ್ ಮೊತ್ತಕ್ಕೆ ಎದುರಾಗಿ ಮರುಹೋರಾಟ ನಡೆಸಿದ್ದಾರೆ.

ಇಲ್ಲಿ ನಡೆಯುತ್ತಿರುವ ದುಲೀಪ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಭಾರತ ಸಿ ತಂಡವು ಮೊದಲ ಇನಿಂಗ್ಸ್‌ನಲ್ಲಿ ಗಳಿಸಿರುವ 525 ರನ್‌ಗಳಿಗೆ ಉತ್ತರವಾಗಿ ಬಿ ತಂಡವು ವಿಕೆಟ್ ನಷ್ಟವಿಲ್ಲದೇ 124 ರನ್ ಗಳಿಸಿದೆ. ಅಭಿಮನ್ಯು (ಬ್ಯಾಟಿಂಗ್ 51; 91ಎ, 4X4, 6X1) ಮತ್ತು ಜಗದೀಶನ್ (ಬ್ಯಾಟಿಂಗ್ 67; 126ಎ, 4X8) ಕ್ರೀಸ್‌ನಲ್ಲಿದ್ದಾರೆ.

ಗುರುವಾರ ನಡೆದ ಮೊದಲ ದಿನದಾಟದಲ್ಲಿ ಇಶಾನ್ ಕಿಶನ್ ಶತಕ ಗಳಿಸಿದ್ದರು. ನಂತರ ಬಾಬಾ ಇಂದ್ರಜೀತ್ (78 ರನ್) ಮತ್ತು ಮಾನವ ಸುತಾರ್ (82; 156ಎ) ಅವರ ಅರ್ಧಶತಕಗಳಿಂದಾಗಿ ಭಾರತ ಸಿ ತಂಡವು ದೊಡ್ಡ ಮೊತ್ತ ಗಳಿಸಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಭಾರತ ಸಿ: 124.1 ಓವರ್‌ಗಳಲ್ಲಿ 525 (ಋತುರಾಜ್ ಗಾಯಕವಾಡ 58, ಬಾಬಾ ಇಂದ್ರಜೀತ್ 78, ಮಾನವ ಸುತಾರ್ 82, ಅನ್ಷುಲ್ ಕಾಂಬೋಜ್ 38, ಮುಕೇಶ್ ಕುಮಾರ್ 126ಕ್ಕೆ4, ರಾಹುಲ್ ಚಾಹರ್ 73ಕ್ಕೆ4) ಭಾರತ ಬಿ: 36 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 124 (ಅಭಿಮನ್ಯು ಈಶ್ವರನ್ ಬ್ಯಾಟಿಂಗ್ 51, ಎನ್. ಜಗದೀಶನ್ ಬ್ಯಾಟಿಂಗ್ 67)

ಜೂನಿಯರ್ ಹಾಕಿ: ಸುನಿಲ್ ಹ್ಯಾಟ್ರಿಕ್

ಜಲಂಧರ್ (ಪಿಟಿಐ): ನಾಯಕ ಸುನಿಲ್ ಪಿ.ಬಿ. ಅವರ ಹ್ಯಾಟ್ರಿಕ್ ನೆರವಿನಿಂದ ಕರ್ನಾಟಕ ತಂಡ, ಜೂನಿಯರ್ ರಾಷ್ಟ್ರೀಯ ಪುರುಷರ ಹಾಕಿ ಟೂರ್ನಿಯ ಐದನೇ ದಿನವಾದ ಶುಕ್ರವಾರ ದೆಹಲಿ ತಂಡವನ್ನು 6–1 ಗೋಲುಗಳಿಂದ ಸುಲಭವಾಗಿ ಸೋಲಿಸಿತು.

ಈ ಪಂದ್ಯದ 34, 45 ಮತ್ತು 55 ನೇ ನಿಮಿಷ ಸುನಿಲ್ ಗೋಲುಗಳನ್ನು ಗಳಿಸಿದರು. ಪವನ್ ಕೇಸು ಜಾಧವ್ (10ನೇ ನಿಮಿಷ), ಧ್ರುವ ಬಿ.ಎಸ್. (14ನೇ ನಿಮಿಷ) ಮತ್ತು ಎಂ.ಟಿ.ಉತ್ತಪ್ಪ (18ನೇ ನಿಮಿಷ) ಇತರ ಗೋಲುಗಳನ್ನು ಗಳಿಸಿದರು.

ದೆಹಲಿ ತಂಡದ ಏಕಮಾತ್ರ ಗೋಲನ್ನು ಸುನಿಲ್ ಕುಮಾರ್ 21ನೇ ನಿಮಿಷ ಗಳಿಸಿದರು.

ದಿನದ ಇನ್ನೊಂದು ಪಂದ್ಯದಲ್ಲಿ ಆಂಧ್ರಪ್ರದೇಶ 3–1 ಗೋಲುಗಳಿಂದ ಕೇರಳ ಮೇಲೆ ಜಯಗಳಿಸಿತು.

ಸ್ಯಾಫ್: ಉನ್ನತಿಗೆ ಚಿನ್ನದ ಪದಕ

ಬೆಂಗಳೂರು: ಕರ್ನಾಟಕದ ಉನ್ನತಿ ಅಯ್ಯಪ್ಪ ಅವರು ಚೆನ್ನೈನ ಜವಾಹರಲಾಲ್ ನೆಹರೂ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ನಾಲ್ಕನೇ ಸ್ಯಾಫ್ ಜೂನಿಯರ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನ ಮಹಿಳೆಯರ 200 ಮೀಟರ್ ಓಟದಲ್ಲಿ ಚಿನ್ನದ ಪದಕ ಗೆದ್ದರು.

ಭಾರತವನ್ನು ಪ್ರತಿನಿಧಿಸುತ್ತಿರುವ ಫೈನಲ್ ಸ್ಪರ್ಧೆಯಲ್ಲಿ ಉನ್ನತಿ 23.91 ಸೆಕೆಂಡ್‌ಗಳಲ್ಲಿ ಗುರಿ ತಲುಪಿದರು. ಭಾರತದ ನ್ಯಾನ್ಸಿ ಮತ್ತು ನೀರು ಪಾಠಕ್ ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗೆದ್ದರು. ಉನ್ನತಿ ಅವರು ಮಹಿಳೆಯರ 100 ಮೀಟರ್ ಹರ್ಡಲ್ಸ್ ಓಟದಲ್ಲಿ ಕೂಟ ದಾಖಲೆಯೊಂದಿಗೆ ಗುರುವಾರ ಚಿನ್ನ ಗೆದ್ದಿದ್ದರು.

ಮಹಿಳೆಯರ 4x100 ಮೀಟರ್ ರಿಲೆ ಸ್ಪರ್ಧೆಯಲ್ಲಿ ಭಾರತದ ನ್ಯಾನ್ಸಿ, ಎನ್. ಕರ್ನೆಲಿಯೊ, ಅಭಿನಯಾ ರಾಜರಾಜನ್ ಮತ್ತು ವಿ. ಸುಧೀಕ್ಷಾ ಅವರನ್ನು ಒಳಗೊಂಡ ತಂಡ ಚಿನ್ನ ಗೆದ್ದಿತು.



ಉನ್ನತಿ ಅಯ್ಯಪ್ಪ

ಫುಟ್‌ಬಾಲ್: ಫೈನಲ್‌ಗೆ ಕರ್ನಾಟಕ

ಬೆಂಗಳೂರು: ಆಯುಷ್ ಕೊಟ್ಟಾರಿ ಮತ್ತು ಅರವಿಂದ್ರನ್ ಎಸ್. ಅವರ ಆಟದ ಬಲದಿಂದ ಕರ್ನಾಟಕ ತಂಡವು ಎನ್‌ಎಫ್‌ಸಿ ಸಬ್ ಜೂನಿಯರ್ ಬಾಲಕರ (13 ವರ್ಷದೊಳಗಿನವರ) ಫುಟ್‌ಬಾಲ್ ಟೂರ್ನಿಯ ಸೆಮಿಫೈನಲ್‌ನಲ್ಲಿ 5–3 ಗೋಲುಗಳಿಂದ ದೆಹಲಿ ತಂಡವನ್ನು ಸೋಲಿಸಿ ಪ್ರಶಸ್ತಿ ಸುತ್ತು ಪ್ರವೇಶಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಕರ್ನಾಟಕದ ಪರ ಆಯುಷ್ (33ನೇ ಮತ್ತು 44ನೇ ನಿ.) ಮತ್ತು ಅರವಿಂದ್ರನ್ (58ನೇ ಮತ್ತು 73ನೇ) ತಲಾ ಎರಡು ಗೋಲಿನೊಂದಿಗೆ ಮಿಂಚಿದರೆ, ಸಿ.ಎಚ್. ಸಕೀಪ್ (65ನೇ ನಿ) ಒಂದು ಬಾರಿ ಚೆಂಡನ್ನು ಗುರಿ ಸೇರಿಸಿದರು.

ಮ್ಯಾಕ್ಡೋನಿಶ್ ನೈರಂಗಬಾಮ್ (80ನೇ ಮತ್ತು 84ನೇ ನಿ), ಹುತೊ ಮಿಲ್ಲೊ (34ನೇ) ದೆಹಲಿ ತಂಡಕ್ಕೆ ಗೋಲು ತಂದಿತ್ತರು.

ಟೂರ್ನಿಯಲ್ಲಿ ಒಟ್ಟು 14 ತಂಡಗಳು ಪಾಲ್ಗೊಂಡಿವೆ. ಎ ಮತ್ತು ಸಿ ಗುಂಪಿನ ಪಂದ್ಯಗಳು ಈಗಾಗಲೇ ಮುಕ್ತಾಯವಾಗಿ ಕರ್ನಾಟಕ ಫೈನಲ್‌ಗೇರಿದೆ. ಶನಿವಾರದಿಂದ ಬಿ ಮತ್ತು ಡಿ ಗುಂಪಿನ ಪಂದ್ಯಗಳು ಆರಂಭಗೊಳ್ಳಲಿವೆ. ಅವುಗಳಲ್ಲಿ ಅಗ್ರ ಸ್ಥಾನ ಪಡೆಯುವ ತಂಡ ಇದೇ 22ರಂದು ಕರ್ನಾಟಕವನ್ನು ಎದುರಿಸಲಿದೆ.

ಇಂಡಿಯನ್ ಸೂಪರ್ ಲೀಗ್: ಸುನಿಲ್ ಚೆಟ್ರಿ, ರಾಹುಲ್ ಭೆಕೆ ಮೇಲೆ ಕಣ್ಣು

ಬಿಎಫ್‌ಸಿ, ಈಸ್ಟ್ ಬೆಂಗಾಲ್ ಹಣಾಹಣಿ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದ್ಯಾನನಗರಿಯ ಫುಟ್‌ಬಾಲ್ ಪ್ರಿಯರಿಗೆ ಶನಿವಾರ ಭರಪೂರ ಸಂತಸ ನೀಡಲು ಬೆಂಗಳೂರು ಫುಟ್‌ಬಾಲ್ ಕ್ಲಬ್ ಸಿದ್ಧವಾಗಿದೆ.

ಕಂಠೀರವ ಕ್ರೀಡಾಂಗಣದಲ್ಲಿ ನಡೆಯಲಿರುವ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಟೂರ್ನಿಯ ಪಂದ್ಯದಲ್ಲಿ ಬೆಂಗಳೂರು ತಂಡವು ಕೋಲ್ಕತ್ತದ ಈಸ್ಟ್ ಬೆಂಗಾಲ್ ಬಳಗವನ್ನು ಎದುರಿಸಲಿದೆ. ಫುಟ್‌ಬಾಲ್ ಪ್ರೇಮಿಗಳ ಕಣ್ಮಣಿ ಸುನಿಲ್ ಚೆಟ್ರಿ, ಭಾರತ ಫುಟ್‌ಬಾಲ್ ತಂಡದ ಭವಿಷ್ಯದ ನಾಯಕನೆಂಬ ಭರವಸೆ ಮೂಡಿಸಿರುವ ರಾಹುಲ್ ಭೆಕೆ, ಗೋಲ್ ಕೀಪರ್ ಗುರುಪ್ರೀತ್ ಸಿಂಗ್ ಸಂಧು ಅವರ ಆಟ ನೋಡುವ ಅವಕಾಶ ಬೆಂಗಳೂರಿಗರಿಗೆ ಲಭಿಸಲಿದೆ.

ಈ ಋತುವಿನಲ್ಲಿ ಬಿಎಫ್‌ಸಿಯು ಕೆಲವು ಉತ್ತಮ ಆಟಗಾರರನ್ನು ಸೇರ್ಪಡೆ ಮಾಡಿಕೊಂಡಿದೆ. ಅಲ್ಬರ್ಟೊ ನೊಗುವೆರಾ, ಜಾರ್ಜ್ ಪರೆಯೆರಾ ದಿಯಾಜ್ ಮತ್ತು ಎಡ್ಗರ್ ಮೆಂಡಿಸ್ ಅವರು ಪ್ರಮುಖರಾಗಿದ್ದಾರೆ. ಈಸ್ಟ್ ಬೆಂಗಾಲ್ ತಂಡವೂ ದಿಮಿಟ್ರೊಸ್ ದಿಯಾಮಾಂಟಕೊಸ್, ಮಿಡ್‌ಫೀಲ್ಡರ್ ಮ್ಯಾಡಿತ್ ತಲಾಲ್, ಜಿಕ್ಸನ್ ಸಿಂಗ್ ಮತ್ತು ಅನ್ವರ್ ಅಲಿ ಅವರನ್ನು ಸೆಳೆದುಕೊಂಡಿದೆ.

'ಟೂರ್ನಿಯಲ್ಲಿ ಉತ್ತಮ ಆರಂಭ ಮಾಡಿ ಪಾಯಿಂಟ್‌ಗಳನ್ನು ಸಂಗ್ರಹಿಸಿಕೊಳ್ಳುವುದು ಮುಖ್ಯವಾಗಿದೆ. ನಮ್ಮ ತಂಡಕ್ಕೆ ತಕ್ಕಂತಹ ಆಟಗಾರರನ್ನು ಆಯ್ಕೆ ಮಾಡಿಕೊಂಡಿದ್ದೇವೆ. ಈಗ ಅವರನ್ನು ಕುಟುಂಬವಾಗಿ ಮತ್ತು ತಂಡವಾಗಿ ರೂಪಿಸುವುದು ನಮ್ಮ ಹೊಣೆ' ಎಂದು ಬಿಎಫ್‌ಸಿ ಮುಖ್ಯ ಕೋಚ್ ಜೆರಾರ್ಡ್ ಝುಗೋರ್ಜಾ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

'ಈ ಬಾರಿ ಭೆಕೆ ತಂಡಕ್ಕೆ ಬಂದಿರುವುದರಿಂದ ಹೆಚ್ಚು ವೈವಿಧ್ಯತೆ ಇದೆ. ಇಬ್ಬರು ಸ್ಟ್ರೈಕರ್‌ಗಳನ್ನು ಆಡಿಸುವ ಅವಕಾಶ ಲಭಿಸಿದೆ. ಡುರಾಂಡ್ ಕಪ್ ಟೂರ್ನಿಯಲ್ಲಿ ನಾವು ಮೂವರು ಡಿಫೆಂಡರ್ಸ್‌ಗಳೊಂದಿಗೆ ಕಣಕ್ಕಿಳಿದಿದ್ದೆವು. ನಾವು ಯಾವ ತಂಡದ ಎದುರು ಆಡುತ್ತೇವೆ ಎನ್ನುವುದರ ಮೇಲೆ ಕಣಕ್ಕಿಳಿಯುವ ಬಳಗದ ಸಂಯೋಜನೆ ನಿರ್ಧಾರವಾಗಲಿದೆ' ಎಂದು ಝುಗೋರ್ಜಾ ಹೇಳಿದರು.



ಕಂಠೀರವ ಕ್ರೀಡಾಂಗಣದಲ್ಲಿ ಶುಕ್ರವಾರ ಬೆಂಗಳೂರು ಫುಟ್‌ಬಾಲ್ ಕ್ಲಬ್ ಮುಖ್ಯ ಕೋಚ್ ಜೆರಾರ್ಡ್ ಝುಗೋರ್ಜಾ ಮತ್ತು ಡಿಫೆಂಡರ್ ರಾಹುಲ್ ಭೆಕೆ –ಪ್ರಜಾವಾಣಿ ಚಿತ್ರ

ಮುಂಬೈ–ಬಾಗನ್ ಪಂದ್ಯ ಡ್ರಾ

ಕೋಲ್ಕತ್ತ (ಪಿಟಿಐ): ಥಾಯಿರ ಕ್ರೌಮಾ ಅವರು ಕೊನೆಯ ಕ್ಷಣದಲ್ಲಿ ದಾಖಲಿಸಿದ ಗೋಲಿನ ಸಹಾಯದಿಂದ ಮುಂಬೈ ಸಿಟಿ ಎಫ್‌ಸಿ ತಂಡವು ಶುಕ್ರವಾರ ಇಲ್ಲಿ ಆರಂಭವಾದ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯ ಮೊದಲ ಪಂದ್ಯದಲ್ಲಿ ಮೋಹನ್ ಬಾಗನ್ ಎದುರು ಸಮಬಲ ಸಾಧಿಸಿತು.

ಸಾಲ್ಟ್ ಲೇಕ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಉಭಯ ತಂಡಗಳು 2–2ರಿಂದ ಡ್ರಾ ಮಾಡಿಕೊಂಡವು.

ಮುಂಬೈ ತಂಡದ ಜೋಸ್ ಲೂಯಿಸ್ ಎಸ್ಪಿನೊಸಾ ಅರೊಯಾ ಅವರು 9ನೇ ನಿಮಿಷದಲ್ಲಿ ಬಾಗನ್ ತಂಡಕ್ಕೆ ಉಡುಗೊರೆ ಗೋಲು ನೀಡಿದರು. ಬಾಗನ್ ತಂಡದ ಅಲ್ಬರ್ಟೊ ರಾಡ್ರಿಗಸ್ (28ನೇ ನಿ) ಗೋಲು ಹೊಡೆದು ತಂಡಕ್ಕೆ 2–0 ಮುನ್ನಡೆ ಒದಗಿಸಿದರು.

ಆದರೆ, ವಿರಾಮದ ನಂತರ ಜೋಸ್ ಲೂಯಿಸ್ ಎಸ್ಪಿನೊಸಾ ಅವರು ಮುಂಬೈ ತಂಡಕ್ಕೆ 70ನೇ ನಿಮಿಷದಲ್ಲಿ ಗೋಲು ಹೊಡೆದರು. 90ನೇ ನಿಮಿಷದಲ್ಲಿ ಕ್ರೌಮಾ ಗೋಲು ಗಳಿಸಿ ಸಮಬಲ ಸಾಧಿಸಲು ಕಾರಣರಾದರು.

ಪಂದ್ಯ ಆರಂಭ: ರಾತ್ರಿ 7.30

ನೇರಪ್ರಸಾರ: ಸ್ಪೋರ್ಟ್ಸ್ 18. ಜಿಯೊ ಸಿನಿಮಾ

ಚೆಸ್: ಭಾರತಕ್ಕೆ ಸವಾಲಾಗದ ಐಸ್‌ಲ್ಯಾಂಡ್

ಬುಡಾಪೆಸ್ಟ್ (ಹಂಗರಿ): ಡಿ.ಗುಕೇಶ್ ನೇತೃತ್ವದಲ್ಲಿ ಭಾರತದ ಪುರುಷರ ತಂಡ, 45ನೇ ಚೆಸ್ ಒಲಿಂಪಿಯಾಡ್‌ನ ಎರಡನೇ ಸುತ್ತಿನ ಪಂದ್ಯದಲ್ಲಿ ಐಸ್‌ಲ್ಯಾಂಡ್ ತಂಡವನ್ನು ನಿರೀಕ್ಷೆಯಂತೆ ಗುರುವಾರ 4–0 ಅಂತರದಿಂದ ಸೋಲಿಸಿತು. ಮಹಿಳೆಯರ ತಂಡವೂ 3.5–0.5 ಅಂತರದಿಂದ ಝೆಕ್ ರಿಪಬ್ಲಿಕ್ ತಂಡವನ್ನು ಬಗ್ಗುಬಡಿಯಿತು.



ಹರಿಕೃಷ್ಣ

ಭಾರತದ ಆಟಗಾರರ ಪೈಕಿ ಪಿ.ಹರಿಕೃಷ್ಣ ಮಾತ್ರ ಹೆಲ್ಗಿ ಗ್ರೇಟರ್ಸನ್ ವಿರುದ್ಧ ಗೆಲುವಿಗಾಗಿ ಹೆಚ್ಚು ಶ್ರಮ ಹಾಕಬೇಕಾಯಿತು. ಗುಕೇಶ್, ವಿದಿತ್ ಗುಜರಾತಿ, ಅರ್ಜುನ್ ಇರಿಗೇಶಿ ಗೆಲುವಿಗೆ ಹೆಚ್ಚು ಕಷ್ಟಪಡಲಿಲ್ಲ. ಪ್ರಜ್ಞಾನಂದ ಈ ಪಂದ್ಯಕ್ಕೆ ವಿಶ್ರಾಂತಿ ಪಡೆದರು.

ಮಹಿಳೆಯರ ವಿಭಾಗದಲ್ಲಿ ಅಗ್ರ ಶ್ರೇಯಾಂಕದ ಭಾರತ ಮತ್ತೊಮ್ಮೆ ಎದುರಾಳಿಗಳಿಗೆ ಅರ್ಧ ಪಾಯಿಂಟ್ ಬಿಟ್ಟುಕೊಟ್ಟಿತು. ಮೊದಲ ಸುತ್ತಿನಲ್ಲಿ ವಂತಿಕಾ ಅಗರವಾಲ್ ಎದುರಾಳಿಗೆ ಅರ್ಧ ಪಾಯಿಂಟ್ ಬಿಟ್ಟುಕೊಟ್ಟರೆ, ಈ ಪಂದ್ಯದಲ್ಲಿ ತಾನಿಯಾ ಸಚ್‌ದೇವ್ ಎದುರಾಳಿ ವಿರುದ್ಧ ಡ್ರಾ ಮಾಡಿಕೊಂಡರು. ದಿವ್ಯಾ ದೇಶಮುಖ್, ಹಾರಿಕಾ ಮತ್ತು ವಂತಿಕಾ ತಮ್ಮ ಪಂದ್ಯಗಳಲ್ಲಿ ಜಯಗಳಿಸಿದರು. ವೈಶಾಲಿ ಈ ಪಂದ್ಯದಲ್ಲಿ ಆಡಲಿಲ್ಲ.


2022ರ ಒಲಿಂಪಿಯಾಡ್‌ನಲ್ಲಿ ಭಾರತ ಮಹಿಳಾ ತಂಡ ಕಂಚಿನ ಪದಕ ಗೆದ್ದುಕೊಂಡಿತ್ತು. ಹಾರಿಕಾ, ವೈಶಾಲಿ, ತಾನಿಯಾ ಆ ತಂಡದಲ್ಲೂ ಆಡಿದ್ದರು.

ಸ್ವೀಡನ್ ವಿರುದ್ಧ ಡೇವಿಸ್ ಕಪ್ ಪಂದ್ಯ ಇಂದಿನಿಂದ

ಸ್ಟಾಕ್‌ಹೋಮ್ (ಪಿಟಿಐ): ಸತತ ಎರಡನೇ ಡೇವಿಸ್ ಕಪ್ ಪಂದ್ಯದಲ್ಲಿ ಭಾರತವು ಡಬಲ್ಸ್ ಪರಿಣತ ಎನ್. ಶ್ರೀರಾಮ್ ಬಾಲಾಜಿ ಅವರ ಸಿಂಗಲ್ಸ್ ಸಾಮರ್ಥ್ಯದ ಮೇಲೆ ವಿಶ್ವಾಸ ಇರಿಸಿಕೊಂಡಿದೆ. ಸ್ವೀಡನ್ ವಿರುದ್ಧ ವಿಶ್ವ ಗುಂಪಿನ (ಒಂದು) ಪಂದ್ಯದಲ್ಲಿ ಅವರನ್ನು ಮೊದಲ ದಿನವಾದ ಶನಿವಾರ ಕಣಕ್ಕೆ ಇಳಿಸಲು ನಾಯಕ ರೋಹಿತ್ ರಾಜಪಾಲ್ ನಿರ್ಧರಿಸಿದ್ದಾರೆ.

ಪಾಕಿಸ್ತಾನ ವಿರುದ್ಧ ಈ ವರ್ಷದ ಆರಂಭದಲ್ಲಿ ಗ್ರಾಸ್‌ಕೋರ್ಟ್‌ನಲ್ಲಿ ಆಡಿ ಜಯಗಳಿಸಿದ್ದ ಬಾಲಾಜಿ, ಈ ಬಾರಿ ಒಳಾಂಗಣ ಕ್ರೀಡಾಂಗಣದಲ್ಲಿ ಸ್ವೀಡನ್‌ನ ಅಗ್ರಮಾನ್ಯ ಆಟಗಾರ ಎಲಿಯಾಸ್ ಯೀಮರ್ ಅವರನ್ನು ಎದುರಿಸಲಿದ್ದಾರೆ. ಯೀಮರ್ ಅವರು ವಿಶ್ವ ಕ್ರಮಾಂಕದಲ್ಲಿ 238ನೇ ಸ್ಥಾನದಲ್ಲಿದ್ದಾರೆ.

ಈ ಪಂದ್ಯದಲ್ಲಿ ಭಾರತದ ಅಗ್ರ ಆಟಗಾರ ರಾಮಕುಮಾರ್ ರಾಮನಾಥನ್ ಅವರು ಲಿಯೊ ಬೋರ್ಗ್ ವಿರುದ್ಧ ಆಡಲಿದ್ದಾರೆ. ಲಿಯೊ ಅವರು ಟೆನಿಸ್ ದಂತಕತೆ ಬ್ಯೋನ್ ಬೋರ್ಗ್ ಅವರ ಪುತ್ರ. ರ‍್ಯಾಂಕಿಂಗ್‌ನಲ್ಲಿ 603ನೇ ಸ್ಥಾನದಲ್ಲಿದ್ದಾರೆ. ಇವರಿಬ್ಬರಿಗೆ ಇದು ಮೊದಲ ಮುಖಾಮುಖಿ.



ಶ್ರೀರಾಮ್ ಬಾಲಾಜಿ

ರಾಮಕುಮಾರ್ ಮತ್ತು ಬಾಲಾಜಿ ಅವರು ಭಾನುವಾರ ಡಬಲ್ಸ್‌ನಲ್ಲೂ (ಫಿಲಿಪ್ ಬೆರ್ಗೆವಿ ಮತ್ತು ಆಂಡ್ರೆ ಗೊರಾನ್ಸನ್) ವಿರುದ್ಧ ಆಡಲಿದ್ದಾರೆ. ಮೊದಲ ದಿನದ ಕೊನೆಗೆ ಸ್ಕೋರ್ 1–1 ಆದಲ್ಲಿ ಡಬಲ್ಸ್ ಜೋಡಿಯಲ್ಲಿ ಬದಲಾವಣೆ ಆಗಬಹುದು.

ಭಾರತದ ಅಗ್ರಮಾನ್ಯ ಆಟಗಾರ ಸುಮಿತ್ ನಗಾಲ್ ಅವರು ಬೆನ್ನುನೋವಿನ ಕಾರಣ ಈ ಪಂದ್ಯಕ್ಕೆ ಅಲಭ್ಯರಾಗಿದ್ದಾರೆ.